
ರಂಜನೆ ಬೋಧನೆ ಪ್ರಚೋದನೆ

# ಲಂಕೇಶ್

ಜನವರಿ 23, 2013 ಪುಟ 20 ರೂ. 14/-

ರಾಗಿ ಹೊಲದಲ್ಲೊಬ್ಬ ವಿಜ್ಞಾನಿ ಲಕ್ಷ್ಮಣಯ್ಯ



## BBMP ದಿವಾಳಿ



## ಜಮಖಂಡಿಗೆ ನಿರಾಣಿ ಎಂಟ್ರಿ

ಉತ್ತರ ಕನ್ನಡ ಬಿ.ಜೆ.ಪಿ. ಶಾಸಕರಿಬ್ಬರ ...ಕಲಾಟ

ಕಿಡ್ನಿ ಕಳ್ಳರಿದ್ದಾರೆ ಎಚ್ಚರಿಕೆ


ಚಕ್ರ ಪತ್ನಿಗೆ ಬಾಂಬ್ ನಾಗ ಧಮಕಿ



ನರ್ಸ್ ನೇಮಕಾತಿ ಹಗರಣ

ಯಾರು ಈ ಒವೈಸಿ





## ಪಾರ್ವತೀಶ ಬಿಡಿ ಚಿತ್ರಗಳು

bparvateesha@gmail.com

# ರಾಗಿ ಹೊಲದಲ್ಲೊಬ್ಬ ವಿಜ್ಞಾನಿ –ಲಕ್ಷ್ಮಣಯ್ಯ

ಈಗ ನಮ್ಮಲ್ಲಿ ರಾಗಿ ಕಣ ಮಾಡುವ ಕಾಲ. ಕೈಕೊಟ್ಟ ಮಳೆಯಲ್ಲೂ ಹೇಗೋ ಜೀವ ಉಳಿಸಿಕೊಂಡು ಬೆಳೆದು ಬಂದ ರಾಗಿ ಪೈರನ್ನು, ತಮ್ಮ ಪಾಲು ಕೇಳಲು ಬರುವ ಕಾಡುಹಂದಿ, ಕಾಡಾನೆಗಳಿಂದ ರಕ್ಷಿಸಿಕೊಂಡು ಕುಯಿಲು ಮುಗಿಸಿ ಕಣದ ಬಯಲಿಗೆ ತಂದು ಒಟ್ಟು ಮಾಡುವ ಹೊತ್ತಿಗೆ ನಮ್ಮ ರೈತರು ಅರೇ ಜೀವವಾಗಿರುತ್ತಾರೆ.

ಅಲ್ಲಿಂದಾಚೆಗಿನ ಕೆಲಸ ಇನ್ನೂ ಘೋರ. ಹೊರೆ ಕಟ್ಟಿದ ರಾಗಿ ಪೈರನ್ನು ಕಣದಲ್ಲಿ ಹರಡಿ ಗುಂಡು ಉರುಳಿಸಿ, ನಂತರ ತೂರುತ್ತಾ ಕಾಳು, ಹೊಟ್ಟು ಬೇರೆ ಮಾಡಿ ರಾಗಿಯನ್ನು ಮನೆಗೆ ಸಾಗಿಸುವ ಹೊತ್ತಿಗೆ ಸಾಕೋ ಸಾಕೆನಿಸಿಬಿಡಬೇಕು. ಮತ್ತೆ ಅಲ್ಲೂ ಆನೆಗಳು ಸೊಂಡಿಲಲ್ಲಾಡಿಸಿಕೊಂಡು ದಾಳಿ ಇಟ್ಟರೆ ಅದರ ಪಾಲು ಒಪ್ಪಿಸಿ ಉಳಿದಿದ್ದಷ್ಟೇ ರೈತರಿಗೆ. ಮೊನ್ನೆ ಭಾನುವಾರ ನಮ್ಮೂರು ಬಿಳಿದಾಳೆಯ ಒಂದು ರಾಗಿ ಕಣದಲ್ಲಿ ನನ್ನ ರೈತಮಿತ್ರರೊಂದಿಗೆ ಮಾತಾಡುತ್ತಾ ಕುಳಿತಿದ್ದೆ. ಜನವರಿಯ ಚಳಿ, ಗಾಳಿಗೆ, ಬರಲಿರುವ ಬೇಸಿಗೆಯ ಸ್ಯಾಂಪಲ್ ತೋರಿಸುವಂತಿದ್ದ ಬಿಸಿಲಿನ ಧಗೆಗೆ ಸಿಲುಕಿ ಕಣದಲ್ಲಿದ್ದ ಜನರೆಲ್ಲಾ ಸೀದು ಹೋದಂತಾಗಿದ್ದರು. ಅದೊಂತರ ರೈತರ ರಾಗಿ ಹಸೀಟಿನಂತಹ ಬಣ್ಣವು ಕರಗಿ, ಮರಳಿ ರಾಗಿ ಕಾಳಿನ ಬಣ್ಣಕ್ಕೆ ತಿರುಗಿಬಿಡುವಂತಾ ಕಷ್ಟ ಕಾಲ.

"ಈ ಸಾರಿ ಎಷ್ಟು ಖಂಡುಗ ಆಯ್ತದೆ" ಅಂತಾ ನಾನು ಕೇಳಿದಾಗ ಅವರೇಷ್ಟೊ ಹೇಳಿದರು. ಜೊತೆಗೆ "ನಮ್ದು ಎಲ್-5 ರಾಗಿ ತಳಿ, ಮಳೆ ಕಮ್ಮಿಯಾದ್ರೂ ತಡಕೋತದೆ, ಇಳುವರಿನೂ ಸರೀನೆ" ಅಂದರು.

ಅದಕ್ಕೆ ನಾನು "ನಿಮಗೆ ರಾಗಿ ಲಕ್ಷ್ಮಣಯ್ಯ ಗೊತ್ತಾ?" ಅಂದೆ.

"ಇಲ್ಲ ಯಾಕೆ ಸಾಮಿ."

"ಈ ತಳೀನ ಕಂಡುಹಿಡಿದೋರು ಅವರೆ. ಎಲ್ ಅಂದ್ರೆ ಲಕ್ಷ್ಮಣಯ್ಯ ಅಂತ, ಜೊತೆಗೆ ಇಂಡಾಫ್, ಕಾವೇರಿ, ಅನ್ನಪೂರ್ಣ ಎಲ್ಲ ಅವರೇ ಮಾಡಿದ್ದು" ಅಂದೆ.

"ಓ... ಅಂಗಾ" ಅಂದರು ಅವರೆಲ್ಲ,

ಅವರಿಗೆ ಲಕ್ಷ್ಮಣಯ್ಯನವರ ಬಗ್ಗೆ ಗೊತ್ತಿರದಿದ್ದರೂ ಅವರೆಲ್ಲ ಆತನಿಂದ ಉಪಕೃತರಾದವರೇ ಆಗಿದ್ದರು. ಇದೊಂದು ತರಾ ಟೀಪುಸುಲ್ತಾನನ ಬಗ್ಗೆ ಗೊತ್ತಿರದಿದ್ದರೂ ಅವನು ತಂದು ರೈತರಿಗೆ ಪರಿಚಯಿಸಿದ ರೇಷ್ಮೆ ಬೆಳೆಯ ಫಲಾನುಭವಿಗಳಾಗಿದ್ದಂತೆ .

ಭಾರತದ ಹೆಮ್ಮೆಯ ಕೃಷಿ ವಿಜ್ಞಾನಿಗಳ ಸಾಲಿನಲ್ಲಿ ನಿಲ್ಲಬಹುದಾದ ರಾಗಿ ಲಕ್ಷ್ಮಣಯ್ಯನವರ ಕುರಿತು ಇದೀಗ ತಾನೆ ಹೊಸ- ಬಹುಶಃ ಮೊದಲ- ಪುಸ್ತಕವೊಂದು ಪ್ರಕಟವಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಮಿತ್ರ ಡಾ. ಎಂ.ನಾರಾಯಣಸ್ವಾಮಿ ಹಾಗೂ ರಮೇಶ್ ಸಂಕ್ರಾಂತಿ ಈ ಪುಸ್ತಕ ರೂಪಿಸಿ ಜನರ ಕೈಗಿಡುವ ಮೂಲಕ ಅಭಿನಂದನಾರ್ಹ ಕೆಲಸ ಮಾಡಿದ್ದಾರೆ.

ಡಾ. ಸಿ.ಹೆಚ್.ಲಕ್ಷ್ಮಣಯ್ಯ ಅರ್ಥಾತ್ ರಾಗಿ ಲಕ್ಷ್ಮಣಯ್ಯನವರ ಬಗ್ಗೆ ನಮ್ಮ ಶಾಲಾಪಠ್ಯಗಳಲ್ಲಾಗಲಿ, ಮುಖ್ಯವಾಹಿನಿಯ ಮೀಡಿಯಾಗಳಲ್ಲಾಗಲಿ ಗಮನಾರ್ಹ ಮಾಹಿತಿಯೇನೂ ಸಿಗುವುದಿಲ್ಲ, ಇನ್ನು ನೇರವಾಗಿ ಹೇಳಬೇಕೆಂದರೆ ಇನ್ನಿತರ ತಳಿ ಸಂಶೋಧಕರಾಗಿದ್ದ ಗ್ರೆಗರಿ ಮೆಂಡಲೆ, ನಾರ್ಮನ್ ಬೋರ್ಲಾಗ್ ಮುಂತಾದವರ ಬಗ್ಗೆ ಕರ್ನಾಟಕದಲ್ಲೇ ನಮಗೆ ಸಿಗುವಷ್ಟು ವಿವರಗಳು ಕನ್ನಡಿಗರೇ ಆಗಿದ್ದ ರಾಗಿ ಲಕ್ಷ್ಮಣಯ್ಯನವರ ಬಗ್ಗೆ ಸಿಗುತ್ತಿರಲಿಲ್ಲ,

ಆ ಕೊರತೆ ಈಗ ಕೊಂಚಮಟ್ಟಿಗಾದರೂ ನೀಗಿದಂತಿದೆ.

ಎಪ್ಪತ್ತೆರಡು ವರ್ಷ ಕಾಲ ಈ ನೆಲದಲ್ಲಿ ಬದುಕಿ ಹೋದ ಲಕ್ಷ್ಮಣಯ್ಯ ಕೋಟಿಗಟ್ಟಲೆ ಜನರ ಬದುಕಿನ ಬವಣೆಯನ್ನು ನಿವಾರಿಸಿದ ಕೃಷಿ ಸಂತ.

ಲಕ್ಷ್ಮಣಯ್ಯ ತಮ್ಮ ಜೀವನದ ಚೈತನ್ಯಭರಿತ ಅವಧಿಯನ್ನೆಲ್ಲಾ ರಾಗಿ ಬೆಳೆಯ ನಡುವೆಯೇ ಕಳೆದವರು. ಕರ್ನಾಟಕದಲ್ಲಿಂದು ಅದರಲ್ಲೂ ದಕ್ಷಿಣ ಕರ್ನಾಟಕದ ಜಿಲ್ಲೆಗಳು, ತಮಿಳುನಾಡು ಹಾಗೂ ಆಂಧ್ರದ ಲಕ್ಷಾಂತರ ಬಡ ರೈತರ ಹೊಟ್ಟೆ ತುಂಬಿಸುತ್ತಿರುವ ರಾಗಿ ಅವೇ ತಟ್ಟೆಯಲ್ಲಿನ ಅಕ್ಷಯ ಪಾತ್ರೆಯಂತೆ ಬದಲಾದದ್ದು ಮಾತ್ರ ಲಕ್ಷ್ಮಣಯ್ಯನವರ ಪರಿಶ್ರಮದಿಂದ.

ತಾವು ರಾಗಿ ತಳಿ ಸಂಶೋಧನೆ ಮಾಡಿದ ಅವಧಿಯಲ್ಲಿ ಹೆಚ್ಚು ಕಡಿಮೆ ಒಟ್ಟು ಇಪ್ಪತ್ನಾಲ್ಕು ಹೊಸ ತಳಿಗಳನ್ನು ರೂಪಿಸಿ ರೈತರ ಕೈಗೆ ನೀಡಿದ ಲಕ್ಷ್ಮಣಯ್ಯ ಹೆಚ್ಚು ಸದ್ದುಗದ್ದಲ ಮಾಡದೆ ತಣ್ಣಗೆ ಬದುಕಿದ ಮನುಷ್ಯ.

ಹಾಗಾಗಿಯೇ ಲಕ್ಷ್ಮಣಯ್ಯನವರ ಒಟ್ಟು ಬದುಕು, ವ್ಯಕ್ತಿತ್ವ ಕುತೂಹಲ ಮೂಡಿಸುತ್ತದೆ.

ಲಕ್ಷ್ಮಣಯ್ಯ ಹುಟ್ಟಿದ್ದು ಮೈಸೂರು ತಾಲ್ಲೂಕಿನ ಹಾರೋಹಳ್ಳಿಯಲ್ಲಿ, ತಂದೆ ಚೋಟಯ್ಯ ಮತ್ತು ತಾಯಿ ಚೆನ್ನಮ್ಮ ದಲಿತ ಕೃಷಿ ಕಾರ್ಮಿಕರು. ಆಗಿನ ಮೈಸೂರು ಸಂಸ್ಥಾನದಲ್ಲಿ ಅದೇ ತಾನೆ ಶೈಕ್ಷಣಿಕ ಜಾಗೃತಿ ಶುರುವಾಗಿತ್ತು, ಅದರ ಪ್ರಭಾವವೋ ಇಲ್ಲ ಚೋಟಯ್ಯನ ಛಲವೋ ಅಂತೂ ಲಕ್ಷ್ಮಣಯ್ಯ ಯಾರ ಮನೆಯ ಜೀತಕ್ಕೂ ಸೇರದೆ, ಮತ್ಯಾರದ್ದೋ ಕುರಿ ಮೇಯಿಸಲೂ ಹೋಗದೇ ಶಾಲೆ ಸೇರುವಂತಾಯಿತು. ಅವತ್ತು ಹಾಗೆ ಶಾಲೆ ಸೇರಿದ ಬಾಲಕ ಮುಂದೆ ತಾನೆ ಒಂದು ಕೃಷಿಯ ಜ್ಞಾನಕೇಂದ್ರದಂತೆ ಬೆಳೆದರು. ಬಿ.ಎಸ್ಸಿ ಓದಿದ ಲಕ್ಷ್ಮಣಯ್ಯ ಕೆಲ ಕಾಲ ಅರಸೀಕೆರೆಯಲ್ಲಿ ರೇಲ್ವೆ ಇಲಾಖೆಯಲ್ಲಿ ಕೆಲಸ ಮಾಡಿದರು. 'ಕಬ್ಬಿಣದ ಅಂಗಡೀಲಿ ದುಂಬಿಗೇನು ಕೆಲಸ' ಎನ್ನುವಂತಿತ್ತು ಅದು. ಜೊತೆಗೆ ಅಲ್ಲಿನ ರೇಲ್ವೆ ಸಿಬ್ಬಂದಿ ತಮ್ಮ ನಿಲ್ದಾಣಕ್ಕೆ ಬರುತ್ತಿದ್ದ ಸರಕುಗಳನ್ನು ಯಾವ ಅಳುಕೂ ಇಲ್ಲದೆ ಕದಿಯುತ್ತಿದ್ದ ವೈಖರಿ ನೋಡಿ ಹೆದರಿ, ಬೇಸತ್ತು ಹೋದ ಅವರು ಆ ಕೆಲಸ ಬಿಟ್ಟು ಕೃಷಿ ಇಲಾಖೆಗೆ ಸೇರಿದರು. ಕೆಲ ಸಮಯ ಬೀರೂರಿನ ಬೀಜೋತ್ಪಾದನ ಕೇಂದ್ರದಲ್ಲಿದ್ದು ನಂತರ ನೇರ ಬಂದು ಮಂಡ್ಯದ ವಿಸಿ ಫಾರಂಗೆ ಸೇರಿಕೊಂಡರು. ಇಂಡಿಯಾಗೆ ಅದೇ ತಾನೆ ಸ್ವಾತಂತ್ರ್ಯ ದಕ್ಕಿತ್ತು, ಆ ಅವಧಿಯಲ್ಲೇ ಚೈನಾ ಹೆಸರಿನ ಹೊಸ ಭತ್ತದ ತಳಿ ರೂಪಿಸಿದ ಲಕ್ಷ್ಮಣಯ್ಯ ನಂತರ ಇಪ್ಪತ್ತನೆಯ ಶತಮಾನದ ಉತ್ತರಾರ್ಧ ಪೂರ್ತಿ ರಾಗಿ ತಳಿಗಳ ಆವಿಷ್ಕಾರಕ್ಕೆ ಗಮನ ಕೊಟ್ಟರು. ಈ ಅವಧಿಯು ಲಕ್ಷ್ಮಣಯ್ಯನವರ ಹೊಸ ಸಂಶೋಧನೆ, ತಳಿ ಮಾರ್ಪಾಡು ಹಾಗೂ ಆ ಪ್ರಕ್ರಿಯೆಗಳೆಲ್ಲ ಒಂದು ತಪಸ್ಸಿನಂತೆ ಭಾಸವಾಗುತ್ತದೆ.

ಮೊದಮೊದಲು ಈ ರಾಗಿ ತಳಿಯನ್ನು, ಇಳುವರಿಯನ್ನು ಅಭಿವೃದ್ಧಿ ಪಡಿಸುವ ಯೋಜನೆ ಯಾರ ನಜರಿನಲ್ಲೂ ಇರಲಿಲ್ಲ, ಆಗಿನ ಮೈಸೂರು ಸಂಸ್ಥಾನದ ಕೃಷಿ ಇಲಾಖೆಯ ಮುಖ್ಯಸ್ಥ ಡಾ. ಲೆಸ್ಲಿ ಕೋಲ್ಮನ್‌ರವರು ಕಷ್ಟ ತಡೆದುಕೊಳ್ಳುವ ತಾಕತ್ತಿರುವ ರಾಗಿಯ ಹೊಸ ತಳಿ ರೂಪಿಸಲು ಒಮ್ಮೆ ಯತ್ನಿಸಿದ್ದರಾದರೂ ವಿಫಲರಾಗಿ ತಮ್ಮ ಪ್ರಯತ್ನ ಕೈಬಿಟ್ಟಿದ್ದರು. ರಾಗಿ ಬೆಳೆ ಸ್ವರೇಣು ಪರಾಗಸ್ಪರ್ಶದ ಬೆಳೆ **(Self polinated crop)** ಯಾಗಿದ್ದ ಕಾರಣ ತಳಿ ಅಭಿವೃದ್ಧಿಗೆ ಅಷ್ಟು ಸುಲಭವಾಗಿ ದಕ್ಕುವಂಥದ್ದಾಗಿರಲಿಲ್ಲ, ಆ ನಿಸರ್ಗ ನಿಯಮವನ್ನು ಮೀರಿ ಮುನ್ನಡೆಯುವಂತಹ ಸಂಶೋಧನೆ ಲಕ್ಷ್ಮಣಯ್ಯನವರ ಮೂಲಕ ಚಾಲನೆ ಪಡೆದುಕೊಂಡಿತು. ಕ್ರಾಸ್ ಆಗುವ ಸಾಧ್ಯತೆಯೇ ಇರದಿದ್ದ ರಾಗಿ ಬೆಳೆಯ ಅಂತರ್ಗತ ನಿಯಮವನ್ನು ಒಂದು **Special contact technique** ಮೂಲಕ ಭೇದಿಸಿದ ಲಕ್ಷ್ಮಣಯ್ಯ ರಾಗಿಯ ತಳಿ ಗುಣವನ್ನು ವಶಪಡಿಸಿಕೊಂಡರು.

ಇದು ಕೆಲವೇ ವರ್ಷಗಳಲ್ಲಿ ಎರಡು ಡಜನ್ ಅಧಿಕ ಇಳುವರಿಯ ಹೊಸ ರಾಗಿ ತಳಿಗಳಿಗೆ ಜನ್ಮ ನೀಡುವಂತಾಯಿತು. ಲಕ್ಷ್ಮಣಯ್ಯ ಆಫ್ರಿಕಾದಿಂದಲೂ ರಾಗಿಕಾಳುಗಳನ್ನು ತರಿಸಿ ನಮ್ಮಲ್ಲಿಯ ನಾಟಿ ತಳಿಗಳೊಂದಿಗೆ ಸೇರಿಸಿ 'ಇಂಡಾಫ್' ಹೆಸರಿನ ಸರಣಿ ತಳಿಯನ್ನೇ ಜನರಿಗೆ ಕೊಟ್ಟರು. ಇಂಡಾಫ್ ಅಂದರೆ ಇಂಡಿಯಾ ಹಾಗೂ ಆಫ್ರಿಕಾ ಎಂದು.

ಈ ಲಕ್ಷ್ಮಣಯ್ಯ ಸಾರ್ವಜನಿಕರ ಗಮನಕ್ಕೆ ಬಂದಿದ್ದು ಒಂದು ವಿಚಿತ್ರ ಸನ್ನಿವೇಶದಲ್ಲಿ, ಅದೂ ಲಂಕೇಶ್ ಬಳಗದ ಬರಹಗಾರ ಎಚ್.ಎಲ್. ಕೇಶವಮೂರ್ತಿಯವರಿಂದ. ಮಂಡ್ಯದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದಾಗ ದಲಿತ ವಿದ್ಯಾರ್ಥಿಗಳಿಗೆ ಜಾತಿಯ ಕಾರಣಕ್ಕಾಗಿ ಸರ್ಕಾರ ನೀಡುತ್ತಿದ್ದ ವಿಶೇಷ ಪಾಠದ ಸೌಲಭ್ಯವನ್ನು 'ಬೇಡ' ಎಂದು ನಿರಾಕರಿಸಿದ್ದ ರವಿ ಎಂಬ ಯುವಕ ಎಚ್‌ಎಲ್‌ಕೆಯವರ ಗಮನ ಸೆಳೆದಿದ್ದ. ಆ ಹುಡುಗ ಲಕ್ಷ್ಮಣಯ್ಯನವರ ಮಗ ಎಂಬುದು ಗೊತ್ತಾಯಿತು. ಸದಾ ಸರ್ಕಾರದ ಹಂಗು-ಕೃಪೆಯಲ್ಲೇ ಇದ್ದರೆ ಸ್ವಾಭಿಮಾನ ಕಳೆದುಕೊಂಡಂತಾಗುವುದಲ್ಲದೆ ಮಕ್ಕಳಲ್ಲಿ ಸ್ಪರ್ಧಿಸುವ, ಸ್ವತಂತ್ರವಾಗಿ ಹೋರಾಡಿ ಗೆಲ್ಲುವ ಮನೋಭಾವ ಬೆಳೆಯಲಾರದೆಂದು ಲಕ್ಷ್ಮಣಯ್ಯನವರ ನಂಬಿಕೆಯೇ ರವಿಯ ಸ್ವಾಭಿಮಾನವಾಗಿಯೂ ಮುಂದುವರೆದಿತ್ತು. ಆಗಲೇ 1982 ರ ದೀಪಾವಳಿ ವಿಶೇಷಾಂಕದಲ್ಲಿ ಎಚ್‌ಎಲ್‌ಕೆ ರಾಗಿ ಲಕ್ಷ್ಮಣಯ್ಯನವರ ಬದುಕು, ಸಾಧನೆ ಹಾಗೂ ವ್ಯಕ್ತಿತ್ವದ ಬಗ್ಗೆ ಒಂದು ಆಪ್ತಚಿತ್ರಣ ನೀಡುವ ಲೇಖನ ಬರೆದಿದ್ದರು.

ಲಕ್ಷ್ಮಣಯ್ಯನವರಿಗೆ ನಾಲ್ವರು ಗಂಡು ಮಕ್ಕಳು. ಅವರಿಗೆಲ್ಲಾ ಒಳ್ಳೆಯ ಶಿಕ್ಷಣ ಸಿಕ್ಕಿದೆ. ಎಲ್ಲರೂ ಒಳ್ಳೆಯ ಸ್ಥಾನದಲ್ಲಿದ್ದಾರೆ. ಘನತೆ, ಆತ್ಮಗೌರವದಿಂದ ಬದುಕುತ್ತಲೂ ಇದ್ದಾರೆ. ಇದೂ ಸಾಧ್ಯವಾಗಿದ್ದು ಲಕ್ಷ್ಮಣಯ್ಯನವರ ಸರ್ಕಾರಿ ಸಂಬಳದಿಂದಲ್ಲ, ತಮ್ಮ ಕ್ವಾರ್ಟರ್ಸ್ ಮನೆಯ ಕಾಂಪೌಂಡ್ ಪ್ರದೇಶದಲ್ಲೇ ಹಿಪ್ಪುನೇರಳೆ ಸೊಪ್ಪು ಬೆಳೆದು ರೇಷ್ಮೆ ಸಾಕಿ ಕೊಂಚ ಹೆಚ್ಚು ಹಣ ದುಡಿದು ಮಕ್ಕಳ ಶಿಕ್ಷಣಕ್ಕೆ ಅಡೆತಡೆ ಬಾರದಂತೆ ಅವರು ವ್ಯವಸ್ಥೆ ಮಾಡಿಕೊಂಡಿದ್ದರು.



ಲಕ್ಷ್ಮಣಯ್ಯನವರ ಸನ್ಮಾನ ಸಮಾರಂಭದಲ್ಲಿ ಲಂಕೇಶ್

'ನನ್ನ ಮದುವೆ ರಾಗಿ ಜೊತೆನೇ ಆಗಿದೆ' ಎನ್ನುತ್ತಿದ್ದ ಲಕ್ಷ್ಮಣಯ್ಯನವರ ಬಗ್ಗೆ ಅವರ ಒಡನಾಡಿಗಳಿಗೆ ಅನೇಕ ಹೃದಯಸ್ಪರ್ಶಿ ನೆನಪುಗಳಿವೆ. ಮಂಡ್ಯದ ಬೇವಿನಹಳ್ಳಿಯ ರೈತ ಸೋಮ ಶಂಕರಗೌಡ ಎಂಬುವರು ಒಮ್ಮೆ ಲಕ್ಷ್ಮಣಯ್ಯ ನೀಡಿದ್ದ ಇಂಡಾಫ್ ತಳಿಯನ್ನು ಬೆಳೆಯುವಾಗ ಪರಸ್ಪರ ಪರಿಚಯವಾಗಿತ್ತು. ಒಂದು ದಿನ ಗೌಡರ ದನವೊಂದು ತಪ್ಪಿಸಿಕೊಂಡಾಗ ಅವರದನ್ನು ಹುಡುಕಿಕೊಂಡು ವಿಸಿ ಫಾರಂನೊಳಕ್ಕೆ ರಾತ್ರಿ ಮೂರರ ಜಾವದಲ್ಲಿ ಹೋದರೆ ಅಲ್ಲಿ ಲಕ್ಷ್ಮಣಯ್ಯ ಕಾಣಸಿಗಬೇಕೆ!


'ಇದೇನು ಸಾರ್ ಇಲ್ಲಿ ಈ ಹೊತ್ತಲ್ಲಿ!' ಎಂಬ ರೈತಮಿತ್ರನ ದಿಗ್ಭ್ರಾಂತ ಪ್ರಶ್ನೆಗೆ ಲಕ್ಷ್ಮಣಯ್ಯ 'ಈಗ ಇಬ್ಬನಿ ಬೀಳೋ ಹೊತ್ತಲ್ಲಿ ರಾಗಿ ಕೊರೆಯೊ ಒಂದು ಕೀಟ ಬರುತ್ತೆ, ಅದನ್ನು ನೋಡೋಕೆ ಬಂದು ಕಾಯ್ತಾ ಇದ್ದೀನಿ' ಎಂದರು.

ಅಧ್ಯಯನಕ್ಕಾಗಿ ಹೀಗೆ ನಿದ್ದೆಗೆಡುವುದು ಅವರಿಗೆ ನಿತ್ಯದ ಕಾಯಕ. ವಿಸಿ ಫಾರಂನಲ್ಲಿ ಅವರ ಸಂಶೋಧನೆಗಾಗಿ ಮೀಸಲಿರಿಸಿದ್ದ ಐದೆಕರೆ ಜಾಗದಲ್ಲಿ ಹೊಸ ರಾಗಿ ತಳಿಗಳನ್ನು ರೂಪಿಸಿ ನೆಟ್ಟು ಅವುಗಳ ಬೆಳವಣಿಗೆಯ ಕ್ರಮ, ಇಳುವರಿಗಳನ್ನು ಸ್ಟಡಿ ಮಾಡುತ್ತಿದ್ದ ಅವರಿಗೆ ರಾತ್ರಿಯ ವೇಳೆ ಆ ರಾಗಿ ಹೊಲದಲ್ಲಿ ಕಾವಲು ತಿರುಗುವ ಕೆಲಸವೂ ಇರುತ್ತಿತ್ತು, ಲಕ್ಷ್ಮಣಯ್ಯನವರ ಕೆಲಸದ ಮಹತ್ವ ತಿಳಿಯದೆ ಕೆಲ ಮೇಲಧಿಕಾರಿಗಳು ಅವರಿಗೊಬ್ಬ ಸಹಾಯಕನಿರಲಿ, ಬೆಳೆ ರಕ್ಷಣೆಗೆ ಕಾವಲುಗಾರನನ್ನೂ ಒದಗಿಸಿರಲಿಲ್ಲ. ಬೇಲಿ ಒಂದೂ ಸರಿಯಾಗಿರದಿದ್ದರಿಂದ ವಿಸಿ ಫಾರಂನೊಳಕ್ಕೆ ಸುತ್ತಲಿನ ಗಾಣದಾಳು ಮತ್ತಿತರ ಹಳ್ಳಿಗಳ ಕತ್ತೆ-ಕುದುರೆಗಳು ರಾತ್ರಿ ಹೊತ್ತು ನುಗ್ಗಿ ಬೆಳೆ ತಿಂದು ಹೋಗುವುದು ಆಗ ಪದೇಪದೇ ಆಗುತ್ತಿತ್ತು, ಅಂತಾ ಕಠಿಣ ಸಂದರ್ಭ ಬಂದಾಗಲೂ ಲಕ್ಷ್ಮಣಯ್ಯ ಹತಾಶರಾಗದೆ ತಾವೇ ಕಾವಲು ತಿರುಗಿ ತಮ್ಮ ಪ್ರಾಯೋಗಿಕ ಬೆಳೆ ರಕ್ಷಿಸಿಕೊಂಡರಲ್ಲದೆ ಆ ಮೂಲಕ ಲಕ್ಷಾಂತರ ರೈತರ ಬದುಕನ್ನು ರಕ್ಷಿಸಿದರು. ಆ ಹೊಸ ರಾಗಿ ತಳಿಗಳೇ ಇಂದು ಕಡಿಮೆ ಜಮೀನಿನಲ್ಲಿ ಹೆಚ್ಚು ಇಳುವರಿ ನೀಡುವ ಬೆಳೆಯಾಗಿ ಈಗ ರೈತಪ್ರಿಯವಾಗಿವೆ.

ಲಕ್ಷ್ಮಣಯ್ಯ ಹೊಲೆಯ ಸಮುದಾಯದಿಂದ ಹುಟ್ಟಿ ಬಂದವರು. ಆ ಕಾರಣಕ್ಕಾಗಿಯೇ ತಮ್ಮ ಕೆಲಸದ ಸ್ಥಳದಲ್ಲಿ ಅನೇಕ ಕಿರುಕುಳ, ತಾರತಮ್ಯ ನೋವು ತರುವ ಪ್ರಸಂಗಗಳನ್ನು ಎದುರಿಸಿದರು. ಆದರೆ ಅಂತವನ್ನು ಹಾಗೂ ಆ ಕುಬ್ಜ ಜನರನ್ನು ನಿರ್ಲಕ್ಷಿಸಿ ತಮ್ಮ ಪಾಡಿಗೆ ರಾಗಿ ಸಂಶೋಧನೆಯ ಸಾಂಗತ್ಯ ಮುಂದುವರೆಸಿಕೊಂಡೇ ಹೋದರು.

ಅವರೆಂದೂ ಸಂಶೋಧನಾ ಲೇಖನ ಬರೆಯಲಿಲ್ಲ, ಕೇಳಿದವರಿಗೆ 'ನನ್ನ ಫೀಲ್ಡ್ ವರ್ಕ್‌ಗಳೇ ನನ್ನ ಲೇಖನ' ಎಂದು ತಣ್ಣಗೆ ಉತ್ತರಿಸುತ್ತಿದ್ದರು. ತಮ್ಮ ಜಾತಿ ಹಿನ್ನೆಲೆಯನ್ನು ಮರೆಮಾಡಲು ಹೆಸರು ಬದಲಿಸಿ, ಮಾಂಸಾಹಾರ ಬಿಟ್ಟು, ಸತ್ಯನಾರಾಯಣ ಪೂಜೆ, ವ್ರತ ನಡೆಸುವ ನವ ದಲಿತರ ಬಗ್ಗೆ 'ಅವರಿಗೆಲ್ಲಾ ನಮ್ಮ ಯೋಗ್ಯತೆಗೆ ಮೀರಿದ್ದು ಸಿಕ್ಕಿಬಿಟ್ಟಿದೆ ಅನ್ನೋ ಭಾವನೆ ಇದೆ. ಅದಕ್ಕೆ ಹೀಗಾಡ್ತಾರೆ' ಅನ್ನುತ್ತಿದ್ದರು. ಎಲ್ಲಾ ಋತುಗಳಲ್ಲೂ ಬೆಳೆಯಬಲ್ಲ, ಭಾರತದ ವೈವಿಧ್ಯಮಯ ಭೌಗೋಳಿಕ ಪರಿಸರದಲ್ಲೂ ಬದುಕುಳಿಯಬಲ್ಲ ಅನೇಕ ರಾಗಿ ತಳಿಗಳನ್ನು ರೂಪಿಸಿದ ಲಕ್ಷ್ಮಣಯ್ಯ 'ಮಾತು ಬಾರದ ರಾಗಿಯ ಅಭಿವೃದ್ಧಿ ಸುಲಭ, ಆದರೆ ಮಾತುಬಲ್ಲ ಮನುಷ್ಯನ ಅಭಿವೃದ್ಧಿ ಕಷ್ಟ' ಅನ್ನುತ್ತಿದ್ದರು.

ಇದು ಕೃಷಿ ವಿಶ್ವವಿದ್ಯಾಲಯದಲ್ಲಿ ಜಾತಿ ಮತ್ಸರ, ಅಸಹನೆಗಳನ್ನು ತೋರುತ್ತಿದ್ದವರ ಬಗ್ಗೆ ಲಕ್ಷ್ಮಣಯ್ಯ ಹೇಳುತ್ತಿದ್ದ ಮಾತು. ಈ ಸರ್ಕಾರಿ ಜನ ಅದೆಂತಾ ದುರಾತ್ಮರಾಗಿದ್ದರೆಂದರೆ 1982 ರಲ್ಲಿ ಲಕ್ಷ್ಮಣಯ್ಯ ನಿವೃತ್ತರಾದಾಗ ಅವರ ನಾಲ್ಕು ದಶಕಗಳ ಸಂಶೋಧನಾ ಜ್ಞಾನವನ್ನು ಅಬಾಧಿತವಾಗಿ ಬಳಸಿಕೊಳ್ಳುವ ಬಗ್ಗೆ ಯೋಚನೆಯನ್ನೇ ಮಾಡಿರಲಿಲ್ಲ, ನಂತರ ಆಗಿನ ಸಚಿವ ಬಿ.ರಾಚಯ್ಯ ಮುಂತಾದವರು ಆಸಕ್ತಿ ತೋರಿಸಿ ಮೈಸೂರಿನ ಹತ್ತಿರದ ಇನ್ನೊಂದು ಸರ್ಕಾರಿ ಫಾರಂನಲ್ಲಿ ರಾಗಿ ಸಂಶೋಧನೆ ಮುಂದುವರೆಯಲು ಅವಕಾಶ ಮಾಡಿಸಿಕೊಟ್ಟರು.



ಸಾಮಾನ್ಯ ಮನುಷ್ಯರಾದವರಿಗೆ ಕೀರ್ತಿ, ಹಣ, ಕೆರಿಯರ್‌ಗಳ ಆಕರ್ಷಣೆಗಳನ್ನು ಮೀರಿ ನಿಲ್ಲುವುದು ಕೊಂಚ ಕಷ್ಟ. ಲಕ್ಷ್ಮಣಯ್ಯ ಆ ವಿಚಾರದಲ್ಲೂ ನನಗೆ ಆಶ್ಚರ್ಯ ಹುಟ್ಟಿಸುತ್ತಾರೆ. ಅವರಿಗೊಮ್ಮೆ ಪ್ರಮೋಷನ್ ನೀಡಿ ಮೆಣಸು ಸಂಶೋಧನಾ ಕೇಂದ್ರಕ್ಕೆ ಕಳಿಸಲು ಸರ್ಕಾರ ನಿರ್ಧರಿಸಿದಾಗ 'ನನಗೆ ಪ್ರಮೋಷನ್ನೇ ಬೇಡ. ಮೆಣಸು ನನ್ನ ಆದ್ಯತೆಯಲ್ಲ, ನಾನು ರಾಗಿ ಸಂಶೋಧನೆಯಲ್ಲೇ ಮುಂದುವರೆಯುತ್ತೇನೆ' ಅಂದಿದ್ದರು. ಇನ್ನೊಮ್ಮೆ ಇಂಗ್ಲೆಂಡ್‌ಗೆ ಹೋಗುವ ಅವಕಾಶ ಬಂದಾಗಲೂ 'ಅಲ್ಲಿ ರಾಗಿ ಬೆಳೆ ಎಲ್ಲಿದೆ? ನಾನಿಲ್ಲೇ ಇದ್ದು ಹಿಡಿದ ಕೆಲಸ ಮುಂದುವರೆಸಿಕೊಂಡು ಹೋಗುತ್ತೇನೆ' ಅಂದಿದ್ದರು.

ನೆನಪಿಡಿ, ಇದು ನಡೆದದ್ದು ಈಗ್ಗೆ ನಲವತ್ತು ವರ್ಷಗಳ ಹಿಂದೆ. 2013 ರಲ್ಲೂ **Bon Voyage** ಎಂದು ತಮ್ಮ ವಿದೇಶಿ ಪ್ರಯಾಣದ ಬಗ್ಗೆ ಫೋಟೋ ಸಮೇತ ಪತ್ರಿಕೆಗಳಲ್ಲಿ ಜಾಹೀರಾತು ಹಾಕಿಸಿ ಹಿರಿಹಿರಿ ಹಿಗ್ಗುವ ಜನ ಈಗಲೂ ನಮ್ಮಲ್ಲಿ ಕಾಣಸಿಗುತ್ತಾರೆ. ಆದರೆ ಲಕ್ಷ್ಮಣಯ್ಯ ತಮಗೊಂದು ಸ್ಪಷ್ಟ ಗುರಿ ಇಟ್ಟುಕೊಂಡಿದ್ದರು. ಅದು ಕೇಳುವ ತ್ಯಾಗ, **dedication** ಏನೆಂಬುದು ಅವರಿಗೆ ಅರ್ಥವಾಗಿತ್ತು, ಒಮ್ಮೆ ಹಾಗೆಂದು ತೀರ್ಮಾನಿಸಿ ಏಕಾಂಗಿ ಪ್ರಯಾಣ ಹೊರಟ ಅವರನ್ನು ಪ್ರಮೋಷನ್ನು, ಫಾರಿನ್ ಟೂರು, ಪ್ರಶಸ್ತಿ ಪದಕಗಳ ಆಮಿಷಗಳು, ದಾರಿ ತಪ್ಪಿಸಲಿಲ್ಲ. ಅದರ ಫಲ ಲಕ್ಷ್ಮಣಯ್ಯನವರ ರಾಗಿಯ ಪ್ರಯೋಗ ಶಾಲೆಯಿಂದ ಹೊರಬಂದ ಹೊಸ ತಳಿಗಳೇ ದೇಶವಿದೇಶಗಳನ್ನು ದಾಟಿ ಲಕ್ಷಾಂತರ ಜನರ ಕೈಸೇರಿ ಅವರಿಗೆ ಕೀರ್ತಿ ತಂದುಕೊಟ್ಟವು. **Finger millet** ಎಂಬ ಇಂಗ್ಲೀಷ್ ಹೆಸರಿನ ರಾಗಿ, ನಮ್ಮಲ್ಲಿ ಗಿಡ್ಡ ರಾಗಿ, ಕಟ್ಟೆ ಮುರುಕ, ಕೊಂಬುರಾಗಿ, ಗೌಬೂಲ್ಗೆ, ಮಜ್ಜಿಗ, ಜೇನುಮುರೆ, ರುದ್ರಜಡೆ, ಜಡೇಸಂಗ, ಕೆಂಪು, ಬಿಳಿ, ಅಲ್ಲುಳಿ... ಹೀಗೆ ಅಸಂಖ್ಯ ಪ್ರಬೇಧಗಳಾಗಿ ಹರಡಿಕೊಂಡಿದೆ. ಲಕ್ಷ್ಮಣಯ್ಯನವರ ಕೆಲಸದಿಂದಾಗಿ ಅವು ಇಂಡಾಫ್, ಉದಯ, ಅನ್ನಪೂರ್ಣ, ಪೂರ್ಣ, ಅರುಣ... ಎಂಬ ಇನ್ನೂ ಇಪ್ಪತ್ತೈದು ಹೊಸ ತಳಿಗಳಾಗಿ ರೈತರ ಕೈಗೆ ಸಿಕ್ಕಿವೆ. ಇವೆಲ್ಲಾ ಮಳೆಯ ಕೊರತೆ ಮತ್ತಿತರ ಕಠಿಣ ಪರಿಸ್ಥಿತಿಗಳಲ್ಲೂ ತಲೆಎತ್ತಿ ನಿಲ್ಲಬಲ್ಲ ತಳಿಗಳು. ಬಹಳ ಮುಖ್ಯವಾಗಿ ಪ್ರತಿ ಎಕರೆಯೂ ಸರಾಸರಿ ಇಳುವರಿ ಹಳೆಯ ತಳಿಗಳಿಗಿಂತ ನಾಲ್ಕು ಪಟ್ಟು ಹೆಚ್ಚು ಬರುವಂತವು. ಹಾಗಾಗಿ ಸಣ್ಣ ರೈತರೆಲ್ಲಾ ತಮ್ಮ ಭೂಮಿಯ ಕೊಂಚ ಭಾಗಕ್ಕೆ ರಾಗಿ ಹಾಕಿಕೊಂಡು ಉಳಿದ ಜಾಗದಲ್ಲಿ ಇನ್ನಿತರ ಬೆಳೆ ಇಡಲು ಈಗ ಸಾಧ್ಯವಾಗುತ್ತಿದೆ. ಸರಿಯಾದ ಉತ್ತೇಜನ, ಅವಕಾಶ ಸಿಕ್ಕಿದಿದ್ದರೆ ಲಕ್ಷ್ಮಣಯ್ಯ ಇನ್ನೂ ದೊಡ್ಡ ಸಾಧನೆ ಮಾಡಿರುತ್ತಿದ್ದರು. ಆದರೆ ಸರ್ಕಾರ ನಡೆಸುವ ಅವಿವೇಕಿಗಳಿಗೆ ಅವರ ಸಾಮರ್ಥ್ಯ ಅರ್ಥವಾಗಲಿಲ್ಲ ಎನ್ನುವ ಟೀಕೆ ಈಗಲೂ ಇದೆ. ನಮ್ಮ ಸರ್ಕಾರ ಇರುವುದೇ ಹೀಗೆ ಬಿಡಿ. ಆದರೆ ಲಕ್ಷ್ಮಣಯ್ಯನವರನ್ನು ಈಗ ಕೊಂಡಾಡುತ್ತಿರುವ, ಸರ್ಕಾರವನ್ನು ಬೈಯ್ದುಕೊಳ್ಳುವ ರೈತ, ದಲಿತ ಸಂಘಟನೆಗಳು ತಾವಾದರೂ ಆಗಲೇ ಆ ಕೆಲಸ ಮಾಡಬಹುದಿತ್ತಲ್ಲವೆ? ಈ ಸಂಘಟನೆಗಳಿಗೆ ಕೃಷಿಯಲ್ಲಿ ರಚನಾತ್ಮಕ ಕಾರ್ಯಗಳ ಕನಸು ಹಾಗೂ ಅಜೆಂಡಾ ಇರದಿದ್ದದ್ದೇ ಇದಕ್ಕೆ ಕಾರಣವಿರಬಹುದು.

ರಾಗಿ ಲಕ್ಷ್ಮಣಯ್ಯನವರ ಬಗ್ಗೆ ತಿಳಿಯುತ್ತಾ ಹೋದಂತೆ ನಮಗೆ ಅವರ ನಿರಂತರ ದುಡಿಮೆ, ತಲ್ಲೀನತೆ, ಬಡ ರೈತರ ಬಗೆಗಿನ ಕಾಳಜಿ, ಸದ್ದುಗದ್ದಲವಿರದ ಬದುಕಿನ ರೀತಿ, ಪ್ರೀತಿ ತುಂಬಿದ ಮೌನ ಮುಖದ ವ್ಯಕ್ತಿತ್ವ ಅರ್ಥವಾಗುತ್ತಾ ಹೋಗುತ್ತದೆ.

1993 ರ ಮೇ 14 ರಂದು ಅವರು ತೀರಿಕೊಳ್ಳುವ ಮುನ್ನ "ನನ್ನ ದೇಹದ ಮೇಲೆ ಒಂದು ಹಿಡಿ ರಾಗಿ ಹಾಕಿ" ಅಂದಿದ್ದರಂತೆ!

# "ಮಗಳು ಬದುಕಬೇಕೆಂಬುದು ನನ್ನ ಆಸೆಯಾಗಿತ್ತು"

ಆಕೆ ಸುಂದರ ನಗುವನ್ನು ಹೊಂದಿದ್ದ ಯುವತಿ. ...ಪ್ರದಾಯಿಕ ಸೀರೆ ಅಥವಾ ಸಲ್ವಾರ್ ಕಮೀಜ್ ಬದಲಾಗಿ ...ನ್ಸ್ ಪ್ಯಾಂಟ್ ಇಷ್ಟ ಪಡುತ್ತಿದ್ದವಳು. ಸ್ವತಂತ್ರವಾಗಿ ...ೋಚಿಸುತ್ತಿದ್ದ ಆಕೆ ತನ್ನ ಕೇಶರಾಶಿಯನ್ನೂ ಕಟ್ಟದೆ ...ಗಿ ಬಿಟ್ಟಿರುತ್ತಿದ್ದಳು. ಆಕೆ ಅಪ್ಪಅಮ್ಮನ ಮುದ್ದಿನ ಮಗಳು, ...ಬ್ಬರು ತಮ್ಮಂದಿರ ಪ್ರೀತಿಯ ಅಕ್ಕ.

ಉತ್ತರ ಪ್ರದೇಶದ ಒಂದು ಸಣ್ಣ ಹಳ್ಳಿ ಆಕೆಯ ...ರ್ವಿಕರ ಊರು. ಆದರೆ ಆಕೆಯ ತಂದೆ ಬದ್ರಿ, ತಮ್ಮ ...ಕ ಮತ್ತು ಚೊಕ್ಕದಾದ ಸಂಸಾರವನ್ನು ತೂಗಿಸಲು ...83ರಲ್ಲಿ ಕೆಲಸ ಅರಸುತ್ತಾ ದೆಹಲಿಗೆ ಬಂದರು. ಅವರಿಗೆ ...ಲಿಯಾಗಿ ಕೆಲಸ ಸಿಕ್ಕಿದ್ದು ದೆಹಲಿ ವಿಮಾನ ನಿಲ್ದಾಣದಲ್ಲಿ. ...ನ ಅವರ ತಿಂಗಳ ಆದಾಯ ಕೇವಲ 150 ರೂಪಾಯಿ.

ಮಗಳು ಚೆನ್ನಾಗಿ ಓದುತ್ತಿದ್ದಳು. ವೈದ್ಯೆ ಆಗಬೇಕೆಂದು ...ಸು ಕಂಡಿದ್ದಳು. ಆದರೆ ಆಕೆಯ ಕನಸನ್ನು ನನಸಾಗಿಸುವ ...ರ್ಥಿಕ ಶಕ್ತಿ ಆಕೆಯ ತಂದೆಗೆ ಇರಲಿಲ್ಲ. ಅದಕ್ಕೆ ಅವರು ...ನ್ನನ್ನು ಡಾಕ್ಟರ್ ಮಾಡಲು ನನ್ನಿಂದಾಗಲ್ಲಮ್ಮ" ಎಂದರು. ...ಅವಳು "ಹಾಗಾದರೆ ನಾನು ವೈದ್ಯ ಸಹಾಯಕಿ ...ುತ್ತೇನೆ. ಇನ್ನೆಷ್ಟು ದಿನ ಇಂತಹ ಕಷ್ಟದ ಕಾಲ? ನಾನು ...ಮ ಮುಗಿಸಿ ನನ್ನ ಕಾಲ ಮೇಲೆ ನಿಂತಾಗ ನಮ್ಮ ...ರ್ಥಿಕ ಸಮಸ್ಯೆ ಬಗೆಹರಿಯುತ್ತದೆ. ನಾನು ವಿದೇಶಕ್ಕೆ ...ೋಗಿ ಕೈತುಂಬಾ ದುಡಿಯುತ್ತೇನೆ" ಎಂದಳು.

ಆಕೆಯನ್ನು ಭೌತ ಚಿಕಿತ್ಸಾ ಕಾಲೇಜಿಗೆ ಸೇರಿಸಲು ...ಪ್ಪ ಬದ್ರಿ, ತನ್ನ ಹಳ್ಳಿಯಲ್ಲಿದ್ದ ಪುಟ್ಟ ಜಮೀನನ್ನು ...ಾರಿದ್ದರು. ನಾಲ್ಕು ವರ್ಷಗಳ ಕಾಲ ಓದಿದನಂತರ ಆಕೆ ...ಟರ್ನ್‌ಗಿರಿ ಪ್ರಾರಂಭಿಸಿದ್ದಳು. ಅದು ಮುಗಿದನಂತರ ... ತನ್ನ ವೃತ್ತಿ ಬದುಕನ್ನು ಆರಂಭಿಸಿ ತನ್ನ ಕಾಲ ಮೇಲೆ ...ಲ್ಲುತ್ತಿದ್ದಳು, ತನ್ನ ಅಪ್ಪ ಅಮ್ಮ ಮತ್ತು ಇಬ್ಬರು ತಮ್ಮಂದಿರ ...ಮುಕಿನಲ್ಲಿ ಒಂದಿಷ್ಟು ಆರ್ಥಿಕ ನೆಮ್ಮದಿಯನ್ನು ತರುವ ...ಸು ಕಂಡಿದ್ದಳು.

ಹಲವಾರು ಕನಸುಗಳನ್ನು ಹೊತ್ತು ಹೊಸ ಬದುಕಿನ ...ೂಸ್ತಿಲಿಸಲ್ಲಿ ಆಕೆ ನಿಂತಿದ್ದಾಗಲೇ ಆಕೆಯ ಮೇಲೆ ...ನುಷ್ಯರೂಪದಲ್ಲಿದ್ದ ಆರು ಕ್ರೂರಿಗಳು ಮುಗಿಬಿದ್ದರು...

...ಬಗ್ಗೆಯೂ ಯೋಚಿಸಬೇಡಮ್ಮ. ಧೈರ್ಯವಾಗಿರು, ಎಲ್ಲವೂ ಸರಿಹೋಗುತ್ತೆ" ಎಂದು ಭರವಸೆ ನೀಡಿದರು.

ವಾಸ್ತವವಾಗಿ ತಮ್ಮ ಮಗಳಿಗೆ ಏನಾಗಿದೆ ಎಂದು ಅಲ್ಲಿಯವರೆಗೂ ಬದ್ರಿ ಅವರಿಗೆ ಗೊತ್ತೇ ಇರಲಿಲ್ಲ. ನಿಜವಾಗಲೂ ಆಕೆಗೆ ರಸ್ತೆ ಅಪಘಾತವಾಗಿದೆ ಎಂದೇ ಭಾವಿಸಿದ್ದರು. ಆದರೆ ಅದೆಂತಹ ಅಪಘಾತ ಎಂಬುದನ್ನು ಪೊಲೀಸ್ ಅಧಿಕಾರಿ ಒಬ್ಬರು ವಿವರಿಸಿದಾಗಲೇ ತಮ್ಮ ಮಗಳಿಗಾದ ಅನಾಹುತದ ಪ್ರಮಾಣ ಬದ್ರಿ ಅವರ ಅರಿವಿಗೆ ಬಂದದ್ದು.

ಅವತ್ತು ಅವರ ಮಗಳು ಮತ್ತು ಆಕೆಯ ಮಿತ್ರ ದೆಹಲಿಯ ಮಾಲ್ ಒಂದರಲ್ಲಿ ಸಿನಿಮಾ ನೋಡಿದ ನಂತರ ಮನೆಗೆ ಹಿಂದಿರುಗಲು ಬಸ್ ಒಂದನ್ನು ಏರಿದ್ದರು. ಆ ಬಸ್‌ನಲ್ಲಿದ್ದ ಆರು ಪುರುಷರು ಆಕೆಯ ಮೇಲೆ ಅಮಾನುಷವಾಗಿ ಅತ್ಯಾಚಾರವೆಸಗಿದ್ದರಲ್ಲದೆ ಆಕೆಯ ಮೇಲೆ ಮನಸೋಇಚ್ಛೆ ಕಬ್ಬಿಣ ರಾಡಿನಿಂದ ಹಲ್ಲೆ ಮಾಡಿದ್ದರು. ಆಕೆಯ ಮಿತ್ರನನ್ನೂ ಥಳಿಸಿದ್ದರು. ಆನಂತರ ಅವರಿಬ್ಬರನ್ನೂ ಬೆತ್ತಲೆಗೊಳಿಸಿ ರಸ್ತೆ ಮಧ್ಯೆ ಬಿಸಾಡಿದ್ದರು.

ಆ ಯುವಕ ಮತ್ತು ಯುವತಿ ರಕ್ತ ಸುರಿಸುತ್ತಾ ಬೆತ್ತಲೆ ಬಿದ್ದಿದ್ದನ್ನು ಹಲವಾರು ಜನ ನೋಡಿದರು. ಯುವಕ ಜನರ ನೆರವಿಗೆ ಅಂಗಲಾಚಿದರೂ ಅವರ್‍ಯಾರೂ ತಮ್ಮ ಕಾರ್, ಬೈಕ್ ಮತ್ತು ಆಟೋಗಳಿಂದ ಇಳಿದು ನೆರವಿಗೆ ಬರಲಿಲ್ಲ. ಅವರೆಲ್ಲ ಹಾಗೆ ನೋಡಿ ಸುಮ್ಮನೆ ಹೋದರು. ಸುಮಾರು ಅರ್ಧ ಗಂಟೆ ಅವರಿಬ್ಬರೂ ಅಲ್ಲೇ ನಿಸ್ಸಹಾಯಕರಾಗಿ ಇದ್ದರು. ಆಗ ಆ ರಸ್ತೆಯಲ್ಲಿ ಹಾದು ಹೋಗುತ್ತಿದ್ದ ಪೇದೆಯೊಬ್ಬ ಪೊಲೀಸರ ಪಿಸಿಆರ್ ವ್ಯಾನಿಗೆ ಇವರ ಬಗ್ಗೆ ಮಾಹಿತಿ ನೀಡಿದ. ಪೊಲೀಸರೇನೋ ಬಂದರು. ಆದರೆ ಇವರಿಬ್ಬರನ್ನು ಬಿಸಾಡಿದ್ದ ಸ್ಥಳ ಯಾವ ಪೊಲೀಸ್ ಠಾಣೆಗೆ ಬರುತ್ತದೆಂಬ ಚರ್ಚೆಯಲ್ಲಿ ಮಗ್ನರಾದರು. ಆ ಯುವಕ "ಇವಳ ದೇಹವನ್ನು ಮುಚ್ಚಲು ಒಂದು ಬಟ್ಟೆ ಕೊಡಿ" ಎಂದು ಬೇಡಿದರೂ, "ತಕ್ಷಣ ಒಂದು ಆಂಬುಲೆನ್ಸ್ ಕರೆಸಿ" ಎಂದು ಗೋಗರೆದರೂ ಅವರು ಕೇಳಲೇ ಇಲ್ಲ. ಅಷ್ಟೇ ಅಲ್ಲ, ಆ ಯುವತಿಯ ದೇಹದಿಂದ ಹರಿಯುತ್ತಿದ್ದ

...ಮಗಳೊಂದಿಗಿದ್ದು ಪ್ರತಿಕ್ಷಣ ಕಣ್ಣೀರಿಟ್ಟರು. "ಆಶಾ ಆಮೇಲೆ ನನಗೆ ವಿವರಗಳನ್ನು ಹೇಳಿದಳು. ಆ ಪ್ರಕರಣವನ್ನು ವಿವರಿಸಲು ನನ್ನಲ್ಲಿ ಪದಗಳಿಲ್ಲ. ಅವರ್‍ಯಾರೂ ಮನುಷ್ಯರಲ್ಲ, ಪ್ರಾಣಿಗಳೂ ಅಲ್ಲ. ಅವರು ಈ ಜಗತ್ತಿನವರೇ ಅಲ್ಲ. ನನ್ನ ಮಗಳ ಮೇಲಾದ ಭೀಭತ್ಸ ಕ್ರೌರ್ಯ ಮುಂದೆ ಯಾರ ಮೇಲೂ ಆಗದಿರಲಿ ಎಂದು ಆಶಿಸುತ್ತೇನೆ. ನನ್ನ ಮಗಳು ತುಂಬಾ ಅತ್ತಳು, ತುಂಬಾ ನೋವು ಅನುಭವಿಸಿದಳು. ತನ್ನ ಅಮ್ಮ ಮತ್ತು ಸಹೋದರರನ್ನು ಕಂಡಾಗ ಕಣ್ಣೀರಿಟ್ಟಳು. ನನ್ನ ಮಗಳು ಅದೆಷ್ಟು ಧೈರ್ಯಶಾಲಿ ಎಂದರೆ ಒಮ್ಮೆ ಆಕೆ ನಮಗೇ ಧೈರ್ಯ ಹೇಳಿ ಎಲ್ಲವೂ ಸರಿಹೋಗುತ್ತದೆ ಎಂದು ನಮ್ಮಗೇ ಭರವಸೆ ನೀಡಿದಳು" ಎಂದು ಬದ್ರಿ ನೆನಪಿಸಿಕೊಳ್ಳುತ್ತಾರೆ.

ಆಕೆಗೆ ಅದೆಷ್ಟೇ ಧೈರ್ಯವಿದ್ದರೂ ಅವಳ ದೇಹಕ್ಕಾಗಿದ್ದ ಹಾನಿಯನ್ನು ಮೀರಿ ನಿಲ್ಲಲು ಆಕೆಯಿಂದಾಗಲಿಲ್ಲ. ವಿಧಿ ಇಲ್ಲದೆ ವೈದ್ಯರು ಆಕೆಯ ಕರುಳನ್ನೇ ಕಿತ್ತು ಹಾಕುವ ಮೂಲಕ ಅವಳ ಪ್ರಾಣವನ್ನು ಉಳಿಸಲು ಯತ್ನಿಸಿದರು. ಅದರಿಂದಲೂ ಆಕೆ ಚೇತರಿಸಿಕೊಳ್ಳದಿದ್ದಾಗ ಹೆಚ್ಚಿನ ಚಿಕಿತ್ಸೆಗಾಗಿ ಆಕೆಯನ್ನು ಸಿಂಗಾಪೂರಿಗೆ ಕರೆದುಕೊಂಡು ಹೋಗಲು ನಿರ್ಧರಿಸಲಾಯಿತು.

ಬದ್ರಿ ಹೇಳುತ್ತಾರೆ: "ಎಲ್ಲವೂ ಸರಿಹೋಗುತ್ತಮ್ಮ. ಆದಷ್ಟು ಬೇಗ ನಾವು ನಮ್ಮ ಮನೆಗೆ ವಾಪಸ್ ಹೋಗುತ್ತೇವೆ ಎಂದು ನಾನು ಅವಳಿಗೆ ಹೇಳಿದಾಗ ಆಕೆ ಸಂತೋಷಗೊಂಡು ಕಿರುನಗೆ ಬೀರಿದಳು. ಒಮ್ಮೆ ನಾನು ಆಕೆಯ ಹಣೆಯ ಮೇಲೆ ಕೈಯಿಟ್ಟಾಗ ಆಕೆ ಕಣ್ಣು ತೆರೆದು ಕೈಸನ್ನೆಯ ಮೂಲಕ ನಾನು ಊಟ ಮಾಡಿದ್ದೇನೆಯೇ ಎಂದು ಕೇಳಿದಳು. ಊಟ ಆಯಿತು ಎಂದು ನಾನು ಹೇಳಿದಾಗ ಆಕೆ 'ನೀನು ಹೋಗಿ ನಿದ್ದೆ ಮಾಡು' ಎಂದು ಸೂಚಿಸಿದಳು. ನಾನು ಅವಳ ಕೈಗೆ ಮುತ್ತು ಕೊಟ್ಟೆ. ನಮ್ಮ ಬಗ್ಗೆ ನೀನು ಚಿಂತಿಸಬೇಡ, ವಿಶ್ರಾಂತಿ ತಗೋ

...ಧ್ವಂಸ ಮಾಡಿದೆ. ನಮ್ಮ ಬದುಕಿನಲ್ಲಿ ದೊಡ್ಡ ಶೂನ್ಯವನ್ನು ಉಂಟು ಮಾಡಿದೆ. ಆಕೆ ನಮ್ಮ ಜೀವನದ ಕೇಂದ್ರಬಿಂದುವಾಗಿದ್ದಳು. ಆಕೆ ಇಲ್ಲದ ಭವಿಷ್ಯವನ್ನು ಊಹಿಸಲೂ ನಮ್ಮಿಂದಾಗುತ್ತಿಲ್ಲ...

ನನ್ನ ಮಗಳು ಯಾವ ತಪ್ಪನ್ನೂ ಎಸಗಲಿಲ್ಲ. ಆಕೆ ತನ್ನ ಪ್ರಾಣ ರಕ್ಷಿಸಿಕೊಳ್ಳಲು ಯತ್ನಿಸಿದ್ದರಿಂದ ಸಾವನ್ನಪ್ಪಬೇಕಾಯಿತು. ಅವಳ ಬಗ್ಗೆ ನನಗೆ ಹೆಮ್ಮೆ ಇದೆ. ಆಕೆಯಂತೆ ದಾಳಿಗೊಳಗಾದ ಇತರ ಮಹಿಳೆಯರಿಗೆ ನಮ್ಮ ಮಗಳಿಂದ ಧೈರ್ಯ ಸಿಗುವಂತಾಗಲಿ...



## ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್


ಆಕೆಯ ಮೇಲೆ ದಾಳಿ ಮಾಡಿದವರ ಮುಖಗಳನ್ನು ನೋಡಬೇಕು ಎಂದೆನಿಸಿತ್ತು ನನಗೆ. ಆದರೆ ಈಗ ಹಾಗೆನಿಸುತ್ತಿಲ್ಲ, ಬದಲಾಗಿ ನ್ಯಾಯಾಲಯ ಅವರೆಲ್ಲರಿಗೆ ಮರಣದಂಡನೆ ವಿಧಿಸಲಿ ಎಂದಷ್ಟೇ ಆಶಿಸುತ್ತಿದ್ದೇನೆ...

ಈ ಹಿಂದೆ ಅತ್ಯಾಚಾರ ಪ್ರಕರಣಗಳ ಬಗ್ಗೆ ಪತ್ರಿಕೆಗಳಲ್ಲಿ ಓದಿದಾಗ ನಾನು ಅವುಗಳ ಬಗ್ಗೆ ಹೆಚ್ಚು ಯೋಚಿಸುತ್ತಿರಲಿಲ್ಲ. ಆದರೀಗ ಇನ್ನು ಮುಂದಾದರೂ ತಂದೆತಾಯಂದಿರು ಮಹಿಳೆಯರನ್ನು ಹೇಗೆ ಗೌರವಿಸಬೇಕೆಂಬುದನ್ನು ತಮ್ಮ ಗಂಡು ಮಕ್ಕಳಿಗೆ ಕಲಿಸಲಿ...

*****

ಆ ಹುಡುಗಿಯ ಹೆಸರು...

ಬೇಡ. ಆಕೆಯ ಹೆಸರು ಶಾಂತ, ಸಂಗೀತ, ಉಮಾ...



ತಂದೆ ಬದ್ರಿ



ಶವವಾದ ಯುವತಿ



ಹಳ್ಳಿ ಮನೆಯಲ್ಲಿ

ಅವತ್ತೇ ಆಕೆಯ ಮತ್ತು ಆಕೆಯ ಹೆತ್ತವರೆಲ್ಲರ ಬದುಕು ...ನ್ನಗೊಂಡಿತು...

*****

ಡಿಸೆಂಬರ್ 16ರ ರಾತ್ರಿ ದೆಹಲಿ ವಿಮಾನ ನಿಲ್ದಾಣದಲ್ಲಿ ...ಮ್ಮ ಕೂಲಿ ಕೆಲಸ ಮುಗಿಸಿ ಬದ್ರಿ ಅವರು ಸುಮಾರು ...ತ್ತೂವರೆ ಗಂಟೆಗೆ ಮನೆಗೆ ವಾಪಸ್ ಬಂದರು. ಅವರು ...ನೆಯೊಳಗೆ ಕಾಲಿಡುತ್ತಿದ್ದಂತೆ ಅವರ ಪತ್ನಿ ಆಶಾ "ನಮ್ಮ ...ಗಳು ಇನ್ನೂ ಮನೆಗೆ ವಾಪಸ್ ಬಂದಿಲ್ಲ. ಅವಳ ...ೊಬೈಲಿಗೆ ಫೋನ್ ಮಾಡಿದರೆ ಯಾರೂ ಅದನ್ನು ...ಕರಿಸುತ್ತಿಲ್ಲ, ಅವಳ ಮಿತ್ರನ ಮೊಬೈಲದ್ದೂ ಅದೇ ..." ಎಂದು ಚಿಂತಾಕ್ರಾಂತರಾಗಿ ಹೇಳಿದರು. ಬದ್ರಿ ಕೂಡ ...ಮ್ಮ ಮಗಳಿಗೆ ಮತ್ತು ಆಕೆಯ ಮಿತ್ರನಿಗೆ ಫೋನ್ ...ಡಲು ಅದೆಷ್ಟೇ ಪ್ರಯತ್ನಿಸಿದರೂ ಅವರಿಬ್ಬರೂ ಸಿಗಲಿಲ್ಲ. ...ೇ ರಾತ್ರಿ ಹನ್ನೊಂದುಕಾಲು ಗಂಟೆಗೆ ಪೊಲೀಸರೇ ...ದ್ರಿ ಅವರಿಗೆ ಫೋನ್ ಮಾಡಿ "ನಿಮ್ಮ ಮಗಳಿಗೆ ...ಸಿಡೆಂಟ್ ಆಗಿದೆ. ಬೇಗನೆ ಆಸ್ಪತ್ರೆಗೆ ಬನ್ನಿ" ಎಂದು ...ಳಿದರು.

ತಿಂಗಳಿಗೆ ಐದೂವರೆ ಸಾವಿರ ರೂಪಾಯಿಗಳ ಸಂಬಳ ...ಡೆಯುವ ಬದ್ರಿ ಬಳಿ ವಾಹನವಿಲ್ಲ. ಆದ್ದರಿಂದ ತಮ್ಮ ...ತ್ರರೊಬ್ಬರೊಂದಿಗೆ ಅವರ ಮೋಟಾರ್ ಬೈಕಿನಲ್ಲಿ ಆಸ್ಪತ್ರೆಗೆ ...ವಿಸಿದರು.

ಆಸ್ಪತ್ರೆಯಲ್ಲಿ ಅವರ ಮಗಳು ಕಣ್ಣುಮುಚ್ಚಿ ಮಲಗಿದ್ದಳು. ...ದ್ರಿ ಆಕೆಯ ಹಣೆಯ ಮೇಲೆ ಕೈಯಿಟ್ಟು ಆಕೆಯನ್ನು ...ಗರಿದು ಕರೆದರು. ನಿಧಾನವಾಗಿ ಕಣ್ಣು ತೆರೆದ ಆ ...ುವತಿ ಅಪ್ಪನನ್ನು ಕಂಡಕೂಡಲೇ ಕಣ್ಣೀರಿಡಲಾರಂಭಿಸಿದಳು, "...ನಗೆ ತುಂಬಾ ನೋವಾಗುತ್ತಿದೆ ಅಪ್ಪ" ಎಂದಳು. ಬದ್ರಿ, ಕಣ್ಣೀರನ್ನು ಒರೆಸಿಕೊಳ್ಳುತ್ತಾ "ನೀನು ಯಾವುದರ

ರಕ್ತದಿಂದಾಗಿ ಎಲ್ಲಿ ತಮ್ಮ ಖಾಕಿ ಬಟ್ಟೆ ಗಲೀಜಾಗುತ್ತದೋ ಎಂಬ 'ಭಯದಿಂದ' ಆ ಯುವಕನಿಗೆ "ಅವಳನ್ನು ಎತ್ತಿ ಪಿಸಿಆರ್ ವ್ಯಾನ್ ಒಳಗೆ ಹಾಕು" ಎಂದು ಆದೇಶ ನೀಡಿದರು. ಆತನಿಗೂ ಭರ್ಜರಿ ಪೆಟ್ಟಾಗಿತ್ತು, ಆತನಿಂದ ನಡೆಯಲಾಗುತ್ತಿರಲಿಲ್ಲ, ಕೈಗಳನ್ನು ಅಲ್ಲಾಡಿಸುವುದೂ ಕಷ್ಟವಾಗಿತ್ತು. ಆದರೂ ಆತನೇ ತನ್ನ ಗೆಳತಿಯನ್ನು ಎತ್ತಿಕೊಂಡು ವ್ಯಾನಿನಲ್ಲಿಟ್ಟ.

ತಮ್ಮ ಮಗಳು ಅನುಭವಿಸಿದ್ದ ನರಕಯಾತನೆಯ ಬಗ್ಗೆ ಗೊತ್ತಾಗುತ್ತಿದ್ದಂತೆ ಬದ್ರಿ ಮನೆಗೆ ಫೋನ್ ಮಾಡಿ ತಮ್ಮ ಪತ್ನಿ ಮತ್ತು ಇಬ್ಬರು ಪುತ್ರರು ಕೂಡಲೇ ಆಸ್ಪತ್ರೆಗೆ ಬರುವಂತೆ ಸೂಚಿಸಿದರು. ಆದರೆ ತಮ್ಮ ಮಗಳ ಮೇಲೆ ಅಮಾನುಷವಾದ ಅತ್ಯಾಚಾರ ನಡೆದಿದೆ ಎಂದು ಹೇಳಲು ಅವರಿಂದ ಸಾಧ್ಯವಾಗಲಿಲ್ಲ.

ಹತ್ತು ದಿನಗಳ ಕಾಲ ಸಾವುಬದುಕಿನ ನಡುವೆ ತೋಯ್ದಾಡಿದ ಬದ್ರಿಯ ಮಗಳು ಆಸ್ಪತ್ರೆಯಲ್ಲಿ ತನ್ನ ಪ್ರಾಣಕ್ಕಾಗಿ ಹೋರಾಡಿದಳು. "ವೈದ್ಯರು ಆಕೆಯನ್ನು ಉಳಿಸಲು ತುಂಬಾ ಪ್ರಯತ್ನಿಸಿದರು. ಪ್ರಜ್ಞೆಯಲ್ಲಿರದಿದ್ದ ಮಗಳಿಗೆ ಆಗೀಗ ಎಚ್ಚರವಾಗುತ್ತಿತ್ತು, ಒಂದೆರಡು ಬಾರಿ ಆಕೆ ನಮ್ಮೊಂದಿಗೆ ಮಾತನಾಡಿದಳು. ಆಕೆಯ ಬಾಯಿಗೆ ಪೈಪೊಂದನ್ನು ಅಳವಡಿಸಿದ್ದರಿಂದ ಆಕೆ ಹೆಚ್ಚಾಗಿ ಕೈಸನ್ನೆ ಮಾಡುತ್ತಿದ್ದಳು. ಹಲವೊಮ್ಮೆ ಆಕೆ ಕಾಗದದ ಮೇಲೆ ಬರೆದು ಹೇಳುತ್ತಿದ್ದಳು. ಒಮ್ಮೆ ಆಕೆ 'ನಾನು ಬದುಕಬೇಕು' ಎಂದೂ ಬರೆದಳು" ಎನ್ನುತ್ತಾರೆ ಬದ್ರಿ.

ಆಸ್ಪತ್ರೆಯಲ್ಲಿದ್ದಾಗ ಆ ಹುಡುಗಿ ಎರಡು ಬಾರಿ ಪೊಲೀಸರಿಗೆ ನಡೆದದ್ದರ ಬಗ್ಗೆ ಹೇಳಿಕೆಯನ್ನು ನೀಡಿದಳು. ಆದರೆ ಆಕೆ ಹೇಳಿದ್ದು ಎಷ್ಟು ಬರ್ಬರವಾಗಿತ್ತೆಂದರೆ ಅದನ್ನು ಕೇಳಲಾಗದೆ ಬದ್ರಿ ಆಕೆಯ ಕೊಠಡಿಯಿಂದ ಹೊರಬಂದಿದ್ದರು. ಅವರ ಪತ್ನಿ ಆಶಾ ಆಗ ತಮ್ಮ

ಎಂದಾಗ ಆಕೆ ಕಣ್ಣುಮುಚ್ಚಿದಳು."

ಮೂರು ದಿನಗಳ ನಂತರ ಸಿಂಗಾಪೂರಿನ ಆಸ್ಪತ್ರೆಯಲ್ಲಿ ಆಕೆಗೆ ಹೃದಯಾಘಾತವಾಗಿ ಆಕೆ ಈ ಜಗತ್ತಿಗೆ ವಿದಾಯ ಹೇಳಿದಳು. "ಆಕೆ ಬದುಕಬೇಕೆಂದು ನಾನು ತುಂಬಾ ಆಶೆ ಪಟ್ಟಿದ್ದೆ. ಆಕೆಗೆ ಆದದ್ದನ್ನು ಮರೆತು ಬದುಕುವುದು ಕಷ್ಟವಾಗುತ್ತಿದ್ದರೂ ಆಕೆ ಬದುಕಬೇಕೆಂಬುದು ನನ್ನ ಆಶೆಯಾಗಿತ್ತು. ಈಗ ಆಕೆ ಇಲ್ಲದಿರುವುದು ನಮ್ಮನ್ನೆಲ್ಲ

ಏನೇ ಆಗಿದ್ದಿರಬಹುದು. ಅದು ಮುಖ್ಯವಲ್ಲ. ಬದಲಾಗಿ ಆಕೆಗೆ ಆಗಿದ್ದು ಮುಖ್ಯ. ಅದರಿಂದ ಎಲ್ಲರೂ ಕಲಿಯಬೇಕಾದ ಪಾಠ ಎಲ್ಲದಕ್ಕಿಂತಲೂ ಮುಖ್ಯ... ಅಲ್ಲವೇ?

ಎಲ್ಲರನ್ನು ಇನ್ನೂ ಕಾಡುತ್ತಿರುವ ಆ ಯುವತಿಯ ಕತೆ ಕಣ್ಣೀರು ತರಿಸಿದ್ದರಿಂದ ಇಷ್ಟು ಹೇಳಬೇಕೆನಿಸಿತು. ■

## ಇಂತಹ ಅಕ್ಷರಗಳ ಮುಲಾಮು ಬೇಕಿದೆ


ಪ್ರೀತಿಯ ಗೌರಿ,

ಈ ಸಲದ 'ಲಂಕೇಶ'ನ್ನು ಹಸಿವು ಹತ್ತಿದಂತೆ ಓದಿದೆ. ಹೆಣ್ಣೆಂಬ ಜೀವದ ಮೇಲೆ ನಿರಂತರವಾಗಿ ನಡೀತಿರೋ ವಿವಿಧ ಸ್ವರೂಪದ ಹಲ್ಲೆಗಳು ಅತ್ಯಂತಿಕ ರೂಪವನ್ನು ಪ್ರಕಟಿಸುತ್ತಿರೋ ಈ ಹೊತ್ತಿನಲ್ಲಿ ಜೀವವು ಆಳದಾಳದಲ್ಲಿ ಕನಲಿಹೋಗಿದೆ. ನಿಸ್ತೇಜಗೊಂಡಿದೆ. ಕಸಾಬ್ ಗಲ್ಲಿಗೇರಿದ್ದ ಹಿಂದುಮುಂದಿನ ನಾಲ್ಕು ದಿನ ಪೇಪರು, ನ್ಯೂಸ್ ಎಲ್ಲ ಕೈಯಲ್ಲೂ ಕಣ್ಣಲ್ಲೂ ಮುಟ್ಟದರ ಸೂತಕವಾಚರಿಸಿದ್ದೆ. ಈಗ ದಿನಬೆಳಗಾದರೆ ಹೆಣ್ಣು ಜೀವದ ಮೇಲಾಗುವ ಈ ಆಕ್ರಮಣವನ್ನು ಪೇಪರ ಓದುವ ಪುಟ್ಟ ಮಗಳು ಅರ್ಥೈಸಿಕೊಳ್ತಿರೋ ರೀತಿಗೆ ನಡುಕಹುಟ್ಟಿದೆ. ಮಗಳೆಂಬ ಕನ್ನಡಿಯಲ್ಲಿ ಮಕ್ಕಳ ಮುದ್ದುಲೋಕವು ಥರಗುಟ್ಟಿರೋದು ಕಾಣ್ತಿದೆ. ಈಗ ಆಗಬೇಕಾಗಿರೋದು ಏನು ಮತ್ತು ಹೇಗೆ ಎಂಬ ಪ್ರಶ್ನೆ ಗೆದ್ದಲಿನಂತೆ ಅಮರಿಕೊಂಡಿದೆ.

ಇಂಥಾದ್ದರಲ್ಲಿ ಅನ್ನಪೂರ್ಣಾದೇವಿಯವರ ಕುರಿತ ನಿಮ್ಮ ಸಂಪಾದಕೀಯ, ವೈದೇಹಿ ಬರಹ ದೌರ್ಜನ್ಯದ ಬಹುಸಾಧ್ಯತೆಗಳನ್ನು ಆಳವಾಗಿ ಸೂಚಿಸುತ್ತಿತ್ತು. ನಮ್ಮ ಸುತ್ತಲಿನವರಿಗೆ ಮೇರಿ ಕ್ರಿಸ್ಮಸ್, ಈದ್ ಮುಬಾರಕ್ ಹೇಳಲಾಗಿದೆ. ಬಾಯ್ಮುಟ್ಟುವ ದರಿದ್ರ ಸ್ಥಿತಿಯನ್ನು ಅಂಥದೇ ಕೌರ್ಯವನ್ನು ಭಾವಾವೇಶವಿಲ್ಲದೆ ಸ್ಪಷ್ಟೀಕರಿಸಿಕೊಳ್ಳುವ ಜವಾಬ್ದಾರಿಯನ್ನು ತೀಸ್ತಾ ಸೆಟಲ್‌ವಾದ್ ಮತ್ತು ಭಾಗೀರಥಿಯವರ ಮಾತುಗಳ ಉಲ್ಲೇಖದ ಲೇಖನಕ್ಕಾಗಿ ಫಣಿರಾಜ್ ಅವರಿಗೆ ಒಂದು ಸಲಾಂ! ಇಂತಹ ಅಕ್ಷರಗಳ ಮುಲಾಮು ಹಚ್ಚಿಕೊಂಡೇ ವಿಜೃಂಭದ ಸ್ಥಿತಿಯಿಂದ ನನ್ನಂಥವರು ಮೇಲೇಳಬೇಕೇನೋ?

– ಡಾ. ವಿನಯಾ, ಧಾರವಾಡ

# ಉತ್ತರ ಕನ್ನಡ: ಬಿಜೆಪಿ ಶಾಸಕರಿಬ್ಬರ ಪೀಕಲಾಟ!



ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿಜೆಪಿ ಇಂದು ಹಿಂದಿನ ಜನಸಂಘಕ್ಕಿಂತಲೂ ಹೀನಾಯ ಸ್ಥಿತಿಯಲ್ಲಿದೆ! ಮುಳುಗುತ್ತಿರುವ ಈ ಬ್ರಾಹ್ಮಣಶಾಹಿ ಬೋಟ್‌ನಿಂದ ಬದುಕಲೆಂದು ಒಬ್ಬೊಬ್ಬರೇ ಜಿಗಿಯಲಾರಂಭಿಸಿದ್ದಾರೆ. ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಆರಿಸುವ ಟಿಕೆಟ್ ತಂತ್ರಗಾರಿಕೆಯಂತೂ ಬಿಜೆಪಿಯನ್ನು ಹೈರಾಣಾಗಿಸಿಬಿಟ್ಟಿದೆ! ಇವತ್ತು ಬಿಜೆಪಿಯಲ್ಲಿ ಇರುವ ಸಾಕ್ಷಾತ್ ಮಂತ್ರಿ-ಶಾಸಕರಿಗೇ ನಾಳೆ ತಾವು ಇಲ್ಲಿಯೇ ಇರುತ್ತೇವೆಂಬ ಭರವಸೆ ಇಲ್ಲದಾಗಿದೆ. ಅಳಿದ ಬಿಜೆಪಿಯಲ್ಲಿ ಈಗ ಉಳಿದಿರುವ ಕಂತ್ರಿ ಮಂತ್ರಿ ಕಾಗೇರಿ ಮತ್ತವನ ಸ್ವಜಾತಿ ಶತ್ರು ಸಂಸದ ಅನಂತ್ಕಾಣಿಯೇ ಗೌಡರು!

ಈ ದೊಣ್ಣೆ ನಾಯಕದ್ವಯರು ಎರಡು ಹೋಳಾಗಿಸಿಕೊಂಡು ಪಾರುಪತ್ಯ ನಡೆಸಿರುವ ಜಿಲ್ಲಾ ಬಿಜೆಪಿಯ ಆರೋಗ್ಯ ವಿಚಾರಿಸಲೆಂದು ಕಳೆದ ಜನವರಿ 2 ರಂದು ಯಲ್ಲಾಪುರಕ್ಕೆ ರಾಜ್ಯ ಬಿಜೆಪಿ ಬಾಸ್ ಈಶ್ವರಪ್ಪ ಬಂದಿದ್ದರು. ಎಪಿಎಂಸಿ ಪ್ರಾಂಗಣದಲ್ಲಿ ಜಿಲ್ಲಾ ಬಿಜೆಪಿ ಕೋರ್ ಕಮಿಟಿ ಮೀಟಿಂಗ್ ನಡೆಸಿದ ಈಶ್ವರಿ ಯಾರಿಗೆ ಅಸೆಂಬ್ಲಿ ಟಿಕೆಟ್ ಕೊಡಬಹುದು? ಯಾರ‍್ಯಾರಿಗೆ ಛಾನ್ಸ್ ಕೊಡಕೂಡದು? ಎಂಬ ಸಣ್ಣದೊಂದು ರಿವ್ಯೂ ನಡೆಸಿದರು. ಮಂತ್ರಿ ಕಾಗೇರಿ, ಆನಂದ ಅಸ್ನೋಟಿಕರ್ ಮತ್ತು ಯಲ್ಲಾಪುರ ಶಾಸಕ ವಿ.ಎಸ್.ಪಾಟೀಲ್‌ಗೆ ಟಿಕೆಟ್ ಖಾತ್ರಿಯೆಂಬ ಸಂಕೇತ ಈಶ್ವರಪ್ಪ ಬಿತ್ತರಿಸಿದರು.

ಶಿರಸಿ-ಸಿದ್ದಾಪುರ ಬಿಜೆಪಿಯನ್ನು ಕಬ್ಜಾ ಮಾಡಿಕೊಂಡಿರುವ ಕಾಗೇರಿಗೆ ಟಿಕೆಟ್ ಕೊಡುವ ಬಗ್ಗೆ ಯಾರ ತಕರಾರೂ ಇರಲಿಲ್ಲ, ಆದರೆ ಕಾರವಾರದ ಆಪರೇಷನ್ ಕಮಲಿಗ ಆನಂದ ಅಸ್ನೋಟಿಕರ್ ಮತ್ತು ಮತಾಂಧ ಸಂಸದ ಅನಂತ್ಕಾಣಿ ಕೆಂಗಣ್ಣಿಗೆ ತುತ್ತಾಗಿರುವ ವಿ.ಎಸ್.ಪಾಟೀಲ್‌ಗೆ ಮತ್ತೆ ಬಿಜೆಪಿ ಅಭ್ಯರ್ಥಿ ಮಾಡಬಾರದೆಂಬ ಬೊಬ್ಬೆ ಈಶ್ವರಿಯನನ್ನು ಬೆಚ್ಚಿಬೀಳಿಸಿತು. ಅಸ್ನೋಟಿಕರ್‌ನ ಕಂಡರೆ ಒರಿಜಿನಲ್ ಚಡ್ಡಿ- ಹಳೆ ಬಿಜೆಪಿಗರಿಗೆ ಲಾಗಾಯ್ತಿನಿಂದಲೂ ಆಗುವುದಿಲ್ಲ, ಬಿಜೆಪಿ ಮಂತ್ರಿಯಾಗಿದ್ದರೂ ಈ ಅಸ್ನೋಟಿಕರ್ ಸ್ಥಳೀಯ ಬಿಜೆಪಿಗರನ್ನು ಮುಟ್ಟಿಸಿಕೊಂಡವನೂ ಅಲ್ಲ, ಬಿಜೆಪಿ ಬೆಳೆಸದೆ ಅಪ್ಪನ ಅಭಿಮಾನಿ ಸಂಘ ಬಲಗೊಳಿಸಿಕೊಂಡ ಅಸ್ನೋಟಿಕರ್ ಕಾಂಗ್ರೆಸಿಗೆ ಹೋಗ್ತೇನೆ ಅಥವಾ ಜೆಡಿಎಸ್ ಸೇರ್ತೇನೆ ಎಂದು ಎದುರಾಳಿಗಳಿಗೆ ಛೇಡಿಸುತ್ತಲೇ ಬಂದವನು.

ಇಂಥ ಅಸ್ನೋಟಿಕರ್‌ನಿಂದ ಹಳೆ ಬಿಜೆಪಿಗರಿಗೆ ಪೈಸೆ ಪ್ರಯೋಜನವೂ ಆಗಲಿಲ್ಲ. ಹಾಗೆಂದೇ ಜಿಲ್ಲಾ ಬಿಜೆಪಿ ಅಧ್ಯಕ್ಷನೂ- ಕಾರವಾರ ನಿವಾಸಿಯೂ ಆಗಿರುವ ಪ್ರಸಾದ್ ಕಾರವಾರಕರ್, ಕಾರವಾರ- ಅಂಕೋಲಾ ಅಸೆಂಬ್ಲಿ ಕ್ಷೇತ್ರಾಧ್ಯಕ್ಷ ಅರುಣ ನಾಡಕರ್ಣಿ ಗ್ಯಾಂಗಿಗೆ ಈ ಅಸ್ನೋಟಿಕರ್ ಬಿಜೆಪಿಯಲ್ಲಿ ಇರುವುದೇ ಬೇಡವಾಗಿದೆ.

ಈಶ್ವರಪ್ಪನ ಎದುರು ದೊಡ್ಡ ದೂರಿನ ಪಟ್ಟಿಯನ್ನೇ ಪ್ರಸಾದ್ ಬಳಗ ಮಂಡಿಸಿ ಅಸ್ನೋಟಿಕರ್‌ಗೆ ಟಿಕೆಟ್ ಕೊಡಬೇಡಿ ಎಂದು ಕೂಗಾಡಿತು. ಮತ್ತೊಂದೆಡೆಯಿಂದ ಎಂಪಿ ಅನಂತ್ಕಾಣಿಯ ಅಡ್ನಾಡಿಗಳ ಬಳಗ ಮುಂಡಗೋಡದ ವಿ.ಎಸ್.ಪಾಟೀಲ್ ಯಡ್ಡಿ ಹಿಂಬಾಲಕನಾಗಿರುವುದರಿಂದ ಆತನನ್ನು ಮತ್ತೆ ಕ್ಯಾಂಡಿಡೇಟ್ ಮಾಡಬಾರದೆಂದು ಹಾರಾಡಿತು.

ಅಧಿಕ ಪ್ರಸಂಗಿ ಆನಂದ ಅಸ್ನೋಟಿಕರ್ ಈಗ ಪೀಕಲಾಟಕ್ಕೆ ಬಿದ್ದಿದ್ದಾನೆ. ಕಾಂಗ್ರೆಸ್ ಸೇರಲು ಬೆಂಗಳೂರು-ದಿಲ್ಲಿ ಮಟ್ಟದಲ್ಲಿ ತರಹೇವಾರಿ ಕಸರತ್ತು ಮಾಡಿದ್ದ ಆತನಿಗೆ ಎಲ್ಲ ಕಡೆಯಿಂದ ಸಾಲಾಗಿ ರೆಡ್‌ಸಿಗ್ನಲ್ ಕಾಣಿಸತೊಡಗಿದೆ. ಆಪರೇಷನ್ ಕಮಲಿಗರಿಗೆ ಕಾಂಗ್ರೆಸ್ ಬಾಗಿಲು ತೆರೆಯದಿರಲು ಕಾಂಗ್ರೆಸ್‌ನ ಯುವರಾಜ ರಾಹುಲ್ ಗಾಂಧಿ ಕಟ್ಟಪ್ಪಣೆ ಮಾಡಿದ್ದಾರಂತೆ. ಕಳೆದ ವಾರ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಮತ್ತು ಎಸ್.ಆರ್.ಪಾಟೀಲರನ್ನು ದಿಲ್ಲಿಗೆ ಕರೆಸಿಕೊಂಡಿದ್ದ ಹೈಕಮಾಂಡ್ ಮಾಂಡಲೀಕರು ಅದೆಷ್ಟೇ ಬಲಶಾಲಿಯಾಗಿದ್ದರೂ ಆಪರೇಷನ್ ಮಾಡಿಸಿಕೊಂಡು ಕಾಂಗ್ರೆಸ್‌ಗೆ ದೋಖಾ ಕೊಟ್ಟು ಬಿಜೆಪಿಗೆ ಹೋದವರಿಗೆ ಎಂಟ್ರಿ ಕೊಡಲು ಸಾಧ್ಯವೇ ಇಲ್ಲ ಎಂದು ಹೇಳಿಕಳಿಸಿದೆ! ಹೀಗಾಗಿ ಆನಂದ ಅಸ್ನೋಟಿಕರ್, ಬಚ್ಚೇಗೌಡ, ಯೋಗೇಶ್ವರ್, ಸೋಮಣ್ಣ ಆದಿಯಾಗಿ ಕಾಂಗ್ರೆಸ್ ಕದ ತಟ್ಟುತ್ತಿದ್ದ 15 ಜನ ಬಿಜೆಪಿ ಶಾಸಕ- ಮಂತ್ರಿಗಳಿಗೆ ದಿಕ್ಕೇ ತೋಚದಂತಾಗಿದೆ.

ಕಾಂಗ್ರೆಸ್ ಹೈಕಮಾಂಡ್‌ನ ಬಿಗಿ ನೀತಿಯ ನೇರ ಪರಿಣಾಮ ಕಾರವಾರದ ಆನಂದ ಅಸ್ನೋಟಿಕರ್ ಮೇಲಾಗಿದೆ. ಕಾಂಗ್ರೆಸ್ ಸೇರುವ ಆತನ ಆಸೆಗೆ ಎಳ್ಳು ನೀರು ಬಿಟ್ಟಂತಾಗಿದೆ. ಇತ್ತ ಬಿಜೆಪಿಯಲ್ಲೂ ಆತನನ್ನು ಹೊರದಬ್ಬುವ ವ್ಯವಸ್ಥಿತ ಕಾರ್ಯಾಚರಣೆ ಹಳೆ ಬಿಜೆಪಿಗರು ನಡೆಸಿದ್ದಾರೆ. ಯಲ್ಲಾಪುರದಲ್ಲಿ ಅಸ್ನೋಟಿಕರ್‌ನಿಂದಾದ ಅನಾಹುತವನ್ನು ಕಾರವಾರ ಬಿಜೆಪಿಗರು ಈಶ್ವರಪ್ಪನ ಮುಂದೆ ಹೇಳುತ್ತಿದ್ದಾಗ ಆತ ಕಂಗಾಲಾಗಿ ಹೊರಗೋಡಿ ಹೋಗುವಂತಾಗಿತ್ತು, ಈಶ್ವರಪ್ಪನೇ ಆನಂದನನ್ನು ಒಳಗೆ ಕರೆಸಿ "ನೋಡಪ್ಪಾ ತಮ್ಮಾ... ನಿನ್ನ ಮೇಲೆ ರಾಶಿ ಕಂಪ್ಲೇಂಟ್ ಇದೆ... ಇನ್ನು ಮುಂದೆ ಮೂಲ ಬಿಜೆಪಿಗರೊಂದಿಗೆ ಹೊಂದಿಕೊಂಡು ಹೋಗು... ನೀನು ಪಾರ್ಟಿ ಬಿಡ್ತಿ ಅಂತಾ ಹೇಳ್ತಿಯಂತೆ ಹೌದೇನೋ?" ಎಂದು ತರಾಟೆಗೆ ತೆಗೆದುಕೊಂಡರು.

ಇದಕ್ಕುತ್ತರವಾಗಿ ಆನಂದ "ಇಲ್ಲಾ ಸರ್, ನಾನು ಬಿಜೆಪಿ ಬಿಡೋದಿಲ್ಲ... ನಂಗೇ ಟಿಕೆಟ್ ಕೊಡ್ರಿ ಸರ್..." ಎಂದು ಅಂಗಲಾಚಿದ. ಮರುದಿನವೇ "ನಾನು ಬಿಜೆಪಿಯವರೊಂದಿಗೆ ಇಷ್ಟು ದಿನ ನಡಕೊಂಡ ರೀತಿ ಸರಿ ಇಲ್ಲದಿರಬಹುದು... ಇನ್ನು ಮುಂದೆ ಅಂಥ ತಪ್ಪು ಮಾಡೋದಿಲ್ಲ..." ಎಂಬ ಸ್ಟೇಟ್‌ಮೆಂಟ್ ಒಗಾಯಿಸುವಂಥ ದುಸ್ಥಿತಿ ಅಸ್ನೋಟಿಕರ್‌ಗೆ ಬಂತು, ಪಾಪ! ಅಸ್ನೋಟಿಕರ್‌ನನ್ನು ಬಿಜೆಪಿಯಿಂದ ಓಡಿಸಿದರೆ ತಾವೇ ಕ್ಯಾಂಡಿಡೇಟಾಗಬಹುದೆಂದು ಲೆಕ್ಕಾಚಾರ ಕಾಂಗ್ರೆಸ್‌ನ ಅಸ್ನೋಟಿಕರ್ ಎದುರು ಸೋತ ಪ್ರಸಾದ್ ಕಾರವಾರಕರ್, ಮುನಿಸಿಪಾಲ್ಟಿ ಅಧ್ಯಕ್ಷ ಗಣಪತಿ ಉಳ್ವೇಕರ್ ಮತ್ತು ಅರುಣ ನಾಡಕರ್ಣಿಗಳು ಹಾಕಿಕೊಂಡಿದ್ದಾರೆ. ಅಸ್ನೋಟಿಕರ್‌ನ ಬಂದರು ಮಾಫಿಯಾ ದಂಧೆಯ ಸಲಹೆಗಾರ- ರಾಜಕೀಯ ಗುರು ಆಗಿದ್ದ ಗಣಪತಿ ಉಳ್ವೇಕರನೇ ಬಿಜೆಪಿ ಹುರಿಯಾಳಾಗಲು ಹವಣಿಸುತ್ತಿರುವುದು ಕುತೂಹಲಕರವಾಗಿದೆ. ಈ ಉಳ್ವೇಕರ್ ಆನಂದನ ಅಪ್ಪ ವಸಂತ ಅಸ್ನೋಟಿಕರ್‌ನ ಅತೃಪ್ತ ಘಂಟರ್ ಆಗಿದ್ದವನು.

ಒಟ್ಟಿನಲ್ಲಿ ಅಸ್ನೋಟಿಕರ್, ಈಗ ದೊಡ್ಡ ಪೀಕಲಾಟಕ್ಕೆ ಬಿದ್ದಿದ್ದಾನೆ. ಅತ್ತ ಕಾಂಗ್ರೆಸ್‌ಗೆ ಸೇರಲು ದೇಶಪಾಂಡೆ ಬಿಡುತ್ತಿಲ್ಲ; ಇತ್ತ ಬಿಜೆಪಿಯಲ್ಲಿರಲು ಮೂಲ ಬಿಜೆಪಿಗರು ಅವಕಾಶ ಕೊಡುತ್ತಿಲ್ಲ, ಈಶ್ವರಪ್ಪನಿಗೆ ಸೂಟ್‌ಕೇಸ್ ಕೊಟ್ಟು ಶೆಟ್ಟರ್ ಮಂತ್ರಿಮಂಡಲದಲ್ಲಿ ಪೇಮೆಂಟ್ ಸೀಟು ಗಿಟ್ಟಿಸಿರುವ ಆನಂದ ಬಿಜೆಪಿ ಟಿಕೆಟ್ ತರಲೂಬಹುದು. ಆದರೆ ಗೆಲುವು ಮಾತ್ರ ಅಷ್ಟು ಸುಲಭದಲ್ಲ, ಅನೈತಿಕ ರಾಜಕಾರಣದಲ್ಲಿ ನೋಡು-ನೋಡುತ್ತಿದ್ದಂತೆಯೇ ಆಕಾಶಕ್ಕೇರಿದ ಆನಂದ ಅಸ್ನೋಟಿಕರ್ ಈಗ ಉಲ್ಕೆಯಂತೆ ಉರಿದು ನೆಲಕ್ಕಪ್ಪಳಿಸುತ್ತಿದ್ದಾನೆ. ಬಂದರು ನಗರಿಗಳಾದ ಕಾರವಾರ ಮತ್ತು ಅಂಕೋಲಾದ ಕುಲಗೆಟ್ಟ ರಾಜಕೀಯ- ಸಾಮಾಜಿಕ ವ್ಯವಸ್ಥೆ ಶುದ್ಧವಾಗಬೇಕೆಂದರೆ, ಅಸ್ನೋಟಿಕರ್ ದರ್ಬಾರಿನ ಅವಸಾನ ಆಗಲೇಬೇಕು. ಹಾಗೆಂಬುದು ಕ್ಷೇತ್ರದಲ್ಲಿ ಆತನ ಅನೈತಿಕ ರಾಜಕಾರಣದಿಂದ ಕಂಗೆಟ್ಟಿರುವ ಬಹುಸಂಖ್ಯಾತರ ಅಭಿಪ್ರಾಯ!

## ಪಾಟೀಲ್ ಫಜೀತಿ

ಯಲ್ಲಾಪುರ-ಮುಂಡಗೋಡ ಶಾಸಕ ವಿ.ಎಸ್.ಪಾಟೀಲ್ ಎಂಬ ಎಡಬಿಡಂಗಿ "ಬಿಜೆಪಿಯಲ್ಲಿ ಇರಲಾರೆ; ಕೆಜೆಪಿಗೆ ಹೋಗಲಾರೆ" ಎಂಬಂಥ ಫಜೀತಿಗೆ ಬಿದ್ದಿದ್ದಾರೆ. ಮೊನ್ನೆ ರಾಜ್ಯ ಬಿಜೆಪಿ ಯಜಮಾನ ಈಶ್ವರಪ್ಪ ಯಲ್ಲಾಪುರಕ್ಕೆ ಬಂದಾಗ ಸಂಸದ ಅನಂತ್ಕಾಣಿ ಪಡೆ ವಿ.ಎಸ್.ಪಾಟೀಲನ ಮೇಲೆ ದೂರು ದಾಖಲಿಸಿತ್ತು; "ಪಾಟೀಲ್ ಯಡ್ಡಿಯ ಆತ್ಮಾಪ್ತ, ಕೆಜೆಪಿ ಆಸಾಮಿ. ಆತನಿಂದ ಪಾರ್ಟಿಗೆ ಡ್ಯಾಮೇಜಾಗುತ್ತಿದೆ..." ಎಂದು ಕೋಪ-ತಾಪ ಪ್ರದರ್ಶಿಸಿತ್ತು.

ಆಗ ಈಶ್ವರಪ್ಪ ಎಲ್ಲರೆದುರೇ "ಏನ್ರಿ ಪಾಟೀಲ್ರೆ ನೀವು ಕೆಜೆಪಿಗೆ ಹೋಗ್ತಿರಂತೆ... ಹೌದೇನ್ರಿ...?" ಎಂದು ಹೆಡ್‌ಮಾಸ್ತರ್ ಗತ್ತಲ್ಲಿ ಬೆದರಿಸಿದ್ದರು. ಇದಕ್ಕೆ ವಿಧೇಯ ವಿದ್ಯಾರ್ಥಿಯಂತೆ ಪಾಟೀಲ ಮಾಮಾ "ಇಲ್ಲ ಸಾರ್, ನಾನು ಕೆಜೆಪಿಗೆ ಹೋಗೋದಿಲ್ರಿ... ಯಡಿಯೂರಪ್ಪನವ್ರು ಬಾ ಅಂದಿದ್ದು ಖರೆನೇ ಅದ... ಆದ್ರ ನಾ ಈಗ ಒಲ್ಲೆ... ಮುಂದೆ ನೋಡೋಣು ಅಂದಿನ್ರಿ... ನಾ ಬಿಜೆಪಿ ಬಿಡಾಕಿಲ್ರಿ..." ಎಂದು ತೊದಲಿದ್ದರು.

ಆದರೆ ಈಶ್ವರಪ್ಪ ಬಿಜೆಪಿ ಸಭೆ ಮುಗಿಸಿ ಹೋಗುತ್ತಿದ್ದಂತೆಯೇ ಶಾಸಕ ಪಾಟೀಲ ಪ್ಲೇಟು ಬದಲಿಸಿದ್ದಾರೆ. "ನಾನು ಕೆಜೆಪಿ ಸೇರ್ತೇನೆ" ಎಂದು ಆಪ್ತರೆದುರು ಉದ್ಘರಿಸಿದ್ದಾರೆ. ಇದಕ್ಕೆ ಕಾರಣ ಇಷ್ಟೇ. ಸ್ವ-ಪಕ್ಷದ ಸಂಸದ ಅನಂತ್ಕಾಣಿಯ ಕಾಟ! ಅದ್ಯಾಕೋ ಅನಂತ್ಕಾಣಿಗೆ ಮೊದಲಿಂದಲೂ ಪಾಟೀಲ್ ಅಂದರೆ ತಾತ್ಸಾರ -ತಿರಸ್ಕಾರ. ಕಳೆದ ಅಸೆಂಬ್ಲಿ ಎಲೆಕ್ಷನ್ ಹೊತ್ತಲ್ಲಿ ತನ್ನ ಕಮ್ಯುನಲ್ ಪುಂಡಾಟದ ಪಡೆಯ ಪರಾಕ್ರಮಿ ಉಮೇಶ್ ಬಿಜಾಪುರ್ ಎಂಬಾತನಿಗೆ ಬಿಜೆಪಿ ಟಿಕೆಟ್ ಕೊಡಿಸಲು ಅನಂತ್ಕಾಣಿ ವಿಫಲ ಯತ್ನ ಮಾಡಿದ್ದ. ಟಿಕೆಟ್ ಪಡೆದುಕೊಂಡಿದ್ದ ಪಾಟೀಲರನ್ನು ಸೋಲಿಸಲು ಕಿತಾಪತಿಯೂ ಮಾಡಿದ್ದ. ಆದರೆ ಬಿಜೆಪಿ ಅಲೆ ಮತ್ತು ಸ್ವ-ಜಾತಿ ಲಿಂಗಾಯತರ ಏಕಗಂಟಿನ ಮತದಿಂದಾಗಿ ಆತ ಅನಿರೀಕ್ಷಿತವಾಗಿ ಗೆದ್ದಿದ್ದ. ಬಿಜೆಪಿ ಜಿಲ್ಲಾ ಅಧ್ಯಕ್ಷನಾಗಿದ್ದಾಗ ಯಾವ ಶಿವರಾಮ ಹೆಬ್ಬಾರನ ಕೆನ್ನೆಗೆ ಬಾರಿಸಿದ್ದನೋ ಅದೇ ಶಿವರಾಮ ಹೆಬ್ಬಾರ್ ಕಾಂಗ್ರೆಸ್ ಕ್ಯಾಂಡಿಡೇಟಾಗಿ ಪಾಟೀಲ ಎದುರು ಸ್ಪರ್ಧಿಸಿದಾಗ ಗೆಲ್ಲಿಸಲು ಅನಂತ್ಕಾಣಿ ಹಗಲಿರುಳು ಬೆವರಿಳಿಸಿದ್ದ.

ಪಾಟೀಲ್ ಶಾಸಕನಾದ ನಂತರವೂ ಅನಂತ್ಕಾಣಿ ಸುಖ ಕೊಡಲಿಲ್ಲ, ತನ್ನ ಗುದುಮುರಿಗೆ ಪಡೆಯನ್ನು ಹೆಜ್ಜೆ-ಹೆಜ್ಜೆಗೆ ಪಾಟೀಲರ ವಿರುದ್ಧ ಛೂ ಬಿಡುತ್ತಲೇ ಬಂದ. ಆದರೆ ಪಾಟೀಲ್ ಸ್ವ-ಜಾತಿ ಯಡ್ಡಿಯ ಆಶ್ರಯ ಪಡೆದು ಅನಂತ್ಕಾಣಿಗೆ ಮದ್ದರೆದರು. ಅನಂತ್ಕಾಣಿ ಎಂಪಿಗಿರಿಗೆ ಸ್ಪರ್ಧಿಸಿದಾಗ ಆತನಿಗೆ ತನ್ನ ಕ್ಷೇತ್ರದಲ್ಲಿ ಹೆಚ್ಚು ಓಟು ಬರದಂತೆ ನೋಡಿಕೊಂಡು ಪ್ರತೀಕಾರ ಸಾಧಿಸಿದರು! ಪಾಟೀಲ್-ಅನಂತ್ಕಾಣಿ ನಡುವಿನ ದ್ವೇಷಾಸೂಯೆ ಈಗ ಬಿಗಡಾಯಿಸಿದೆ. ಈ ಬಾರಿಯಾದರೂ ತನ್ನ ಶಿಷ್ಯ ಉಮೇಶ್ ಬಿಜಾಪುರ್‌ಗೆ ಟಿಕೆಟ್ ಕೊಡಿಸಬೇಕೆಂದು ಅನಂತ್ಕಾಣಿ ಕಟಿಪಿಟಿ ನಡೆಸಿದ್ದಾನೆ. ಮತ್ತೊಂದೆಡೆ ಮಂತ್ರಿ ಕಾಗೇರಿಯ ಚೇಲ ಉಮೇಶ್ ಭಗ್ವಲ್ ಎಂಬ ಜಿ.ಪಂ.ಸದಸ್ಯ ಪಾಟೀಲ್ ಕೆಜೆಪಿಯವನೆಂದು ಬಿಂಬಿಸಿ ಟಿಕೆಟ್ ತರಲು ಟೆಕ್‌ಟಿಕ್ಸ್ ಮಾಡುತ್ತಿದ್ದಾನೆ.

ಪಾಟೀಲ್‌ಗೆ ಒಂದಂತೂ ಖಾತ್ರಿಯಾಗಿದೆ. ಬಿಜೆಪಿ ಅಭ್ಯರ್ಥಿಯಾದರೆ ಈ ಸಲ ತನ್ನನ್ನು ಸೋಲಿಸಲು ಅನಂತ್ಕಾಣಿ ತನು-ಮನ-ಧನದ ಸಹಾಯ ಕಾಂಗ್ರೆಸ್ ಕ್ಯಾಂಡಿಡೇಟ್‌ಗೆ ಕೊಡುವುದು ಗೊತ್ತಾಗಿದೆ. ಕಳೆದ ಬಾರಿ ಭಟ್ಕಳದಲ್ಲಿ ಶಿವಾನಂದ ನಾಯ್ಕನನ್ನು ಸೋಲಿಸಿದಂತೆ ಬ್ರಾಹ್ಮಣ ಬಳಗ ತನ್ನನ್ನು ಮಾಜಿ ಮಾಡಲು ಸ್ಕೆಚ್ ಹಾಕಿಕೊಂಡಿರುವುದು ಪಾಟೀಲ್ ಕೆಜೆಪಿಯತ್ತ ವಾಲಲು ಪ್ರಮುಖ ಕಾರಣವಾಗಿದೆ. ಯಡ್ಡಿಯ ನಿಷ್ಠಾವಂತ ಹಿಂಬಾಲಕನೂ ಆಗಿರುವ ಪಾಟೀಲ್ ಕ್ಷೇತ್ರದಲ್ಲಿರುವ 16 ಸಾವಿರ ಸ್ವಜಾತಿ ಲಿಂಗಾಯತರ ಮತ ಮಾತ್ರದಿಂದ ಶಾಸಕನಾಗಿ ಆಯ್ಕೆಯಾಗುವುದು ಸಾಧ್ಯವಿಲ್ಲ, ಒಟ್ಟಿನಲ್ಲಿ ಪಾಟೀಲ್ ದಿಕ್ಕೆಟ್ಟು ಕೂತಿದ್ದಾರೆ.


ಯಡ್ಡಿ ತನ್ನನ್ನು ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡಿಸಬಹುದೆಂಬ ನಿರೀಕ್ಷೆ ಪಾಟೀಲ ಮಾಮನದು. ತಾನು ಬಿಜೆಪಿಯಿಂದಲೂ ಗೆಲ್ಲಲಾರೆ; ಕೆಜೆಪಿಯಿಂದಲೂ ಜಯಿಸಲಾರನೆಂದು ಪಾಟೀಲ ಯಡ್ಡಿಜೀಗೆ ಹೇಳಿದ್ದಾರಂತೆ. ಹಾಗಿದ್ದರೆ ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನ ಮಾಡ್ತೇನೆಂದು ಸಾಕ್ಷಾತ್ ಯಡ್ಡಿಯೇ ಪಾಟೀಲ್‌ಗೆ ಭರವಸೆ ಕೊಟ್ಟಿದ್ದಾರಂತೆ.


ಪಾಟೀಲ್‌ರನ್ನು ಅನಂತ್ಕಾಣಿ ಭಯ ಅದ್ಯಾವ ಥರ ಗೊಂದಲಗೊಳಿಸಿದೆಯೆಂದರೆ, ಈಶ್ವರಪ್ಪನಿಗೆ ತಾನು ಬಿಜೆಪಿ ಬಿಡಲಾರನೆಂದು ಮಾತು ಕೊಟ್ಟ ಮರುದಿನವೇ ಆತ ಬೆಂಗಳೂರಿಗೆ ಹೋಗಿ ಯಡ್ಡಿಯನ್ನು ಭೇಟಿ ಮಾಡಿದ್ದಾರೆ. ಕಳೆದ ಶುಕ್ರವಾರ ಬೆಂಗಳೂರಿನ ಕ್ಯಾಪಿಟಲ್ ಹೋಟೆಲ್‌ನಲ್ಲಿ ನಡೆದ ಕೆಜೆಪಿಯ 'ಉರುಳು ಸೇವೆಯ' ಅಜೆಂಡಾದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಶೆಟ್ಟರ್ ಸರ್ಕಾರ ಉರುಳಿಸುವ ಕೆಜೆಪಿ ಪ್ರಯತ್ನಕ್ಕೆ ತನ್ನ ಬೆಂಬಲವಿದೆಯೆಂದು ಮನವಿ ಪತ್ರಕ್ಕೆ ಸಹಿಯೂ ಹಾಕಿದ್ದಾರೆ. ಶಾಸಕಗಿರಿಗೂ ರಾಜೀನಾಮೆ ಬರೆದುಕೊಡಿಯೆಂದು ಯಡ್ಡಿ ಹೇಳಿದಾಗ "ಇಲ್ಲ... ಇಲ್ಲ..." ಎಂದು ಓಡೋಡಿ ಮುಂಡಗೋಡಿಗೆ ಬಂದಿದ್ದಾರೆ.

ಪಾಪ, ಪಾಟೀಲರು ಹೊಯ್ದಾಡುತ್ತಿದ್ದಾರೆ. ಸರ್ಕಾರಿ ಅನುದಾನ ಹೆಚ್ಚು ಪಡೆದುಕೊಂಡ ಶಾಸಕರಲ್ಲಿ ಪಾಟೀಲ್ ನಂಬರ್ ಟೂ. ಯಲ್ಲಾಪುರ-ಮುಂಡಗೋಡ ಉದ್ಧಾರವಾಗದಿದ್ದರೂ ಪಾಟೀಲರ ಆಸ್ತಿ-ಅಂತಸ್ತು ಏರಿದೆ. ಸಾಮಾನ್ಯ ಸರ್ಕಾರಿ ಗುತ್ತಿಗೆದಾರನಾಗಿದ್ದ ಈ ಲೋ ಪ್ರೊಫೈಲ್ ಪುಢಾರಿ ಇವತ್ತು ಕೋಟಿಗೆ ಕಡಿಮೆಯಿಲ್ಲದಂತೆ ತೂಗಬಲ್ಲ, ಹಾಗಂತ ಈ ಹಣ ಹರಿಸಿ ಎಲೆಕ್ಷನ್ ಎದುರಿಸುವ ಮನಸ್ಸು ಜಿಪುಣ ಪಾಟೀಲರಿಗಿಲ್ಲ, ಅದೇನೇ ಇರಲಿ ಬಿಜೆಪಿಯಲ್ಲಂತೂ ಆತ ಇರಲಾರ; ಕೆಜೆಪಿಯಿಂದ ಗೆಲ್ಲಲಾರ. ಜಾತಿ ನಾಯಕ ಯಡ್ಡಿಯನ್ನೂ ಎದುರು ಹಾಕಿಕೊಳ್ಳಲಾರ.


ಹಾಗಿದ್ದರೆ ಪಾಟೀಲರಿಗೆ ಕಾಂಗ್ರೆಸ್ ಕ್ಯಾಂಡಿಡೇಟಾಗುವ ಯೋಗವೇನಾದರೂ ಬಂದೀತಾ? ಇಂಥದೊಂದು ಪ್ರಶ್ನೆ ಈಗ ಯಲ್ಲಾಪುರ-ಮುಂಡಗೋಡದ ಮಂದಿಯಲ್ಲಿ ದೊಡ್ಡ ಕುತೂಹಲ ಕೆರಳಿಸಿದೆ!!

● ನಹುಷ



ಕಾಗೇರಿ


ಅಸ್ನೋಟಿಕರ್


ಅನಂತಕುಮಾರ್ ಹೆಗ್ಡೆ


ವಿ.ಎಸ್.ಪಾಟೀಲ್





# ಕಿಡ್ನಿ ಕಳ್ಳರಿದ್ದಾರೆ! ಎಚ್ಚರಿಕೆ!!

ಕಳ್ಳತನ ಮಾಡುವವರು ಏನೆಲ್ಲಾ ಕದಿಯಬಹುದು? ಹೆಚ್ಚೆಂದರೆ ಹಣ ಒಡವೆ ವಸ್ತು ಇತ್ಯಾದಿ ಅಂದುಕೊಂಡಿದ್ದ ಕಾಲವೊಂದಿತ್ತು. ಆದರೆ ಈಗ ಮನುಷ್ಯರ ಜೀವವನ್ನೇ ಕದಿಯುವ ಕಾಲ ಬಂದಿದೆ. ಅರ್ಥಾತ್ ಮನುಷ್ಯ ಜೀವಿಸಲು ಅತ್ಯಗತ್ಯವಾದ ಕಿಡ್ನಿಯಂಥಾ ಅಮೂಲ್ಯ ಅಂಗವನ್ನೇ ಕದಿಯುವ ಜಾಲಗಳು ದೇಶಾದ್ಯಂತ ವ್ಯಾಪಕವಾಗಿ ಹರಡಿಕೊಂಡಿವೆ. ಅಮೆರಿಕ, ಕೆನಡಾ, ಜಪಾನ್‌ನಂಥಾ ದೇಶಗಳೊಂದಿಗೆ ಈ ಜಾಲ ಹೆಣೆದುಕೊಂಡಿದೆ.

ಬೆಂಗಳೂರು - ಮೈಸೂರು ರಸ್ತೆಯಲ್ಲಿರುವ ಕುಂಬಳಗೋಡು ಪೊಲೀಸ್ ಠಾಣೆಯಲ್ಲಿ ಇಂಥದ್ದೊಂದು ವಿಲಕ್ಷಣ ಪ್ರಕರಣ ದಾಖಲಾಗಿದೆ. ಬಹಳ ದಿನಗಳಿಂದ ನಿಗೂಢವಾಗಿ ಆಪರೇಟ್ ಮಾಡುತ್ತಿದ್ದ ಕಿಡ್ನಿ ಕಳ್ಳರ ಜಾಲವನ್ನು ಭೇದಿಸಿರುವ ಕುಂಬಳಗೋಡು ಪೊಲೀಸರು ಐದುಮಂದಿ ಪ್ರಮುಖ ಆರೋಪಿಗಳನ್ನು ಬಂಧಿಸಿದ್ದಾರೆ.

ಇದು ನಡೆದದ್ದು ಹೀಗೆ. ಕಳೆದ ಕೆಲವಾರು ವರ್ಷಗಳಿಂದ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಕಿಡ್ನಿಕಳ್ಳರ ಜಾಲ ಕಾರ್ಯಾಚರಣೆ ನಡೆಯುತ್ತಿದೆ ಎಂಬ ರೂಮರ್‌ಗಳು ಹರಿದಾಡುತ್ತಿದ್ದವು. ಇಲ್ಲಿಗೆ ಸುಮಾರು ಒಂದೂವರೆ ತಿಂಗಳ ಹಿಂದೆ ಟಿವಿ 9ನಲ್ಲಿ ಕಿಡ್ನಿ



ಎಸ್‌ಐ ದೀಪಕ್ ಇನ್ಸ್‌ಪೆಕ್ಟರ್ ಮಂಜುನಾಥ್

ಏಜೆಂಟ್‌ನೊಂದಿಗೆ ವ್ಯವಹಾರ ಕುದುರಿಸುವ ಕುಟುಕು ಕಾರ್ಯಾಚರಣೆಯೊಂದು ಬಿತ್ತರವಾಗಿತ್ತು. ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲಾ ಎಸ್‌ಪಿ ಅನುಪಮ್ ಅಗರವಾಲ್ ಅವರು ಈ ಬಗ್ಗೆ ತನಿಖೆ ನಡೆಸಲು ಕುಂಬಳಗೋಡು ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ್ ನೇತೃತ್ವದಲ್ಲಿ ಒಂದು ತನಿಖಾ ತಂಡ ರಚಿಸಿದರು.

ಹುಡುಕಾಟದಲ್ಲಿದ್ದ ಇನ್ಸ್‌ಪೆಕ್ಟರ್ ಮಂಜುನಾಥ್ ತಂಡಕ್ಕೆ ಕಿಡ್ನಿ ತಂಡ ಮಾಗಡಿಯಲ್ಲಿ ಆಪರೇಟ್ ಆಗುತ್ತಿರುವ ಬಗ್ಗೆ ಮಾಹಿತಿ ಸಿಕ್ಕಿತು. ತಡಮಾಡದೆ ಮಾಗಡಿಯಲ್ಲಿ ಬಲೆ ಬೀಸಿದ ಮಂಜುನಾಥ್ ತಮ್ಮ ಕಡೆಯ ಪೇಷಂಟ್ ಒಬ್ಬರಿಗೆ ಕಿಡ್ನಿ ಬೇಕಾಗಿದೆಯೆಂಬ ನೆಪ ಹೇಳಿ ಈ ತಂಡದ ಏಜೆಂಟ್ ಗೋಪಾಲ್ ಎಂಬುವವನನ್ನು ಸಂಪರ್ಕಿಸಿದಾಗ ಆತ ಬಹಿರಂಗವಾಗಿಯೇ ಡೀಲಿಗಿಳಿದ. ಒಂದು ಲಕ್ಷ ಅಡ್ವಾನ್ಸ್ ಕೊಟ್ಟರೆ ಮಾತ್ರ ಮುಂದಿನ ಕೆಲಸ ಎಂದ. ಮತ್ತೆ ಅಗತ್ಯವಿರುವ ಎಲ್ಲಾ ಖೊಟ್ಟಿ ಡಾಕ್ಯುಮೆಂಟ್ಸ್‌ಗಳನ್ನೂ ತಾನೇ ಮಾಡಿಸಿಕೊಡುವುದಾಗಿ ಆಶ್ವಾಸನೆ ನೀಡಿದ. ಒಂದು ಲಕ್ಷ ಅಡ್ವಾನ್ಸ್ ಕೊಡಲು ಒಪ್ಪಿದ ತನಿಖಾ ತಂಡ, ಅಡ್ವಾನ್ಸ್ ಕೊಡುವ ನೆಪದಲ್ಲಿ ಕಿಡ್ನಿ ರಾಕೆಟ್‌ನ ಕಿಂಗ್‌ಪಿನ್ ಮಹದೇವಯ್ಯ ಮತ್ತು ಖೊಟ್ಟಿ ದಾಖಲೆ ತಯಾರಿಸಿಕೊಡುತ್ತಿದ್ದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ನೌಕರ ಶ್ರೀಕಾಂತ್ ಎಂಬುವವನನ್ನು ಭೇಟಿಯಾದರು. ಮೊದಲೇ ರೂಪಿಸಿದ್ದ ಸ್ಕೆಚ್‌ನ ಪ್ರಕಾರ ಖದೀಮರನ್ನು ಬಂಧಿಸಿ ಎಳೆದುತಂದಿದ್ದಾರೆ.

ಈ ಖದೀಮರನ್ನು ಬಾಯಿಬಿಡಿಸಿದಾಗ ಈ ತಂಡದ ಸದಸ್ಯರಾದ ರಾಮನಗರದ ನಿವಾಸಿ ಮಂಜುನಾಥ್, ಬೆಂಗಳೂರು ಯೂನಿವರ್ಸಿಟಿ ಬಳಿಯ ಮರಿಯಪ್ಪನಪಾಳ್ಯದ ಅಪ್ಪಾ, ವಿಜಯನಗರದ ಬಿಬಿಎಂಪಿ ರೆವಿನ್ಯೂ ಇನ್ಸ್‌ಪೆಕ್ಟರ್ ರಾಜನ್ ಮತ್ತು ಆತನ ಅಸಿಸ್ಟೆಂಟ್ ಅನಂತು ಮುಂತಾದವರ ಬಗ್ಗೆ ಮಾಹಿತಿ ಸಿಕ್ಕಿದೆ. ತಮ್ಮನ್ನು ಕೇಳೋರೇ ಇಲ್ಲವೆಂಬಂತೆ ರಾಜಾರೋಷವಾಗಿ ದಂಧೆ ನಡೆಸುತ್ತಿದ್ದ ಇವರನ್ನು ಕುಂಬಳಗೋಡು ಪೊಲೀಸರು ಅಟಕಾಯಿಸಿಕೊಂಡಾಗ ಖದೀಮರಿಗೆ ಹೀಗಾಗಬಹುದೆಂಬ ನಿರೀಕ್ಷೆಯೇ ಇರಲಿಲ್ಲ.

ಈಗ ಒಟ್ಟು ಏಳು ಮಂದಿಯನ್ನು ಬಂಧಿಸಿ ಐಪಿಸಿ ಸೆಕ್ಷನ್ **465, 471, 468** ಪ್ರಕಾರ ಕೇಸು ದಾಖಲಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದೆ. ಹೆಚ್ಚಿನ ತನಿಖೆಗಾಗಿ ಹಾಲಿ ಕುಂಬಳಗೋಡು ಠಾಣೆಯಲ್ಲಿ ಕಂಬಿ ಎಣಿಸುತ್ತಿರುವ ಈ ಆರೋಪಿಗಳು ಸದ್ಯಕ್ಕೆ ಹೊರಬರುವ ಲಕ್ಷಣಗಳಿಲ್ಲ. ಇವರ ಮೇಲಿನ ಆರೋಪ ಸಾಬೀತಾದರೆ ಸುಮಾರು ಹತ್ತು ವರ್ಷಗಳ ಕಾಲ ಇವರ ಕಾರ್ಯಕ್ಷೇತ್ರ ಏನಿದ್ದರೂ ಪರಪ್ಪನ ಅಗ್ರಹಾರದಲ್ಲಿ ಮಾತ್ರ. ಜೈಲುಗೋಡೆಗಳ ಒಳಗೇ ಇದುವರೆಗೂ ತಾವು ಕಲಿತಿರುವ ಎಲ್ಲಾ ವಿದ್ಯೆಗಳನ್ನೂ ಪ್ರದರ್ಶಿಸುವ ಸದವಕಾಶ ಇವರಿಗೆ ಲಭಿಸಲಿದೆ.

ಈ ಗುಂಪು ಕಾರ್ಯಾಚರಣೆ ನಡೆಸುತ್ತಿದ್ದ ವಿಧಾನ ಕೂಡ ತೀರಾ ನಿಗೂಢ. ಕಿಡ್ನಿಯ 'ಕಳ್ಳತನ' ಮತ್ತು ಶ್ರೀಮಂತ ರೋಗಿಗಳಿಗೆ ಅದರ ಜೋಡಣೆ ಎಲ್ಲವೂ ಸದ್ದಿಲ್ಲದೆ ನಡೆದುಹೋಗುತ್ತದೆ. ಹಾಗೆ ಲಕ್ಷಾಂತರ ರೂಪಾಯಿ ಹಣವೂ ಈ ಜಾಲಕ್ಕೆ ಹರಿದುಬರುತ್ತದೆ.

ಮೊದಲಿಗೆ ಈ ಜಾಲ ಕಿಡ್ನಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳುವ ಪೇಷಂಟ್‌ಗಳು ಅಥವಾ ಅವರ ಸಂಬಂಧಿಕರನ್ನು ಪರಿಚಯ ಮಾಡಿಕೊಳ್ಳುತ್ತಾರೆ. ಡಯಾಲಿಸಿಸ್ ಬದಲಿಗೆ ಕಿಡ್ನಿ ಹಾಕಿಸಿಕೊಳ್ಳಿ, ನಿಮಗೆ ಸರಿಹೊಂದುವಂಥ ಕಿಡ್ನಿ ನಾವು ಕೊಡಿಸುತ್ತೇವೆ ಎಂದು ಡೀಲ್ ಕುದುರಿಸುತ್ತಾರೆ.


ಅದೇ ರೀತಿ ಸಾಲಸೋಲ ಮಾಡಿಕೊಂಡು ಆರ್ಥಿಕ ಸಂಕಷ್ಟದಲ್ಲಿರುವ ಬಡಪಾಯಿಗಳನ್ನು ಸಂಪರ್ಕಿಸಿ ಅವರ ಒಂದು "ಕಿಡ್ನಿದಾನ" ಕೊಡುವುದಾದರೆ ಲಕ್ಷಗಟ್ಟಲೆ ಹಣ ಕೊಡುವುದಾಗಿ ಆಮಿಷ ಒಡ್ಡಿ ಅವರನ್ನು ಬಲೆಗೆ ಕೆಡವಿಕೊಳ್ಳುತ್ತಾರೆ. ಈಗ ಸಿಕ್ಕಿರುವ ಲೆಕ್ಕದ ಪ್ರಕಾರ ಇವರ ಬಲೆಗೆ ಬಿದ್ದವರ ಸಂಖ್ಯೆ **25**. ಅವರಲ್ಲಿ ಶೇಕಡಾ **70**ರಷ್ಟು ಅಮಾಯಕ ಮಹಿಳೆಯರು ಎಂಬುದು ಗಮನಾರ್ಹ.

ಭಾರತದಲ್ಲಿ ಸದ್ಯ ಚಾಲ್ತಿಯಿರುವ ಕಾನೂನುಗಳು ಈ ಜಾಲದ ಕಾರ್ಯಾಚರಣೆಗೆ ತೊಡಕಾಗಿವೆ. ಮಾನವ ಅಂಗಾಂಗ ಮರುಜೋಡಣೆ ಕಾಯಿದೆ-**1994**ರ ಪ್ರಕಾರ ಮಾನವ ಅಂಗಾಂಗಗಳ ಮಾರಾಟ ನಿಷಿದ್ಧ. ಏನಿದ್ದರೂ ಹತ್ತಿರದ ಸಮೀಪ ಬಂಧುಗಳು ಮಾತ್ರ ಕಿಡ್ನಿ ದಾನ ಮಾಡಬಹುದೇ ಹೊರತು ಬೇರೆಯವರ ಅಂಗಗಳನ್ನು ಖರೀದಿಸುವಂತಿಲ್ಲ. ಅಮಾಯಕ ಪ್ರಜೆಗಳನ್ನು ಕಿಡ್ನಾಪ್ ಮಾಡಿ ಅವರ ಅಂಗಾಂಗಗಳನ್ನು ತೆಗೆದುಕೊಂಡು ಕೊಂದುಹಾಕುವ ದುಷ್ಟಜಾಲಗಳನ್ನು ತಹಬಂದಿಗೆ ತರುವುದು ಹಾಗೂ ಹಣದ ಆಮಿಷಕ್ಕೆ ಬಡಪಾಯಿಗಳು ಬಲಿಯಾಗಿ ಜೀವ ತೆರುವುದನ್ನು ತಪ್ಪಿಸುವ ಉದ್ದೇಶದಿಂದಲೇ ಈ ಕಾಯಿದೆಯನ್ನು ಜಾರಿಗೆ ತರಲಾಗಿದೆ.

ಕಾನೂನಿನ ಕಣ್ಣಿಗೆ ಮಣ್ಣೆರಚಲು ಈ ಜಾಲ ತಮ್ಮದೇ ಚಾಣಾಕ್ಷ ತಂತ್ರ ಬಳಸುತ್ತಿದೆ. ಕಿಡ್ನಿ "ದಾನ" ಕೊಡುವ ವ್ಯಕ್ತಿಯನ್ನು ಸದರಿ ಪೇಷಂಟ್‌ನ ಹತ್ತಿರದ ಬಂಧುಗಳು ಎಂಬಂತೆ ನಕಲಿ ವೋಟರ್ ಐಡಿ, ರೇಷನ್ ಕಾರ್ಡ್ ಮುಂತಾದ ದಾಖಲಾತಿಗಳನ್ನು ಸೃಷ್ಟಿಸಿ ತಮ್ಮ ಕೆಲಸ ಸಾಧಿಸುತ್ತಾರೆ. ನಕಲಿ ದಾಖಲೆ ಸೃಷ್ಟಿಸುವ ಕಾರ್ಯದಲ್ಲಿ ಹಲವಾರು ಸರ್ಕಾರಿ ಅಧಿಕಾರಿಗಳೇ ನೇರವಾಗಿ ಶಾಮೀಲಾಗಿ ಈಗ ಜೈಲು ಪಾಲಾಗಿದ್ದಾರೆ.

ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್ ಕೇಸುಗಳನ್ನು ಪರಿಶೀಲನೆಗೆ ಒಳಪಡಿಸಲು ದೊಡ್ಡದೊಡ್ಡ ಆಸ್ಪತ್ರೆಗಳು ತಮ್ಮದೇ ಕಮಿಟಿಗಳನ್ನು ನೇಮಿಸಿವೆ. ಈ ಕಮಿಟಿ ಒಪ್ಪಿಗೆ ಸೂಚಿಸಿದ ನಂತರ ಸಂಬಂಧಿಸಿದ ಪೊಲೀಸ್ ಠಾಣೆಗೆ ಮಾಹಿತಿ ರವಾನೆಯಾಗುತ್ತದೆ. ಸದರಿ ವ್ಯಕ್ತಿಗಳ ವಿಳಾಸ ಮತ್ತು ಪೇಷಂಟ್ ಜೊತೆಗಿನ ಅಸಲಿ ಸಂಬಂಧವನ್ನು ದೃಢೀಕರಿಸಿ ಪೊಲೀಸರು ರಿಪೋರ್ಟ್ ಹಾಕಿದ ನಂತರವಷ್ಟೇ ಕಿಡ್ನಿ ಜೋಡಣೆಗೆ ಅನುಮತಿ ದೊರೆಯುತ್ತದೆ. ಸಾಮಾನ್ಯವಾಗಿ ಈ ಎಲ್ಲಾ ಹಂತಗಳಲ್ಲೂ ತಪ್ಪುಗಳು ಸಂಭವಿಸುತ್ತಿದ್ದು ಮುಂದಿನ ತನಿಖೆಯಿಂದಷ್ಟೇ ಸತ್ಯಾಂಶ ಹೊರಬರಬೇಕಿದೆ. ಅಪೋಲೋ ಹಾಸ್ಪಿಟಲ್, ಕೊಲಂಬಿಯಾ ಏಷ್ಯಾದಂಥ ಪ್ರತಿಷ್ಠಿತ ಹೈಟೆಕ್ ಆಸ್ಪತ್ರೆಗಳಲ್ಲೂ ಈ ಜಾಲದ ವ್ಯವಹಾರ ಹರಡಿಕೊಂಡಿರುವುದು ಬೆಳಕಿಗೆ ಬಂದಿರುವುದಾಗಿ ರಾಮನಗರ ಎಸ್‌ಪಿ ಅನುಪಮ್ ಅಗರವಾಲ್ ಹೇಳಿಕೆ ನೀಡಿದ್ದಾರೆ. ಆಸ್ಪತ್ರೆಯ ಸಿಬ್ಬಂದಿ ಅಥವಾ ಆಡಳಿತ ಮಂಡಳಿಯ ಪಾತ್ರದ ಬಗ್ಗೆ ಇನ್ನೂ ಖಚಿತ ಮಾಹಿತಿ ಲಭ್ಯವಾಗಿಲ್ಲವಾದ ಕಾರಣ ಯಾವುದೇ ಕ್ರಮ ಜರುಗಿಸಲಾಗಿಲ್ಲ.

ಹೀಗೆ ಕಿಡ್ನಿ "ದಾನ" ಪಡೆದ ನಂತರ ಆಶ್ವಾಸನೆ ನೀಡಿದ್ದ ಮೊತ್ತವನ್ನೂ ಸಹ ಕೊಡದೆ ಲಪಟಾಯಿಸುವ ಖದೀಮರು ಶೇಕಡ **75** ರಿಂದ **80** ಭಾಗವನ್ನು ತಾವೇ ನುಂಗಿಬಿಡುತ್ತಾರೆ. ಸಾಮಾನ್ಯವಾಗಿ ಬೆಂಗಳೂರು ಕಿಡ್ನಿ ಮಾರುಕಟ್ಟೆಯಲ್ಲಿ **5** ರಿಂದ **10** ಲಕ್ಷದವರೆಗೆ ಕಿಡ್ನಿ ಬೆಲೆ ಫಿಕ್ಸ್ ಆಗಿದೆಯಂತೆ. ಆದರೆ ಕಿಡ್ನಿ ಕೊಟ್ಟ ಬಡಪಾಯಿಗಳಿಗೆ ಸಿಗುವುದು ಮಾತ್ರ **50** ಸಾವಿರದಿಂದ ಒಂದು ಲಕ್ಷದವರೆಗೆ ಮಾತ್ರ. ಅಪರೂಪಕ್ಕೆ ಕೆಲವು ಮಂದಿಗೆ **4-5** ಲಕ್ಷ ಹಣ ಸಿಕ್ಕಿರುವುದೂ ಉಂಟು. ಅದು ಕಿಡ್ನಿ "ದಾನ" ಪಡೆದವರಿಗೂ "ದಾನಿ"ಗಳಿಗೂ ನೇರವಾಗಿ ಸಂಪರ್ಕ ಏರ್ಪಟ್ಟ ಸಂದರ್ಭಗಳಲ್ಲಿ ಮಾತ್ರ. ಆದರೆ ಕಿಡ್ನಿ ರಾಕೆಟ್‌ನ ಮಂದಿ ಎಷ್ಟು ಚಾಣಾಕ್ಷರೆಂದರೆ



ಡಾ.ಅಮಿತ್‌ಕುಮಾರ್

ಯಾವ ಕಾರಣಕ್ಕೂ ಹಾಗೆ ಸಂಪರ್ಕ ಏರ್ಪಡದಂತೆ ನೋಡಿಕೊಂಡು ಲಕ್ಷಾಂತರ ಹಣ ತಾವೇ ಲಪಟಾಯಿಸುತ್ತಾರೆ.


ಸಾಲದ ಬಾಧೆಯಲ್ಲಿದ್ದ ರೈತನೊಬ್ಬ ತನ್ನ ಹೆಂಡತಿಯ ತಾಳಿ ಅಡಮಾನ ಇಡಲು ಪೇಟೆಗೆ ಹೋಗಿದ್ದ ಸಂದರ್ಭದಲ್ಲಿ ಆತನನ್ನು ಸಂಪರ್ಕಿಸಿದ ಏಜೆಂಟ್, ತಾಳಿ ಮಾರುವ ಬದಲು ಒಂದು ಕಿಡ್ನಿ ಮಾರಿದರೆ ಒಂದು ಲಕ್ಷ ರೂಪಾಯಿ ಕೊಡಿಸುವುದಾಗಿ ಆಮಿಷವೊಡ್ಡಿದ. ಆದರೆ ಆತ ಜಾಂಡೀಸ್ ಕಾಯಿಲೆಯಿಂದ ನರಳುತ್ತಿದ್ದುದರಿಂದ ಆತನ ಬದಲಿಗೆ ಆತನ ಹೆಂಡತಿಯ ಕಿಡ್ನಿಗೆ ಸಂಚಕಾರ ಬಂತು. ಹೀಗೆ ತನ್ನ ಜೀವವನ್ನು ಒತ್ತೆಯಿಟ್ಟು ಕಿಡ್ನಿ ಮಾರಿದರೂ ಕೂಡ ನಿಗದಿಯಾಗಿದ್ದ ಮೊತ್ತ ಅವರಿಗೆ ಸಿಗಲಿಲ್ಲ. ಕೇವಲ **60** ಸಾವಿರ ರೂಪಾಯಿ ಕೊಟ್ಟು, ಮಿಕ್ಕಿದ್ದನ್ನು ಆ ಏಜೆಂಟ್ ಲಪಟಾಯಿಸಿದ್ದ. ಇಂಥಾ ವಿಷಯಗಳು ಹೇಗೂ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತುವುದಿಲ್ಲ ಎಂಬ ವಿಶ್ವಾಸ ಈ ಪಾತಕಿಗಳದು.

ತಮ್ಮ ದೇಹದ ಅಮೂಲ್ಯ ಅಂಗವನ್ನೇ ಮಾರಿಕೊಳ್ಳುವಂಥಾ ಪರಿಸ್ಥಿತಿ ಎದುರಿಸುತ್ತಿರುವ ಮಂದಿಯ ಹಣವನ್ನೂ ಲಪಟಾಯಿಸಿರುವ ಏಜೆಂಟರು ಮಾತ್ರ ಐಷಾರಾಮಿ ಜೀವನ ನಡೆಸುತ್ತಾರೆ. ರಾಮನಗರ, ಮಂಡ್ಯ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ದಂಧೆ ವ್ಯಾಪಕವಾಗಿ ಹರಡಿದೆ.

ಈ ದಂಧೆಯ ವಿಸ್ತಾರವನ್ನು ಅರ್ಥಮಾಡಿಕೊಳ್ಳಲು ಮಂಡ್ಯ ನಗರದಿಂದ **5-6** ಕಿಲೋಮೀಟರ್ ದೂರದಲ್ಲಿರುವ ಹೊಳಲು ಎಂಬ ದೊಡ್ಡ ಗ್ರಾಮವೊಂದರ ಉದಾಹರಣೆ ಸಾಕು. ಈ ಗ್ರಾಮದಲ್ಲಿ ಮಹಿಳೆಯರು ಮುದುಕರನ್ನೂ ಒಳಗೊಂಡು **52** ಮಂದಿ ತಮ್ಮ ಕಿಡ್ನಿಗಳನ್ನು ಮಾರಿಕೊಂಡಿರುವುದು **2002**ರ ತನಿಖೆಯಲ್ಲಿ ಪತ್ತೆಯಾಗಿತ್ತು ಎಂದರೆ ನೀವೇ ಊಹಿಸಿ ನೋಡಿ.

ಅದೇನೇ ಇರಲಿ, ಕುಂಬಳಗೋಡು ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ್ ತಾವೇ ಖುದ್ದು ಆಸಕ್ತಿ ವಹಿಸಿ, ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ಈ ಗ್ಯಾಂಗನ್ನು ಬಂಧಿಸಿ ಕೇಸು ಜಡಿಯುವ ಮೂಲಕ ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಕಳೆದ ಅಕ್ಟೋಬರ್‌ನಲ್ಲಿ ಯೂನಿವರ್ಸಿಟಿ ಹಿಂಭಾಗದ ಜ್ಞಾನಜ್ಯೋತಿನಗರ ಎಂಬಲ್ಲಿ ಬಾರ್‌ಗರ್ಲ್ಸ್‌ಗಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಕೇಸನ್ನು ಯಶಸ್ವಿಯಾಗಿ ಬೇಧಿಸಿ ಎಂಟು ಮಂದಿ ಪೊರಕಿಗಳ ಗ್ಯಾಂಗನ್ನು ಬಂಧಿಸಿ ಜೈಲಿಗಟ್ಟಿದ್ದವರು ಇದೇ ಮಂಜುನಾಥ್. ಅಂದಹಾಗೆ ಈ ಸ್ಟೇಷನ್ ಆರಂಭವಾಗಿದ್ದೇ **2012**ರ ನವೆಂಬರ್‌ನಲ್ಲಿ. ಕೇವಲ ಎರಡು ತಿಂಗಳುಗಳಲ್ಲೇ ಎರಡು ವಿಭಿನ್ನ ಪಾತಕ ಗ್ಯಾಂಗ್‌ಗಳನ್ನು ಮಟ್ಟಹಾಕಿರುವುದು ಉತ್ತಮ ಆರಂಭವೆನ್ನಲೇಬೇಕು. ಈ ಕೇಸುಗಳು ತಾರ್ಕಿಕ ಅಂತ್ಯ ತಲುಪುವಂತೆ ಪೊಲೀಸರು ತಮ್ಮ ಜವಾಬ್ದಾರಿ ನಿರ್ವಹಿಸಲಿ, ಅಮಾಯಕರಿಗೆ ನ್ಯಾಯ ಸಿಗಲಿ ಎಂಬುದು ಪತ್ರಿಕೆಯ ಆಶಯ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ



ಮಹದೇವಯ್ಯ ಏಜೆಂಟ್ ಗೋಪಾಲ ಅನಂತ ಆರ್‌ಐ ಮಂಜುನಾಥ ಶ್ರೀಕಾಂತ್

## ಕಿಡ್ನಿ ಕಳ್ಳರ ಅಂತರರಾಷ್ಟ್ರೀಯ ಜಾಲ

ಕಿಡ್ನಿ ಕಳ್ಳತನ ಎಂಬುದು ಕೇವಲ ಸ್ಥಳೀಯ ದಂಧೆಯಲ್ಲ; ಅದರ ಹಿಂದೆ ಅಂತರರಾಷ್ಟ್ರೀಯ ಜಾಲವೇ ಇದೆ. ಆಸ್ಟ್ರೇಲಿಯ, ಅಮೆರಿಕ, ಜಪಾನ್, ಸೌದಿ ಅರೇಬಿಯ ಮುಂತಾದ ದೇಶಗಳಲ್ಲಿ ಒಂದು ಕಿಡ್ನಿಯ ಬೆಲೆ ಒಂದು ಲಕ್ಷ ಡಾಲರ್‌ನಿಂದ ಹಿಡಿದು ಎರಡು ಲಕ್ಷ ಡಾಲರ್‌ವರೆಗೆ ಇದೆಯಂತೆ. ಭಾರತವೊಂದರಿಂದಲೇ ಪ್ರತಿವರ್ಷ ಮೂರರಿಂದ ನಾಲ್ಕು ಸಾವಿರ ಕಿಡ್ನಿ "ಎಕ್ಸ್‌ಪೋರ್ಟ್" ನಡೆಯುತ್ತಿದೆ ಎಂದು ಒಂದು ಅಂದಾಜು.


**2008**ರಲ್ಲಿ ದೆಹಲಿ ಬಳಿಯ ಗುರ್‌ಗಾಂವ್ ಪ್ರದೇಶದಲ್ಲಿ ಅಮಿತ್‌ಕುಮಾರ್ ಎಂಬ ಡಾಕ್ಟರ್ ಒಬ್ಬನನ್ನು ಸಿಬಿಐ ಪೊಲೀಸರು ಬಂಧಿಸಿದರು. ಈತ ತನ್ನದೇ ನರ್ಸಿಂಗ್ ಹೋಮ್ ಮೂಲಕ ಈ ಪಾತಕ ದಂಧೆ ನಡೆಸುತ್ತಿದ್ದ. ತನ್ನದೇ ರೌಡಿ ಗ್ಯಾಂಗ್ ಮೂಲಕ ಅಮಾಯಕರನ್ನು ಕಿಡ್ನಾಪ್ ಮಾಡಿಸಿ, ಕಿಡ್ನಿ ಕತ್ತರಿಸಿ ವಿದೇಶಗಳಿಗೆ ಸಾಗಿಸುವುದು ಈತನ ದಂಧೆಯಾಗಿತ್ತು. ಹೀಗೆ ಈತ ಸುಮಾರು **400** ರಿಂದ **500** ಮಂದಿಯ ಕಿಡ್ನಿ ಕಳವು ಮಾಡಿರಬಹುದೆಂದು ಸಿಬಿಐನವರ ಅಂದಾಜು. ಕಿಡ್ನಿ ಕಿಂಗ್‌ಪಿನ್ ಡಾಕ್ಟರ್ ಅಮಿತ್ ಈಗ ಸದ್ಯ ಜೈಲಿನಲ್ಲಿದ್ದಾನೆ.

ಈ ದಂಧೆಯಿಂದ ನೂರಾರು ಕೋಟಿಗಳನ್ನು ಗಳಿಸಿರುವ ಈತ ತನ್ನ ಫ್ಯಾಮಿಲಿಯನ್ನು ಕೆನಡಾದಲ್ಲಿ ಸೆಟಲ್ ಮಾಡಿದ್ದಾನೆ. ಈತನ ಆಸ್ತಿಗಳಲ್ಲಿ ಬಹುಪಾಲು ಕೆನಡಾದಲ್ಲೇ ಇವೆ. ಭಾರತ, ನೇಪಾಳ ಮತ್ತು ಕೆನಡಾ ಮುಂತಾದ ದೇಶಗಳ ಸಿಮ್‌ಕಾರ್ಡ್‌ಗಳನ್ನು ಸಿಬಿಐನವರು ವಶಪಡಿಸಿಕೊಂಡಿದ್ದಾರೆ. ಅಂದರೆ ಇವನ ನೆಟ್‌ವರ್ಕ್ ಎಷ್ಟೊಂದು ವ್ಯಾಪಿಸಿದೆಯೆಂಬುದನ್ನು ಲೆಕ್ಕಹಾಕಿ. ಇಂಥಾ ಹತ್ತಾರು ಗ್ಯಾಂಗ್‌ಗಳು ನಿರ್ಭಿಡೆಯಾಗಿ ವ್ಯವಹರಿಸುತ್ತಿವೆ ಎಂಬುದು ಒಂದು ಅಂದಾಜು.

ಅಂತರ್‌ಜಾಲದಲ್ಲೂ ಇಂಥಾ ಗುಂಪುಗಳು ಸಕ್ರಿಯವಾಗಿದ್ದು "ಕಿಡ್ನಿ ಬೇಕಾಗಿದೆ" ಮತ್ತು "ಕಿಡ್ನಿ ಮಾರಾಟಕ್ಕಿದೆ" ಎಂಬಂಥಾ ಜಾಹಿರಾತುಗಳು ಸಾವಿರಾರು ಸಂಖ್ಯೆಯಲ್ಲಿ ಹರಿದಾಡುತ್ತಿವೆ. ನಮ್ಮ ದೇಶದ ಕಾನೂನು ವ್ಯವಸ್ಥೆಯ ದುರ್ಗತಿಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

## ಚೋರ ಗುರು, ಘೋರ ಶಿಷ್ಯನ ಮಸಲತ್ತು

# ನೇಮಕಾತಿ ನೆಪದಲ್ಲಿ ಹಗಲು ದರೋಡೆ



ಕೆತ್ತು ತಿನ್ನುವ ಕಲೆ ಕಲಿತವರು ಹೇಸಿಗೆಯನ್ನೂ ಬಿಡರು ಎನ್ನುವ ಮಾತೊಂದಿದೆ. ವೈದ್ಯಕೀಯ ಶಿಕ್ಷಣ ಸಚಿವ ರಾಮದಾಸ್ ಮತ್ತು ಬೆಂಗಳೂರು ಮೆಡಿಕಲ್ ಕಾಲೇಜಿನ ನಿರ್ದೇಶಕ ಸಿದ್ದಪ್ಪ-ಇಬ್ಬರೂ ಇದೇ ಕೆಟಗರಿಗೆ ಸೇರುವ ಮಂದಿ. ತೀರಾ ಇತ್ತೀಚೆಗೆ ಸಿದ್ದಪ್ಪ ಹೊರಡಿಸಿರುವ ನೇಮಕಾತಿ ಅಧಿಸೂಚನೆ ಈ ಅಭಿಪ್ರಾಯವನ್ನು ಅನುಮಾನವಿಲ್ಲದಂತೆ ಸಾಬೀತು ಮಾಡುತ್ತದೆ.

ಈ ಜೋಡಿಯ ಹಗಲು ದರೋಡೆಯ ಕತೆಯನ್ನು ಶುರು ಮಾಡುವುದಕ್ಕೂ ಮುನ್ನ ಒಂದು ಅಂಶವನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅದೇನೆಂದರೆ ಯಾವುದೇ ನೇಮಕಾತಿ ಅಂತ ನಡೆದರೂ ಅರ್ಜಿ ಸಲ್ಲಿಸುವಾಗ ಇಂತಿಷ್ಟು ಅರ್ಜಿಶುಲ್ಕ ಪಾವತಿಸಬೇಕೆನ್ನುವ ಕರಾರು ಇರುತ್ತೆ. ಇಡೀ ಆಯ್ಕೆ ಪ್ರಕ್ರಿಯೆಗೆ ತಗಲುವ ವೆಚ್ಚವನ್ನು ಭರಿಸುವುದು ಅದರ ಉದ್ದೇಶ. ನಿರುದ್ಯೋಗಿಗಳಿಗೆ ಹೆಚ್ಚಿನ ಹೊರೆ ನೀಡಬಾರದೆನ್ನುವ ಕಾರಣಕ್ಕೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಶುಲ್ಕವನ್ನು ನಿಗದಿಪಡಿಸಲಾಗುತ್ತೆ. ಅದರಲ್ಲೂ ಪರಿಶಿಷ್ಟ ಜಾತಿ, ಪಂಗಡದವರು, ಅಲ್ಪಸಂಖ್ಯಾತರು, ಮಹಿಳೆಯರು, ಆರ್ಥಿಕ ಹಿಂದುಳಿದವರು ಮುಂತಾದ ದುರ್ಬಲ ವರ್ಗಗಳಿಗೆ ಶುಲ್ಕವನ್ನೇ ವಿಧಿಸಿರುವುದಿಲ್ಲ. ಸಂಪೂರ್ಣ ವಿನಾಯಿತಿಯನ್ನು ನೀಡಲು ಸಾಧ್ಯವಾಗದಿದ್ದರೆ ಕಡೇ ಪಕ್ಷ ಸ್ವಲ್ಪಮಟ್ಟಿಗೆ ರಿಯಾಯಿತಿಯನ್ನಾದರೂ ನೀಡಲಾಗಿರುತ್ತೆ. ಒಂದೇ ಒಂದು ಸಣ್ಣ ಹುದ್ದೆಗೂ ಲಕ್ಷಾಂತರ ಅರ್ಜಿಗಳು ಬಂದು ಬೀಳುವ ಇವತ್ತಿನ ನಿರುದ್ಯೋಗದ ವಿಷಮ ಪರಿಸ್ಥಿತಿಯಲ್ಲಿ ಅರ್ಜಿ ಶುಲ್ಕವನ್ನೇ ಸಂಪೂರ್ಣವಾಗಿ ರದ್ದು ಮಾಡಬೇಕೆನ್ನುವ ಕೂಗೂ ಇದೆ. ಅದು ಒತ್ತಟ್ಟಿಗಿರಲಿ, ಅರ್ಜಿಶುಲ್ಕದಂತಹ **'Non guarantee investment'**ನ ಹೊರೆಯನ್ನು ಕಡಿಮೆ ಮಾಡಬೇಕಾದ್ದು ಸರ್ಕಾರಗಳ ಕನಿಷ್ಟ ಕರ್ತವ್ಯ.

ಆದರೆ ಈ ಕನಿಷ್ಠ ಕರ್ತವ್ಯದ ಪ್ರಜ್ಞೆ ಮಂತ್ರಿ ರಾಮದಾಸ್ ಮತ್ತವನ ಶಿಷ್ಯ ಸಿದ್ದಪ್ಪನಿಗೆ ಇದ್ದಂತೆ ಕಾಣುವುದಿಲ್ಲ. ಏಕೆಂದರೆ ಈ ಭಲೇ ಜೋಡಿ ಆಸ್ಪತ್ರೆಯ ಅಡುಗೆ ಭಟ್ಟನಂತಹ ಕ್ಷುಲ್ಲಕ ಕೆಲಸಕ್ಕೂ ವಸೂಲಿ ಮಾಡುತ್ತಿರುವುದು ಬರೋಬ್ಬರಿ ಒಂದು ಸಾವಿರ ರೂಪಾಯಿಯ ದುಬಾರಿ ಶುಲ್ಕ! ಇನ್ನು ಸ್ಟಾಫ್ ನರ್ಸ್ ಮುಂತಾದ ಪ್ಯಾರಾ ಮೆಡಿಕಲ್ ಹುದ್ದೆಗಳಿಗೆ ಒಂದೂವರೆಯಿಂದ ಎರಡು ಸಾವಿರದವರೆಗೆ ಫೀಜನ್ನು ಫಿಕ್ಸ್ ಮಾಡಲಾಗಿದೆ. ಅಷ್ಟಕ್ಕೂ ಇದೇನು ಅರ್ಜಿ ಶುಲ್ಕವಲ್ಲ, ಸೇವಾ ಶುಲ್ಕವಂತೆ. ಅರ್ಜಿ ಶುಲ್ಕವನ್ನು ಮತ್ತೊಮ್ಮೆ ಪ್ರತ್ಯೇಕವಾಗಿ ಪಾವತಿಸಬೇಕು. ನೆನಪಿರಲಿ, ಐ.ಎ.ಎಸ್ ನಂತಹ ಉನ್ನತ ಹುದ್ದೆಯ ನಾಗರಿಕ ಸೇವಾ ಪರೀಕ್ಷೆಗೂ ಸರ್ಕಾರ ನಿಗದಿಪಡಿಸಿರುವ ಅರ್ಜಿ ಶುಲ್ಕ ಕೇವಲ ಐವತ್ತು ರೂಪಾಯಿ ಮಾತ್ರ!


### ಬೃಹತ್ ಹಗರಣವಾಗುವ ಎಲ್ಲಾ ಲಕ್ಷಣಗಳಿವೆ

ಇದು ನೇಮಕಾತಿ ಸೋಗಿನಲ್ಲಿರುವ 'ಬಿಗ್ ಢೀಲಿಂಗ್' ಎನ್ನುವುದು ಮೇಲ್ನೋಟಕ್ಕೇ ಕಂಡುಬರುತ್ತೆ. ತನ್ನ ಅಧಿಕಾರಾವಧಿಯ ಕಡೇ ದಿನಗಳಲ್ಲಿರುವ ರಾಮದಾಸ್, ಇನ್ನೇನು ಮೇ ತಿಂಗಳಲ್ಲಿ ಮನೆ ಕಡೆ ಹೋಗಲು ಸಜ್ಜಾಗಿರುವ ಸಿದ್ದಪ್ಪ ಇಬ್ಬರ ಜಂಟಿ ಕಾರ್ಯಯೋಜನೆಯಂತಿರುವ ಇದು ಏನಿಲ್ಲವೆಂದರೂ ಎಂಟರಿಂದ ಹತ್ತು ಕೋಟಿ ಲಪಟಾಯಿಸುವ ಹಕೀಕತ್ತನ್ನು ಹೊಂದಿರುವುದಂತೂ ಸತ್ಯ. ಸರ್ಕಾರದ್ದಿರಲಿ, ಖಾಸಗಿ ಬ್ಯಾಂಕ್‌ಗಳು ನಡೆಸುವ ನೇಮಕಾತಿಯಲ್ಲೂ ಅರ್ಜಿಶುಲ್ಕವಿರುತ್ತದೆಯೇ ಹೊರತು ಸೇವಾಶುಲ್ಕವೆಂಬ ಅನಿಷ್ಟ ಆಚರಣೆಯೇ ಇಲ್ಲ. 'ಎ' ಗ್ರೇಡ್ ಹುದ್ದೆ ಅಂತಾದರೂ ಗರಿಷ್ಠ ಶುಲ್ಕ ಇನ್ನೂರರಿಂದ ಐನೂರು ರೂಪಾಯಿ ಇರುತ್ತೆ. ವಿಶ್ವವಿದ್ಯಾಲಯಗಳ ಪ್ರೊಫೆಸರ್, ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳಿಗೆ ಮಾತ್ರ ಸಾವಿರ ರೂಪಾಯಿ ಶುಲ್ಕ ವಿಧಿಸಿದ್ದು ಇಲ್ಲಿವರೆಗಿನ ದುಬಾರಿ ಶುಲ್ಕ. ಆದರೆ ಈ ಜೋಡಿ ಅದೆಲ್ಲ ಹಳೆಯ ರೆಕಾರ್ಡ್‌ಗಳನ್ನು ಬ್ರೇಕ್ ಮಾಡಿ ಸಣ್ಣಪುಟ್ಟ ಕೆಲಸಕ್ಕೂ ಸಾವಿರಾರು ರೂಪಾಯಿ ವಸೂಲಿಗಿಳಿದು ಹಗಲು ದರೋಡೆ ನಡೆಸುತ್ತಿದೆ.

ಸಿದ್ದಪ್ಪನ ಈ ಲೇಟೆಸ್ಟ್ ಅಧಿಸೂಚನೆಯಲ್ಲಿ ಒಟ್ಟು 720 ಹುದ್ದೆಗಳಿಗೆ ಅರ್ಜಿ ಕರೆಯಲಾಗಿದೆ. ಅದರಲ್ಲಿ ಸ್ಟಾಫ್‌ನರ್ಸ್, ಲ್ಯಾಬ್ ಟೆಕ್ನಿಷಿಯನ್ ಅಲ್ಲದೆ ಗ್ರೂಪ್ ಡಿ, ಅಡುಗೆಭಟ್ಟರು, ಡ್ರೈವರ್ ಮೊದಲಾದ ಹುದ್ದೆಗಳೂ ಇವೆ. ಹಾಗಾಗಿ ಏನಿಲ್ಲವೆಂದರೂ ಎಪ್ಪತ್ತೈದರಿಂದ ಒಂದು ಲಕ್ಷ ಅರ್ಜಿಗಳು ಬಂದೇ ಬರುತ್ತವೆ. ಒಂದೊಂದು ಅರ್ಜಿಗೆ ಒಂದೂವರೆ ಸಾವಿರ ಅಂತ ಅಂದುಕೊಂಡರೂ ಅನಾಮತ್ತು ಹತ್ತರಿಂದ ಹನ್ನೊಂದು ಕೋಟಿ ನಿರ್ದೇಶಕನ ಅಕೌಂಟು ಸೇರಿಬಿಡುತ್ತೆ. ಅದು ರಾಮದಾಸನ ಎಲೆಕ್ಷನ್ ಖರ್ಚಿಗಾದರೂ ಆಗಬಹುದು ಅಥವಾ ಸಿದ್ದಪ್ಪನ ರಿಟೈರ್‌ಮೆಂಟ್ ಫಂಡಿಗಾದರು ಆಗಬಹುದು. ಒಟ್ಟಿನಲ್ಲಿ ಸಕತ್ ವರ್ಕ್‌ಔಟ್ ಆಗಿಯೇ ಆಗುತ್ತೆ, ಇದು ಅವರ ಲೆಕ್ಕಾಚಾರವಿದ್ದಂತಿದೆ.

ಇದು ಇಂಟರ್‌ನೆಟ್ ಯುಗ. ಎಲ್ಲವೂ ಆನ್‌ಲೈನ್‌ನಲ್ಲಿಯೇ ನಡೆದುಬಿಡುತ್ತೆ. ಕೆ.ಪಿ.ಎಸ್.ಸಿ.ಯಂತಹ ಮಂದಮತಿ (ಇಲ್ಲಿ ಅರ್ಜಿ ಸಲ್ಲಿಸಿ ಐದಾರು ವರ್ಷವಾದರೂ ನೇಮಕಾತಿ ಪ್ರಕ್ರಿಯೆ ಮುಗಿದಿರುವುದೇ ಇಲ್ಲ) ಆಯೋಗವು ಆನ್‌ಲೈನ್ ಅರ್ಜಿ ಸಲ್ಲಿಕೆಯನ್ನು ಕಡ್ಡಾಯ ಮಾಡಿಕೊಂಡಿದೆ. ಪ್ರತಿಯೊಂದು ಇಲಾಖೆಯೂ ಈಗ ಆನ್‌ಲೈನ್‌ನಲ್ಲೇ ಅರ್ಜಿ ಆಹ್ವಾನಿಸುತ್ತೆ. ಇಲ್ಲವೇ ತಮ್ಮ ವೆಬ್‌ಸೈಟ್‌ಗಳಿಂದ ಅರ್ಜಿ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಿರುತ್ತವೆ. ಆದರೆ ಸಿದ್ದಪ್ಪ ಈ ವಿಚಾರದಲ್ಲಿ ಇನ್ನೂ ಅಪ್‌ಡೇಟ್ ಆಗದಿರುವುದು ಅನುಮಾನ ಮೂಡಿಸುವಂತಿದೆ. ಅರ್ಜಿಗಳನ್ನು ಬೆಂಗಳೂರು ಮೆಡಿಕಲ್ ಕಾಲೇಜು ಸೇರಿದಂತೆ ಒಟ್ಟು ಹತ್ತು ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಮಾತ್ರ ಮಾರಾಟ ಮಾಡಲಾಗುತ್ತಿದೆ. ಅಲ್ಲಿಗೇ ಖುದ್ದಾಗಿ ಹೋಗಿ ನೂರು ರೂಪಾಯಿ ಕೊಟ್ಟು ಅರ್ಜಿ ಖರೀದಿ ಮಾಡುವುದಲ್ಲದೆ, ಅರ್ಜಿ ಸಲ್ಲಿಸುವಾಗ ತಪ್ಪದೇ ಮತ್ತೊಮ್ಮೆ ಒಂದು ಸಾವಿರದ ಡಿಡಿಯನ್ನು ಖುದ್ದು ನಿರ್ದೇಶಕನಿಗೆ ಉದ್ದೇಶಿಸಿ ಪಡೆದು ಲಗತ್ತಿಸಬೇಕಂತೆ. ಮೊದಲನೆಯದು ಅರ್ಜಿ ಶುಲ್ಕವಾದರೆ ಎರಡನೆಯದು ಸೇವಾ ಶುಲ್ಕವಂತೆ. ಯಾವುದೇ ಕಾರಣಕ್ಕೂ ಈ ಮೊತ್ತವನ್ನು ವಾಪಾಸ್ ಕೊಡಲಾಗುವುದಿಲ್ಲ ಎಂಬ ಒಕ್ಕಣೆಯೂ ಈ ಸೇವಶುಲ್ಕಕ್ಕಿದೆ. ರಾಮದಾಸನಾಗಲಿ, ಡೀನ್ ಕಮ್ ಡೈರೆಕ್ಟರ್ ಸಿದ್ದಪ್ಪನಾಗಲಿ ಸಾವಿರ ರೂಪಾಯಿಗೆ ಸಮನಾಗುವ ಅದಿನ್ಯಾವ 'ಸೇವೆ' (?) ಮಾಡುತ್ತಾರೊ ದೇವರೇ ಬಲ್ಲ.

ಈ ನೇಮಕಾತಿಯ ಅವ್ಯವಸ್ಥೆ ಇಷ್ಟಕ್ಕೇ ಮುಗಿಯುವುದಿಲ್ಲ. ಡಿಸೆಂಬರ್ 27ನೇ ತಾರೀಖಿನಂದೇ




## ಈತ ಡೀನ್ ಅಲ್ಲ, ಡಾನ್!

ಡಾ.ಸಿದ್ದಪ್ಪ ಕುಳಿತಿರುವುದು ಬೆಂಗಳೂರು ಮೆಡಿಕಲ್ ಕಾಲೇಜಿನ ಡೀನ್ ಹುದ್ದೆಯಲ್ಲಿ. ಆದರೆ ಈತ ಆಡುವುದು ಮಾತ್ರ ಪಕ್ಕಾ ಡಾನ್‌ನಂತೆ. ಇವನ ದರ್ಬಾರಿನಲ್ಲಿ ನೌಕರರಿಗೆ ಕಿಮ್ಮತ್ತಿನ ಬೆಲೆ ಇಲ್ಲ. ಅದರಲ್ಲೂ ಗುತ್ತಿಗೆ ನೌಕರರೆಂದರಂತು ಇನ್ನಿಲ್ಲದ ದಬ್ಬಾಳಿಕೆ ಈತನದು. ತನ್ನ ವಿರುದ್ಧ ಯಾರೇ ಮಾತನಾಡಿದರು ಅವರನ್ನು ಮಟ್ಟಹಾಕುವುದರಲ್ಲಿ ನಿಸ್ಸೀಮ. ಅವಿವೇಕಿ ಮಂತ್ರಿ, ದರ್ಪಿಷ್ಟ ಡೈರೆಕ್ಟರ್‌ರು ಇಂತಹದ್ದೊಂದು ಮರ್ಮಾಘಾತ ಮಾಡಬಹುದೆನ್ನುವ ಸೂಚನೆ ಅರಿತ ಇಲ್ಲಿನ ಗುತ್ತಿಗೆ ನೌಕರರು ಕಳೆದ ವರ್ಷವೇ ಬಿ.ಎಂ.ಸಿ.ಆರ್.ಐ ಸ್ಟೈಪಂಡರಿ ನರ್ಸ್‌ಸ್ ಅಸೋಸಿಯೇಷನ್ ಎನ್ನುವ ಸಂಘವನ್ನು ಸ್ಥಾಪಿಸಿಕೊಂಡಿದ್ದರು. ಪಾಳೆಗಾರಿಕೆ ಗತ್ತಿನ ಸಿದ್ದಪ್ಪನಿಗೆ ಇಂತಹ ಸಂಘಗಳೆಂದರೆ ಉಸಿರು ಸಿಕ್ಕಿಕೊಂಡಂತಾಗುತ್ತದೆ. ಅದಲ್ಲದೆ ಭವಿಷ್ಯದಲ್ಲಿ ಇಂತಹದ್ದೊಂದು ಭರ್ಜರಿ ವಸೂಲಿ ಯೋಜನೆ ಹಾಕಿಕೊಂಡಿದ್ದ ಸಿದ್ದಪ್ಪನಿಗೆ ಒಂದಲ್ಲ ಒಂದು ದಿನ ಇದು ತನಗೆ ಮುಳುವಾಗಬಹುದೆಂದು ಅಂದಾಜಿಸಿ ಅದನ್ನು ಆರಂಭದಲ್ಲೆ ಚಿವುಟಿ ಹಾಕಲು ತರೇವಾರಿ ಕಸರತ್ತು ಮಾಡಿದ್ದ. ಈ ವೇದಿಕೆಯನ್ನು ಸಂಘಟಿಸಲು ಮುಂಚೂಣಿಯಲ್ಲಿದ್ದ ರಮೇಶ್ ಎನ್ನುವ ಗುತ್ತಿಗೆ ನೌಕರರನ್ನು ವ್ಯವಸ್ಥಿತವಾಗಿ ಈತನೇ ಪೊಲೀಸ್ ಕೇಸಿನಲ್ಲಿ ಸಿಕ್ಕಿಸಿ, ಸುಳ್ಳು ಆರೋಪಗಳನ್ನು ಸೃಷ್ಟಿಸಿ ಕೆಲಸದಿಂದ ವಜಾ ಮಾಡಿದ್ದ. ಇಂತಹ ಸಾಕಷ್ಟು ಉದಾಹರಣೆಗಳು ಸಿಗುತ್ತಲೇ ಹೋಗುತ್ತವೆ. ಧರಣಿ ಕುಳಿತಿರುವ ಮಹಿಳಾ ನೌಕರರನ್ನು ತಾನೆ ಮುಂದು ನಿಂತು ಹಾಸ್ಟೆಲ್ ಖಾಲಿ ಮಾಡಿಸುತ್ತಿರುವುದು ಆತನ ದಬ್ಬಾಳಿಕೆಯ ಲೇಟೆಸ್ಟ್ ಸ್ಯಾಂಪಲ್.

ಹುದ್ದೆಗಳ ಸೇವಾ ಶುಲ್ಕ:

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಸೇವಾ ಶುಲ್ಕ | |
|---|---|---|---|
| | | ಪ.ಜಾ/ಪ.ಪಂ/ ಪ್ರವರ್ಗ-I | ಸಾಮಾನ್ಯ ವರ್ಗ ಹಾಗೂ ಹಿಂದುಳಿದ ವರ್ಗ |
| 1 | ಶುಶ್ರೂಷಕರು | ರೂ. 500/- | ರೂ. 2000/- |
| 2 | ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು | ರೂ. 500/- | ರೂ. 1500/- |
| 3 | ವೈದ್ಯಕೀಯ ದಾಖಲೆಗಳ ತಂತ್ರಜ್ಞರು | ರೂ. 500/- | ರೂ. 1500/- |
| 4 | ಕ್ಷ-ಕಿರಣ ತಂತ್ರಜ್ಞರು | ರೂ. 500/- | ರೂ. 1500/- |
| 5 | ತುರ್ತು ವಾಹನ ಚಾಲಕರು | ರೂ. 500/- | ರೂ. 1000/- |
| 6 | ಗ್ರೂಪ್ 'ಡಿ' | ರೂ. 500/- | ರೂ. 1000/- |
| 7 | ಅಡುಗೆಯವರು | ರೂ. 500/- | ರೂ. 1000/- |



## ಅಸಾರಾಂ ಬಾಬಾ

ಜೈಲಲ್ಲಿರಬೇಕಾದವರನ್ನು ಬೀದಿಯಲ್ಲಿ ಓಡಾಡಿಕೊಂಡಿರಲು ಬಿಟ್ಟರೆ ಆಗಬಾರದ್ದೆಲ್ಲಾ ಆಗುತ್ತದೆ.

ಇದಕ್ಕೆ ಬಾಬಾ ಅಸಾರಾಂನೇ ಸಾಕ್ಷಿ. ದೆಹಲಿ ಅತ್ಯಾಚಾರ ದುರ್ಘಟನೆಯಲ್ಲಿ ಬಲಿಯಾದ ಯುವತಿ ದುಷ್ಕರ್ಮಿಗಳಿಗೆ ಕೈ ಮುಗಿದು 'ಅಣ್ಣಾ ನನ್ನನ್ನು ಬಿಟ್ಟುಬಿಡು' ಎಂದು ಬೇಡಿಕೊಂಡಿದಿದ್ದರೆ ಈ ಅನಾಹುತ ನಡೆಯುತ್ತಲೇ ಇರಲಿಲ್ಲ ಎಂದು ಅಸಾರಾಂ ಹೇಳಿದ್ದಾನೆ. ಇಷ್ಟು ಸಾಲದೆಂಬಂತೆ "ಅತ್ಯಾಚಾರಕ್ಕೆ ಆ ಹುಡುಗಿಯೂ ಅರ್ಧ ಹೊಣೆ" ಎಂತಲೂ ಬೊಗಳಿದ್ದಾನೆ. ಇದರ ಪ್ರತಿಫಲವೆಂಬಂತೆ ಅಸಾರಾಂ ಬಾಬಾ ಈಗ ಜನರಿಂದ ತಾರಾಮಾರ ಉಗ್ಗಿಸಿಕೊಳ್ಳುತ್ತಿದ್ದಾನೆ.

ಬೀದಿಗೊಬ್ಬ ಬಾಬಾಗಳನ್ನು ಸೃಷ್ಟಿಸುವ ಹಿಂದೂ ಸಾಮಾಜಿಕ ವ್ಯವಸ್ಥೆಯ ಅಸಾರಾಂ ತರದ ಕ್ರಿಮಿನಲ್ ಹುಳಗಳಿಗೆ ಆರ್ಡರ್ ಕೊಟ್ಟು ರೆಡಿ ಮಾಡಿಸಿರುವ ತಿಪ್ಪೆಯಂತಿದೆ. ಈಗ್ಗೆ ನಲವತ್ತು ವರ್ಷಗಳ ಹಿಂದೆ ಅಹಮದಾಬಾದಿನ ಸೈಕಲ್ ಶಾಪ್ ಒಂದರಲ್ಲಿ ಚಿಕ್ಕ ಮೆಕ್ಯಾನಿಕ್ ಆಗಿದ್ದ ಅಸುಮಲ್ ತುಮಾಲ್ ಹರ್‌ತಲಾನಿಯೇ ಈಗಿನ ಅಸಾರಾಂ ಬಾಬಾ. ಇವನ ಆಧ್ಯಾತ್ಮಿಕ ಸಾಮ್ರಾಜ್ಯ ಇವತ್ತು ಐದು ಸಾವಿರ ಕೋಟಿ ರೂಪಾಯಿ ಬೆಲೆಯ ದಂಧೆಯಾಗಿ ಬೆಳೆದಿದೆ. ಧಾರ್ಮಿಕ ಬೋಧನೆ, ಸತ್ಸಂಗ, ಆಧ್ಯಾತ್ಮಿಕ ಪತ್ರಿಕೆಗಳು, ಸಿಡಿ, ಪುಸ್ತಕಗಳು ಆಯುರ್ವೇದಿಕ್ ಔಷಧ ಮಾರಾಟ, ಸಾವಿರಾರು ಎಕರೆ ಭೂಮಿ.... ಜೊತೆಗೊಂದು ಸಂಸಾರ, ತಲೆ ಮೇಲೆ ಡಜನ್ ಕ್ರಿಮಿನಲ್ ಕೇಸುಗಳು....

ಇವಿಷ್ಟು ಅಸಾರಾಂ ಬಾಬಾನ ಬಯೋಡೇಟಾ. ಇದಕ್ಕೆ ಕಿರೀಟವಿಟ್ಟಂತೆ ಅಸಾರಾಂ ಮೇಲೆ ಕೊಲೆ ಕೇಸುಗಳೂ ಇವೆ.

ಭಾರತದಾದ್ಯಂತ ಮುನ್ನೂರು ಆಶ್ರಮ ಶಾಖೆಗಳನ್ನು ಹೊಂದಿರುವ ಅಸಾರಾಂ ಈಗಿನ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹುಟ್ಟಿದವನು. 1971 ರಲ್ಲಿ ಗುಜರಾತ್‌ನ ಮೊಟೇರಾದಲ್ಲಿ ಮೊದಲು ಆಶ್ರಮ ಸ್ಥಾಪಿಸಿದ. ಇವನ ಸಂತ್ ಅಸಾರಾಂ ಬಾಪು ಟ್ರಸ್ಟ್ ಹಾಗೂ ಸಂತ್‌ಶ್ರೀ ಅಸಾರಾಂಜಿ ಮಹಿಳಾ ಉತ್ತಮ್ ಟ್ರಸ್ಟ್‌ಗಳು ಭೂಕಬಳಿಕೆಗೆ ಕುಖ್ಯಾತವಾಗಿದೆ. ಅವನ ಗುಜರಾತ್ ಹಾಗೂ ಮಧ್ಯಪ್ರದೇಶದ ಆಶ್ರಮಗಳಲ್ಲಿ ಒಟ್ಟು ನಾಲ್ವರು ಅನುಮಾನಾಸ್ಪದ ರೀತಿಯಲ್ಲಿ ಸತ್ತಿದ್ದು ಪೊಲೀಸ್ ತನಿಖೆ ನಡೆದಿದೆ. ಅಸಾರಾಂ ಬಾಬಾ ಋಷಿಪ್ರಸಾದ್ ಹಾಗೂ ಲೋಕ ಕಲ್ಯಾಣ್ ಸೇತು ಎಂಬ ಧಾರ್ಮಿಕ ಪತ್ರಿಕೆಗಳನ್ನು ನಡೆಸುತ್ತಾನೆ. ನೀವು ನಂಬಿ ಇಲ್ಲಾ ಬಿಡಿ, ಪ್ರತಿ ತಿಂಗಳೂ ಬೇರೆಬೇರೆ ಭಾಷೆ ಸೇರಿ ಒಟ್ಟು ಹದಿನಾಲ್ಕು ಲಕ್ಷ ಪ್ರತಿಗಳು ಖರ್ಚಾಗುತ್ತಿವೆ!

ಕಂತೆಗೊಂದು ಬೊಂತೆ ಎನ್ನುವಂತೆ ಅಸಾರಾಂಗೆ ನಾರಾಯಣ ಸಾಯಿ ಎಂಬ ಮಗನಿದ್ದಾನೆ. "ನಮ್ಮ ಆಶ್ರಮದಲ್ಲಿ ಮಾಟಮಂತ್ರ ನಡೆಯುತ್ತದೆ" ಎಂದು ಬಹಿರಂಗವಾಗಿ ಹೇಳಿಕೊಳ್ಳುವ ಭಂಡ ಇವನು. ಸದ್ಯಕ್ಕೆ ಅಸಾರಾಂ ವಿರುದ್ಧ ಪೊಲೀಸರ ಬಳಿ ಕಂಪ್ಲೇಂಟ್ ದಾಖಲಾಗಿದೆ.

ಈ ಹಿಂದೂ ಪುರೋಹಿತ ವ್ಯವಸ್ಥೆಯ ಪ್ರಾಡಕ್ಟ್‌ನಂತಿರುವ ಅಸಾರಾಂ ಬಾಬಾನನ್ನು ತುರ್ತಾಗಿ ಜೈಲಿಗೆ ಹಾಕಿದರೆ ಒಳಿತು.

## ಸಿನಿಮಾದವರ ಕರ ನಿರಾಕರಣ ಚಳವಳಿ

ಸ್ವಾತಂತ್ರ ಸಂಗ್ರಾಮ ನಡೆಯುತ್ತಿದ್ದಾಗ ಬಾಪು ಬ್ರಿಟಿಷರ ವಿರುದ್ಧ ನಡೆಸಿದ ಕರ ನಿರಾಕರಣ ಚಳವಳಿಯನ್ನು ಈಗ ಸಿನಿಮಾ ಜನ ಕೈಗೆತ್ತಿಕೊಂಡಿದ್ದಾರೆ.




ನಟ, ನಿರ್ದೇಶಕರು, ಸಂಗೀತ ನಿರ್ದೇಶಕರು, ಸ್ಟಂಟ್ ಮಾಸ್ಟರ್‌ಗಳೆಲ್ಲಾ ಇನ್ನು ಮೇಲೆ ತಮ್ಮ ಆದಾಯದ 12.36% ಹಣವನ್ನು ಸೇವಾ ತೆರಿಗೆಯಾಗಿ ಸರ್ಕಾರಕ್ಕೆ ಕೊಡಬೇಕಾಗಿ ಬಂದಿದೆ. ಸಹಜವಾಗಿಯೇ ಈ ಸುದ್ದಿ ಕೇಳಿ ಸಿನಿಮಾದವರಿಗೆ ಸಿಡಿಲು ಹೊಡೆದಂತೆ ಆಗಿದೆ. ಅವರೆಲ್ಲ ಈಗ ಕರ ನಿರಾಕರಣ ಚಳವಳಿ ನಡೆಸುತ್ತಿದ್ದಾರೆ.

ನಮ್ಮ ಕ್ರಿಕೆಟ್ ಆಟಗಾರರಿಗೆ, ಸಿನಿಮಾದವರಿಗೆ ಸರ್ಕಾರಕ್ಕೆ ತೆರಿಗೆ ಕಟ್ಟಬೇಕೆಂದರೆ ಒಂಥರಾ ಅಲರ್ಜಿ. ನೂರಾರು ಕೋಟಿ ಹಣ ಮಾಡಿಕೊಂಡಿರುವ ಸಚಿನ್ ತೆಂಡೂಲ್ಕರ್ ಒಮ್ಮೆ ತನಗೆ ಬಹುಮಾನವಾಗಿ ಅರ್ಥಾತ್ ಉಚಿತವಾಗಿ ಸಿಕ್ಕ ಫೆರಾರಿ ಕಾರನ್ನು ವಿದೇಶದಿಂದ ಭಾರತಕ್ಕೆ ತಂದಾಗ ತೆರಿಗೆ ಕಟ್ಟದೆ ತಪ್ಪಿಸಿಕೊಳ್ಳಲು ಯತ್ನಿಸಿ ಛೀಮಾರಿಗೆ ಒಳಗಾಗಿದ್ದ.

1947 ರ ಭಾರತದ ಕಾಪಿರೈಟ್ ಕಾಯ್ದೆಯ ಉಪನಿಯಮಗಳ ಪ್ರಕಾರ ಹಾಗೂ 2004ರ ಬೌದ್ಧಿಕ ಆಸ್ತಿ ಹಕ್ಕಿನ ನಿಯಮಾನುಸಾರ ಸಿನಿಮಾ ಕಲಾವಿದರ ಕೆಲಸವನ್ನು ಈಗ ಒಂದು 'Service' (ಸೇವೆ) ಎಂದು ಪರಿಗಣಿಸಿ ತೆರಿಗೆ ವ್ಯಾಪ್ತಿಗೆ ತರಲಾಗಿದೆ.

ಇದುವರೆಗೂ ತಾವು ಕಲಾ 'ಸೇವೆ' ಮಾಡುತ್ತಿದ್ದೇವೆ ಎಂತಲೇ ಹೇಳಿಕೊಳ್ಳುತ್ತಿದ್ದ ನಟರಿಗೆಲ್ಲಾ ಈಗ ಆ 'ಸೇವೆ'



ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಈ ಕುರಿತು ಅಧಿಸೂಚನೆಯನ್ನು ಪ್ರಕಟಿಸಿ ಜನವರಿ 03 ರಿಂದ ಅರ್ಜಿ ಸಲ್ಲಿಸಬಹುದು ಎಂಬುದಾಗಿ ಪ್ರಕಟಿಸಿದ್ದರು. ಆದರೆ ಇದಾದ ಒಂದೇ ದಿನಕ್ಕೆ ವೆಬ್‌ಸೈಟ್‌ನಿಂದ ಅಧಿಸೂಚನೆ ನಾಪತ್ತೆಯಾಗಿ ಹೋಗಿತ್ತು. ಒಂದೆರಡು ದಿನಗಳ ತರುವಾಯ ಮತ್ತೆ ಅದೇ ಅಧಿಸೂಚನೆ ಪರದೆ ಮೇಲೆ ಹೊಸ ದಿನಾಂಕಗಳೊಂದಿಗೆ ಮೂಡಿ ಜನವರಿ 07 ರಿಂದ ಅರ್ಜಿ ಸಲ್ಲಿಸಬಹುದು ಎಂದಾಗಿತ್ತು. ಹೀಗೆ ಕೆಲವೇ ದಿನಗಳಲ್ಲಿ ಎರಡೆರಡು ಸಾರಿ ಕಣ್ಣಾಮುಚ್ಚಾಲೆ ಆಡಿದ್ದೇಕೆ ಎನ್ನುವ ಅನುಮಾನವೂ ಮೂಡುತ್ತದೆ.

## ದಾಸನ ಭರವಸೆ ಟುಸ್ಸಾಯ್ತು!

ಈ ನೇಮಕಾತಿಯು ರಾಮದಾಸ್ ಮಹಾನ್ ಸುಳ್ಳುಗಾರ ಎನ್ನುವುದನ್ನು ಮತ್ತೊಮ್ಮೆ ಸಾಬೀತುಮಾಡಿದೆ. ಚುನಾವಣೆ ಸಮೀಪಿಸುತ್ತಿದ್ದಂತೆ ಜನೋಪಕಾರದ ಬೋಗಸ್ ಭರವಸೆಗಳನ್ನು ಬಾಯಿಗೆ ಬಂದಂತೆ ಬಡಬಡಾಯಿಸುವ ಶ್ರೀಮಾನ್ ದಾಸು ಕಳೆದ ತಿಂಗಳಷ್ಟೆ ಮಾಧ್ಯಮಗಳ ಮುಂದೆ ಒಂದು ಪ್ರತಿಜ್ಞೆ ಪ್ರಕಟಿಸಿದ್ದ. ಅದರಂತೆ ರಾಜ್ಯದ 17ಕ್ಕೂ ಹೆಚ್ಚು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಮೂರುವರ್ಷಕ್ಕಿಂತ ಮೇಲ್ಪಟ್ಟು ಕೆಲಸ ಮಾಡುತ್ತಿರುವ ಗುತ್ತಿಗೆ ನೌಕರರನ್ನು ಕಾಯಂ ಮಾಡಿಕೊಳ್ಳುವುದಾಗಿ ಹೇಳಿದ್ದ. ಇದಕ್ಕೆಂದೆ ಎಲ್ಲಾ ವೈದ್ಯ ಸಂಸ್ಥೆಗಳಿಂದ ಗುತ್ತಿಗೆ ನೌಕರರ ಲಿಸ್ಟನ್ನೂ ತರಿಸಿಕೊಂಡಿದ್ದ.

ಆದರೆ ಒಂದೇ ತಿಂಗಳಲ್ಲಿ ಪ್ಲೇಟ್ ಬದಲಾಯಿಸಿ, ಇಂತಹದ್ದೊಂದು ಅಕ್ರಮ ನೇಮಕಾತಿ ಮಾಡಿಕೊಳ್ಳಲು ಸಿದ್ದಪ್ಪನಿಗೆ ಪರ್ಮಿಷನ್ ನೀಡಿದ್ದಾನೆ. ಪ್ರಸಕ್ತ ಅಧಿಸೂಚನೆಯ ಪ್ರಕಾರ ಈಗಾಗಲೇ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡಿ ಸೇವಾನುಭವ ಇರುವ ಉದ್ಯೋಗಿಗಳಿಗೆ ನಯಾಪೈಸೆಯ ಬೆಲೆ ಇಲ್ಲ. ಅವರೂ ಹೊಸ ಅಭ್ಯರ್ಥಿಗಳಂತೆ ಅರ್ಜಿ ಗುಜರಾಯಿಸಿ ಹೊಡೆದಾಡಬೇಕಿದೆ. ವಿಪರ್ಯಾಸ ಅಂತಂದರೆ ನಾಲ್ಕಾರು ವರ್ಷಗಳಿಂದ ಖಾಯಮಾತಿಯ ಕನಸಲ್ಲಿ ಗುತ್ತಿಗೆ ನೌಕರರಾಗಿ ಅಲ್ಲಿ ಕೆಲಸ ಮಾಡಿಕೊಂಡಿರುವ ಸುಮಾರಷ್ಟು ಜನರ ವಯೋಮಿತಿ ಮೀರಿಹೋಗಿದೆ. ಅವರ್‍ಯಾರೂ ಅರ್ಜಿ ಸಲ್ಲಿಸಲು ಅರ್ಹರೇ ಅಲ್ಲದಂತಾಗಿದ್ದಾರೆ. ಒಂದು ತಿಂಗಳ ಹಿಂದೆ ಈ ದಾಸಪ್ಪ ನೀಡಿದ್ದ ಸ್ಟೇಟ್‌ಮೆಂಟನ್ನು, ತರಾತುರಿಯಲ್ಲಿ ತರಿಸಿಕೊಂಡಿದ್ದ ಲಿಸ್ಟನ್ನೂ ಕಂಡು ಉತ್ಸುಕರಾಗಿದ್ದ ಅವರೆಲ್ಲ ಸಚಿವನ ಡಬಲ್‌ಗೇಮ್‌ನಿಂದ ತತ್ತರಿಸಿಹೋಗಿದ್ದಾರೆ. ಕೇವಲ ಸ್ಟಾಫ್‌ನರ್ಸ್‌ಗಳ ಲೆಕ್ಕ ತೆಗೆದುಕೊಂಡರೂ ಸಿದ್ದಪ್ಪನ ಆಸ್ಥಾನದಲ್ಲಿ 450 ಗುತ್ತಿಗೆ ನೌಕರರಿದ್ದು ಅವರೆಲ್ಲ ಅಕ್ಷರಶಃ ಬೀದಿಗೆ ಬೀಳುವಂತಾಗಿದೆ.

ಪ್ರಕಟಣೆಯಲ್ಲಿ ಈ ರೀತಿಯ ಅನ್ಯಾಯವಾಗಿರುವುದು ಖಾತ್ರಿಯಾಗುತ್ತಿದ್ದಂತೆಯೇ ಅಷ್ಟೋ ಜನ ಮನವಿ ಪತ್ರ ಹಿಡಿದು ಖುದ್ದು ಸಿದ್ದಪ್ಪನನ್ನೇ ಭೇಟಿಯಾಗಿದ್ದರು. ಆದರೆ ಸೌಜನ್ಯಕ್ಕಾದರೂ ಆತ ಮನವಿ ಆಲಿಸಿಕೊಳ್ಳದೆ ಎಲ್ಲರನ್ನೂ ಹೊರಗಟ್ಟಿದ್ದ. ನಂತರ ಮುಖ್ಯಮಂತ್ರಿಯಿಂದ ರಾಮದಾಸ್‌ವರೆಗೆ ಪ್ರತಿಯೊಬ್ಬರನ್ನು ಎಡತಾಕಿ ಬಂದರೂ ಯಾವ ಪ್ರಯೋಜನವೂ ಆಗಿಲ್ಲ. ಅದರಲ್ಲೂ ರಾಮದಾಸನಂತು ಹೀಗೊಂದು ಅಧಿಸೂಚನೆ ಬಂದಿರುವುದು ತನ್ನ ಗಮನಕ್ಕೇ ಬಂದಿಲ್ಲ ಎಂದು ಪುಂಗಿ ಊದಿದ್ದ. ಸಚಿವನಾಗಿದ್ದುಕೊಂಡು, ಅವನದೇ ಅಧೀನಕ್ಕೊಳಪಡುವ ಒಂದು ಮಸ್ತ್ ನೇಮಕಾತಿ ಆತನಿಗೆ ತಿಳಿದಿಲ್ಲವೆಂಬುದನ್ನು ಯಾರಾದರು ಮಾನಸ್ಥರು ನಂಬುವಂತಹ ಮಾತೆ?

ಸಚಿವನ ಡಬಲ್‌ಗೇಮ್ ಮತ್ತು ಸಿದ್ದಪ್ಪನ ದರ್ಪದಿಂದಾಗಿ ಬೀದಿಗೆ ಬಂದಿರುವ ಗುತ್ತಿಗೆ ನೌಕರರೆಲ್ಲ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಆದರೆ ಅದನ್ನು ಬಗೆಹರಿಸುವ ದರ್ದು ಸರ್ಕಾರಕ್ಕಾಗಲಿ, ರಾಮದಾಸನಿಗಾಗಲಿ, ಸಿದ್ದಪ್ಪನಿಗಾಗಲಿ ಇದ್ದಂತಿಲ್ಲ. ನೆಪಕ್ಕಾದರು ಅತ್ತ ಸುಳಿಯದೆ ನಿರ್ಲಕ್ಷಿಸುತ್ತಿದ್ದಾರೆ. ಇನ್ನು ಸಿದ್ದಪ್ಪನಂತು ಸ್ಟ್ರೈಕ್ ಕೂತವರ ವಿರುದ್ಧ ಗರಮ್ ಆಗಿದ್ದು, ಇನ್ನೆರಡು ದಿನದಲ್ಲಿ ಕೆಲಸಕ್ಕೆ ವಾಪಾಸ್ ಆಗದಿದ್ದರೆ ಎಲ್ಲರನ್ನು ವಜಾ ಮಾಡುವ ಬೆದರಿಕೆ ಹಾಕುತ್ತಿದ್ದಾನೆ. ಈ ಗುತ್ತಿಗೆ ನೌಕರರಲ್ಲಿ ಬಹುಪಾಲು ಮಹಿಳೆಯರೇ ಇದ್ದಾರೆ. ರಾತ್ರಿಯ ಹೊತ್ತೂ ಅವರು ಬಯಲಿನಲ್ಲಿ ಬಿದ್ದುಕೊಂಡಿದ್ದರೂ ಸರ್ಕಾರ ಕ್ಯಾರೇ ಅನ್ನದಿರುವುದು ಬಿ.ಜೆ.ಪಿ. ಮಂದಿಯ ಭಂಡತನವನ್ನು ತೋರಿಸುತ್ತದೆ. ಇನ್ನೂ ಮುಂದುವರೆದಿರುವ ಡೈರೆಕ್ಟರ್ ಸಿದ್ದಪ್ಪ ಸಂಸ್ಥೆಯ ಹಾಸ್ಟೆಲ್‌ನಲ್ಲಿ ಆಶ್ರಯ ಪಡೆದಿದ್ದು, ಈಗ ಧರಣಿಯಲ್ಲಿರುವ ಮಹಿಳಾ ನೌಕರರನ್ನು ಏಕಾಏಕಿ ತೆರವುಗೊಳಿಸುವ ಆದೇಶಕ್ಕೆ ಸಜ್ಜಾಗಿದ್ದಾನೆ.

ಒಟ್ಟಿನಲ್ಲಿ ಅವ್ಯವಸ್ಥೆಯ ಆಗರವಾಗಿದ್ದ ಸರ್ಕಾರಿ ವೈದ್ಯಾಲಯಕ್ಕೆ ಅಕ್ರಮದ ಮಸಿ ಬಳಿಯಲು ನಿರ್ಗಮನದ ಅಂಚಿನಲ್ಲಿರುವ ಈ ಇಬ್ಬರೂ ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಅದಕ್ಕೆ ಅಮಾಯಕ ಗುತ್ತಿಗೆ ನೌಕರರು ಬಲಿಯಾಗುತ್ತಿರುವುದು ವಿಪರ್ಯಾಸ!

● ಗಿರೀಶ್ ತಾಳಿಕಟ್ಟೆ



...ಎಂಬ ಪದವೇ ತಮ್ಮನ್ನೆಲ್ಲಾ ತೆರಿಗೆ ಕಟ್ಟುವಂತಾ ಪರಿಸ್ಥಿತಿಗೆ ದೂಡುತ್ತಿರುವುದನ್ನು ನೋಡಿ ಶಾಕ್ ಆಗಿರಲಿಕ್ಕೂ ಸಾಕು. ...ಇಷ್ಟಕ್ಕೂ, ಸರ್ಕಾರ ಸೇವಾ ತೆರಿಗೆ ವಿಧಿಸುವುದು ನಟರು ಅಧಿಕೃತವಾಗಿ ಘೋಷಿಸಿಕೊಳ್ಳುವ ಹಾಗೂ ಇನ್‌ಕಂ ಟ್ಯಾಕ್ಸ್ ...ಲೆಕ್ಕಕ್ಕೆ ಸಿಗುವ ಮೊತ್ತಕ್ಕೆ ಮಾತ್ರ. ಒಂದು ಉದಾಹರಣೆಯ ಮೂಲಕ ಹೇಳಬೇಕೆಂದರೆ ಒಂದು ಕೋಟಿ ರೂಪಾಯಿ ಸಂಭಾವನೆ ಪಡೆಯುವ ಹೀರೊ ಒಬ್ಬ ಇನ್‌ಕಂಟ್ಯಾಕ್ಸ್‌ನವರಿಗೆ ತೋರಿಸುವುದು 25 ಲಕ್ಷ ಮಾತ್ರ ಎಂದಿಟ್ಟುಕೊಳ್ಳೋಣ. ...ಉಳಿದದ್ದು ಕೃಷ್ಣನ ಲೆಕ್ಕ. ಈಗ ಸರ್ವಿಸ್ ಟ್ಯಾಕ್ಸ್ ಕೊಡಬೇಕಾಗಿ ಬರುತ್ತಿರುವುದು ಆ 25 ಲಕ್ಷಕ್ಕೆ ಮಾತ್ರವೆ!

ಈ ದೇಶದಲ್ಲಿ ಬಡರೈತರು, ಕೂಲಿಯವರು, ಆಟೋಡ್ರೈವರ್‌ಗಳೆಲ್ಲಾ ತೆರಿಗೆ ಕೊಡುವಾಗ ಸಿನಿಮಾದವರೂ ...ಕೊಂಚ ತೆರಿಗೆ ಕಟ್ಟಿದರೆ ತಪ್ಪೇನಿಲ್ಲ. ಈ ತೆರಿಗೆ ಮೊತ್ತ ಹೆಚ್ಚಿಸಿದರೆ ಕಡಿಮೆ ಮಾಡುವಂತೆ ಒತ್ತಾಯಿಸುವುದೂ ...ತಪ್ಪಲ್ಲವೇ ಅಲ್ಲ.

ಅಂದಹಾಗೆ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳಲ್ಲಿ ಟಿಕೆಟ್ ಬೆಲೆ 200-300 ಇಟ್ಟು ಪ್ರೇಕ್ಷಕರನ್ನು ಸುಲಿಯುತ್ತಿದ್ದಾರಲ್ಲ, ...ಅದನ್ನೊಂದಾದರೂ ಈ ಕಲಾಸೇವಕರು ಪ್ರತಿಭಟಿಸಿದ್ದಾರಾ?


● ಪಾರ್ವತೀಶ

# ಕನ್ನಡ ಸಾಹಿತಿಗಳು ಸತ್ತು ಮಲಗಿದ್ದಾರಂತಲ್ಲಾ!

ನಮ್ಮ ಕನ್ನಡನಾಡಿನ ಸಾಹಿತಿಗಳು ನಿರ್ಲಿಂದ್ರಿಯರಂತೆ ಬದುಕುತ್ತಿರುವ ಬಗ್ಗೆ ನಮಗೆ ಸಾಕಷ್ಟು ಸಾಕ್ಷ್ಯಾಧಾರಗಳು ಸಿಗುತ್ತಿವೆಯಲ್ಲಾ. ರಾಜ್ಯ ಸರಕಾರ ಕನ್ನಡನಾಡಿನ ಮಣ್ಣಿನ ಮಕ್ಕಳ ಬೆವರಿನ ಹಣದಲ್ಲಿ ದೀನದಯಾಳ ಉಪಾಧ್ಯಾಯ ಎಂಬ ಬೂಸಾ ವ್ಯಕ್ತಿಯ ಸಾಹಿತ್ಯವನ್ನು ಪ್ರಿಂಟಿಸಿ, ತಾನು ಮುದ್ರಿಸಿದ ಪುಸ್ತಕವನ್ನು ತಾನೇ ಕೋಟ್ಯಂತರ ರೂಪಾಯಿಗಳಿಗೆ ಖರೀದಿಸಿ, ರಾಜ್ಯ ಗ್ರಂಥಾಲಯಗಳಿಗೆಲ್ಲಾ ಹಂಚಲಿದೆ ಎಂಬ ಸುದ್ದಿ ಕೇಳಿಯೂ ಸಾಹಿತಿಗಳು ಸುಮ್ಮನೆ ಕುಳಿತಿದ್ದಾರಂತಲ್ಲಾ. ಅವರೆಲ್ಲ ಏನು ಮಾಡುತ್ತಿದ್ದಾರೆಂಬ ಪ್ರಶ್ನೆಗಳಿಗೆ ಬಹುತೇಕ ಸಾಹಿತಿಗಳು ಸುಖವಾಗಿ ತಿಂದುಂಡು, ಹೊಟ್ಟೆಯ ಮೇಲೆ ಕೈಯಾಡಿಸುತ್ತ ಟಿ.ವಿ. ಧಾರಾವಾಹಿಗಳನ್ನು ನೋಡುತ್ತ ಕುಳಿತಿದ್ದಾರೆಂಬ ಮಾಹಿತಿ ಬಂದಿದೆಯಲ್ಲಾ. ಕೆಲವರು ತಾವು ತಾರುಣ್ಯದಲ್ಲಿ ಕೆರೆದುದೆಲ್ಲವನ್ನು ಸಮಗ್ರವಾಗಿ ಪ್ರಿಂಟಾಕುತ್ತಾ, ಯಾರಾದರೂ ದೀನ ದಯಾಳರು ಸಿಕ್ಕರೆ ಸಾಕೆಂದು ಕಾಯುತ್ತಿದ್ದಾರಂತಲ್ಲಾ. ಇನ್ನೂ ಹಲವರು ತಮ್ಮ ಮಾತಿನ ಪ್ರಖರತೆಯನ್ನು ಕಡಿಮೆ ಮಾಡಿಕೊಂಡು, ಸರಕಾರದ ಸುಪರ್ದಿಯಲ್ಲಿ ಖಾಲಿ ಇರುವ ಅಕಾಡೆಮಿಗಳ ಬಗ್ಗೆ ಯೋಚಿಸುತ್ತಿದ್ದಾರಂತಲ್ಲಾ. ಮತ್ತೆ ಹಲವರು ಕರ್ನಾಟಕಕ್ಕೆ ಒಂದು ಪ್ರಾದೇಶಿಕ ಪಕ್ಷ ಬೇಕು ಎನ್ನುತ್ತಾ ಅದರ ಪ್ರನಾಳಿಕೆ ರೂಪುರೇಶೆ ನನ್ನಲ್ಲಿವೆ ಎಂದು ಕೂಗುತ್ತಿದ್ದಾರಲ್ಲ, ಇದೆಲ್ಲದರ ಮಧ್ಯೆ ಚೆಡ್ಡಿಗಳು ತಮ್ಮ ಒಂದೊಂದೆ ಅಜೆಂಡಾಗಳನ್ನು ಸರಕಾರದ ಅಂತಿಮ ಸ್ಥಿತಿಯಲ್ಲೂ ರೂಪಿಸಿ ಜಾರಿ ಮಾಡುತ್ತಿದ್ದಾರಂತಲ್ಲಾ, ಥೂತ್ತೇರಿ!

* * * *

ಒಂದು ಕಾಲದಲ್ಲಿ ಸರಕಾರಿ ಗ್ರಂಥಾಲಯಗಳಿಗೆ ಹೋಗಿ ಅಲ್ಮೇರಾಗಳನ್ನು ನೋಡಿದರೆ, ಕುವೆಂಪು, ಕಾರಂತ, ಬೇಂದ್ರೆ ಪುಸ್ತಕ ಒಂದೆಡೆಯಾದರೆ, ಅನಂತ ಮೂರ್ತಿ, ಲಂಕೇಶ್, ದೇಸಾಯಿ ಮತ್ತಿತರ ನವ್ಯರ ಕೃತಿಗಳು, ಆನಂತರ ಪ್ರಗತಿಶೀಲರು, ಬಂಡಾಯದವರು... ಹೀಗೆ ಸಮಗ್ರವಾಗಿ ಪುಸ್ತಗಳ ಸಾಲುಗಳು ಕಂಡುಬರುತ್ತಿದ್ದವು. ಆದರೆ ಈಗ, ನೀವು ಕಂಡುಕೇಳರಿಯದ ಸಾಹಿತಿಗಳ ಸತ್ತ ಪುಸ್ತಕಗಳು ಸಾಲುಸಾಲಾಗಿ ಕುಳಿತಿವೆಯಂತಲ್ಲಾ.



ಇವರೆಲ್ಲಾ ಯಾರು ಎಂದು ತಪಾಸಣೆ ಮಾಡಿದರೆ, ಎಲ್ಲರ ಜನಿವಾರದ ಎಳೆಗಳೂ ಕೇಶವಕೃಪದ ಸುತ್ತ ಸುತ್ತಿಕೊಂಡಿದೆಯಲ್ಲ.

ಇವರೆಲ್ಲಾ ಧರ್ಮ, ದೇವರು, ವಾಸ್ತು, ಯಜ್ಞ, ಯಾಗದ ಮಹತ್ವವನ್ನು ನಿರಂತರವಾಗಿ ಕೆರೆಯುತ್ತ ಕುಳಿತಿದ್ದಾರಂತಲ್ಲಾ. ಇವರ ಮಕ್ಕಳೆಲ್ಲಾ ಇಂಟರ್‌ನೆಟ್‌ನಿಂದ ಇಳಿಸಿಕೊಂಡ ಮಾಹಿತಿಗೆ, ಒಂದಿಷ್ಟು ಇಂಗು ತೆಂಗು ಸೇರಿಸಿ ಪ್ರಿಂಟಾಕಿಸುತ್ತ 'ಕರ್ನಾಟಕದ ತಿಂಡಿಗಳು', 'ನಮ್ಮ ನಾಡಿನ ನರಿಗಳು', 'ಕನ್ನಡನಾಡಿನ ಬೆಕ್ಕುಗಳು', 'ತುಳಸಿ ಕಟ್ಟೆ ಮಹತ್ವ', 'ನಿಮಗೆ ಬೇವು ಗೊತ್ತೆ?' ಎನ್ನುತ್ತ ಅದನ್ನೇ ಕೆರೆಯುತ್ತ, ಮಾರುತ್ತ ಮುಂದೊಮ್ಮೆ ಕನ್ನಡನಾಡಿನ ಗ್ರಂಥಾಲಯಗಳನ್ನು ಚೆಡ್ಡಿಗಳ ರದ್ದಿ ತುಂಬಿದ ಗೋಡೌನ್ ಮಾಡಲಿದ್ದಾರಂತಲ್ಲಾ. ಇಂತಹ ಯಾವುದೇ ಅಪಾಯದ ಅರಿವಿರದ ಕನ್ನಡನಾಡಿನ ಸಾಹಿತಿಗಳು ಜೆ.ಡಿ.ಯು ಪಾರ್ಟಿಯ ಕಾರ್ಯಕರ್ತರಂತೆ ಕಾಲಹಾಕುತ್ತಿದ್ದಾರಂತಲ್ಲಾ, ಥೂತ್ತೇರಿ!

* * * *

ಚೆಡ್ಡಿಗಳ ಇಂತಹ ವಿರಾಟ್ ದರ್ಶನಕ್ಕೆ ಕಾರಣಕರ್ತರಾದ ಕುಮಾರಸ್ವಾಮಿಯವರನ್ನು ಮಾತನಾಡಿಸಿದರೆ ಹೇಗೆ ಎಂಬ ಆಲೋಚನೆ ಹೊಳೆಯಿತು. ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: 'ತಪ್ಪೂ ಮಾಡದೋರು ಯಾರವ್ರೇ ತಪ್ಪೇ ಮಾಡದವ್ರು ಎಲ್ಲವ್ರೇ... ತಪ್ಪೂ...'

"ಹಲೋ ಯಾರು?"

"ನಾನು ಸಾರ್ ಯಾಹೂ."

"ಏನ್ ಬ್ರದರ್, ಭಾಳ ದಿನ ಆಯ್ತು ಸಿಕ್ಕಿ. ಈ ಕಡೆ ಬರ್ಲೆಯಿಲ್ಲ ನೀವು."

"ನೀವೇ ಊರಲ್ಲಿರಲ್ಲ ಸಾರ್, ಎಲ್ಲೆಲ್ಲೊ ಹೋಯ್ತಿರಿ. ಹಂಗಾಗಿ ಸಿಗಲಿಲ್ಲ. ಫೋನಿಗೂ ಸಿಗಲಿಲ್ಲ"

"ಚುನಾವಣೆ ಹತ್ರ ಬರ್ತಾಯಿರಡರಿಂದ ನಾಲ್ಕಾರು ಕಡೆ ಪ್ರವಾಸ ಮಾಡಬೇಕಾಗುತ್ತೆ. ಅದ್ರಿಂದ ಸಿಗಲಿಲ್ಲ. ಆಮೇಲೆ ರಾಧಿಕನ ಮನೇಲಿದ್ರೆ ನಾನು ಫೋನ್ ತಗೊಳಲ್ಲ."

"ಯಾಕ್ ಸಾರ್?"

"ಯಾಕೆ ಅಂದ್ರೆ, ಮಗು ಎತ್ತಿಕೊಂಡಿರತಿನಿ. ಫೋನ್ ಎಲ್ಲೊ ಇರುತ್ತೆ, ಆಮೇಲೆ ನಮ್ಮ ಪಾರ್ಟಿ ಕಾರ್ಯಕರ್ತರೇನಿದಾರೆ, ಅವ್ರುರು ಫೋನ್ ಮಾಡಿ, ಯಾವು ಯಾವುದೊ ಬೇಡಿಕೆ ಸಲ್ಲಿಸುತಕ್ಕಂತ ಅಭ್ಯಾಸನ ಇಡತರೆ. ಅದ್ಕೆ ನಾನು ಫೋನ್ ತಗಳಲ್ಲಾ."

"ನಿಮ್ಮ ಕಾಲದ ಇಪ್ಪತ್ತು ತಿಂಗಳು ಚೆನ್ನಾಗಿತ್ತು ಸಾರ್. ಈಗ ಇಡೀ ಕರ್ನಾಟಕ ಸುಸ್ತು ಹೊಡದು ಕುಂತದೆ. ಏನು ಮಾಡದು ಸಾರ್?"

"ಏನಿಲ್ಲ ಪುನಃ ನಾವು ಬಂದು ಈಗ ನಡದಿರತಕ್ಕಂತ ಹಗರಣ ಏನಿದೆ, ಇವನ್ನೆಲ್ಲಾ ಸರಿಮಾಡ್ತಕಂತ ತೀರ್ಮಾನ ಏನಿದೆ, ಅದನ್ನ ಜೆ.ಡಿ.ಎಸ್. ಪಾರ್ಟಿ ಮಾಡ್ತಕಂತ ಒಂದು ನಿರ್ಧಾರಕ್ಕೆ ಬಂದಿದೆ."

## ಥೂತ್ತೇರಿ

ಯಾಹೂ

"ಹಗರಣ, ಅಕ್ರಮ ಆಸ್ತಿ ಇಂತವು ನಿಮ್ಮ ಕುಟುಂಬದಿಂದ್ಲೂ ನಡೆದಿದೆ ಅಂತಾರಲ್ಲಾ ಸಾರ್?"

"ಜನ ಬೇಕಾದಂಗೆ ಹೇಳ್ತರೆ. ಆದ್ರೆ ನ್ಯಾಯಾಲಯದಲ್ಲಿ ಅವು ಸಾಬೀತಾಗದೆ ನಾನು ನಿರ್ದೋಷಿಯಾಗಿ ನಿಮ್ಮ ಮುಂದೆ ಬಂದು ನಿಲ್ಲತಕ್ಕಂತ ತೀರ್ಮಾನ ಮಾಡಿದ್ದಿನಿ."

"ಸಾರ್, ಈಗ ನಿಮ್ಮ ಮೇಲಿನ ಭೂಹಗರಣ ಸುಳ್ಳು, ಅಕ್ರಮ ಡಿನೋಟಿಫಿಕೇಶನ್ ಸುಳ್ಳು, ಅಲ್ಲವ ಸಾರ್?"

"ಹಂಡ್ರೆಡ್ ಪರಸೆಂಟ್. ಬೇಕಾದ್ರೆ ಯಾವ ದೇವರ ಮುಂದಾದ್ರು ಪ್ರಮಾಣ ಮಾಡ್ತೀನಿ. ಬೇಕಾದ್ರೆ ನನ್ನ ವಿರೋಧಿಗಳು ಧರ್ಮಸ್ಥಳಕ್ಕೆ ಬರ್ಲಿ, ಅಲ್ಲೂ ಮಾಡ್ತೀನಿ."

"ನಿಮ್ಮ ತರನೆ ಎಡೂರಪ್ಪ ಈಶ್ವರಪ್ಪ ಇಂತವ್ರುರೆಲ್ಲ ಮಾತಾಡ್ತರಲ್ಲಾ... ಅದೂ ಸುಳ್ಳಾ ಸಾರ್?"

"ನಾನು ಬೇರೆಯವರ ಬಗ್ಗೆ ಮಾತನಾಡ್ತಕಂತ ಚಿಂತನೆ ಕೈಬಿಟ್ಟಿದ್ದೀನಿ. ಮುಂದೇನಿದ್ರು ನಮ್ಮ ಪಾರ್ಟಿ ಪವರಿಗೆ ತರಬೇಕು."

"ಮುಂದೆ ಮುಖ್ಯಮಂತ್ರಿಯಾದ್ರೆ ಏನು ಮಾಡ್ತಿರಿ ಸಾರ್?"

"ನೋಡಿ ಯಾಹು ಅವ್ರೆ, ಒಬ್ಬ ಮಣ್ಣಿನ ಮಗ ದೇವೇಗೌಡ್ರ ಮಗ ಆಗಿ, ಮಾಜಿ ಪ್ರಧಾನ ಮಂತ್ರಿ ಕುಟುಂಬದಿಂದ ಬಂದಿರತಕ್ಕಂತ ನಾನು, ರೈತರ ಋಣ ತೀರಸಬೇಕಾಗಿದೆ. ಅದ್ಕೆ ನಾನು ಮುಖ್ಯಮಂತ್ರಿಯಾದ ಮಾರನೆ ದಿನ ಅವ್ರುರ ಸಾಲನೆಲ್ಲಾ ಮನ್ನಾ ಮಾಡ್ತಿನಿ. ನಂತರ ಅವ್ರುರ ಬೆಳೆದ ಆಲೂಗಡ್ಡೆ ಈರುಳ್ಳಿ, ಮೂಲಂಗಿ, ಗೆಣಸು ಇತ್ಯಾದಿ ಬೆಳೆಗಳಿಗೆ ಸರಿಯಾದ ಬೆಲೆನ ನಿಗದಿ ಮಾಡ್ತಕಂತ ತೀರ್ಮಾನ ಕೈಗೊಳ್ಳತಿವಿ. ರೈತರಿಗೆ ನೀರಿನ ಸಮಸ್ಯೆ ಇರುವುದರಿಂದ ಕೊಳವೆಬಾವಿನ ಇನ್ನು ಆಳಕ್ಕೆ ತೋಡುಸ್ತಿವಿ. ಆಮೇಲೆ ಕರ್ನಾಟಕದ ಯಾವುದೇ ಭಾಗದಲ್ಲಿ ನೀರಿನ ಸಮಸ್ಯೆನೆ ಇಲ್ಲದಂಗೆ ಮಾಡ್ತಿನಿ."

"ಯಾವ ತರ ಮಾಡ್ತಿರಿ?"

"ನಮ್ಮ ನದಿಗಳು ಬೇರೆ ರಾಜ್ಯಕ್ಕೆ ಹೋಗದಂಗೆ ಮಾಡ್ತಿನಿ."

"ದೇವೇಗೌಡ್ರು ಅದಕ್ಕೆ ಒಪ್ಪಲ್ಲವಲ್ಲ ಸಾರ್?"

"ನಾನು ಒಪ್ಪುಸ್ತಿನಿ."

"ಸಾಧ್ಯವಿಲ್ಲ ಸಾರ್. ಹಿಂದೊಮ್ಮೆ ಜಯಲಲಿತ ನೀರು ಕೇಳಿದ್ಲು ಅಂತ ಬಹಿರಂಗವಾಗಿ ಕೊಡಲ್ಲ ಅಂದ್ರು. ಅಷ್ಟೇ ಅಲ್ಲ, ನೀರಿನ ಬದ್ಲು ರಕ್ತ ಹರಿಯುತ್ತೆ ಅಂದ್ರು. ಆದ್ರೆ ಅರ್ಧ ರಾತ್ರಿಲಿ ನೀರುಬಿಟ್ರು. ಕಾವೇರಿ ಸಮಸ್ಯೆನ ದೇವೇಗೌಡ್ರು ಮುಖ್ಯಮಂತ್ರಿಯಾಗಿ, ಪ್ರಧಾನಿಯಾಗಿ ಬಗೆಹರಿಸಲಿಲ್ಲ. ನೀವು ಮುಖ್ಯಮಂತ್ರಿಯಾದಾಗ್ಲು ಬಗೆಹರಿಸಲಿಲ್ಲ. ಈ ವಿಷಯದಲ್ಲಿ ನೀವು ಎಷ್ಟೇ ಮಾತಾಡಿದ್ರು ಆ ಮಾತುಗಳು ಶಬ್ದಗಳಂಗೆ ಕೇಳ್ತವೆ ಸಾರ್. ಜಾಸ್ತಿ ತಿರುಗಬೇಡಿ, ಜಾಸ್ತಿ ಭಾಷಣ ಮಾಡಬೇಡಿ. ನೀವು ದೇವೇಗೌಡರಷ್ಟು ಗಟ್ಟಿಯಲ್ಲ. ನೀವು ಏನೇ ಮಾಡಿದ್ರು ಇಪ್ಪತ್ತೈದು ಸೀಟು ಬತ್ತವೆ. ಮಾಡ್ದೇಯಿದ್ರೂ ಬತ್ತವೆ."

"ನಮ್ಮ ರಾಜಕಾರಣಕ್ಕೆ ಅಷ್ಟೇ ಸಾಕು."

"ನಿಜ ಸಾರ್. ಹೆಚ್ಚು ಕುಣಿಗಳದ್ರೆ ಅವ ಕಾಯಿದು ಕಷ್ಟ. ಇಪ್ಪತ್ತೈದಿದ್ರೆ ನಮ್ಮ ಕಣ್ಣೆಳತಲೆ ಇರುತವೆ."

"ಅದ್ಕೆ ನಮ್ಮ ಭಾಗಕ್ಕೆ ಇಪ್ಪತ್ತೈದು ಸಾಕು."

"ಥೂತ್ತೇರಿ!!!"


# ಹುಬ್ಬಳ್ಳಿ: ಇಸ್ಪೀಟ್ ಅಡ್ಡೆ ಡಿಸಿಪಿ ಪ್ರತಾಪನ್‌ಗೆ ಶಿಕ್ಷೆ ಇಲ್ಲವೇ?

ಹುಬ್ಬಳ್ಳಿಯ ಅಕ್ರಮ ದಂಧೆಗಳ ಇತಿಹಾಸದಲ್ಲೇ ಇಸ್ಪೀಟ್ ಅಡ್ಡೆಗೆ ಡಿಸಿಪಿಯೊಬ್ಬ ಬೇನಾಮಿ ಮಾಲೀಕನಾಗಿರುವ ಸುದ್ದಿ ಅವಳಿನಗರವನ್ನ ಬೆಚ್ಚಿ ಬೀಳಿಸಿತ್ತು. ಈ ಕುರಿತು ಎರಡು ವಾರಗಳ ಹಿಂದೆ ಈ ಸವಿಸ್ತಾರವಾದ ವರದಿಯನ್ನ ಜನರ ಮುಂದಿಟ್ಟು ಇಂತಹ ಅಕ್ರಮಗಳಿಂದಾಗುವ ಅನಾಹುತವನ್ನು ತಪ್ಪಿಸುವಂತೆ ಕಮೀಷನರ್ ಪದ್ಮನಯನರವರಿಗೆ ವಿನಂತಿಸಿತ್ತು.

ಆದರೆ ತನ್ನ ಸರ್ವೀಸಿನ ಅರ್ಧ ಭಾಗವನ್ನು ಅವಳಿನಗರದಲ್ಲೇ ಕಳೆದಿರುವ ಪ್ರತಾಪನ್ ಅಷ್ಟು ಸುಲಭದಲ್ಲಿ ಯಾವ ಅಧಿಕಾರಿಯ ಮಾತಿಗೂ ಬಗ್ಗುವವನಲ್ಲ. ಆದರೂ ಪದ್ಮನಯನ ಅವರು ಧೈರ್ಯ ಮಾಡಿ ಪ್ರತಾಪನ್‌ನನ್ನ ತಮ್ಮ ಕಚೇರಿಗೆ ಕರೆಯಿಸಿಕೊಂಡು ತಮ್ಮದೇ ಪೊಲೀಸ್ ಸ್ಟೈಲ್‌ನಲ್ಲಿ ಸರಿಯಾಗಿ ಉಗಿದಿದ್ದಾರೆ. ಅಷ್ಟೇ ಅಲ್ಲದೆ, ಹೆಡ್ ಕಾನ್‌ಸ್ಟೇಬಲ್ ಆಗಿದ್ದರೂ ಪ್ರತಾಪನನ ಇಸ್ಪೀಟ್ ಅಡ್ಡೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದ ಆತನ ಸಹೋದರ ಪರಶುರಾಮ ಕಾಳೆಯನ್ನು ಅಮಾನತುಗೊಳಿಸಿದ್ದಾರೆ ಪದ್ಮನಯನ ಅವರು.

ಪ್ರತಾಪನ್‌ನ ಅಕ್ರಮ ಇಸ್ಪೀಟ್ ಅಡ್ಡೆಯ ಸುದ್ದಿ ಹೊರಬೀಳುತ್ತಿದ್ದಂತೆ ಆತನ ಬುಡ ತರಗುಟ್ಟಲಾರಂಭಿಸಿತು. ಈ ಅಡ್ಡೆ ಹುಬ್ಬಳ್ಳಿ ಹೊರವಲಯದ ಕಲಘಟಗಿ ರೋಡಿನ ಚಳಮಟ್ಟಿ ಕ್ರಾಸ್ ಬಳಿ ತೋಟವೊಂದರಲ್ಲಿ ಗುಪ್ತವಾಗಿ ನಡೆಯುತ್ತಿತ್ತು. ಯಾವಾಗ ಇದೆಲ್ಲಿದೆ ಎಂದು ಬಹಿರಂಗವಾಯಿತೋ ಆತ ಅಲ್ಲಿ ಲಕ್ಷಾಂತರ ರೂಪಾಯಿಗಳ ಜೂಜಾಡುತ್ತಿದ್ದ ಖದೀಮ ಗ್ಯಾಂಬ್ಲರ್‌ಗಳು ಜಾಗ ಖಾಲಿ ಮಾಡಲಾರಂಭಿಸಿದರು. ಇದರಿಂದಾಗಿ ಪ್ರತಾಪನ್‌ನ ಖಾಸಗಿ ಕಮಾಯಿಗೆ ಹೊಡೆತ ಬಿತ್ತು.

ಕೈಗೆ ಸಲೀಸಾಗಿ ಬರುತ್ತಿದ್ದ ಆಮದನಿ ತಪ್ಪಲಾರಂಭಿಸಿದಾಗ ಪ್ರತಾಪನ್ ತನ್ನ ಇಸ್ಪೀಟ್ ಅಡ್ಡೆಯನ್ನು ಸ್ಥಳಾಂತರಿಸಿದ. ಈಗ ಅದು ಚಳಮಟ್ಟಿ ಕ್ರಾಸ್ ಹತ್ತಿರವೇ ಇರುವ ಶೆಡ್‌ವೊಂದರಲ್ಲಿ ನಡೆಯುತ್ತಿದೆ! ಹೀಗೆ ತನ್ನ


ಪ್ರತಾಪನ್


ಅಡ್ಡೆಯನ್ನು ಶಿಫ್ಟ್ ಮಾಡುವ ಮೂಲಕ ಅದು ಸೇಫ್ ಆಗಿದೆಯೆಂದೂ, ಅದರ ಮೇಲೆ ಪೊಲೀಸರ ರೇಡ್ ಆಗುವುದಿಲ್ಲವೆಂದೂ ಪಂಟರ್‌ಗಳಿಗೆ ಮನವರಿಕೆ ಮಾಡಲು ಯತ್ನಿಸುತ್ತಿದ್ದಾನೆ. ಅದರಲ್ಲಿ ಆತ ಒಂದಿಷ್ಟು ಯಶಸ್ಸು ಸಾಧಿಸಿರುವುದರಿಂದ ಈ ಹಿಂದೆ ತೋಟದ ಬಯಲಲ್ಲಿ ಇಸ್ಪೀಟ್ ಆಡುತ್ತಿದ್ದವರು ಈಗ ಶೆಡ್‌ವೊಂದರ ಲೈಟಿನ ಕೆಳಗೆ ಆಟವಾಡುತ್ತಿದ್ದಾರಷ್ಟೇ. ಇದು ಕಮೀಷನರ್ ಪದ್ಮನಯನ ಅವರ ಗಮನಕ್ಕೆ ಬರಲಿ.

### ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ

ತಿಂಗಳೊಂದಕ್ಕೆ ಕೋಟ್ಯಾಂತರ ರೂಪಾಯಿ ಆಮದನಿ ತಂದುಕೊಡುವ ಹೈಟೆಕ್ ಇಸ್ಪೀಟ್ ಅಡ್ಡೆಯ ಮಾಲೀಕ ಡಿಸಿಪಿ ಪ್ರತಾಪನ್‌ನೇ ಎಂಬುದು ಗೊತ್ತಿದ್ದರೂ ಇದಕ್ಕೆ ಸಂಬಂಧಿಸಿದಂತೆ ಕಮೀಷನರ್ ಪದ್ಮನಯನ ಅವರು ಪ್ರತಾಪನ್‌ನ ಅಕ್ರಮ ಅಡ್ಡೆಯ ಉಸ್ತುವಾರಿ ವಹಿಸಿಕೊಂಡಿದ್ದ ಕಾನ್‌ಸ್ಟೇಬಲ್ ಆದ ಪರಶುರಾಮ ಕಾಳೆಯನ್ನು ಅಮಾನತ್ತುಗೊಳಿಸಿ ಡಿಸಿಪಿ ಡ್ರೈವರ್ ಶ್ರೀನಿವಾಸನನ್ನು ಲಾ ಅಂಡ್ ಆರ್ಡರ್‌ಗೆ ವರ್ಗಾವಣೆ ಮಾಡಿರುವುದು ಒಂದರ್ಥದಲ್ಲಿ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತಾಗಿದೆ.

ಅಂದಹಾಗೆ, ಪರಶುರಾಮ ಕಾಳೆ ಖಾಕಿ ನೌಕರಿ ಮಾಡಿದ್ದಕ್ಕಿಂತ ಡಿಸಿಪಿ ಪ್ರತಾಪನ್‌ನ ಸೇವೆ ಮಾಡಿದ್ದೇ ಜಾಸ್ತಿ. ಪರಿಣಾಮವಾಗಿ ಸಿದ್ಧಾರೂಢ ಮಠದ ಹತ್ತಿರ ಆತ ಕಟ್ಟಿಸಿರುವ ಶಂಕರನಿಲಯ ಎಂಥವರೇ ಆದರೂ ನಿಂತು ನೋಡುವಂತಿದೆ. ಅಷ್ಟೇ ಅಲ್ಲ, ಪ್ರತಾಪನ್‌ನ ವಾಹನ ಚಾಲಕ ಶ್ರೀನಿವಾಸ ಕೂಡ ತಾನೇನು ಯಾರಿಗೂ ಕಡಿಮೆಯಿಲ್ಲ ಎಂಬುವಂತೆ ದುಡ್ಡು ಮಾಡಿದ್ದಾನೆ.

### ನಿವೃತ್ತಿಗೆ ಮೊದಲು ಇನ್ನಂಗೆ ಹೆಲ್ಪ್ ಬೇಕಂತೆ


ಪದ್ಮನಯನ

ಆಯುಕ್ತರಾಗಿ ಪದ್ಮನಯನ ಚಾರ್ಜ್ ತೆಗೆದುಕೊಳ್ಳುತ್ತಿದ್ದಂತೆ ಭರ್ತಿ ಆಮದನಿಯಲ್ಲಿ ತೇಲುತ್ತಿದ್ದ ಭ್ರಷ್ಟ ಅಧಿಕಾರಿಗಳ ಬಾಲ ಕಟ್ ಮಾಡಿ ಅವರಿಗೆಲ್ಲ ಬಿಸಿ ಮುಟ್ಟಿಸಿದ್ದರು.

ಇಸ್ಪೀಟ್ ಅಡ್ಡೆಯ ಮಾಲೀಕತ್ವ ಬಗ್ಗೆ ಗರಂ ಆದ ಪದ್ಮನಯನ ಅವರು ಪ್ರತಾಪನ್‌ಗೆ ಇಂತಹ ಹುಚ್ಚಾಟಗಳನ್ನೆಲ್ಲ ತಕ್ಷಣದಿಂದಲೇ ನಿಲ್ಲಿಸಬೇಕು, ಇಲ್ಲದಿದ್ದರೆ ಪರಿಣಾಮ ನೆಟ್ಟಗಿರಲ್ಲ ಎಂದು ಉಗಿದಿದ್ದಾರೆ. ಆದರೆ ಪ್ರತಾಪನ್ ಸಾಹೇಬರ ಬಿಕ್ಕಟ್ಟು ಬೇರೆಯದ್ದು. "ನಾನು ಬರುವ ಮಾರ್ಚ್ ಕೊನೆಯಲ್ಲಿ ನಿವೃತ್ತಿಯಾಗುತ್ತೇನೆ. ಅಲ್ಲಿಯವರೆಗೂ ನನಗೆ ರೂಲ್ಸ್‌ಗಳನ್ನು ರಿಲ್ಯಾಕ್ಸ್ ಮಾಡಿ. ನಾಲ್ಕು ಕಾಸು ದುಡಿದುಕೊಂಡು ಇಲಾಖೆಗೆ ಗುಡ್‌ಬೈ ಹೇಳುತ್ತೇನೆ" ಎಂದು ಬೇಡಿಕೊಂಡನಂತೆ. ಅಷ್ಟೇ ಅಲ್ಲ, ಕಮೀಷನರ್ ತನ್ನ ಬೇಡಿಕೆ ಒಪ್ಪದಿದ್ದರೆ "ಐಜಿಯಾದರೂ ಸರಿ, ಸಿಎಂ ಆದರೂ ಸರಿ. . . ಒಟ್ಟು ತಮ್ಮ ಬುಡಕ್ಕೆ ಬಿಸಿನೀರು ಬಿಡಿಸುತ್ತೇನೆ" ಎಂದು ಧಮಕಿ ಹಾಕಿದ್ದಾನಂತೆ ಈ ಭ್ರಷ್ಟ ಅಧಿಕಾರಿ!

### ಮಾಮೂಲಿ ದರದಲ್ಲಿ ಏರಿಕೆ

ಸಾಮಾನ್ಯವಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಡೀಸೆಲ್, ಪೆಟ್ರೋಲ್ ದರ ಏರಿಕೆ ಮಾಡಿದಾಗ ಅದನ್ನು ತಕ್ಷಣವೇ ಜಾರಿಗೆ ತರುತ್ತವೆ. ಮಾಮೂಲಿ ಸಂಗ್ರಹಿಸುವಲ್ಲೂ ಅದೇ ನಿಯಮವನ್ನು ಪ್ರತಾಪನ್ ಜಾರಿಗೆ ತಂದಿದ್ದಾನೆ. ಯಾವಾಗ ತನ್ನ ಇಸ್ಪೀಟ್ ಅಡ್ಡೆಗೆ ಕಮೀಷನರ್ ಅಡ್ಡಿಪಡಿಸಿದರೋ ಆಗ ಆಮದನಿಗಾಗಿ ಪರ್ಯಾಯ ದಾರಿ ಕಂಡುಕೊಳ್ಳಲು ಮುಂದಾದ ಪ್ರತಾಪನ್ ತನ್ನ ಲಿಮಿಟ್ಸಿನ ಎಲ್ಲಾ ಠಾಣೆಗಳಿಗೆ ಒಂದು ಸೂಚನೆ ನೀಡಿದ್ದಾನೆ. ಅದೇನೆಂದರೆ ಇನ್ನು ಮುಂದೆ ಮಟ್ಕಾ, ಬುಕ್ಕಿಗಳಿಂದ, ಮಾಂಸದಡ್ಡೆಗಳಿಂದ, ಇತರರಿಂದ ಸಿಗುತ್ತಿದ್ದ ಮಾಮೂಲಿಯನ್ನು ಏರಿಸಬೇಕೆಂಬುದು. ಇದರಿಂದಾಗಿ ಈಗ ಪ್ರತಿ ಠಾಣೆಯಿಂದ ಮಾಮೂಲಿ ದರದಲ್ಲಿ 10 ಸಾವಿರ ಏರಿಕೆಯಾಗಿದೆ.

ನಿಜವಾಗಲೂ ಕಮೀಷನರ್ ಪದ್ಮನಯನ ಅವರಿಗೆ ಅವಳಿನಗರದಿಂದ ಒಬ್ಬ ಉತ್ತಮ ಅಧಿಕಾರಿ ಎಂದು ಕರೆಯಿಸಿಕೊಳ್ಳುವ ಆಸೆ ಇದ್ದರೆ ಅವರು ತಕ್ಷಣ ಪ್ರತಾಪನ್ ತರಹದ ಭ್ರಷ್ಟರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮುಂದಾಗಬೇಕಿದೆ. ಇದು ಅವಳಿನಗರಿಗರ ಆಸೆ.


● ಹುರಳಿಕುಪ್ಪಿ ವಿನಯ

# ಚಕ್ರೆ ಪತ್ನಿಗೆ ಬಾಂಬ್ ನಾಗ ಧಮಕಿ ಬಾಂಬ್ ನಾಗನ ಮೇಲೆ ಗೂಂಡಾ ಕಾಯ್ದೆ

ಶ್ರೀರಾಂಪುರದ ಹಳೆಯ ಪಂಟರುಗಳಿಬ್ಬರ ಕಾಳಗ ಮತ್ತೆ ಭುಗಿಲೆದ್ದಿದೆ.

ಮಾಜಿ ಕೌನ್ಸಿಲರ್ ಕಮ್ ಹಳೇ ರೌಡಿ ಬಾಂಬ್ ನಾಗನನ್ನು ಶ್ರೀರಾಂಪುರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸಂಪತ್ ಗೂಂಡಾ ಕಾಯ್ದೆಯಡಿ ಬಂಧಿಸಿ ಪರಪ್ಪನ ಅಗ್ರಹಾರ ಜೈಲಿಗೆ ಸಾಗಿಸಿದ್ದಾರೆ. ಅಣ್ಣ ಬಾಂಬ್ ನಾಗನನ್ನು ಬಂಧಿಸಲು ಬಂದ ಪೊಲೀಸರ ಮೇಲೆ ದಾಳಿಗಿಳಿದ ನಾಗನ ತಮ್ಮ ಧರ್ಮ ಎಂಬ ಮತ್ತೊಬ್ಬ ರೌಡಿಗೂ ಪೊಲೀಸರಿಂದ ಸಮಾ ಒದೆ ಬಿದ್ದಿದೆ. ಬಂಧನವನ್ನು ಖಂಡಿಸಿ ಶ್ರೀರಾಂಪುರದಲ್ಲಿ ಹಿಂಸೆಗಿಳಿದ ನಾಗನ ಬೆಂಬಲಿಗರಿಗೂ ಪೊಲೀಸರು ಲಾಠಿ ರುಚಿ ತೋರಿಸಿದ್ದಾರೆ.





ಇದು ಶ್ರೀರಾಂಪುರದ ಹಳೇ ಪಂಟರ್ ಚಕ್ರೆ ಮತ್ತು ನಾಗನ ನಡುವಿನ ಹಳೇ ದುಷ್ಮನಿಯ ಲೇಟೆಸ್ಟ್ ಪರಿಣಾಮ. ಚಕ್ರೆಯ ಪತ್ನಿ ಕ್ವೀನ್ ಎಲಿಜಬೆತ್ ಸದ್ಯ ರಾಮಚಂದ್ರಪುರ ವಾರ್ಡಿನ ಕಾಂಗ್ರೆಸ್ ಕೌನ್ಸಿಲರ್. ಅದಕ್ಕೂ ಮುನ್ನ ನಾಗನ ಪತ್ನಿ ಲಕ್ಷ್ಮಿ ಅಲ್ಲಿಗೆ ಕೌನ್ಸಿಲರಾಗಿದ್ದಳು. ಕಳೆದ ಪಾಲಿಕೆ ಚುನಾವಣೆಯಲ್ಲಿ ರಾಮಚಂದ್ರಪುರ ವಾರ್ಡ್ ಪರಿಶಿಷ್ಟ ಮೀಸಲಿಗೊಳಪಟ್ಟಿದ್ದರಿಂದ ನಾಗ ಅಥವಾ ಚಕ್ರೆಯ ಪಾಲಿಗಿದು ಮುಗಿದಂತೆಯೇ ಲೆಕ್ಕ ಎಂಬುದು ಶಾಸಕ ದಿನೇಶ್ ಗುಂಡೂರಾವ್ ಷಡ್ಯಂತ್ರವಾಗಿತ್ತು. ಇನ್ನೂ ಹೇಳಬೇಕೆಂದರೆ ಚಕ್ರೆ ಮತ್ತು ನಾಗರನ್ನು ಮಟ್ಟಾ ಹಾಕಲೆಂದೇ ಶಾಸಕ ದಿನೇಶ್ ರಾಮಚಂದ್ರಪುರವನ್ನು ಪರಿಶಿಷ್ಟ ಕ್ಯಾಟಗರಿಗೆ ಒಳಪಡಿಸಿದ್ದರು.

ಎಮ್ಮೆಲ್ಲೆಯ ಈ ಷಡ್ಯಂತ್ರವನ್ನು ತಲೆಕೆಳಗೆ ಮಾಡಿದ್ದು ಚಕ್ರೆ ಪತ್ನಿ ಕ್ವೀನ್ ಎಲಿಜಬೆತ್ ಗಿಟ್ಟಿಸಿದ ಜಾತಿ ಸರ್ಟಿಫಿಕೇಟು. ತಾನು ಕೂಡ ಪರಿಶಿಷ್ಟ ಜಾತಿಯವಳೇ ಎಂದು ಅದೆಂಥದೋ ಜಾತಿ ಪ್ರಮಾಣಪತ್ರ ತಂದ ಚಕ್ರೆ ಪತ್ನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿ ಗೆದ್ದು ಕೌನ್ಸಿಲರಾಗಿದ್ದು ನಾಗನ ಹೊಟ್ಟೆಯೊಳಗೆ ಖಾರ ಕಲಸಿದಂತಾಯ್ತು.

ಅದೆಂಥ ಜಿದ್ದೋ ಗೊತ್ತಿಲ್ಲ. ಚಕ್ರೆ ಪತ್ನಿಗೆ ಜಾತಿಪತ್ರ ಕೊಡಿಸಿದ್ದೇ ಮಾಜಿ ಕೌನ್ಸಿಲರ್ ಗೋವಿಂದರಾಜು ಎಂದು ಭಾವಿಸಿದ ನಾಗ ಭಯಾನಕ ಹತ್ಯಾ ಯತ್ನಕ್ಕೆ ಕೈಯಿಟ್ಟ. ಬದುಕುಳಿದ ಗೋವಿಂದರಾಜು ಆರು ತಿಂಗಳ ಕಾಲ ಆಸ್ಪತ್ರೆಯಲ್ಲಿ ನರಳಿದ್ದಾಯ್ತು. ಅಲ್ಲಿಗೇ ನಾಗನ ಜಿದ್ದು ತಣಿಯಲಿಲ್ಲ. ಚಕ್ರೆ ಪತ್ನಿಯ ಜಾತಿ ಸರ್ಟಿಫಿಕೆಟ್ಟೇ ನಕಲಿಯೆಂದು ಕೇಸು ಹಾಕಿದ. ಜಿಲ್ಲಾಧಿಕಾರಿಗಳು ಅದನ್ನು ರದ್ದು ಪಡಿಸುವಂತೆ ಮಾಡಿದ. ಜಿಲ್ಲಾಧಿಕಾರಿಗಳ ಆದೇಶದ ವಿರುದ್ಧ ಚಕ್ರೆ ಹೈಕೋರ್ಟ್ ಮೆಟ್ಟಿಲೇರಿದನಾದರೂ ನಾಗನ ಹಾವಳಿ ನಿಲ್ಲಲಿಲ್ಲ.

ಪದೇಪದೇ ಚಕ್ರೆ ಪತ್ನಿಗೆ ಫೋನ್ ಮಾಡಿ ಧಮಕಿಕೊಟ್ಟು ಚಕ್ರೆಯನ್ನೇ ಮುಗಿಸ್ತೀನಿ ಎಂದೂ ಓಡಾಡಿಕೊಂಡಿದ್ದ. ಬಹುಶಃ ಬಿಜೆಪಿ ನಾಯಕ ಮತ್ತು ಸಂಸದ ಪಿ.ಸಿ.ಮೋಹನ್ ಪಾಳೆಯದಲ್ಲೇ ಉಳಿದಿದ್ದರೆ ನಾಗ ಬಚಾವಾಗುತ್ತಿದ್ದನೇನೊ. ಸುಮ್ಮನಿರದೆ ಇರುವೆ ಬಿಟ್ಟುಕೊಂಡ ಎಂಬಂತೆ ಇತ್ತೀಚೆಗೆ ಗಣಿಕಳ್ಳರ ಬಿಎಸ್‌ಆರ್ ಕಾಂಗ್ರೆಸ್ ಪಕ್ಷವನ್ನು ಸೇರಿಕೊಂಡ. ಇದೇ ಹೊತ್ತಿಗೆ ನಾಗನನ್ನು ಗೂಂಡಾ ಕಾಯ್ದೆಯಡಿ ಬಂಧಿಸುವ ಪೊಲೀಸರ ಅರ್ಜಿಯೂ ಕಮೀಶನರ್ ಟೇಬಲ್ಲಿಗೆ ಬಂದಿದೆ. ಕಾಕತಾಳೀಯವಾಗಿ ನಾಗನ ವಿರುದ್ಧ ಗೂಂಡಾಕಾಯ್ದೆ ಪ್ರಯೋಗಿಸಿದ ಇನ್‌ಸ್ಪೆಕ್ಟರ್ ಸಂಪತ್ ಬಂಧಿಸದೇಹೋದರೆ ಶ್ರೀರಾಮಪುರಕ್ಕೇ ಬೆಂಕಿ ಹಚ್ಚಲು ನಾಗನ ಗ್ಯಾಂಗ್ ಅಣಿಯಾಗಿದೆ.

ಮೊದಲೇ ಲೆಕ್ಕ ಹಾಕಿದ್ದ ಪೊಲೀಸರಿಗೆ ನಾಗನ ಗ್ಯಾಂಗ್ ಅಟ್ಟಹಾಸ ಯಾವ ಲೆಕ್ಕ?

ನಾಗ ಸದ್ಯ ಪರಪ್ಪನ ಅಗ್ರಹಾರ ಜೈಲಲ್ಲಿ ಕಂಬಿ ಎಣಿಸುತ್ತಿದ್ದರೆ ಮತ್ತೊಬ್ಬ ಪಂಟರ್ ಚಕ್ರೆ ಕತ್ತಿ ಮಸೆಯುತ್ತಿದ್ದಾನೆ. ಎಮ್ಮೆಲ್ಲೇ ದಿನೇಶ್ ಗುಂಡೂರಾವ್ ಮಾತ್ರ ಮನಸ್ಸಲ್ಲೇ ನಕ್ಕಿರಬೇಕು.

● ರಾ.ಸೋ

# ಒವೈಸಿ ಉಗ್ರ ಭಾಷಣ ಇದೊಂದು ಬೇಕು-ಬೇಡಗಳ ಸಮಸ್ಯೆ

ಆಂಧ್ರ ಪ್ರದೇಶದ ಮುಸ್ಲಿಂ ಸಮುದಾಯದ ನಾಯಕ ಅಕ್ಬರುದ್ದೀನ್ ಒವೈಸಿಯ ಬಾಯಿ ಮುಚ್ಚಿಸುವಲ್ಲಿ ಸದ್ಯದ ಮಟ್ಟಿಗೆ ಅಲ್ಲಿನ ಪೊಲೀಸರು ಯಶಸ್ವಿಯಾಗಿದ್ದಾರೆ.

ಒವೈಸಿಗೆ ಈಗ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಸಾವಿರಾರು ಜನರನ್ನು ಒಂದೆಡೆ ಸೇರಿಸಿ ಪ್ರಚೋದನಾಕಾರಿಯಾದ ಅತ್ಯುಗ್ರ ಭಾಷಣವೊಂದನ್ನು ಒವೈಸಿ ಮಾಡಿರುವುದು ನಿಜ. ಅದೆಷ್ಟು ಪ್ರಚೋದನಾಕಾರಿ, ಸಾರ್ವಜನಿಕ ಶಾಂತಿ ಭಂಗ ಹಾಗೂ ಕೋಮುದ್ವೇಷ ಹಬ್ಬಿಸುವ ಮಾತುಗಳಾಗಿದ್ದವೆಂಬುದು ಮುಂದಿನ ನ್ಯಾಯಾಲಯದ ವಿಚಾರಣೆಯಲ್ಲಿ ನಿರೂಪಿತವಾಗಲಿದೆ.



ಆದರೆ

ತನ್ನ ಎರಡು ಗಂಟೆಗಳ ದೀರ್ಘ ಭಾಷಣದಲ್ಲಿ ಒವೈಸಿ ಕೇವಲ ಹಿಂದೂಗಳ ಮೇಲೆ ದ್ವೇಷ ಕಾರುವ ಮಾತುಗಳನ್ನು ಮಾತ್ರ ಆಡಿದನೆ? ಆತನ ಎಲ್ಲಾ ಮಾತುಗಳು ಪ್ರಚೋದನಕಾರಿಯಾಗಿದ್ದವೆ?

ಈ ಪ್ರಶ್ನೆಗಳಿಗೆ ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಉತ್ತರ ಸಿಗುತ್ತಿಲ್ಲ!

"ಇಂಡಿಯಾದ ಇಪ್ಪತ್ತೈದು ಕೋಟಿ ಮುಸ್ಲಿಮರು ಹೇಡಿಗಳಲ್ಲ, ಈ ದೇಶದ ಪೊಲೀಸರು ಬರಿ ಹದಿನೈದು ನಿಮಿಷ ಸುಮ್ಮನಾಗಿಬಿಡಲಿ ಆಗ ನಮ್ಮ ತಾಕತ್ತೇನೆಂಬುದನ್ನು ಉಳಿದ ಹಿಂದೂಗಳಿಗೆ ತೋರಿಸುತ್ತೇವೆ."

-ಇದು ಒವೈಸಿ ಆಡಿರುವ ಕೆಟ್ಟ ಮಾತುಗಳು. ಇದು ಅತ್ಯಂತ ಅಪಾಯಕಾರಿ, ಮತಿಹೀನ ಮಾತುಗಳೂ ಹೌದು.

ಈ ದುಡುಕಿನ ಮಾತುಗಳ ಪರಿಣಾಮಗಳನ್ನು ಒವೈಸಿ ಈಗ ಅನುಭವಿಸುತ್ತಿದ್ದಾನೆ. ಆದರೆ ಅಂದಿನ ಅದೇ ಭಾಷಣದಲ್ಲಿ ಆರೆಸ್ಸೆಸ್, ವಿಶ್ವಹಿಂದೂ ಪರಿಷತ್ ಬಗ್ಗೆ, ಅಮೆರಿಕವು ವಿಶ್ವದೆಲ್ಲೆಡೆ ನಡೆಸುತ್ತಿರುವ ಭಯೋತ್ಪಾದನೆಯ ಬಗ್ಗೆ, ಇಂಡಿಯಾದ ಪೊಲೀಸರ ಮುಸ್ಲಿಂ ವಿರೋಧ ಹಾಗೂ ಹಿಂದೂ ಕೋಮುವಾದಿಗಳ ಪರವಾದ ತಾರತಮ್ಯಗಳ ನೀತಿಗಳ ವಿರುದ್ಧವೂ ಒವೈಸಿ ಕೆಂಡ ಕಾರಿದ್ದಾನೆ.

ಇಂಡಿಯಾ ದೇಶದ ಅತ್ಯಂತ ಶ್ರೀಮಂತ ಮುಸ್ಲಿಂ ಕುಟುಂಬಗಳಲ್ಲಿ ಒಂದಾಗಿರುವ ಒವೈಸಿಗಳಿಗೆ ಆಂಧ್ರ ಪ್ರದೇಶದ ಉದ್ದಗಲಕ್ಕೂ ಶಿಕ್ಷಣ ಸಂಸ್ಥೆಗಳು, ಪತ್ರಿಕೆ, ಆಸ್ಪತ್ರೆ, ಉದ್ದಿಮೆಗಳು, ಸಾರ್ವಜನಿಕ ಸೇವಾಸಂಸ್ಥೆಗಳಿವೆ. ಈ ಕುಟುಂಬದ ಒಟ್ಟು ಆಸ್ತಿ ಮೌಲ್ಯ ಎರಡು ಸಾವಿರ ಕೋಟಿ ರೂಪಾಯಿಯಷ್ಟಿರಬಹುದು. ಹಳೆ ಹೈದರಾಬಾದ್ ನಗರವನ್ನು ಸಂಪೂರ್ಣ ನಿಯಂತ್ರಣದಲ್ಲಿಟ್ಟುಕೊಂಡಿರುವ ಒವೈಸಿ ಕುಟುಂಬ ಅರ್ಥಾತ್ ಎಂಐಎಂ ಪಾರ್ಟಿಯು ಭಾರತೀಯ ಸಾಮಾನ್ಯ ಮುಸ್ಲಿಮರ ಸದ್ಯದ ಮನಸ್ಥಿತಿಯ ಪ್ರತಿನಿಧಿಯಂತೆ ಕಾಣುತ್ತಿದೆ. ಅಲ್ಲದೆ ಆಲ್ ಇಂಡಿಯಾ ಮಜ್ಲೀಸ್-ಎ-ಇತ್ತಿಹಾದ್ ಆಲ್ ಮುಸ್ಲಿಮೀನ್ ಪಕ್ಷದ ಹಿನ್ನೆಲೆ, ಬೆಳೆದುಬಂದ ರೀತಿ, ಹಾಲಿ ಹೊಂದಿರುವ ರಾಜಕೀಯ ಶಕ್ತಿ ಇವೆಲ್ಲಾ ಕುತೂಹಲಕಾರಿಯಾಗಿವೆ.

ಈಗ ಬಂಧಿತ ಅಕ್ಬರುದ್ದೀನ್ ಒವೈಸಿ ಎಂಐಎಂ ಪಾರ್ಟಿಯ ಶಾಸಕನಾಗಿ ಆಂಧ್ರ ವಿಧಾನಸಭೆಯಲ್ಲಿದ್ದಾನೆ. ಆತನೊಂದಿಗೆ ಎಂಐಎಂನ ಇನ್ನು ಆರು ಶಾಸಕರಿದ್ದಾರೆ. ಅಕ್ಬರನ ಅಣ್ಣ ಅಸಾಉದ್ದೀನ್ ಒವೈಸಿ ಹೈದರಾಬಾದ್‌ನಿಂದ ಸಂಸತ್ ಸದಸ್ಯನಾಗಿದ್ದಾನೆ. ಹೈದರಾಬಾದ್ ಸಿಟಿ ಕಾರ್ಪೋರೇಷನ್‌ನ ಮೇಯರ್ ಮೊಹಮದ್ ಮಜೀದ್ ಹುಸೇನ್ ಕೂಡಾ ಎಂಐಎಂ ಪಕ್ಷದವನೆ. ಇದಲ್ಲದೆ ಆಂಧ್ರದಾದ್ಯಂತ ಸ್ಥಳೀಯ ಸಂಸ್ಥೆಗಳಿಗೆ ನೂರಾರು ಜನ ಎಂಐಎಂನ ಸದಸ್ಯರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಅಲ್ಲಿನ ಮುಸ್ಲಿಂ ಬಾಹುಳ್ಯವಿರುವ ಸಾವಿರಾರು ಹಳ್ಳಿಗಳಲ್ಲಿ ಎಂಐಎಂನ ಬಾವುಟಗಳು, ಗೋಡೆ ಬರಹಗಳು ಕಾಣಸಿಗುತ್ತವೆ.

ಇವರೆಲ್ಲರಿಗೂ ಎಂಐಎಂ ಅಂದರೆ ಮುಸ್ಲಿಮರ ಸಂಸ್ಕೃತಿಗಾಗಿಯೇ ಹುಟ್ಟಿಕೊಂಡಿರುವ ಒಂದು ಚಾಂಪಿಯನ್ ಪೊಲಿಟಿಕಲ್ ಪಾರ್ಟಿ ಎಂತಲೇ ನಂಬಿಕೆ ಬೆಳೆದಿದೆ. ಆ ನಂಬಿಕೆಗೂ ಒಂದು ಪರಂಪರೆಯಿದೆ. ಅಕ್ಬರುದ್ದೀನ್ ಹಾಗೂ ಅಸಾಉದ್ದೀನ್ ಒವೈಸಿಯ ಅಪ್ಪ ಸುಲ್ತಾನ್ ಸಲಾಉದ್ದೀನ್ ಒವೈಸಿ ನಾಲ್ಕು ದಶಕಗಳ ಕಾಲ ಸಂಸತ್ ಸದಸ್ಯರಾಗಿ, ಶಾಸಕರಾಗಿ ಇದ್ದಾತ. ಆತನನ್ನು ಎಲ್ಲರೂ 'ಸಾಲಾರ್' (ಕಮಾಂಡರ್) ಎಂತಲೇ ಕರೆಯುತ್ತಿದ್ದರು. ಇನ್ನು ಈ ಸಾಲಾರ್‌ನ ಅಪ್ಪ ಅಬ್ದುಲ್ ವಹಾಬ್ ಒವೈಸಿ ಆಗಿನ ಹೈದರಾಬಾದ್‌ನ ಪ್ರಸಿದ್ಧ ಲಾಯರ್ ಆಗಿದ್ದ.

ಜೊತೆಗೆ

ರಜಾಕಾರ್ ಮೂವ್‌ಮೆಂಟಿನ ನಾಯಕನೂ ಹೌದು.

### ಎಂಐಎಂ ಹಿನ್ನೆಲೆ

1927 ರಲ್ಲಿ ಅಸ್ತಿತ್ವಕ್ಕೆ ಬಂದಾಗ ಇದು ಇತ್ತಿಹಾದ್ ಬೈನೂಲ್ ಮುಸ್ಲಿಮಿನ್ ಎಂಬ ಹೆಸರು ಹೊಂದಿತ್ತು, ಮುಸ್ಲಿಂ ಸಮುದಾಯದ ಶಿಕ್ಷಣ ಹಾಗೂ ಅಭಿವೃದ್ಧಿಯ ಉದ್ದೇಶ ಹೊಂದಿದ್ದ ಈ ಸಂಘಟನೆಯು ನಂತರದ ಸ್ವಾತಂತ್ರ ಚಳವಳಿಯಲ್ಲಿ ಮುಸ್ಲಿಂ ಲೀಗ್ ಜೊತೆ ಮೈತ್ರಿ ಹೊಂದಿತ್ತು, ಭಾರತವನ್ನು ವಿಭಜಿಸಿ, ಪ್ರತ್ಯೇಕ ಪಾಕಿಸ್ತಾನ ದೇಶ ಸ್ಥಾಪನೆಯ ಪರವಾಗಿಯೂ ಕೆಲಕಾಲ ಪ್ರಚಾರಾಂದೋಲನ ನಡೆಸಿತ್ತು, ಬಹಳ ಮುಖ್ಯವಾಗಿ ಈ ಗುಂಪು ಹೈದರಾಬಾದ್ ನಿಜಾಮನ ಕೃಪಾಶ್ರಯ ಹೊಂದಿತ್ತು, ಮುಸ್ಲಿಂ ಪಾಳೆಗಾರಿಕೆಯ ಹಾಗೂ ಅರಿಸ್ಟೋಕ್ರಸಿಯ ಉನ್ನತ ವಲಯದ ನಾಯಕತ್ವದ ಈ ಸಂಘಟನೆಯು 1947 ರಲ್ಲಿ ಭಾರತಕ್ಕೆ ಸ್ವಾತಂತ್ರ ಬಂದಾಗ ಸಂಕುಚಿತ ಹಾಗೂ ಅಪಕ್ವ ನಿಲುವನ್ನು ತಳೆಯಿತು. ನಿಜಾಂನ ಸಂಸ್ಥಾನವು ಭಾರತ ಒಕ್ಕೂಟದೊಳಗೆ ಸೇರುವ ಅಗತ್ಯವಿಲ್ಲವೆಂತಲೂ, ತಮಗೆ ನಿಜಾಮನೇ ರಾಜವಾಗಿ, ಸರ್ಕಾರವಾಗಿ ಇರಬೇಕೆಂತಲೂ ಇವರು ಹಟ ಮಾಡಿದರು. ಮತ್ತೊಂದೆಡೆ ಇತ್ತ ಮೈಸೂರು ಸಂಸ್ಥಾನದ ದೊರೆ ಜಯಚಾಮರಾಜೇಂದ್ರ ಒಡೆಯರ್ ಕೂಡ ಅಧಿಕಾರದ ದುರಾಸೆಯಿಂದ ತಾನೂ ಭಾರತದ ಒಕ್ಕೂಟ ಸೇರಲಾರೆ ಎಂದಿದ್ದ. ಆದರೆ ಇಲ್ಲಿ 1947 ರ ಸೆಪ್ಟೆಂಬರ್‌ನಲ್ಲಿ 'ಮೈಸೂರ್ ಚಲೋ' ಆಂದೋಲನ ಶುರುವಾಗಿ ಜನ ಪ್ರತಿಭಟಿಸಿದ್ದರಿಂದ ಒಡೆಯರ್ ತನ್ನ ನಿಲುವು ಬದಲಿಸಿ ಅಧಿಕಾರ ಬಿಟ್ಟುಕೊಟ್ಟ. ಅತ್ತ ಹೈದರಾಬಾದ್‌ನಲ್ಲಿ ಈ ಪ್ರಕ್ರಿಯೆ ಸರಳವಾಗಿ ಮುಗಿಯದೆ ರಕ್ತಪಾತವೇ ಆಗಿ ಹೋಯಿತು. ಎಂಐಎಂನ ಆಗಿನ ಸಂಘಟನೆಯು ನಿಜಾಂ ಸರ್ಕಾರದ ರಕ್ಷಣೆಗಾಗಿ ರಜಾಕಾರರ ಒಂದು ರಕ್ಕಸ ಪಡೆಯನ್ನೇ ಹುಟ್ಟುಹಾಕಿತು. ಈ ಗುಂಪು ಕೇವಲ ನಿಜಾಂ ಪರ ಹಾಗೂ ಭಾರತ ಸರ್ಕಾರದ ವಿರುದ್ಧ ಮಾತ್ರವಾಗಿರದೆ ಆಂಧ್ರ ಮಹಾಸಭಾದ ಏಕೀಕರಣದ, ಆಂಧ್ರ ರಾಜ್ಯ ಸ್ಥಾಪನೆಯ ವಿರುದ್ಧವಾಗಿಯೂ ಇತ್ತು, ನಿಜಾಂನ ಪಾಳೇಗಾರಿಕೆಯ, ಭೂಮಾಲೀಕ ಪೋಷಿತ ವ್ಯವಸ್ಥೆಯ ವಿರುದ್ಧ ಸಶಸ್ತ್ರ ಬಂಡಾಯ ನಡೆಸುತ್ತಿದ್ದ ಕಮ್ಯುನಿಸ್ಟರ ವಿರುದ್ಧ ವೈರ ಸಾಧಿಸಿತು. ಕೊನೆಗೆ ಆಗಿನ ಆರ್ಯ ಸಮಾಜದ ಸಾಮಾಜಿಕ ಸುಧಾರಣವಾದ ನಿಲುವುಗಳನ್ನು ಎಂಐಎಂ ಪ್ರಬಲವಾಗಿ ವಿರೋಧಿಸಿತ್ತು.

ಸಾರಾಂಶದಲ್ಲಿ ಹೇಳಬೇಕೆಂದರೆ ಎಂಐಎಂ ಮುಸ್ಲಿಂ ಆಳುವ ವರ್ಗಗಳ, ಶ್ರೀಮಂತ ಭೂಮಾಲೀಕ ಹಾಗೂ ಪ್ರಭಾವಶಾಲಿ ಆಸ್ಥಾನಿಕರ ಹಿತಾಸಕ್ತಿ ಕಾಪಾಡುವ ಒಂದು ಮುಸ್ಲಿಂ ಮಿಲಿಟೆಂಟ್ ಸಂಘಟನೆಯಾಗಿ ಬೆಳೆಯುತ್ತಾ ಬಂತು.

ಅದು ಜನರ ಬೆಂಬಲ ಪಡೆಯಲು, ಸಂಘಟನೆಯನ್ನು ಬಲಪಡಿಸಿಕೊಳ್ಳಲು ಇಸ್ಲಾಂ ಧರ್ಮವನ್ನು ಒಂದು ಮುಸ್ಲಿಂ ಪ್ರಬಲ ಅಸ್ತ್ರವಾಗಿ ಬಳಸಿಕೊಳ್ಳುತ್ತಾ ಬಂತು.

1948 ರಲ್ಲಿ ಭಾರತ ಸರ್ಕಾರ ನಡೆಸಿದ 'ಹೈದರಾಬಾದ್ ವಿಮೋಚನಾ ಕಾರ್ಯಾಚರಣೆ'ಯಲ್ಲಿ ನಿಜಾಂನ ಪರವಾಗಿ ಒಂದೂವರೆ ಲಕ್ಷದಷ್ಟು ರಜಾಕಾರರ ಪಡೆ ಪ್ರತಿರೋಧಿಸಿತಾದರೂ ನಿಜಾಂ ಶರಣಾದ. ಆ ಸಂಘರ್ಷದಲ್ಲಿ ರಜಾಕಾರರ ದಾಳಿಗೆ ಸಿಲುಕಿ ಸಾವಿರಾರು ಜನ ಹತರಾದರು. ಆನಂತರ ಭಾರತೀಯ ಪೊಲೀಸರೂ ಸಾವಿರಾರು ಮುಸ್ಲಿಮರನ್ನು ನಿರ್ದಯವಾಗಿ ಕೊಂದು ಹಾಕಿದರು. ಅಷ್ಟೇ ಅಲ್ಲ, ಹೈದರಾಬಾದ್ ವಿಮೋಚನೆಯ ನೆಪದಲ್ಲಿ ಮಿಲಿಟರಿ ಕಾರ್ಯಾಚರಣೆ ನಡೆಸಿದ ಕಾಂಗ್ರೆಸ್ ಸರ್ಕಾರ ಭೂಹೋರಾಟಕ್ಕೆ ನಾಯಕತ್ವ ನೀಡಿದ್ದ ಸಾವಿರಾರು ಕಮ್ಯುನಿಸ್ಟರನ್ನು ಕೊಂದು ಮುಗಿಸಿಯೇ ಬ್ಯಾರಕ್ಕಿಗೆ ಮರಳಿತ್ತು.

ಆಗ ನವಾಬ್ ಮೊಹಮದ್ ಬಹಾದೂರ್ ಖಾನ್ ನಕ್ವಿ ಎಂಎಂಎಂನ ನಾಯಕನಾಗಿದ್ದ. 1948 ರಲ್ಲಿ ಅವನನ್ನು ಅರೆಸ್ಟ್ ಮಾಡಿ 1957 ರ ತನಕ ಪೂನಾ ಜೈಲಿನಲ್ಲಿಡಲಾಯಿತು. ಕೊನೆಗೊಂದು ದಿನ ಪಾಕಿಸ್ತಾನಕ್ಕೆ ಕಾಯಂ ಆಗಿ ಹೋಗುವುದಾದರೆ ಮಾತ್ರ ಬಿಡುಗಡೆ ಎಂಬ ಷರತ್ತು ವಿಧಿಸಿ ಜೈಲಿನಿಂದ ಹೊರಬಿಡಲಾಯಿತು. ಇದಕ್ಕೆ ಸಮ್ಮತಿಸಿದ ನಕ್ವಿ ವಕೀಲ ಹಾಗೂ ಉರ್ದು ವಿದ್ವಾಂಸ ಅಬ್ದುಲ್ ವಹಾಬ್ ಒವೈಸಿಯನ್ನು ಸಂಘಟನೆಯ ಅಧ್ಯಕ್ಷನನ್ನಾಗಿಸಿ ಪಾಕಿಸ್ತಾನಕ್ಕೆ ಹೊರಟುಹೋದ. ಈ ವಹಾಬ್ ಬದಲಾಗುತ್ತಿರುವ ಸ್ಥಿತಿಗತಿಗಳನ್ನು ಕೊಂಚ ಅರ್ಥಮಾಡಿಕೊಂಡು ಎಂಐಎಂನ ಸಂಘಟನೆ ಹಾಗೂ ನಿಯಮಗಳನ್ನು ಕೊಂಚ ಬದಲಿಸಿ ನವಭಾರತದ ಸಂವಿಧಾನಕ್ಕೆ ಹೊಂದಿಕೊಂಡು ಹೋಗುವಂತಹ ಹೊಸ ಆಶೋತ್ತರಗಳನ್ನು ಸೇರಿಸಿದ. ಆದರೂ ಸರ್ಕಾರ ಅವನನ್ನು ಬಿಡದೆ 1958 ರಲ್ಲಿ ಬಂಧಿಸಿ ಕಾಚಿಗುಡಾ ಜೈಲಿನಲ್ಲಿ ಇರಿಸಿತು. ಆಗ ವಹಾಬ್ ತನ್ನ ಮಗ ಸುಲ್ತಾನ್ ಸಲಾಉದ್ದೀನ್ ಒವೈಸಿಯನ್ನೇ ಎಂಐಎಂನ ಅಧ್ಯಕ್ಷನನ್ನಾಗಿ ನೇಮಿಸಿ ಜೈಲಿಗೆ ಹೋದ.



ಅಕ್ಬರುದ್ದೀನ್

ಅಷ್ಟರಲ್ಲಿ ಒಂದು ಬಲಿಷ್ಠ ಸಂಘಟನೆಯಾಗಿ ಬೆಳೆದಿದ್ದ ಎಂಐಎಂ ಚುನಾವಣಾ ರಾಜಕೀಯಕ್ಕೂ ಇಳಿಯಿತು. ಹೈದರಾಬಾದ್ ಮುನಿಸಿಪಲ್ ಚುನಾವಣೆಗೆ ಸ್ಪರ್ಧಿಸಿ ಬಹುಮತ ಗಳಿಸಿ ಅಧಿಕಾರಕ್ಕೂ ಬಂತು. ಇದನ್ನು ಸಹಿಸದ ಕಾಂಗ್ರೆಸ್ ಸರ್ಕಾರ ಸಿಕಂದರಾಬಾದ್ ನಗರವನ್ನು ಹೈದರಾಬಾದ್ ಮುನಿಸಿಪಾಲಿಟಿಯ ವ್ಯಾಪ್ತಿಗೆ ಸೇರಿಸಿ ಮುಸ್ಲಿಮರ ಕೈಗೆ ಅಧಿಕಾರ ಸಿಗದಂತೆ ಪಿತೂರಿ ಮಾಡಿ ಯಶಸ್ವಿಯಾಯಿತು. ಆದರೂ ಇದರಿಂದೇನೂ ಎಂಐಎಂನ ಶಕ್ತಿ ಕಡಿಮೆಯಾಗಲಿಲ್ಲ. ಸಲಾಉದ್ದೀನ್ ಒವೈಸಿ ಏಕಕಾಲದಲ್ಲಿ ಶಾಸಕನಾಗಿ ಹಾಗೂ ಹೈದರಾಬಾದ್ ಮುನಿಸಿಪಾಲಿಟಿಯ ವಿರೋಧ ಪಕ್ಷದ ನಾಯಕನಾಗಿ ರಾಜಕೀಯದಲ್ಲಿ ಮುಂದುವರೆದ. ನಂತರ ಹೈದರಾಬಾದ್‌ನಿಂದಲೇ ಸ್ಪರ್ಧಿಸಿ ಗೆದ್ದು ಸಂಸತ್‌ಗೂ ಹೋದ. ಆತ ಸಾಯುವವರೆಗೂ ಯಾವ ಪಕ್ಷಕ್ಕೂ ಆತನನ್ನು ಸೋಲಿಸಲಾಗಲಿಲ್ಲ, 1983 ರಲ್ಲಿ ಆಂಧ್ರದಲ್ಲಿ ರಾಜಕೀಯ ಬಿರುಗಾಳಿ ಎಬ್ಬಿಸಿ ಗೆದ್ದು ಅಧಿಕಾರ ಹಿಡಿದ ಎನ್‌ಟಿಆರ್‌ನ ತೆಲುಗು ದೇಶಂ ಪಕ್ಷವೂ ಹೈದರಾಬಾದ್‌ನಲ್ಲಿ ಎಂಐಎಂನ ಎದುರು ದುರ್ಬಲವಾಗಿತ್ತು. 1970 ರಲ್ಲಿ ಆರ್‌ಎಸ್‌ಎಸ್‌ನವರು ಕಾಂಗ್ರೆಸ್ ಸಹಕಾರರೊಂದಿಗೆ ಹೈದರಾಬಾದ್‌ನಲ್ಲಿ ಒಂದು ಅತಿದೊಡ್ಡ ಹಿಂದೂ-ಮುಸ್ಲಿಂ ಗಲಭೆ ಸೃಷ್ಟಿಸಿ ಸಾವಿರಾರು ಮುಸ್ಲಿಮರ ಹತ್ಯೆ ಮಾಡಿಸಿದರು. ಆಗ ಅಸಹಾಯಕ ಮುಸ್ಲಿಮರ ನೆರವಿಗೆ ನಿಂತು ರಕ್ಷಿಸಿದ್ದೇ ಎಂಐಎಂ ಕಾರ್ಯಕರ್ತರು.

ಆಗಲೇ ಸಲಾಉದ್ದೀನ್ ಒವೈಸಿ "ಸರ್ಕಾರ ಮುಸ್ಲಿಮರ ಕೈಬಿಟ್ಟಿದೆ. ಇನ್ನು ಮೇಲೆ ನಾವೇ ನಮ್ಮ ರಕ್ಷಣೆ ಮಾಡಿಕೊಳ್ಳಬೇಕು. ನಾವೇ ನಮ್ಮ ಹಣೆಬರಹ ಬರೆದುಕೊಳ್ಳಬೇಕು" ಎಂದು ಹತಾಶೆಯ ಆಕ್ರೋಶಭರಿತ ಮಾತುಗಳನ್ನಾಡಿದ್ದ. ಇದರಿಂದ ಸಹಜವಾಗೇ ಮುಸ್ಲಿಮರು ಎಂಐಎಂ ಜೊತೆ ಇನ್ನಷ್ಟು ಗಟ್ಟಿಯಾಗಿ ನಿಂತರು. ಕೇಳಲಿಕ್ಕೆ ಕಹಿ ಎನಿಸಿದರೂ ಇದು ಸತ್ಯ ತಾನೆ?



ಲೆಬನಾನ್‌ನ ಹಿಜ್ಬುಲ್ ಕಮಾಂಡರ್ ಜೊತೆ ಅಸಾಉದ್ದೀನ್

ಸಲಾಉದ್ದೀನ್ 2004 ರಲ್ಲಿ ಸಕ್ರಿಯ ರಾಜಕೀಯದಿಂದ ನಿವೃತ್ತನಾಗಿ 2008 ರಲ್ಲಿ ತೀರಿಕೊಂಡ. 2004 ರ ಎಲೆಕ್ಷನ್‌ನಲ್ಲೇ ಅವನ ಹಿರಿಯ ಮಗ ಅಸಾಉದ್ದೀನ್ ಹೈದರಾಬಾದ್‌ನಿಂದ ಸ್ಪರ್ಧಿಸಿ ಗೆದ್ದು ಸಂಸತ್ ಸದಸ್ಯನಾದ.

### ಬಾಬರಿ ಮಸೀದಿ-ಬದಲಾದ ಸ್ಥಿತಿ

1992 ರಲ್ಲಿ ಹಿಂದುತ್ವವಾದಿ ಭಯೋತ್ಪಾದಕರು ಆಗಿನ ಕಾಂಗ್ರೆಸ್ ಸರ್ಕಾರದ ಸಹಕಾರದೊಂದಿಗೆ ಬಾಬರಿ ಮಸೀದಿ ಕೆಡವಿದ ಘಟನೆಯು 'ಮುಸ್ಲಿಮರಿಗೆ ಭಾರತದಲ್ಲಿ ಕಾನೂನುಬದ್ಧ ರಕ್ಷಣೆ ಸಿಗಲಾರದೆಂಬ' ಆಘಾತಕಾರಿ 'ಸಂದೇಶವನ್ನು ಮತ್ತೊಮ್ಮೆ ನೀಡಿತು.

ಇದು ಮುಂದಿನ ದಿನಗಳಲ್ಲಿ ಮುಸ್ಲಿಮರ ಸಾಮಾಜಿಕ ಹಾಗೂ ರಾಜಕೀಯ ಧ್ರುವೀಕರಣಕ್ಕೆ ಪ್ರಚೋದನೆ ನೀಡಿತು. ಕೇರಳದಲ್ಲಿ ಅಬ್ದುಲ್ ನಾಸೆರ್ ಮದನಿ, ಉತ್ತರ ಪ್ರದೇಶದಲ್ಲಿ ಅಜಂ ಖಾನ್, ಕರ್ನಾಟಕದಲ್ಲಿ ಕೆಎಫ್‌ಡಿ... ಹೀಗೆ ಹೊಸ ನಾಯಕರು, ಸಂಘಟನೆಗಳು ಹುಟ್ಟಿಕೊಂಡವು. ಆದರೆ ಆಂಧ್ರ ಪ್ರದೇಶದಲ್ಲಿ ಅದರಲ್ಲೂ ಹೈದರಾಬಾದ್‌ನಲ್ಲಿ ಎಂಐಎಂ ಇನ್ನಷ್ಟು ಬಲಿಷ್ಠವಾಯಿತು. ಅದು ಬದಲಾದ ಪರಿಸ್ಥಿತಿಗೆ ತಕ್ಕಂತೆ ತನ್ನ ಅಜೆಂಡಾಗಳನ್ನು ರೂಪಾಂತರಿಸಿಕೊಂಡು ಮುನ್ನಡೆಯುತ್ತಿದೆ. ಇದಕ್ಕೆ ಮುಸ್ಲಿಂ ಸಮುದಾಯದ ಆಂತರಿಕ ರಚನೆಯ ತಾರತಮ್ಯದ ಸ್ವರೂಪಗಳನ್ನು ಬದಲಿಸುವ ಉದ್ದೇಶವೇನೂ ಇಲ್ಲ, ಆದರೂ ಸಂಸದ ಅಸಾಉದ್ದೀನ್ ಸಂಸತ್‌ನಲ್ಲಿ ಮಾನವ ಹಕ್ಕುಗಳು ಅಭಿವೃದ್ಧಿ ಮತ್ತು ಹಿಂಸೆ, ಅಲ್ಪಸಂಖ್ಯಾತರ ಶಿಕ್ಷಣ, ಆರ್ಥಿಕ ಸುಧಾರಣೆಗಳು, ಸಂಸದೀಯ ಪ್ರಜಾತಂತ್ರದ ಗುಣಮಟ್ಟ, ಕೋಮುಗಲಭೆ, ಪೋಟಾ ಕಾಯ್ದೆ, ಭಯೋತ್ಪಾದನೆ, ಚುನಾವಣಾ ಸುಧಾರಣೆಗಳ ಬಗ್ಗೆ ಯೋಚಿಸಿ ಅನೇಕ ಬಾರಿ ಮಾತನಾಡಿದ್ದಾನೆ. ಅಂತಾರಾಷ್ಟ್ರೀಯ ವಿದ್ಯಮಾನಗಳ ಬಗ್ಗೆಯೂ ಪ್ರತಿಕ್ರಿಯಿಸುತ್ತಾನೆ. 2006 ರಲ್ಲಿ ಇಸ್ರೇಲ್-ಲೆಬನಾನ್ ನಡುವಿನ ಯುದ್ಧ ಮುಗಿದಾಗ ಅಸಾಉದ್ದೀನ್ ಬೈರುತ್‌ಗೂ ಭೇಟಿ ನೀಡಿ ಹಿಜ್ಬುಲ್ ಹೋರಾಟದ ನಾಯಕರನ್ನು ಕಂಡು ಬೆಂಬಲ ವ್ಯಕ್ತಪಡಿಸಿ ಬಂದಿದ್ದ. ಅಮೆರಿಕಾದ ದುರಾಕ್ರಮಣಕಾರಿ ನೀತಿಗಳನ್ನು ಅವನು ಈಗಲೂ ಬಹಿರಂಗವಾಗಿ ಖಂಡಿಸುತ್ತಾನೆ. ಅದೇರೀತಿ ಮೊನ್ನೆ ಅಕ್ಬರುದ್ದೀನ್ ಕೂಡಾ ತನ್ನ ಭಾಷಣದಲ್ಲಿ ಅಮೆರಿಕಾ ವಿರುದ್ಧ ಕೆಂಡ ಕಾರಿದ್ದಾನೆ. ಇದೆಲ್ಲ ಸರಿ, ಆದರೆ ಇವರ ಅಮೆರಿಕಾ ದ್ವೇಷಕ್ಕೆ ಆ ದೇಶವು 'ಇಸ್ಲಾಂ ಜಗತ್ತಿನ ವಿರುದ್ಧ ದಾಳಿ ನಡೆಸುತ್ತಿದೆ' ಎಂಬುದು ಕಾರಣವಾಗಿದೆಯೇ ಹೊರತು ಅಮೆರಿಕಾದ ಸಾಮ್ರಾಜ್ಯಶಾಹಿ ದುರಾಕ್ರಮಣವನ್ನು ಅರ್ಥಮಾಡಿಕೊಂಡು ನೀಡುತ್ತಿರುವ ಪ್ರತಿಕ್ರಿಯೆಗಳಾಗಿಲ್ಲ.

ಅಕ್ಬರುದ್ದೀನನ ಮೊನ್ನಿನ ಪ್ರಚೋದನಾಕಾರಿ ಭಾಷಣಕ್ಕೆ ಪ್ರಚೋದನೆ ನೀಡಿದ್ದೇ ಆಂಧ್ರದ ಕಾಂಗ್ರೆಸ್ ಸರ್ಕಾರ. ಹೈದರಾಬಾದ್‌ನ ಚಾರ್‌ಮೀನಾರ್ ಸುತ್ತಲಿನ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಿಸದಂತೆ ನಿಯಮವಿದ್ದಾಗಲೂ ಅಲ್ಲಿ ರಾತ್ರೋರಾತ್ರಿ 'ಭಾಗ್ಯಲಕ್ಷ್ಮಿ' ಎಂಬ ವಿಚಿತ್ರ ಹೆಸರಿನ ಹೊಸ ದೇವಸ್ಥಾನ ಕಟ್ಟಲು ಸರ್ಕಾರ ಅವಕಾಶ ನೀಡಿದ್ದು ಎಂಐಎಂ ಅನ್ನು ಕೆರಳಿಸಿದೆ. ಇದನ್ನು ಪ್ರತಿಭಟಿಸಿ ಎಂಐಎಂ ಅನೇಕ ರ್‍ಯಾಲಿಗಳನ್ನು ನಡೆಸುತ್ತಿತ್ತು, ಅಂತದ್ದೇ ಒಂದು ರ್‍ಯಾಲಿಯಲ್ಲಿ ಅಕ್ಬರುದ್ದೀನ್ ಹಿಂದೂಗಳನ್ನು ಹೋಲ್‌ಸೇಲಾಗಿ ವಿಚಾರಿಸಿಕೊಳ್ಳುವ ಧಮಕಿ ಹಾಕಿದ್ದು. ಕೆಲವು ಆಕ್ರಮಣಕಾರಿ ಮುಸ್ಲಿಂ ನಾಯಕರಂತೆ ಈ ಒವೈಸಿ ಕೂಡ ಹಿಂದೂಗಳೆಲ್ಲರೂ ಒಂದೇ ಎಂದು ನಂಬಿರುವಂತಿದೆ. ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್, ಬಜೆಪಿ, ಭಜರಂಗದಳವನ್ನು ತಿರಸ್ಕರಿಸುವ, ಅವುಗಳ ವಿರುದ್ಧ ನಿಲ್ಲುವ ಪ್ರಗತಿಪರರ, ದಮನಿತ ಜಾತಿವರ್ಗಗಳ ಅಸ್ತಿತ್ವವನ್ನೇ ಒವೈಸಿ ತರದವರು ಗಣನೆಗೆ ತೆಗೆದುಕೊಳ್ಳುತ್ತಿಲ್ಲ, ಇದು ಅವನ ಅವಿವೇಕವಷ್ಟೇ. ಜೊತೆಗೆ ಇಂತಹ ಭಾಷಣಗಳಿಂದ ತನ್ನ ಹಾಗೂ ಎಂಐಎಂನ ಓಟ್‌ಬ್ಯಾಂಕ್ ಅನ್ನು ಗಟ್ಟಿ ಮಾಡಿಕೊಳ್ಳುವ ಲೆಕ್ಕಾಚಾರವೂ ಒವೈಸಿಗಿದ್ದಂತಿದೆ. ಗುಲ್ಬರ್ಗಾದಲ್ಲಿ ಡಾಕ್ಟರಿಕೆ ಓದುತ್ತಿದ್ದ ಅಕ್ಬರುದ್ದೀನ್ ಮದುವೆಯಾಗಿದ್ದು ಒಬ್ಬ ಕ್ರಿಶ್ಚಿಯನ್ ಹೆಣ್ಣನ್ನು. ಅವನೊಬ್ಬ ಪ್ರಚಂಡ ಭಾಷಣಕಾರ.

"ಕಸಬ್‌ನನ್ನು ನೇಣು ಹಾಕುವ ಸರ್ಕಾರ ನರೇಂದ್ರ ಮೋದಿಗೆ ಯಾಕೆ ಶಿಕ್ಷೆ ನೀಡಿಲ್ಲ" ಎಂದು ಒವೈಸಿ ಕೇಳಿದ್ದಾನೆ!

ಇದು ನಾವೂ ನೀವೆಲ್ಲರೂ ಕೇಳಬೇಕಾದ ಪ್ರಶ್ನೆಯೇ ಅಲ್ಲವೆ? ಮತ್ತೊಂದೆಡೆ, ಸಲ್ಮಾನ್ ರಶ್ದಿ, ತಸ್ಲೀಮಾ ನಸ್ರೀನ್ ತರದ ಲೇಖಕರಿಗೆ ಫತ್ವಾ ಹೊರಡಿಸಿದ್ದನ್ನು ಬೆಂಬಲಿಸುತ್ತಾನೆ. ಭಯೋತ್ಪಾದನಾ ಪ್ರಕರಣಗಳ ನೆಪದಲ್ಲಿ ಪೊಲೀಸರು ಕೇವಲ ಮುಸ್ಲಿಂ ಯುವಕರನ್ನಷ್ಟೇ ಟಾರ್ಗೆಟ್ ಮಾಡುತ್ತಾ ಕೇಸರಿ ಟೆರರಿಸ್ಟರನ್ನು ಹಾಗೆ ಓಡಾಡಿಕೊಂಡಿರಲು ಬಿಟ್ಟಿರುವ ಬಗ್ಗೆಯೂ ಒವೈಸಿ ಪ್ರಶ್ನಿಸುತ್ತಿದ್ದಾನೆ.

ಸಾಮಾನ್ಯ ಮುಸ್ಲಿಮರು ಎದುರಿಸುತ್ತಿರುವ ಅಸಹಾಯಕತೆ, ದಮನ, ಬಡತನಗಳೆಲ್ಲಾ ನಿಧಾನವಾಗಿ ಮಡುಗಟ್ಟುತ್ತಾ ಆಕ್ರೋಶವಾಗಿ ಎಂಐಎಂ ತರದ ಸಂಕುಚಿತವಾದಿ ಗುಂಪುಗಳತ್ತ ಚಲಿಸುತ್ತಿರುವುದು ಈಗ ಕಾಣುತ್ತಿದೆ. ಮುಸ್ಲಿಮರು ಎಚ್ಚರಗೊಳ್ಳಬೇಕು ಹೌದು. ಆದರೆ ಆ ಚಲನೆ ಮೂಲಭೂತವಾದಿಗಳತ್ತ ಹೋಗುವುದು ಬೇಡವಾಗಿದೆ.

RSS, VHP, BJP ಗಳೆಲ್ಲಾ ಈ ದೇಶದ ವಿಷಸರ್ಪಗಳು ಎನ್ನುವ ಚೋಟಾ ಸಾಲಾರ್ ಅಕ್ಬರುದ್ದೀನ್ ಒವೈಸಿಯ ಪ್ರಚೋದನಕಾರಿ ಮಾತುಗಳು ಖಂಡನಾರ್ಹ ನಿಜ. ಆದರೆ ಅವನ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದವರು ಯಾರು?

ಒವೈಸಿಯಷ್ಟೇ ಪ್ರಚೋದನಕಾರಿ ಭಾಷಣಕಾರನಾಗಿದ್ದ ಬಾಳಠಾಕ್ರೆ ಎಂದೂ ಅರೆಸ್ಟ್ ಆಗಲಿಲ್ಲ, ಕಲ್ಲಡ್ಕ ಭಟ್ಟ, ಮುತಾಲಿಕರಿಗೆ ಈಗಲೂ ಶಿಕ್ಷೆ ಆಗುತ್ತಿಲ್ಲ ಏಕೆ?

● ಪಾರ್ವತೀಶ್







# ಬಿಬಿಎಂಪಿ ಪಾಪರ್‌ಚೀಟಿ

**ಇನ್ನೆರಡು ತಿಂಗಳೊಳಗೆ ಸರ್ಕಾರ ಮೂರು ಸಾವಿರಕ್ಕೂ ಅಧಿಕ ಬಿಬಿಎಂಪಿ ಗುತ್ತಿಗೆದಾರರ ಬಾಕಿ ಬಿಲ್ಲನ್ನೇನಾದರೂ ಬಟವಾಡೆ ಮಾಡದೆ ಹೋದರೆ ಕರ್ನಾಟಕದ ರೈತರಿಗಿಂತಲೂ ವೇಗವಾಗಿ ಆತ್ಮಹತ್ಯೆಗಿಳಿಯುವ ದುರ್ಗತಿಗೆ ಬಿಬಿಎಂಪಿ ಗುತ್ತಿಗೆದಾರರು ತಲೆಕೊಡಲೇಬೇಕು. ಬೆಂಗಳೂರಿನ ಇತಿಹಾಸದಲ್ಲಿ, ಬಿಬಿಎಂಪಿಯ ಜಾಯಮಾನದಲ್ಲೆಂದೂ ಕಂಡರಿಯದ ದಿವಾಳಿಕೋರ ಸನ್ನಿವೇಶವೊಂದನ್ನು ಬಿಜೆಪಿ ಸರ್ಕಾರ ಸೃಷ್ಟಿಸಿಬಿಟ್ಟಿದೆ.**

ರೈತನ ಆತ್ಮಹತ್ಯೆಯ ಸುದ್ದಿಗಳೀಗ ಹಳತಾಯಿತು. ಲೇಟೆಸ್ಟ್ ಆತ್ಮಹತ್ಯೆಯ ಸರಣಿ ಏನು ಗೊತ್ತೆ?

ಬಿಬಿಎಂಪಿಯ ಕಂಟ್ರಾಕ್ಟರ್‌ಗಳ ಸರಣಿ ಆತ್ಮಹತ್ಯಾ ಸರದಿ!

ಇನ್ನೆರಡು ತಿಂಗಳೊಳಗೆ ಸರ್ಕಾರ ಮೂರು ಸಾವಿರಕ್ಕೂ ಅಧಿಕ ಬಿಬಿಎಂಪಿ ಗುತ್ತಿಗೆದಾರರ ಬಾಕಿ ಬಿಲ್ಲನ್ನೇನಾದರೂ ಬಟವಾಡೆ ಮಾಡದೆ ಹೋದರೆ ಕರ್ನಾಟಕದ ರೈತರಿಗಿಂತಲೂ ವೇಗವಾಗಿ ಆತ್ಮಹತ್ಯೆಗಿಳಿಯುವ ದುರ್ಗತಿಗೆ ಬಿಬಿಎಂಪಿ ಗುತ್ತಿಗೆದಾರರು ತಲೆಕೊಡಲೇಬೇಕು. ಬೆಂಗಳೂರಿನ ಇತಿಹಾಸದಲ್ಲಿ, ಬಿಬಿಎಂಪಿಯ ಜಾಯಮಾನದಲ್ಲೆಂದೂ ಕಂಡರಿಯದ ದಿವಾಳಿಕೋರ ಸನ್ನಿವೇಶವೊಂದನ್ನು ಬಿಜೆಪಿ ಸರ್ಕಾರ ಸೃಷ್ಟಿಸಿಬಿಟ್ಟಿದೆ.

ಗಣಿ ಲೂಟಿ, ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಭೂಮಿ-ಕೆರೆಕುಂಟೆಗಳ ಜಮೀನು ಡಕಾಯಿತಿಯ ನಂತರ ಬಿಜೆಪಿಯ ಅತೀ ದೊಡ್ಡ ಕೊಡುಗೆಯೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಿವಾಳಿ!

ನಿನ್ನೆಮೊನ್ನೆಯವರೆಗೆ ಕಸದ ರಾಶಿಯಲ್ಲಿ ಮುಳುಗಿಹೋಗಿದ್ದ ರಾಜಧಾನಿ ಬೆಂಗಳೂರಿಗೆ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ರೇ ಅಧಿಕೃತ ಉಸ್ತುವಾರಿ. ಜೊತೆಗೆ ಡಿಸಿಎಂ ಆರ್. ಅಶೋಕ್ ಅನಧಿಕೃತ ಅಧಿಪತಿ. ಸಾಲದ್ದಕ್ಕೆ ಸದ್ಯ ಬೆಂಗಳೂರಿನ ಮೇಯರ್ ಆಗಿರುವ ವೆಂಕಟೇಶ್‌ಮೂರ್ತಿ ಮತ್ತೊಬ್ಬ ಡಿಸಿಎಂ ಈಶ್ವರಪ್ಪನವರ ನಂಬಿಕಸ್ತ ಬಂಟ. ಹಾಲೀ ಉಪಮೇಯರ್ ಎಲ್.ಶ್ರೀನಿವಾಸ್‌ರಿಂದ ಹಿಡಿದು ಬಿಬಿಎಂಪಿಯ ಬಹುತೇಕ ಸ್ಥಾಯಿ ಸಮಿತಿಗಳ ಅಧ್ಯಕ್ಷರು, ಬಿಜೆಪಿಯ ಬಹುತೇಕ ಕೌನ್ಸಿಲರುಗಳು ಮತ್ತು ಬೆಂಗಳೂರಿನ ಬಹುತೇಕ ಬಿಜೆಪಿ ಶಾಸಕರೆಲ್ಲ ಡಿಸಿಎಂ ಅಶೋಕ್‌ರೇ ಸೃಷ್ಟಿಸಿ ಛೂಬಿಟ್ಟ ಪಾಳೇಗಾರರು.

| Sl.No | Name of the Bank | Loan Account No. | Date Of Drawn | Amount Drawn in Crores | Rate of Interest | Amount repayed upto 31.03.2012 | Balance as on 01.11.2012 | Proposal for repayment Principal | Interest | Total | Balance as on 30.11.2012 |
|---|---|---|---|---|---|---|---|---|---|---|---|
| 7 | HUDCO | 20060 | 27.01.2012 | 480.00 | 12.00% | 0.00 | 4800000000 | | 135616438 | 135616438 | 4800000000 |
| | HUDCO | 20040 | 29.03.2012 | 249.54 | 12.00% | | 2433000000 | 60600000 | 66870214 | 127470214 | 2372400000 |
| | Total | | | 729.54 | | 0.00 | 7233000000 | 60600000 | 202486652 | 263086652 | 7172400000 |
| | | | | | | | | | | | |
| | Grand Total | | | 3579.54 | | 6099604866 | 28391283702 | 114267595 | 432538619 | 546806214 | 28277016107 |

| | |
|---|---|
| Principal | 114267595 |
| interest | 432538619 |
| Total | 546806214 |
| HUDCO Amount already Paid on 07.11.2012 | 263056652 |
| Total Amount due for the month of November 2012 | 283749562 |

Audit Officer (Project)
Bruhat Bangalore Mahanagara Palike 5/12/12

NOTE:

September and October 2012 Loan Amount has not been Paid to the banks till date

1. Copy submitted to Chief Account Officer for Kind information
2. Copy forwarded to Joint Controller (Finance) for Kind information
3. Copy forwarded to Deputy Controller (Finance) for Kind Information
4. Copy forwarded to Accounts Superintended Cheque section

ಬಿಬಿಎಂ ಸಾಲದ ಲೇಟೆಸ್ಟ್ ಆಡಿಟ್ ವರದಿ

## ಪೌರಕಾರ್ಮಿಕರಿಗೇ...!

'ಮಿ. ಕ್ಲೀನ್' ಎಂದೇ ಬಿರುದಾಂಕಿತ ಮಂತ್ರಿ ಸುರೇಶ್‌ಕುಮಾರ್, ಕಟ್ಟಾ ಗ್ಯಾಂಗ್, ಕರಂದ್ಲಾಜೆಯ ಪಟಾಲಮ್, ಅನಂತ್‌ಕುಮಾರ್ ಶಿಷ್ಯಕೂಟ, ಯಡ್ಡಿ ನಿಷ್ಠ ಬೆಟಾಲಿಯನ್, ಆರೆಸ್ಸೆಸ್ ಚಿಡ್ಡಿಕೂಟಗಳೆಲ್ಲ ಬೆಂಗಳೂರಿನ ಆಯಕಟ್ಟಿನಲ್ಲಿ ಕೂತು ಕಳೆದ ನಾಲ್ಕೂವರೆ ವರ್ಷಗಳಿಂದ ಮಾಡಿದ ಮಹತ್ಸಾಧನೆಯೇ ಬಿಬಿಎಂಪಿಯ ದಿವಾಳಿ. ಕಳೆದ ಮೂರು ತಿಂಗಳಿಂದ ಪೌರಕಾರ್ಮಿಕರಿಗೆ ಸಂಬಳ ಕೂಡ ಕೊಡಲಾಗದಷ್ಟು ಬಿಬಿಎಂಪಿ ದಿವಾಳಿಯೆದ್ದಿದೆ. ಈ ತಿಂಗಳು ಅಂದರೆ ಜನವರಿ ತಿಂಗಳೊಂದರ ಮಟ್ಟಿಗೇನಾದರೂ ಪೌರಕಾರ್ಮಿಕರ ಸಂಬಳ ಬಿಡುಗಡೆ ಮಾಡದೆ ಹೋದರೆ ಬೆಂಗಳೂರಿನ ರಸ್ತೆ ಗುಡಿಸುವುದನ್ನೇ ಸ್ಥಗಿತಗೊಳಿಸುತ್ತೇವೆಂದು ಪೌರಕಾರ್ಮಿಕರ ಸಂಘಟನೆಗಳು ಬೆದರಿಕೆ ಹಾಕಿವೆ. ಕಳೆದ ತಿಂಗಳು ಪೌರಕಾರ್ಮಿಕರಿಗಿರಲಿ, ಬಿಬಿಎಂಪಿಯ ನೌಕರರು, ಅಧಿಕಾರಿಗಳಿಗೆ ಸಂಬಳ ಕೊಡಲಾಗದ ದುರ್ಗತಿಯಿತ್ತು. ನೂರಕ್ಕೂ ಅಧಿಕ ಮರಗಳ ನಿರ್ವಹಣೆ ಗುತ್ತಿಗೆದಾರರು ಇ-ಟೆಂಡರ್ ಮೂಲಕವೇ ಕೆಲಸ ಮುಗಿಸಿದ್ದಾರೆ. ಎಲ್ಲೆಲ್ಲಿಂದಲೋ ಸಾಲ ತಂದು ಗುತ್ತಿಗೆ ಮುಗಿಸಿ ಇವತ್ತಿಗೆ ಎರಡೂವರೆ ವರ್ಷವಾದರೂ ಈತನಕ ಮಾಡಿದ ಕೆಲಸಕ್ಕೆ ಬಿಲ್ಲು ಕೊಡುತ್ತಿಲ್ಲ. ಹೀಗೆ ಮರಗಳ ವ್ಯವಸ್ಥಿತ ನಿರ್ವಹಣೆಗೆಂದು ಈ ಗುತ್ತಿಗೆದಾರರು ಹಾಕಿದ ಬಂಡವಾಳ ಹೆಚ್ಚೆಂದರೆ ಐದೋ ಆರೋ ಕೋಟಿ ಮಾತ್ರ. ಪಾಲಿಕೆಯ ಮುಖ್ಯ ಅರಣ್ಯಾಧಿಕಾರಿ ವಿಶ್ವಜಿತ್ ಮಿಶ್ರಾಗೆ ಈ ಪುಟ್ಟ ಮೊತ್ತದ ಬಿಲ್ ಪಾವತಿಸುವುದು ಕಷ್ಟವೇನಲ್ಲ. ಆದರೆ ಪಾಲಿಕೆಯ ಅರಣ್ಯಾಧಿಕಾರಿಗಳೇ ಬೇನಾಮಿಯಾಗಿ ಸಸಿ ನೆಡುವ ಗುತ್ತಿಗೆ ಹಿಡಿದು ನುಂಗಿ ಹಾಕಿದ ಒಟ್ಟು ಮೊತ್ತ 20 ಕೋಟಿಗೂ ಅಧಿಕ. ಹದಿನೈದೋ ಇಪ್ಪತ್ತೋ ಸಾವಿರದಷ್ಟು ಸಸಿ ನೆಟ್ಟಿದ್ದೇವೆಂದು ಬೋಗಸ್ ಬಿಲ್ ಹಾಕಿ ಕಾಟಾಚಾರಕ್ಕೆ ಮೂರ್‍ನಾಲ್ಕು ಸಾವಿರ ಸಸಿನೆಟ್ಟು ಕಳ್ಳ ಲೆಕ್ಕ ಬರೆದು ಕೋಟಿಗಟ್ಟಲೆ ಹೊಡೆದ ಅರಣ್ಯಾಧಿಕಾರಿಗಳ ಪೈಕಿ ಪ್ರಮುಖನಾದ ಎಸಿಎಫ್ ವೆಂಕಟೇಶಪ್ಪ ಬೇರೆ ಯಾರೂ ಅಲ್ಲ ಕಾರ್ಮಿಕ ಮಂತ್ರಿ ಬಚ್ಚೇಗೌಡರ ಖಾಸಾ ರಕ್ತ ಸಂಬಂಧಿ!

ಈಗ ಮರಗಳ ಗುತ್ತಿಗೆದಾರರ ಐದಾರು ಕೋಟಿ ಪ್ರಾಮಾಣಿಕ ಕೆಲಸ ಬಿಲ್ಲನ್ನೇನಾದರೂ ಪಾವತಿಸಿಬಿಟ್ಟರೆ ನಾಳೆ ತಾವು ಮಾಡಿದ ಕಳ್ಳ ಕೆಲಸದ ಬಿಲ್ಲು ಎಲ್ಲಿ ಸಿಕ್ಕಿ ಬೀಳುವುದೋ ಎಂಬ ಭೀತಿಗೆ ಬಿದ್ದು ಬಡಪಾಯಿ ಮರಗಳ ಗುತ್ತಿಗೆದಾರರ ಬಿಲ್ಲನ್ನು ತಡೆ ಹಿಡಿದಿದ್ದಾರೆ. ಇದರರ್ಥ ಅರಣ್ಯ ಇಲಾಖೆಯ ಒಟ್ಟು 30 ಕೋಟಿಯ ಬಾಕಿ ಬಿಲ್ಲಿನ ಮೊತ್ತದಲ್ಲಿ ಸಸಿ ನೆಡುವ ಕಳ್ಳ ಬಿಲ್ಲಿನ ಒಳಗೇ ಮರಗಳ ಗುತ್ತಿಗೆದಾರರ ಬಿಲ್ಲನ್ನೂ ಸಿಲುಕಿಸಲಾಗಿದೆ. ಸಸಿ ನೆಟ್ಟ ಕಳ್ಳ ಬಿಲ್ಲಿನ ಬಗ್ಗೆ ತನಿಖೆ ಮುಗಿಯದೇ ಮರಗಳ ಗುತ್ತಿಗೆದಾರರ ಸಾಚಾ ಕೆಲಸ ಬಿಲ್ಲಿನ ಬಟವಾಡೆಯಿಲ್ಲ!

## ಲಂಚ ಕೊಟ್ರೂ ನಾಯಿಪಾಡು

ಮರಗಳ ಗುತ್ತಿಗೆದಾರರ ಬಿಲ್ಲನ್ನೇ ಪ್ರತ್ಯೇಕಗೊಳಿಸಿ ಸಸಿ ನೆಟ್ಟ ಕರ್ಮಕಾಂಡದ ಬಗ್ಗೆ ತನಿಖೆ ನಡೆಸುವಂತೆ ನೂರಾರು ಟ್ರೀ ಕಟಿಂಗ್ ಕಂಟ್ರಾಕ್ಟರ್‌ಗಳು ಕಳೆದೊಂದು ವರ್ಷದಿಂದ ಮನವಿ ಕೊಡುತ್ತಲೇ ಗೋಳಾಡುತ್ತಿದ್ದಾರೆ. ಈ ಪೈಕಿ ಒಬ್ಬ ಗುತ್ತಿಗೆದಾರನ ತಂದೆಗೆ ಕಿಡ್ನಿ ಕಸಿಯಾಗಬೇಕು. ಮತ್ತೊಬ್ಬ ಗುತ್ತಿಗೆದಾರನ ತಂಗಿ ಮದುವೆಯೇ ಮುರಿದು ಬಿತ್ತು, ಇನ್ನೊಬ್ಬ ಗುತ್ತಿಗೆದಾರ ಬಡ್ಡಿ ಕಟ್ಟಲಾಗದೆ ಊರು ಬಿಟ್ಟೇ ಪರಾರಿಯಾಗಿದ್ದಾನೆ. ಇದು ಬಿಬಿಎಂಪಿಯ ಮರಗಳ



ವೆಂಕಟೇಶ್ ಮೂರ್ತಿ

ವ್ಯವಸ್ಥಿತ ನಿರ್ವಹಣೆಗೆಂದು ಸಾಲಕ್ಕೆ ಬಿದ್ದ ಗುತ್ತಿಗೆದಾರರ ಕಣ್ಣೀರ ಕತೆ.

ಯಾವ ಅಶೋಕ್, ಯಾವ ಮೇಯರ್, ಯಾವ ಕಮೀಶನರ್ ಸಿದ್ದಯ್ಯನಿಗೆ ಇದು ಅರ್ಥವಾಗಬೇಕು?

ಇನ್ನು ರಸ್ತೆ ಕಾಮಗಾರಿಗೆ ಕೈಯಿಟ್ಟು ದಿವಾಳಿಯೆದ್ದ ಸಾವಿರಕ್ಕೂ ಅಧಿಕ ಕಂಟ್ರಾಕ್ಟರ್‌ಗಳದ್ದು ನಿಜಕ್ಕೂ ನಾಯಿಪಾಡು. ಈ ರೀತಿ ರಸ್ತೆ, ಟಾರು, ಮೋರಿಗಳ ಕಾಮಗಾರಿಗಳಿಗೆಂದು ಸಾವಿರಕ್ಕೂ ಅಧಿಕ ಕೋಟಿ ರೂಪಾಯಿಗಳಷ್ಟು ಸಾಲ ತಂದು ಕೆಲಸ ಮುಗಿಸಿ ಎರಡು ವರ್ಷಗಳೇ ಕಳೆದಿವೆ. ಗುಮಾಸ್ತನಿಂದ ಹಿಡಿದು ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳ ತನಕ ಕೇಳಿದಷ್ಟು ಲಂಚ ಕೊಟ್ಟದ್ದೂ ಆಗಿದೆ. ಬೀದಿಗಿಳಿದು ಪ್ರತಿಭಟಿಸಿದರೆ ಕಾಮಗಾರಿಗಳ ತನಿಖೆ ಮಾಡುತ್ತೇವೆಂದು ಬೆದರಿಕೆ ಹಾಕಿ ಅಧಿಕಾರಿಗಳು ಬಾಯಿ ಮುಚ್ಚಿಸುತ್ತಾರೆ. ಎಷ್ಟೇ ಪ್ರಾಮಾಣಿಕವಾಗಿ ಕಾಮಗಾರಿ ಮಾಡಿದ್ದರೂ ತನಿಖೆ ಮುಗಿಯಲು ಕನಿಷ್ಠ 6 ತಿಂಗಳು ಹಿಡಿದೇ ತೀರುತ್ತದೆ. ಈಗ ಮಾಡಿದ ಕಾಮಗಾರಿಗೆ ತಂದ ಸಾಲಕ್ಕೆ ಬಡ್ಡಿ ಕಟ್ಟುವುದೇ ಕಷ್ಟ. ಹಾಗೊಮ್ಮೆ ಇನ್ನೆರಡು ತಿಂಗಳಲ್ಲಿ ಬಿಲ್ಲಿನ ಮೊತ್ತ ಬಂದರೂ ಅದು ಬಡ್ಡಿಗೆ ಸರಿಹೋಗುತ್ತದೆ. ಇನ್ನು ಹಾಕಿದ ಬಂಡವಾಳಕ್ಕೆ ಏನು ಮಾಡುವುದು?

ಇಲ್ಲಿಗೆ ವಾರದ ಹಿಂದಷ್ಟೇ ಜಯನಗರದ ಬಿಬಿಎಂಪಿ ಗುತ್ತಿಗೆದಾರನೊಬ್ಬನನ್ನು ಸಾಲಗಾರರು ಕಿಡ್ನಾಪ್ ಮಾಡಿದ ಘಟನೆ ನಡೆಯಿತು. ಹೆಬ್ಬಾಳದ ಮತ್ತೊಬ್ಬ ಗುತ್ತಿಗೆದಾರ ಚೆಕ್‌ಬೌನ್ಸ್ ಕೇಸಿಗೆ ಸಿಲುಕಿ ಜೈಲು ಪಾಲಾದ. ರಾಜಾಜಿನಗರದ ಗುತ್ತಿಗೆದಾರನೊಬ್ಬನ ಮಗಳ ಮದುವೆಯೇ ಮುರಿದು ಬಿತ್ತು, ವಿಜಯನಗರದ ಪಾಲಿಕೆ ಕಂಟ್ರಾಕ್ಟರ್ ಒಬ್ಬನ ಬಂಗಲೆಯನ್ನು ಬ್ಯಾಂಕ್ ಅಧಿಕಾರಿಗಳು ಜಪ್ತಿ ಮಾಡಿಕೊಂಡರು. ಇನ್ನೆರಡು ತಿಂಗಳೊಳಗೇನಾದರೂ ಬಾಕಿ ಬಿಲ್ಲು ಬರದೇ ಹೋದ ಪಕ್ಷದಲ್ಲಿ ಆತ್ಮಹತ್ಯೆ ಬಿಟ್ಟರೆ ಬೇರೆ ದಾರಿಯೇ ಇಲ್ಲ. ಇದು ಸಣ್ಣಪುಟ್ಟ ಕಂಟ್ರಾಕ್ಟರ್‌ಗಳ ದುರ್ಗತಿ.

ಬೆಂಗಳೂರಿನುದ್ದಕ್ಕೂ ಪಾರ್ಕುಗಳ ನಿರ್ಮಾಣದ ಗುತ್ತಿಗೆ ಹಿಡಿದ ಮುನ್ನೂರಕ್ಕೂ ಅಧಿಕ ತೋಟಗಾರಿಕೆ

## ಸಾಲ+ಬಾಕಿ= 4137 ಕೋಟಿ?


ನವೆಂಬರ್ 2012ರ ಹೊತ್ತಿಗೆ ಬಿಬಿಎಂಪಿ ವಿವಿಧ ಬ್ಯಾಂಕುಗಳಿಂದ ಪಡೆದ ಸಾಲದ ಪಟ್ಟಿಯೇ ಅದರ ದುರ್ಗತಿಗೆ ಹಿಡಿದ ಕನ್ನಡಿಯಂತಿದೆ.

| ಬ್ಯಾಂಕು | ಸಾಲದ ಮೊತ್ತ (ಕೋಟಿಗಳಲ್ಲಿ) | ಬಡ್ಡಿಯ ದರ | ಬಾಕಿ ಮೊತ್ತ (ಕೋಟಿಗಳಲ್ಲಿ) |
|---|---|---|---|
| ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ | 175.00 | 12.75% | 56,88,00,000 |
| ವಿಜಯಾ ಬ್ಯಾಂಕ್ | 75.00 | 10.95% | 75,00,00,000 |
| ಕಾರ್ಪೊರೇಷನ್ ಬ್ಯಾಂಕ್ | 575.00 | 12.25% | 543,63,97,530 |
| ಸ್ಟೇಟ್ ಬ್ಯಾಂಕ್ ಆಫ್ ಮೈಸೂರು | 125.00 | 13.00% | 98,00,00,000 |
| ಸಿಂಡಿಕೇಟ್ ಬ್ಯಾಂಕ್ | 725.00 | 11.00% | 533,55,97,175 |
| ಕೆನರಾ ಬ್ಯಾಂಕ್ | 1175.00 | 11.25% | 803,48,21,402 |
| ಹುಡ್ಕೋ | 729.54 | 12.00% | 717,24,00,000 |
| ಒಟ್ಟು | 3579.54 | | 2827,70,16,107 |

ಅಂದರೆ ಈತನಕ ಪಾಲಿಕೆ ಕಟ್ಟಿದ ಬಡ್ಡಿಯ ಮೊತ್ತವೇ 43,25,38,610 ಕೋಟಿ. ಇದಕ್ಕೆ ಹುಡ್ಕೋಗೆಂದು ಕಟ್ಟಿದ 26 ಕೋಟಿ ರೂಪಾಯಿಗಳಷ್ಟನ್ನು ಸೇರಿಸಿಲ್ಲ, ವಿವಿಧ ಬ್ಯಾಂಕುಗಳ ಮೂಲಸಾಲವಾಗಿ ಕಟ್ಟಿ 11 ಕೋಟಿಯನ್ನೂ ಸೇರಿಸಿ ಲೆಕ್ಕ ಹಾಕಿದರೆ ವಿವಿಧ ಬ್ಯಾಂಕುಗಳು ಮತ್ತು ಹುಡ್ಕೋಗೆ ಬಿಬಿಎಂಪಿ ಪಾವತಿಸಬೇಕಾದ ಒಟ್ಟು ಬಾಕಿ ಸಾಲದ ಮೊತ್ತ 2837,49,50 ಕೋಟಿ ರೂಪಾಯಿಗಳು. ಅಂದರೆ 2837 ಕೋಟಿ ರೂಪಾಯಿಗಳ ಬ್ಯಾಂಕ್ ಸಾಲ ಮತ್ತು 1300 ಕೋಟಿ ರೂಪಾಯಿಗಳ ಗುತ್ತಿಗೆ ಕಾಮಗಾರಿಗಳ ಮೊತ್ತ ಸೇರಿದರೆ ಅದೇ 4137 ಕೋಟಿಯಷ್ಟಾಗುತ್ತದೆ.

ಇನ್ನು ಬಿಬಿಎಂಪಿ ಉದ್ಧಾರವಾಗಬೇಕೆಂದರೆ ಎಲ್ಲಿಂದ?


# ...ಕೃಷ್ಣರಿಗಿದ್ದ ಕಾಳಜಿ ಶೆಟ್ಟರಿಗೇಕಿಲ್ಲ?



...ಬಿಬಿಎಂಪಿಯ ದುರ್ಗತಿ ಎಂಥಾದ್ದೆಂದರೆ 60 ಕೆ.ಜಿ ತೂಕದ ವ್ಯಕ್ತಿಯ ಹೆಗಲಿಗೆ 200 ಕೆ.ಜಿ. ತೂಕದ ಮೂಟೆ ಹೊರಿಸಿದಂತಾಗಿದೆ. ಪ್ರತಿ ಸಾರಿಯೂ ಆದಾಯದ ಪ್ರಮಾಣಕ್ಕೆ ದುಪ್ಪಟ್ಟು ಮೊತ್ತದ ಬಜೆಟ್ ಮಂಡಿಸುವುದು ಕೇವಲ ಸಾಲ ಎತ್ತುವ ಮೋಸ ಮಾತ್ರ. ಈ ಬಗ್ಗೆ ನಾವೇ ಬೀದಿಗಿಳಿದು ಪ್ರತಿಭಟಿಸಿದ್ದೀವಿ. ಇನ್ನು ಸರ್ಕಾರದ ಗ್ರಾಂಟ್ ಎಂದು 700 ಕೋಟಿಯ ಭರವಸೆ ಕೊಟ್ಟು ಈತನಕ ಕೊಟ್ಟಿದ್ದು ಬರೇ 300 ಕೋಟಿ ಮಾತ್ರ. ಸ್ವತಃ ಮುಖ್ಯಮಂತ್ರಿಗಳ ವ್ಯಾಪ್ತಿಗೇ ಬಿಬಿಎಂಪಿ ಒಳಪಟ್ಟರೂ ಇಂಥಾ ದುರ್ಗತಿ.

ಸರ್ಕಾರ ಬಜೆಟ್ಟನ್ನು ಅಪ್ರೂವಲ್ ಮಾಡುವಾಗಲೇ ಸ್ವಂತ ಸಂಪನ್ಮೂಲವನ್ನು ರೂಢಿಸಿಕೊಂಡೇ ಮಾಡಿ ಎಂಬ ಷರತ್ತನ್ನೂ ವಿಧಿಸುತ್ತದೆ. ಹಾಗಂತ ಜಾಹಿರಾತು ಫಲಕಗಳನ್ನು ಹರಾಜು ಹಾಕುವ ಪ್ರಕ್ರಿಯೆಗಾದರು ಅನುಮೋದನೆ ಕೊಡಬೇಕಲ್ಲವೆ?

ಕೊಟ್ಟಿದ್ದರೆ ಜಾಹಿರಾತು ಆದಾಯವೇ ನೂರು ಕೋಟಿ ಬರುತ್ತಿತ್ತು. ಅಕ್ರಮ-ಸಕ್ರಮಕ್ಕೂ ಈತನಕ ಅನುಮೋದನೆ ಕೊಟ್ಟಿಲ್ಲ, ಕೊಟ್ಟಿದ್ದರೆ ಅದೇ 890 ಕೋಟಿಯ ...ಯವಾಗುತ್ತಿತ್ತು. ಇನ್ನು OFC ಕೇಬಲ್‌ಗಳ ರೆಗ್ಯುಲೇಶನ್‌ಗೆ ಸರ್ಕಾರ ಅನುಮೋದಿಸಿದ್ದರೆ ಅದೇ 500 ...ಟಿಯ ಆದಾಯವಾಗುತ್ತಿತ್ತು. ಬಜೆಟ್ ಅಪ್ರೂವಲ್ ಮಾಡುವ ಸರ್ಕಾರವೇ ಅನುಮೋದನೆಗಳಿಗೆ ಇಚ್ಛಾಶಕ್ತಿ ತೋರದ ಮೇಲೆ ಬಿಬಿಎಂಪಿ ...ದ್ಧಾರವಾಗುವುದು ಎಲ್ಲಿಂದ?


ಗುಣಶೇಖರ್

ಈಗ ಮುಖ್ಯಮಂತ್ರಿ ಶೆಟ್ಟರ್‌ಜೀ ಬೆಂಗಳೂರು ಪಾಲಿಕೆಯನ್ನು ...ಯಿಸುತ್ತಿದ್ದಾರೆ. ಹಿಂದೆ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ತಿಂಗಳಿಗೊಮ್ಮೆ ...ಳೂರು ಪ್ರದಕ್ಷಿಣೆ ಹಾಕುತ್ತಿದ್ದರು. ತಾವೇ ನಿಂತು ಕಾಮಗಾರಿಗಳನ್ನು ...ಲಿಸುತ್ತಿದ್ದರು. ಬೆಂಗಳೂರಿನ ಬಗ್ಗೆ ಕೃಷ್ಣರಿಗಿದ್ದ ಆ ಕಾಳಜಿಯ ಶೇ.5 ...ವರೂ ಶೆಟ್ಟರ್‌ಗಿದ್ದಿದ್ದರೆ ಇಂಥಾ ಗತಿ ಏಕೆ ಬರುತ್ತಿತ್ತು? ಸದ್ಯಕ್ಕಂತೂ ...ಬಿಎಂಪಿ ಉದ್ಧಾರವಾಗುವ ಯಾವುದೇ ಲಕ್ಷಣವಿಲ್ಲ.

-ಎಂ.ಕೆ. ಗುಣಶೇಖರ್, ಬಿ.ಬಿ.ಎಂ.ಪಿ ವಿರೋಧ ಪಕ್ಷದ ನಾಯಕರು

...ವಾರರದ್ದೂ ಇದೇ ಪಾಡು. ಬೀದಿನಾಯಿಗಳ ...ತ್ರಣಕ್ಕೆಂದು ನೇಮಕಗೊಂಡ ಹತ್ತಕ್ಕೂ ಅಧಿಕ ...ವೆ. ಕಳೆದೊಂದು ವರ್ಷದಿಂದ ನಯಾಪೈಸೆಯ ...ಕೊಟ್ಟಿಲ್ಲ. ದಿಲೀಪ್ ಬಾಬು ಎಂಬ ಬೀದಿನಾಯಿ ...ತ್ರಕ ಸಂಸ್ಥೆಯ ಮಾಲಿಕನಂತೂ ಲಂಚ ಕೊಡಲಾಗದೆ

ಸಂಭಾಳಿಸಬೇಕಿತ್ತು. ಆ ವರ್ಷ ಅಧಿಕಾರಿಗಳು ಮಂಡಿಸಿದ ಒಟ್ಟು ಬಜೆಟ್ಟೇ 3,959 ಕೋಟಿ ರೂಪಾಯಿಗಳು. ಇದಕ್ಕೆ ಪ್ರತಿಯಾಗಿ ವೆಚ್ಚ ತೋರಿಸಿದ್ದು 4,238 ಕೋಟಿ ರೂಪಾಯಿಗಳನ್ನು. ವಾಸ್ತವವಾಗಿ ಪಾಲಿಕೆಯ ಆದಾಯವೇ 3,639 ಕೋಟಿ ರೂಪಾಯಿಗಳಿದ್ದಾಗಲೂ ಕೊರತೆ ಬಜೆಟ್ಟನ್ನು ಮಂಡಿಸಿದ ಆಡಳಿತಾಧಿಕಾರಿಗಳು ಶೇಕಡ 91.91 ರಷ್ಟು ವರಮಾನದ ಪ್ರಮಾಣವನ್ನು ಸದ್ಬಳಕೆ ಮಾಡಿಕೊಂಡಿದ್ದರು.


ಆದರೆ ಅದರ ಮುಂದಿನ ವರ್ಷ ಅಂದರೆ 2010-11ರ ಸಾಲಿಗೆ ಮೇಯರ್ ಆದ ಅಶೋಕ್ ಛೇಲಾ ಎಸ್.ಕೆ.ನಟರಾಜ್ ಏಕಾಏಕಿ 8,446 ಕೋಟಿ ರೂಪಾಯಿಗಳ ಭಾರೀ ಬಜೆಟ್ ಮಂಡಿಸಿಬಿಟ್ಟರು. ಆಗ ವಿರೋಧ ಪಕ್ಷದ ನಾಯಕರಾಗಿದ್ದ ಕುರುಬರಹಳ್ಳಿ ನಾಗರಾಜ್ ಇದೊಂದು ಬೋಗಸ್ ಬಜೆಟ್ಟೆಂದು ನೇರವಾಗೇ ಪ್ರತಿಭಟಿಸಿದ್ದರು. ಪಾಲಿಕೆಯ ಆದಾಯವೇ ಮೂರೂವರೆ ಸಾವಿರ ಕೋಟಿಗಳಷ್ಟಿರುವಾಗ ಸರಿಸುಮಾರು ಎಂಟೂವರೆ ಸಾವಿರ ಕೋಟಿಯಷ್ಟು ಬಜೆಟ್ ಮಂಡಿಸಿ ತನ್ನ ಭುಜವನ್ನು ತಾನೇ ತಟ್ಟಿಕೊಂಡಿದ್ದ ಎಸ್.ಕೆ. ನಟರಾಜ್ ಬಂಡವಾಳ ಒಂದೇ ತಿಂಗಳಿಗೆ ಬಯಲಾಗಿತ್ತು.

ವಾಸ್ತವವಾಗಿ ನಟರಾಜ್ ಮೇಯರ್‌ಗಿರಿಯಲ್ಲಿ ಬಂದ ವರಮಾನ ಕೇವಲ 3319 ಕೋಟಿ ಮಾತ್ರ. ಅದು ಮಂಡಿಸಿದ ಬಜೆಟ್ಟಿನ ಶೇಕಡ 39.29 ರಷ್ಟು ಮಾತ್ರ. ಇಷ್ಟಾದ ಮೇಲೂ ಮಾಡಿದ ವೆಚ್ಚ ಮಂಡಿಸಿದ ಬಜೆಟ್ಟಿನ ಶೇ.40.92 ಮಾತ್ರ. ಇದರರ್ಥ ಮೇಯರ್ ನಟರಾಜ್ ಶೇ.60ರಷ್ಟು ಹೆಚ್ಚುವರಿ ಲೆಕ್ಕ ತೋರಿಸಿ ಬೋಗಸ್ ಬಜೆಟ್ ಮಂಡಿಸಿದ್ದರು. ಆದಾಯವೇ ಇಲ್ಲದೆ, ಯಾವ ಅನುದಾನವೂ ಇಲ್ಲದೆ ವ್ಯರ್ಥ ದುಪ್ಪಟ್ಟು ಮೊತ್ತದ ಬಜೆಟ್ ಮಂಡಿಸಿದ್ದ ನಟರಾಜ್ ಉದ್ದೇಶವೇ ಬೇರೆಯಿತ್ತು. ಅದು ಉತ್ಪ್ರೇಕ್ಷೆಯ ಬಜೆಟ್ಟಿನ ಲೆಕ್ಕ ತೋರಿಸಿ ಬ್ಯಾಂಕ್ ಸಾಲ ಪಡೆಯುವುದು!

## ಏರಿದ ಸಾಲ

ಆ ನಂತರ ಮೇಯರ್ ಆದ ಶಾರದಮ್ಮ ಮಾಡಿದ್ದೂ ಇದನ್ನೇ. 2011-12 ಸಾಲಿಗೆ ಶಾರದಮ್ಮ 9,315 ಕೋಟಿ ರೂಪಾಯಿಗಳ ದಾಖಲೆಯ ಬಜೆಟ್ ಮಂಡಿಸಿದ್ದನ್ನು ಪತ್ರಿಕೆಗಳು ದೊಡ್ಡ ದೊಡ್ಡ ಹೆಡ್ಡಿಂಗ್ ಕೊಟ್ಟು ಪ್ರಕಟಿಸಿದವು. ವಾಸ್ತವವಾಗಿ ಆ ವರ್ಷ ಪಾಲಿಕೆ ಗಳಿಸಿದ ಆದಾಯವೇ 3,934 ಕೋಟಿ. ಅಂದರೆ ಮಂಡಿಸಿದ ಬಜೆಟ್ಟಿನ ಶೇ.42.23 ಮಾತ್ರ. ಅದಕ್ಕೆ 3809 ಕೋಟಿಯಷ್ಟು ವೆಚ್ಚವಾಗಿ ಹೋಗಿತ್ತು, ಇದು ಮಂಡಿಸಿದ ಬಜೆಟ್ಟಿಗೆ ಶೇ. 40.53 ರಷ್ಟಾಗಿತ್ತು. ಈ ವರ್ಷವೂ ವಾಸ್ತವದ ಆದಾಯಕ್ಕಿಂತ ಶೇ. 60ರಷ್ಟು ಪೊಳ್ಳು ಬಜೆಟ್ಟನ್ನೇ ಶಾರದಮ್ಮ ಮಂಡಿಸಿ ನೂರಾರು ಕೋಟಿ ರೂಪಾಯಿಗಳ ಬ್ಯಾಂಕ್ ಸಾಲ ಎತ್ತಿದರೇ ಹೊರತು ವೆಚ್ಚವೂ ತಗ್ಗಲಿಲ್ಲ ಆದಾಯವೂ ಹೆಚ್ಚಲಿಲ್ಲ.

ಇನ್ನು 2012-13 ನೇ ಸಾಲಿಗೆ ಮೇಯರ್ ಆದ ವೆಂಕಟೇಶ್ ಮೂರ್ತಿಯದ್ದೂ ಇವರೆಲ್ಲರನ್ನೂ ಮೀರಿಸಿದ ಬಜೆಟ್ಟು. ತಲೆಬುಡ ತಿಳಿಯದೇ 9,729 ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿಯೇ ಬಿಟ್ಟರು. ಇನ್ನೇನು ವೆಂಕಟೇಶ್ ಮೂರ್ತಿ ಅವರಿಗಿನ್ನು ನಾಲ್ಕೈದು ತಿಂಗಳಷ್ಟೆ ಬಾಕಿಯಿದೆ. ಈಗಾಗಲೇ 3 ಸಾವಿರ ಕೋಟಿ ವೆಚ್ಚವಾಗಿದೆ. ಬಂದ ಆದಾಯ ಕೇವಲ 2483 ಕೋಟಿ ಮಾತ್ರ. ಇದರರ್ಥ ಮಂಡಿಸಿದ ಬಜೆಟ್ಟಿನ ಶೇ. 25.52 ರಷ್ಟು ಆದಾಯವಾದರೆ ಖರ್ಚು ಶೇ. 30.11 ಮಾತ್ರ. ಇಲ್ಲದ



ಉತ್ಪತ್ತಿಗೆ ಸಲ್ಲದ ಲೆಕ್ಕ ತೋರಿಸಿ ದುಪ್ಪಟ್ಟು ಲೆಕ್ಕದ ಬಜೆಟ್ಟನ್ನು ತೋರಿಸಿ ನೂರಾರು ಕೋಟಿ ರೂಪಾಯಿಗಳ ಬ್ಯಾಂಕ್ ಸಾಲ ಎತ್ತಿದ್ದು ಬಿಟ್ಟರೆ ವೆಂಕಟೇಶ್ ಮೂರ್ತಿ ಕಡೆದದ್ದು ಮತ್ತೇನಿಲ್ಲ.





...ತನ್ನೇ ಸ್ಥಗಿತಗೊಳಿಸಿದ್ದಾನೆ. ಪಾಲಿಕೆಯ ವಿವಿಧ ...ಗಳ ನಿರ್ಮಾಣ ಗುತ್ತಿಗೆ ಹಿಡಿದ ಮೂವತ್ತಕ್ಕೂ ಕಂಟ್ರಾಕ್ಟರುಗಳು ಕಾಮಗಾರಿಯನ್ನೇ ...ಿಳಿಸಿದ್ದಾರೆ. ಪಾಲಿಕೆಯ ವ್ಯಾಪ್ತಿಗೊಳಪಡುವ ಸರ್ಕಾರಿ ...ಳ ಶಿಕ್ಷಕರಿಗೆ ಕಳೆದೆರಡು ತಿಂಗಳಿಂದ ಸಂಬಳವಿಲ್ಲ. ...ಗಳ ನಿಯಂತ್ರಣದ ಗುತ್ತಿಗೆ ಹಿಡಿದವರು, ಕೆರೆಗಳ ...ಹಣೆಯ ಸಿಬ್ಬಂದಿ, ಬ್ಯಾನರ್-ಫ್ಲೆಕ್ಸ್‌ಗಳನ್ನು ...ಾಕುವವರು, ಪಾಲಿಕೆ ಆಸ್ಪತ್ರೆಗಳಿಗೆ ಔಷಧಿ; ಹೀಗೆ ...ಎಂಪಿಯ ಯಾವುದಕ್ಕೂ ಕಳೆದೆರಡು ವರ್ಷಗಳಿಂದ ಬಿಡುಗಡೆಯಾಗಿಲ್ಲ.

## ಬಂಡಲ್ ಬಜೆಟ್

...ಿದ ವಿಧಾನಸಭಾ ಚುನಾವಣೆಗೂ ಮುನ್ನ ರಾಜಧಾನಿ ...ಳೂರಿನ ನೆಮ್ಮದಿಗೆಂದು ಬಿಜೆಪಿ ಮಾಡಿದ ...ನಾದರೂ ಎಂಥಾದ್ದು?

...ಷ್ಟೂ ಕೆರೆಗಳನ್ನು ಸಂರಕ್ಷಿಸುತ್ತೇವೆಂದರು. ಸಂಚಾರ ...ಯವೇ ಇಲ್ಲದಂತೆ ಮಾಡುತ್ತೇವೆಂದರು. ನೂರಿದ್ದ ...ಗಳ ಸಂಖ್ಯೆಯನ್ನು 198 ಕ್ಕೆ ಏರಿಸಿದರು. ...ನಮುತ್ತಲ ಏಳೂ ಸಿಎಂಸಿಗಳನ್ನು ಪಾಲಿಕೆ ...ೊಳಪಡಿಸಿದರು. ಕಸದ ಸಮಸ್ಯೆಯೇ ಇರುವುದಿಲ್ಲ ...ು. ರಸ್ತೆಗಳಲ್ಲಿ ಗುಂಡಿಗಳೇ ಇರುವುದಿಲ್ಲ ಎಂದರು. ...-, ಉದ್ಯಾನವನಗಳಿಗೆಲ್ಲ ಜೀವ ಕೊಡುತ್ತೇವೆಂದರು. ...ುವ ನೀರಿನ ಸಮಸ್ಯೆಯನ್ನೇ ನೀಗಿಸುತ್ತೇವೆಂದರು. ...ದರೆ ಬಿಜೆಪಿಗೆ ಅಧಿಕಾರ ಬಂದು ಯಡ್ಡಿ ...ಮುಖ್ಯಮಂತ್ರಿಯಾಗಿ ಇದೀ ಪಾಲಿಕೆ ಅಶೋಕ್ ...ಕ್ಕೊಳಪಟ್ಟ ಮೇಲೆ ನಡೆದದ್ದಾದರೂ ಏನು? 2009-... ಸಾಲಿನಲ್ಲಿ ಪಾಲಿಕೆಗಿನ್ನು ಚುನಾವಣೆಯಾಗಿರಲಿಲ್ಲ. ...ಆಡಳಿತಾಧಿಕಾರಿಯೇ ಇಡೀ ಪಾಲಿಕೆಯನ್ನು


# ಹುಬ್ಬಳ್ಳಿ ಬಿಟ್ಟರೆ ಶೆಟ್ಟರ್‌ಗೆ ಬೆಂಗಳೂರೇನು ಗೊತ್ತು?

- ಶ್ರೀನಿವಾಸ್, ಗುತ್ತಿಗೆದಾರರ ಸಂಘದ ಅಧ್ಯಕ್ಷ


ಆರ್.ಜೆ. ಶ್ರೀನಿವಾಸ್

ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಜೆ. ಶ್ರೀನಿವಾಸ್ ಪ್ರಕಾರ ದುರ್ಗತಿ ನಿವಾರಣೆಗೊಳ್ಳಲು ಇನ್ನು ಎರಡು ವರ್ಷಕಾಲ ಯಾವುದೇ ಕಾಮಗಾರಿ, ಯೋಜನೆ ಕೈಗೆತ್ತಿಕೊಳ್ಳದಿದ್ದರಷ್ಟೇ ಪರಿಹಾರ ಸಾಧ್ಯ.

ಇನ್ನೆರಡು ವರ್ಷಗಳ ಕಾಲ ಯಾವ ಕಾಮಗಾರಿ ಮಾಡದೇ ಹೋದರೂ ಬೆಂಗಳೂರಿಗೇನೂ ಪ್ರಳಯವಾಗಲ್ಲ. ಏಕೆಂದರೆ ಮಾಡುವ ಕಾಮಗಾರಿಗಳ ಹಣೆಬರಹ ತಾನೇ ಇನ್ನೇನು? ಮೋರಿ ಹೂಳೆತ್ತುವುದು, ಹಳೇ ಬಿಲ್ಲಿಗೆ ಹೊಸಬಿಲ್ಲು ಹಾಕುವುದು ಇದೇ ತಾನೆ? ಇದು ಪಾಲಿಕೆ ಕೌನ್ಸಿಲರ್‌ಗಳ ಹೊಟ್ಟೆ ತುಂಬಿಸುವುದನ್ನು ಬಿಟ್ಟರೆ ಪಾಲಿಕೆ ಬೊಕ್ಕಸಕ್ಕೆ ಕನ್ನ ಹಾಕುವುದಕ್ಕಷ್ಟೇ ಕಾರಣವಾಗುತ್ತದೆ. ಇ ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ನಡೆದಿದ್ದರೆ, ಲ್ಯಾಂಡ್ ಆರ್ಮಿಯನ್ನು ಕಾಮಗಾರಿಯಿಂದ ಹೊರಗಿಟ್ಟಿದ್ದರೆ ಕನಿಷ್ಠ ಪ್ರಾಮಾಣಿಕ ಗುತ್ತಿಗೆದಾರರಿಗಾದರೂ ಬೆಲೆಯಿರುತ್ತಿತ್ತು.


ಸೋಮಣ್ಣ

ಈಗೇನು 1300 ಕೋಟಿ ರೂಪಾಯಿಗಳ ಬಿಲ್ ಬಾಕಿಯಿದೆಯೋ ಅದೆಲ್ಲವೂ ಸ್ಥಳೀಯ, ಸಣ್ಣಪುಟ್ಟ ಕಂಟ್ರಾಕ್ಟರ್‌ಗಳು ಸಾಲಸೋಲ ಮಾಡಿ ಮುಗಿಸಿದ ಕಾಮಗಾರಿಗಳದ್ದು ಮಾತ್ರ. ಪ್ರಭಾವಿಗಳು, ಆಂಧ್ರ ಮೂಲದವರು, ಖದೀಮರೆಲ್ಲ ಈಗಾಗಲೇ ಬಿಲ್ ಗಿಟ್ಟಿಸಿದ್ದಾರೆ. ಮಂತ್ರಿಗಳು, ಅಧಿಕಾರಿಗಳು, ಇಂಜಿನಿಯರ್‌ಗಳಿಗೆಲ್ಲ ಕಮೀಶನ್ನೂ ಸಿಕ್ಕಿದೆ. ಆದರೆ ಪ್ರಾಮಾಣಿಕವಾಗಿ ಕಾಮಗಾರಿ ಮಾಡಿದ, ಸ್ಥಳೀಯ, ಕರ್ನಾಟಕ ಮೂಲದ ಕಂಟ್ರಾಕ್ಟರ್‌ಗಳ ಕಣ್ಣೀರನ್ನೇ ಬಿಜೆಪಿ ಸರ್ಕಾರ ಕುಡಿಯುತ್ತಿದೆ. ಈ ಬಗ್ಗೆ ಸಿದ್ದರಾಮಯ್ಯ, ಕುಮಾರಸ್ವಾಮಿ, ಅಶೋಕ್, ಸೋಮಣ್ಣ, ಸುರೇಶ್‌ಕುಮಾರ್ ಎಲ್ಲರಿಗೂ ಮನವಿ ಕೊಟ್ಟು ಸಾಕಾಗಿದೆ. ಆತ್ಮಹತ್ಯೆ ಬಿಟ್ಟರೆ ನೊಂದ ಗುತ್ತಿಗೆದಾರನಿಗೆ ಬೇರೆ ದಾರಿಯೆಲ್ಲಿದೆ? ಮುಖ್ಯಮಂತ್ರಿ ಶೆಟ್ಟರ್‌ಗೆ ಹುಬ್ಬಳ್ಳಿ ಬಿಟ್ಟರೆ ಬೆಂಗಳೂರಿನ ಯಾವ ರಸ್ತೆ ಗೊತ್ತಿದೆ.

ಇದು ಸಾವಿರಕ್ಕೂ ಅಧಿಕ ಬಿಬಿಎಂಪಿ ಗುತ್ತಿಗೆದಾರರ ನಾಯಕ ಶ್ರೀನಿವಾಸ್ ಪ್ರಶ್ನೆ. ಉತ್ತರಿಸಬೇಕಾದದ್ದು ಸಿಎಂ ಶೆಟ್ಟರ್!

ಈಗ ಬಿಜೆಪಿ ಸರ್ಕಾರದ ಅವಧಿಯೇ ಮುಗಿಯುತ್ತಿದೆ. ವಿವಿಧ ಗುತ್ತಿಗೆದಾರರಿಗೆಂದು ಪಾಲಿಕೆ ನೀಡಬೇಕಾದ ಬಾಕಿ ಮೊತ್ತ 1300 ಕೋಟಿ ರೂಪಾಯಿಗೇರಿದೆ. ವಿವಿಧ ಬ್ಯಾಂಕ್‌ಗಳಿಂದ ಪಡೆದ ಸಾಲದ ಒಟ್ಟು ಮೊತ್ತ 2012ರ ನವೆಂಬರ್ ಹೊತ್ತಿಗೆ 2827 ಕೋಟಿ ರೂಪಾಯಿಗಳಷ್ಟಾಗಿದೆ. ಇದರ ಬಡ್ಡಿಯೇ ನೂರಾರು ಕೋಟಿಗಳಷ್ಟಾಗುತ್ತದೆ. ಕಳೆದ ಮೂರು ತಿಂಗಳಿಂದ ಅಸಲು ಹಾಳಾಗಲಿ ಬಡ್ಡಿ ಕಟ್ಟುವುದಕ್ಕೂ ಪಾಲಿಕೆ ಬಳಿ ದುಡ್ಡಿಲ್ಲ. ಪಡೆದ ಸಾಲ ಕಟ್ಟದೆ ಹೋದರೆ ಜಪ್ತಿಗಾಗಿ ಬ್ಯಾಂಕುಗಳು ಕೋರ್ಟ್ ಮೆಟ್ಟಿಲೇರುತ್ತವೆ. ಇನ್ನು ಕಾಮಗಾರಿ ಮುಗಿಸಿ ಬಸವಳಿದ ಗುತ್ತಿಗೆದಾರರು ತಮ್ಮ ಬಿಲ್ಲಿನ ವಸೂಲಿಗಿಳಿದರೆ ಆಗಲೂ ಪಾಲಿಕೆ ಕಟಕಟೆಯಲ್ಲಿ ಕೈಕಟ್ಟಿ ನಿಲ್ಲಬೇಕು.

ಅಸಹ್ಯದ ಪರಮಾವಧಿಯೆಂದರೆ ಪಡೆದ ಸಾಲಕ್ಕೆ ಮಾಡಿಸಿದ ಕಾಮಗಾರಿಗೆ ಪಾಲಿಕೆ ಲೆಕ್ಕ ಚುಕ್ತಾ ಮಾಡಲೇಬೇಕೆಂದರೆ ಒಂದೋ ತನ್ನ ಆಸ್ತಿಪಾಸ್ತಿಗಳನ್ನು ಮಾರಬೇಕು. ಅಥವಾ ಪಾರ್ಕು, ಆಟದ ಮೈದಾನಗಳನ್ನು ಅಡವಿಡಬೇಕು. ಏಕೆಂದರೆ ಇನ್ನು ಮುಂದೆ ಹೊಸ ಸಾಲ ಎತ್ತಲು ಪಾಲಿಕೆಯ ಮಟ್ಟಿಗೆ ಯಾವ ಬ್ಯಾಂಕುಗಳೂ ಬಾಕಿ ಉಳಿದಿಲ್ಲ. ಇದ್ದ ಬ್ಯಾಂಕುಗಳು ಪಾಲಿಕೆಯತ್ತ ತಲೆ ಹಾಕುವುದೂ ಇಲ್ಲ. ಇನ್ನು ಹುಡ್ಕೋ, ಯುನೆಸ್ಕೋ, ಯೂನಿಸೆಫ್‌ಗಳಿಗೆ ಬಿಬಿಎಂಪಿ ಎಂದರೇನೇ ಅಸಹ್ಯ. ಕೊಟ್ಟ ಸಾಲದ ವಸೂಲಿಗೆ ಬ್ಯಾಂಕುಗಳು ಯಾವ ಪಾರ್ಕುಗಳನ್ನು, ಯಾವ ಸರ್ಕಾರಿ ಕಟ್ಟಡಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತವೋ ಗೊತ್ತಿಲ್ಲ. ಬಿಬಿಎಂಪಿಯಂತೂ ದಿವಾಳಿಯೆದ್ದಿದೆ.

● ರಾ.ಸೋಮನಾಥ್



# ಜಮಖಂಡಿಗೆ ನಿರಾಣಿ ಎಂಟ್ರಿ

## ಹಣದ ಹೊಳೆಯಲ್ಲಿ ಮುಂದಿನ ಚುನಾವಣೆ

ಬಿ.ಜೆ.ಪಿ. ಸರಕಾರದುದ್ದಕ್ಕೂ ಮಂತ್ರಿಯಾಗಿ ಯಡ್ಡಿಯ ಮಾನಸ ಪುತ್ರನಂತೆ ಮೆರೆದಾಡಿದ ಭಾರಿ ಕೈಗಾರಿಕಾ ಮಂತ್ರಿ ಮುರುಗೇಶ ನಿರಾಣಿ ಈಗ ಚುನಾವಣೆ ಹತ್ತಿರ ಬರುತ್ತಿದ್ದಂತೆ ಸಣ್ಣಗೆ ನಡುಗಲಾರಂಭಿಸಿದ್ದಾರೆ. ಐದು ವರ್ಷದ ಅಧಿಕಾರದ ಅವಧಿಯಲ್ಲಿ ತನ್ನ ಸ್ವಂತ ಮತಕ್ಷೇತ್ರ ಬೀಳಗಿಯ ಜನರಿಗೆ ಮಾಡಿದ್ದು ಏನಾದರೂ ಇದೆಯಾ ಎಂದು ತಡಕಾಡಿದರೆ ಹೇಳಿಕೊಳ್ಳುವಂತದ್ದೇನೂ ಕಣ್ಣಿಗೆ ಬಿದ್ದಿಲ್ಲ. ರಾಜಕಾರಣವನ್ನು ವ್ಯಾಪಾರವೆಂದು ಭಾವಿಸಿ ಬರೀ ಸ್ವಂತ ಅಭಿವೃದ್ಧಿಯಲ್ಲೇ ಕಾಲ ಕಳೆದ ನಿರಾಣಿಗೆ ಬೀಳಗಿಯ ಜನ ಸರಿಯಾದ ಪಾಠ ಕಲಿಸಲು ತಯಾರಾಗುತ್ತಿದ್ದಂತೆ ಈ ಭಾರಿ ಕುಳ ಜಮಖಂಡಿಗೆ ಎಂಟ್ರಿಕೊಟ್ಟಿದೆ. ಯಡಿಯೂರಪ್ಪನವರ ಕೆ.ಜೆ.ಪಿ ಪಕ್ಷದಿಂದ ಜಮಖಂಡಿ ಮತ ಕ್ಷೇತ್ರದಲ್ಲಿ ನಿರಾಣಿ ಸ್ಪರ್ಧಿಸುವುದು ಖಾತ್ರಿಯಾಗುತ್ತಿದ್ದಂತೆ ನಿರಾಣಿ ಹರಿಸುವ ಹಣದ ಹೊಳೆಯ ಭಯದಿಂದ ಬೇರೆ ಬೇರೆ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳ ಮನದಲ್ಲೂ ತಳಮಳ ಶುರುವಾಗಿದೆ.

### ಅಭಿವೃದ್ಧಿ ಕಾಣದ ಬೀಳಗಿ

ನಿರಾಣಿಯ ಬಣ್ಣಬಣ್ಣದ ಮಾತು, ಮಾಡುವ ನಖರಾಗೆ ಮರುಳಾದ ಬೀಳಗಿಯ ಜನತೆ ಅತಿಯಾಗಿ ಹಿಂದುಳಿದಿರುವ ತಮ್ಮ ಕ್ಷೇತ್ರದಲ್ಲಿ ಏನಾದರೂ ಸುಧಾರಣೆಯಾಗಬಹುದು ಎಂಬ ಬಹಳಷ್ಟು ನಿರೀಕ್ಷೆಯನ್ನಿಟ್ಟುಕೊಂಡು ಕಳೆದ ಸಾರಿ ಆತನನ್ನು ಆರಿಸಿ ತಂದಿದ್ದರು. ಚುನಾವಣೆಯಲ್ಲಿ ಗೆದ್ದದ್ದು, ಎಂಎಲ್‌ಎ ಆದದ್ದು ಸ್ವಯಂ ಅಭಿವೃದ್ಧಿಗೆ ಜನ ಕೊಟ್ಟ ಗ್ರೀನ್‌ಸಿಗ್ನಲ್ ಎಂದು ಭಾವಿಸಿದ ನಿರಾಣಿ ಬೀಳಗಿ ಮತಕ್ಷೇತ್ರದ ಅಭಿವೃದ್ಧಿಯ ಬಗ್ಗೆ ತಲೆ ಕೆಡಿಸಿಕೊಂಡದ್ದು ಅಷ್ಟಕ್ಕಷ್ಟೇ. ತನ್ನ ತಮ್ಮ ಜಿಲ್ಲಾ ಪಂಚಾಯತ್ ಸದಸ್ಯ ಹಣಮಂತ ನಿರಾಣಿಯನ್ನು ಬೀಳಗಿಯ ಉಸ್ತುವಾರಿಗೆ ನೇಮಿಸಿ ತಾನು ಮಾತ್ರ ಯಡ್ಡಿಯ ಬಗಲಲ್ಲಿ ಮೆರೆದಾಡತೊಡಗಿದ. ಕಡು ಭ್ರಷ್ಟ ಯಡ್ಡಿಯ ಆಪ್ತ ವಲಯದಲ್ಲಿ ಪ್ರಮುಖನಾದ ನಂತರವಂತೂ ಯಡ್ಡಿಯ ಬೆಂಬಲ ಪಡೆದು ತನ್ನ ಉದ್ಯಮ ಸಾಮ್ರಾಜ್ಯದ ವಿಸ್ತರಣೆಗೆ ನಿಂತುಬಿಟ್ಟ. ನೋಡನೋಡುತ್ತಿದ್ದಂತೆ ಮುಧೋಳದ ನಿರಾಣಿ ಸಕ್ಕರೆ ಕಾರ್ಖಾನೆ ಕರ್ನಾಟಕದ ಅತಿ ದೊಡ್ಡ ಕಾರ್ಖಾನೆಯಾಯಿತು. ಸಿಮೆಂಟ್ ಕಾರ್ಖಾನೆ ಖರೀದಿಯಾಯಿತು. ಪಾಲುದಾರಿಕೆಯಲ್ಲಿ ಬೀಳಗಿ, ಹಿಪ್ಪರಗಿ, ಕುಳಗೇರಿ ಕ್ರಾಸ್ ಮುಂತಾದ ಹಲವಾರು ಕಡೆ ಸಕ್ಕರೆ ಕಾರ್ಖಾನೆಗಳು ತಲೆ ಎತ್ತಿ ನಿಂತವು. ಸಾವಿರಾರು ಎಕರೆ ಬೇನಾಮಿ ಜಮೀನು ಖರೀದಿಯಾಯಿತು. ಸರಕಾರಿ ಮಟ್ಟದಲ್ಲಿ ಭಾರೀ ಕಮಿಷನ್ ತಂದುಕೊಡುವ ಜಾಗತಿಕ ಕಂಪನಿಗಳ ಬಂಡವಾಳ ಹೂಡಿಕೆಗೆ ನಾಡನ್ನು ಒತ್ತೆ ಇಡುವ ಸಮಾವೇಶಗಳಾದವು. ಹಲವಾರು ಕಡೆ ಹೊಸ ಫ್ಯಾಕ್ಟರಿ ಕಟ್ಟುವ ತಯಾರಿಗಳಾದವು. ಇಷ್ಟೆಲ್ಲ ಕೆಲಸಗಳ ಮಧ್ಯೆ ಮತ ಕ್ಷೇತ್ರದ ನೆನಪಾದದ್ದು ಇನ್ನೇನು ಯಾವಾಗ ಬೇಕಾದರೂ ಸರಕಾರ ಬಿದ್ದು ಚುನಾವಣೆ ಬರಬಹುದು ಎಂಬಂತಹ ಪರಿಸ್ಥಿತಿ ನಿರ್ಮಾಣವಾದಾಗ. ಆದರೆ ಬೀಳಗಿಯಲ್ಲಿ ಜನರಿಗಾಗಿ ತಾನು ಮಾಡಿದ ಯಾವ ಘನಕಾರ್ಯಗಳು ತನ್ನನ್ನು ಗೆಲ್ಲಿಸಲು ಸಾಧ್ಯವಿಲ್ಲ ಎಂಬ ಸತ್ಯ ಅರಿವಾದೊಡನೆ ಈತ ಸೀದಾ ಎಂಟ್ರಿ ಕೊಟ್ಟಿರುವುದು ಪಕ್ಕದ ಜಮಖಂಡಿ ಮತಕ್ಷೇತ್ರಕ್ಕೆ.

### ಗರಿಗೆದರಿದ ಕೆ.ಜೆ.ಪಿ

ಜಮಖಂಡಿಯಲ್ಲಿ ಕೆ.ಜೆ.ಪಿ.ಯಿಂದ ಸ್ಪರ್ಧಿಸಲು ಬಯಸಿರುವ ನಿರಾಣಿ ತನ್ನ ಪರಮಾಪ್ತ ಶಿಷ್ಯ ಉಮೇಶ್ ಮಹಾಬಲ ಶೆಟ್ಟಿ ಮೂಲಕ ತನ್ನ ಚಟುವಟಿಕೆ ಆರಂಭಿಸಿದ್ದಾನೆ. ಬೆಂಗಳೂರಿನಿಂದ ಹಣದ ಥೈಲಿಗಳೊಂದಿಗೆ ಬಂದಿಳಿದಿರುವ ಮಹಾಬಲ ಶೆಟ್ಟಿ ಈ ಭಾಗದ ಬೇರೆ ಬೇರೆ ಪಕ್ಷದ ಮುಖಂಡರೊಂದಿಗೆ ಪ್ರಥಮ ಸುತ್ತಿನ ಮಾತುಕತೆ ಆರಂಭಿಸಿದ್ದಾನೆ. ಪ್ರತಿ ಹಳ್ಳಿಯ ಬಿ.ಜೆ.ಪಿ. ಮುಖಂಡರನ್ನು ಭೇಟಿಯಾಗಿ ಅವರ ಬೇಕು-ಬೇಡಗಳನ್ನು ವಿಚಾರಿಸುತ್ತಿದ್ದಾನೆ. ನಗರದ ತುಂಬ ಹೊಸವರ್ಷದ ಶುಭಾಶಯದ ನೆಪದಲ್ಲಿ ನಿರಾಣಿಯ ಬ್ಯಾನರ್‌ಗಳು ರಾರಾಜಿಸುತ್ತಿವೆ. ಸಮಾಜ ಸೇವೆ ಹೆಸರಲ್ಲಿ ಯೋಗ ಧ್ಯಾನ ಶಿಬಿರಗಳು, ಪ್ರಾಯೋಜಿತ ಕಾರ್ಯಕ್ರಮಗಳು ಶುರುವಾಗಿವೆ. ಸಂಪರ್ಕದಲ್ಲಿರುವ ಸಂಘಟನೆಗಳನ್ನು ಬುಕ್ ಮಾಡುವ ಕೆಲಸವು ಸಾಗಿದೆ.

### ಕೆ.ಜೆ.ಪಿ.ಗೆ ಲಿಂಗಾಯತರ ಬಲ

ನಿರಾಣಿ ಒಬ್ಬ ಅಪ್ಪಟ ಜಾತಿವಾದಿ ರಾಜಕಾರಣಿ. ಅಧಿಕಾರಾವಧಿಯುದ್ದಕ್ಕೂ ಬರೀ ಸ್ವಜಾತಿಯವರನ್ನೇ ಓಲೈಸುತ್ತ ಬಂದಿದ್ದರಿಂದಾಗಿಯೇ ಬೀಳಗಿ ಮತಕ್ಷೇತ್ರದಲ್ಲಿ ಪ್ರಬಲವಾಗಿರುವ ರೆಡ್ಡಿ ಸಮುದಾಯ ತಿರುಗಿ ಬಿದ್ದಿದೆ. ಅದೇ ಕಾರಣಕ್ಕೆ ಬೀಳಗಿಯಲ್ಲಿ ಸ್ಪರ್ಧಿಸಿದರೆ ಸೋಲು ಖಚಿತ ಎಂದು ತೀರ್ಮಾನಿಸಿ ಜಮಖಂಡಿಯಲ್ಲಿ ಸ್ಪರ್ಧಿಸಲು ಅಣಿಯಾಗಿದ್ದಾನೆ. ಆದರೆ ಇಲ್ಲೂ ಸಹ ನಂಬಿರುವುದು ತನ್ನ ಸ್ವಜಾತಿ ಮುಖಂಡರು ಮತ್ತು ಮತದಾರರನ್ನೇ. ಮೂಲತಃ ಲಿಂಗಾಯತರ ಪ್ರಾಬಲ್ಯವಿರುವ ಜಮಖಂಡಿಯಲ್ಲಿ ಹಾಲಿ ಶಾಸಕ ಶ್ರೀಕಾಂತ ಕುಲಕರ್ಣಿ ಗೆದ್ದು ಬಂದಿರುವುದು ಆಕಸ್ಮಿಕ. ಸಿದ್ದು ನ್ಯಾಮಗೌಡರ ನಯವಂಚಕತನ ಹಾಗು ರೈತ ವಿರೋಧಿತನ ಕಂಡು ರೋಸಿಹೋಗಿದ್ದ ಲಿಂಗಾಯತರು ಅನಿವಾರ್ಯವಾಗಿ ಕುಲಕರ್ಣಿಗೆ ಮತ ನೀಡಿದ್ದರು. ಅದಕ್ಕೆ ತಮ್ಮ ಜಾತಿಯ ನಾಯಕ ಯಡಿಯೂರಪ್ಪ ಕುಮಾರಸ್ವಾಮಿಯಿಂದ ಮೋಸ ಹೋಗಿದ್ದಾರೆ, ಈ ಸಲವಾದರೂ ಸಿ.ಎಂ. ಆಗಲಿ ಎಂಬ ಲಿಂಗಾಯತರ ಹಂಬಲವೂ ಕುಲಕರ್ಣಿಗೆ ಬೆಂಬಲವಾಗಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಲಿಂಗಾಯತ ಮುಖಂಡರು, ತಮ್ಮದೇ ಜಾತಿಯ ತೇರದಾಳದ ಶಾಸಕ ಸಿದ್ದು ಸವದಿಯ ಆಣತಿಯಂತೆ ನಡೆದುಕೊಳ್ಳುತ್ತಿದ್ದಾರೆ. ಸವದಿ-ಕುಲಕರ್ಣಿ ಮಧ್ಯದ ಸಂಘರ್ಷದಿಂದಾಗಿ ಬಹುಪಾಲು ಲಿಂಗಾಯತ ಮುಖಂಡರು ಕುಲಕರ್ಣಿಯನ್ನು ವಿರೋಧಿಸುತ್ತಿದ್ದಾರೆ.

ಸವದಿ ತೇರದಾಳ ಮತಕ್ಷೇತ್ರದಲ್ಲಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡು ಸವದಿ ಬೆಂಬಲದೊಂದಿಗೆ ಲಿಂಗಾಯತರನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಹಣದ ಹೊಳೆಹರಿಸಿ ಇನ್ನಷ್ಟು ಮತಗಳನ್ನು ಖರೀದಿಸಿ ಗೆಲುವು ಸಾಧಿಸಬಹುದು ಎಂಬುದು ನಿರಾಣಿ ಲೆಕ್ಕಾಚಾರ. ಆದರೆ ಅದು ಅಷ್ಟು ಸುಲಭ ಸಾಧ್ಯವಿಲ್ಲ. ಏಕೆಂದರೆ ಯಡಿಯೂರಪ್ಪನವರ ಐದು ವರ್ಷದ ಆಡಳಿತ ವೈಖರಿ, ಲಿಂಗಾಯತ ಮಂತ್ರಿಗಳ ಹಗಲುದರೋಡೆ, ಲೈಂಗಿಕ ಹಗರಣಗಳು, ಜೈಲು ಯಾತ್ರೆಗಳು, ಹುಂಬತನಗಳಿಂದಾಗಿ ಇಡೀ ಸಮುದಾಯದ ಘನತೆ ಕುಗ್ಗಿದೆ ಎಂಬ ಭಾವನೆ ಲಿಂಗಾಯತ ಮುಖಂಡರು ಮತ್ತು ಮತದಾರರಲ್ಲಿದೆ. ಇವರಿಗಿಂತ ಕಾಂಗ್ರೆಸ್ ಆಡಳಿತವೇ ವಾಸಿ ಎಂದು ಸ್ವತಃ ಬಿಜೆಪಿ ಮುಖಂಡರೇ ಆಡಿಕೊಳ್ಳುತ್ತಿದ್ದಾರೆ. ಹಾಗಾಗಿ ಸಾರಾಸಗಟಾಗಿ ಲಿಂಗಾಯತರು ಇನ್ನೂ ಬಿಜೆಪಿಯಲ್ಲಿರುವ ಯಡ್ಡಿಯ ಬಲಗೈನಂತಿರುವ ಈಗ ಕೆಜೆಪಿಯಿಂದ ಸ್ಪರ್ಧಿಸ ಬಯಸಿರುವ ನಿರಾಣಿಗೆ ಬೆಂಬಲಿಸುವ ಸಾಧ್ಯತೆ ಅತೀ ಕಡಿಮೆ. ಇತ್ತ ಕಾಂಗ್ರೆಸ್‌ನಲ್ಲಿ ಸಿದ್ದು ನ್ಯಾಮಗೌಡ, ಜಗದೀಶ ಗಂಡಗುಂಟೆ, ರಾಮಣ್ಣ ಕಲೂತಿ ನಿಂಗಪ್ಪ ದೇವರವರ ಇವರಲ್ಲಿ ಯಾರಿಗೆ ಟಿಕೆಟ್ ಸಿಕ್ಕರೂ ಇವರೂ ಲಿಂಗಾಯತ ಸಮುದಾಯಕ್ಕೆ ಸೇರಿರುವುದರಿಂದ ಅಪಾರ ಪ್ರಮಾಣದ ಜಾತಿಬೆಂಬಲ ದೊರೆಯುತ್ತದೆ. ಜೊತೆಗೆ ಜೆಡಿಎಸ್‌ನಿಂದ ಸ್ಪರ್ಧಿಸ ಬಯಸುತ್ತಿರುವ ಬಿ.ಎಸ್. ಸಿಂಧೂರ ಆಗಲಿ ಕಾಡು ಮಾಳಿ ಆಗಲಿ ಲಿಂಗಾಯತ ಸಮುದಾಯದವರೇ ಆಗಿದ್ದಾರೆ. ಅವರಿಗೆ ಅಲ್ಪ ಪ್ರಮಾಣದಲ್ಲಾದರೂ ಸ್ವಜಾತಿ ಮತಗಳು ಹಂಚಿಕೆಯಾಗುತ್ತವೆ. ಇನ್ನೂ ಮೂಲ ಬಿ.ಜೆ.ಪಿ.ಯನ್ನೇ ನಂಬಿಕೊಂಡಿರುವ ಲಿಂಗಾಯತ ಮುಖಂಡರು ಕೆ.ಜೆ.ಪಿ.ಯನ್ನು ವಿರೋಧಿಸುತ್ತಾರೆ. ಅಲ್ಲಿಗೆ ನಿರಾಣಿಯ ಸ್ವಜಾತಿ ಮತಗಳ ಲೆಕ್ಕಾಚಾರ ತಲೆಕೆಳಗಾಗುತ್ತದೆ. ಇನ್ನು ಬೇರೆ ಸಮುದಾಯದ ಮತಗಳು ಬಹುಪಾಲು ಕಾಂಗ್ರೆಸ್ ಜೆ.ಡಿ.ಎಸ್., ಬಿ.ಎಸ್.ಆರ್. ಪಾಲಾಗಬಹುದೇ ವಿನಃ ಲಿಂಗಾಯತರ ಪಕ್ಷ ಎಂದು ಬ್ರ್ಯಾಂಡ್ ಆಗಿರುವ ಕೆ.ಜೆ.ಪಿ.ಗೆ ಒಲಿಯುವುದು ಬಹಳ ಕಡಿಮೆ ಪ್ರಮಾಣದಲ್ಲಿ.

ಅಲ್ಪಸಂಖ್ಯಾತ ಹಾಗು ಪರಿಶಿಷ್ಟ ಪಂಗಡಗಳ ಮತಗಳ ಸಂಖ್ಯೆಯೂ ಇಲ್ಲಿ ನಿರ್ಣಾಯಕವಾಗಿವೆ. ಇಲ್ಲಿ 22,000 ಕ್ಕೂ ಹೆಚ್ಚು ಅಲ್ಪಸಂಖ್ಯಾತ ಮತಗಳಿದ್ದರೆ ಹೆಚ್ಚು, ಇವುಗಳನ್ನೇ ಗಮನದಲ್ಲಿಟ್ಟುಕೊಂಡು ಬಿ.ಎಸ್.ಆರ್. ಕಾಂಗ್ರೆಸ್‌ನಿಂದ ಅಯೂಬ್ ಪಾರ್ಥನಹಳ್ಳಿ ಈಗಾಗಲೇ ಅಖಾಡಕ್ಕಿಳಿದಿದ್ದಾರೆ. ಸಾಕಷ್ಟು ಹಣ ಬಲ, ಯುವ ಕಾರ್ಯಕರ್ತರ ಪಡೆಯನ್ನು ಹೊಂದಿರುವ ಅಯೂಬ್‌ನನ್ನು ಕೂಡ ಈ ಸಾರಿ ನಿರ್ಲಕ್ಷಿಸುವಂತಿಲ್ಲ. ಇನ್ನು ಎಸ್‌ಸಿ/ಎಸ್‌ಟಿಯ ಬಹುಪಾಲು ಮತಗಳು ಕಾಂಗ್ರೆಸ್ ಪಾಲಾಗುವುದು ಖಚಿತ. ಇನ್ನೊಂದು ಪ್ರಮುಖ ಸಮುದಾಯವಾದ ಕುರುಬರ ಮತಗಳನ್ನು ಸೆಳೆದು ತಂದು ನಿರಾಣಿಗೆ ಕೊಡಬಲ್ಲ ಪ್ರಬಲ ಮುಖಂಡ ರ‍್ಯಾರೂ ನಿರಾಣಿ ಜೊತೆ ಅಥವಾ ಕೆ.ಜೆ.ಪಿಯಲ್ಲಿಲ್ಲ, ಕೊನೆಗೆ ಒಳಗೊಳಗ ಕಾಂಗ್ರೆಸ್‌ನ ದಳವಾಯಿಯ ಬೆಂಬಲವನ್ನೇ ಬೇಡಬೇಕಾಗಬಹುದು. ಇಷ್ಟೆಲ್ಲ ಅಡೆತಡೆಗಳಿದ್ದರೂ, ಗೆಲ್ಲುವ ಸಾಧ್ಯತೆ ಕಡಿಮೆ ಇದ್ದರೂ ನಿರಾಣಿಯ ಆಗಮನ ಇಲ್ಲಿನ ಉಳಿದ ಪಕ್ಷಗಳಿಗೆ ತಳಮಳವನ್ನುಂಟುಮಾಡಿದೆ. ಅದಕ್ಕಿರುವ ಏಕೈಕ ಕಾರಣ ನಿರಾಣಿ ಹರಿಸಲಿರುವ ಹಣದ ಹೊಳೆ.


ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಪಡೆದರೂ, ಯಾವ ಪಕ್ಷಕ್ಕೂ ಬಹುಮತ ಬರುವುದು ಕಷ್ಟ. ಆಗ ಕೆ.ಜೆ.ಪಿ.ಯಿಂದ ಗೆದ್ದವರೇ ನಿರ್ಣಾಯಕರಾಗುತ್ತಾರೆ. ಯಡಿಯೂರಪ್ಪನ ಬೆಂಬಲವಿರುವುದರಿಂದ ಮುಂದಿನ ಸಮ್ಮಿಶ್ರ ಸರಕಾರದಲ್ಲೂ ಮಂತ್ರಿಯಾಗಿ ಮೆರೆಯಬಹುದೆಂಬ ಲೆಕ್ಕಾಚಾರದಲ್ಲಿರುವ ನಿರಾಣಿ ಗೆಲ್ಲಲೇಬೇಕೆಂಬ ಆಕಾಂಕ್ಷೆಯಿಂದ ಜಮಖಂಡಿಯನ್ನು ಆಯ್ಕೆ ಮಾಡಿದ್ದಾಗಿದೆ. ಅ[illegible] ಗೆಲುವಿಗೆ ಬೇಕಾದಷ್ಟು ಹಣ ಸುರಿಯಲು ತಯಾರಾಗಿದ್ದಾನೆ. ಹೀಗಾಗಿಯೇ ಬಿ.ಜೆ.ಪಿ. ಸೇರಿದಂತೆ ಉಳಿದ ಎಲ್ಲ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳಲ್ಲಿ ತಳಮಳ ಶುರುವಾಗಿದೆ. ಉಳಿದ ಪಕ್ಷಗಳೂ ಹಣವಂತರನ್ನು ಹುಡುಕಿ ಟಿಕೆಟ್ ನೀಡಬೇಕಾಗಬಹುದು. ಹಾಗೇನಾದರೂ ಆದರೆ ಜಮಖಂಡಿಯ ಪ್ರಜ್ಞಾವಂತ ಮತದಾರರು ಅತೀ ಭ್ರಷ್ಟ ಚುನಾವಣೆಯೊಂದನ್ನು ಎದುರಿಸುವ ಅನಿವಾರ್ಯತೆ ಎದುರಾಗಬಹುದು.

● ಮಹಾಲಿಂಗಪ್ಪ ಆಲಬಾಳ

# ಗರ್ಭದಿಂದಲೇ ವೈದ್ಯನ ಕೈಹಿಡಿದ ಕೂಸು

ಇಲ್ಲಿರುವ ಫೋಟೋವನ್ನು ಸೂಕ್ಷ್ಮವಾಗಿ ಗಮನಿಸಿ. ಪುಟ್ಟ ಕೈಯೊಂದು ಒಬ್ಬರ ಬೆರಳನ್ನು ಹಿಡಿದಿರುವುದು ಕಾಣಿಸುತ್ತದಲ್ಲವೇ?

ಇದಾದದ್ದು ಹೀಗೆ. ಅಮೆರಿಕದ ಅಲಿಸಿಯಾ ಆ್ಯಟಿಕ್ಸ್ ಎಂಬ ತುಂಬು ಗರ್ಭಿಣಿ ತನ್ನ ಮಗುವಿಗೆ ಜನ್ಮ ನೀಡಲು ಆಸ್ಪತ್ರೆ ಸೇರಿದಳು. ಈಗ ಮಾಮೂಲಾಗಿರುವಂತೆ ಆಕೆಯ ಮೇಲೆ ಸಿಸೇರಿಯನ್ ಆಪರೇಷನ್ ಮಾಡಲು ವೈದ್ಯರು ಸಜ್ಜಾದರು. ಅಲಿಸಿಯಾಳ ಹೊಟ್ಟೆಯನ್ನು ಕತ್ತರಿಸುತ್ತಿದ್ದಂತೆ ಅದರೊಳಗಿದ್ದ ಮಗುವು ತನ್ನ ಕೈಚಾಚಿ ವೈದ್ಯರಾದ ಅಲನ್ ಸಾಯರ್ ಅವರ ಬೆರಳನ್ನು ಗಟ್ಟಿಯಾಗಿ ಹಿಡಿಯಿತು, ತನ್ನನ್ನು ಬೇಗನೆ ಹೊರ ಪ್ರಪಂಚಕ್ಕೆ ಕರೆದುಕೊಂಡು ಬನ್ನಿ ಎಂಬಂತೆ! ತಕ್ಷಣ ಸಾಯರ್ ಅವರು ಅಲ್ಲೇ ಇದ್ದ ಅಲಿಸಿಯಾಳ ಗಂಡನಿಗೆ "ಮಗು ನನ್ನ ಕೈಹಿಡಿದಿದೆ" ಎಂದರು. ಆಗ ಆ ಮಗುವಿನ ತಂದೆ ತನ್ನ ಕೈಯಲ್ಲಿದ್ದ ಕ್ಯಾಮೆರಾದಲ್ಲಿ ಈ ಫೋಟೋವನ್ನು ಕ್ಲಿಕ್ಕಿಸಿದರು. ಮಗುವನ್ನು ಪಡೆದು ಮನೆಗೆ ಹಿಂದಿರುಗಿದ ಅಲಿಸಿಯಾ ಆ ಫೋಟೋ ನೋಡಿ ಅಚ್ಚರಿಗೊಂಡಳು. ಅದನ್ನು ಬ್ಲೋಅಪ್ ಮಾಡಿಸಿ ಡಾ. ಸಾಯರ್ ಅವರಿಗೆ ಉಡುಗೊರೆಯಾಗಿ ನೀಡಲು ನಿರ್ಧರಿಸಿದಳು. ಇದೊಂದು ಅಪರೂಪದ ಫೋಟೋ ಎಂದು ಅರ್ಥಮಾಡಿಕೊಂಡ ಅಲಿಸಿಯಾ ಅದನ್ನು ಕಳೆದ ವಾರ ತನ್ನ ಫೇಸ್ ಬುಕ್‌ನಲ್ಲಿ ಹಾಕಿದಳು. ಕೆಲವೇ ದಿನಗಳಲ್ಲಿ ಆ ಫೋಟೋವನ್ನು ಲಕ್ಷಾಂತರ ಜನ ನೋಡಿದರು.




ನಮ್ಮ ಓದುಗರಿಗೆ ಇಲ್ಲಿ ಅದನ್ನು ನಾವು ಪ್ರಕಟಿಸುತ್ತಿದ್ದೇವೆ...

# ಎಲ್ಲಿದ್ದೀಯಾ ಭಗವಂತ?

ಅವತ್ತು ನಾನು ಆಫೀಸಿಗೆ ಕಾಲಿಡುತ್ತಿದ್ದಂತೆ ಗೇಟ್ ಡ್ಯೂಟಿಯಲ್ಲಿದ್ದ ಗಾರ್ಡ್ "ಭಗವಾನ್ ಜೀ, ತಾವೆಲ್ಲಿದ್ದೀರಿ?" ಎಂದು ಜೋರಾಗಿ ಕಿರುಚಿದ. ಅದನ್ನು ಕೇಳಿದ ನಾನು ತನ್ನ ಅಸ್ತಿತ್ವದ ಬಗ್ಗೆ ಉಭಯಸಂಕಟದಿಂದ ಆತ ಭಗವಂತನನ್ನು ಪ್ರಶ್ನಿಸುತ್ತಿದ್ದಾನೆ ಎಂದು ಭಾವಿಸಿದೆ. ಆದರೆ ಮರುಕ್ಷಣವೇ ಆತ ಇನ್ನೂ ಜೋರಾಗಿ "ಭಗವಾನ್ ಜೀ, ತಾವೆಲ್ಲಿದ್ದೀರಿ?" ಎಂದು ಮತ್ತೆ ಕೇಳಿದ. ನಾನು ಅಚ್ಚರಿಗೊಳ್ಳುವಂತೆ ಆತನ ಪ್ರಶ್ನೆಗೆ ಕೂಡಲೇ ಉತ್ತರ ಬಂತು. "ಇಲ್ಲಿ, ಕ್ಲಾಸಿಫೈಡ್ಸ್ ವಿಭಾಗದಲ್ಲಿದ್ದೀನಿ" ಎಂದಿತು 'ಭಗವಂತ'ನ ದನಿ. ನಾನು ನಿಬ್ಬೆರಗಾಗಿ ನಿಂತೆ. ಮರುಕ್ಷಣ 'ಭಗವಂತ' ನನ್ನ ಕಣ್ಣ ಮುಂದೆ ಪ್ರತ್ಯಕ್ಷನಾದ.

ಆಗ ನನಗೆ ಗೊತ್ತಾಯಿತು, ನಮ್ಮ ಕ್ಲಾಸಿಫೈಡ್ಸ್ ವಿಭಾಗದಲ್ಲಿ ಭಗವಾನ್ ಎಂಬ ಮನುಷ್ಯ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದಾನೆಂದು. ಆತನಿಗೆ ಭಗವಾನ್ ಎಂದು ಹೆಸರಿಡುವಾಗ ಆತನ ತಂದೆತಾಯಿಯ ಆಶೆಗಳೇನಾಗಿದ್ದವೋ? ಈಗ ಆತ ತನ್ನ ಹೆಸರಿಗೆ ತಕ್ಕಂತೆ ಬದುಕಲು ಯತ್ನಿಸುತ್ತಿದ್ದಾನೆಯೇ? ಎಂದೆಲ್ಲ ಯೋಚಿಸುತ್ತಾ ನನ್ನ ಕೊಠಡಿ ಸೇರಿದೆ.




ನನ್ನ ಕಾರ್ ಡ್ರೈವರ್ ಹೆಸರು ದೇವ್. ಅದರ ಬಗ್ಗೆ ನನಗೆ ಏನೂ ಅನ್ನಿಸದಿದ್ದುದರಿಂದ ನಾನು ಆತನನ್ನು ದೇವ್ ಎಂದೇ ಕರೆಯುತ್ತಿದ್ದೆ ಆದರೆ ಒಮ್ಮೆ ನನ್ನ ತಂಗಿ ತಕರಾರೆತ್ತಿ "ನೀನು ಆತನನ್ನು ದೇವ್ ಎಂದು ಕರೆಯುವುದು ಸರಿಯಲ್ಲ, ಅದು ತುಂಬಾ ರೋಮ್ಯಾಂಟಿಕ್ ಆಗಿ ಕೇಳಿಸುತ್ತದೆ" ಎಂದಳು. ಅಂದಿನಿಂದ ನಾನು ಆತನನ್ನು 'ದೇವ್ ಕುಮಾರ್' ಎಂದೇ ಕರೆಯಲಾರಂಭಿಸಿದೆ.

ನನ್ನ ಅಮ್ಮನ ಸಮಸ್ಯೆ ಇದಕ್ಕಿಂತ ಭಿನ್ನವಾಗಿತ್ತು, ಆಕೆಯ ಮನೆಯಲ್ಲಿ ಕೆಲಸ ಮಾಡುವವನನ್ನು ನನ್ನ ಅಮ್ಮ 'ಮಾಲಿ' ಎಂದು ಕರೆಯುತ್ತಿದ್ದಳು. ಅದಕ್ಕೆ ಆಕೆ ಕೊಡುತ್ತಿದ್ದ ಕಾರಣ ಆತ ಒಮ್ಮೊಮ್ಮೆ ಅಮ್ಮನ ಗಾರ್ಡನ್‌ನಲ್ಲೂ ಕೆಲಸ ಮಾಡುತ್ತಾನೆಂಬುದು. ಆದರೆ ವಾಸ್ತವವಾಗಿ ಸಮಸ್ಯೆ ಆತನ ನಿಜ ಹೆಸರಿನಲ್ಲಿತ್ತು, ಆತನ ಹೆಸರು 'ಪ್ರೇಮಿ'! ಅಮ್ಮನಿಗೆ ಆತನನ್ನು 'ಪ್ರೇಮಿ' ಎಂದು ಕರೆಯುವುದು ಶತಾಯಗತಾಯ ಸಾಧ್ಯವೇ ಇರಲಿಲ್ಲ!!

ನನ್ನ ಪರಿಚಯದ ಮಹಿಳೆಯೊಬ್ಬರ ಮನೆ ಕೆಲಸದವನ ಹೆಸರು ರಾಮ್ ಎಂಬುದಾಗಿದ್ದರೂ ಆಕೆ ಆತನನ್ನು 'ಪಪ್ಪು' ಎಂದೇ ಕರೆಯುತ್ತಿದ್ದರು. "ಯಾಕೆ" ಎಂದು ನಾನು ಕೇಳಿದಾಗ ಆ ಮಹಿಳೆ "ಅಲ್ರೀ, ಆತನನ್ನು ಬೈಯುವಾಗ ನಾನು ಆತನ ನಿಜ ಹೆಸರಿನೊಂದಿಗೆ ಬೈದರೆ ಶ್ರೀರಾಮನನ್ನೇ ಬೈದಂತಾಗುವುದಿಲ್ಲವೇ? ಹಾಗೊಮ್ಮೆ ಬೈಯುವಾಗ ಕೆಟ್ಟ ಪದಗಳೂ ನನ್ನ ಬಾಯಿಂದ ಬಂದರೆ? ರಾಮ, ರಾಮ" ಎಂದು ಉತ್ತರಿಸಿದರು!

ನಮ್ಮ ದೇಶದಲ್ಲಿ ಚಿಕ್ಕ ವಯಸ್ಸಿನಲ್ಲೇ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಮರಣ ಹೊಂದುವುದರಿಂದ ತಂದೆತಾಯಂದಿರಿಗೆ ತಮ್ಮ ಮಕ್ಕಳ ಪ್ರಾಣದ ಬಗ್ಗೆ ತುಂಬಾ ಕಾಳಜಿ - ಅದರಲ್ಲೂ ಗಂಡು ಮಕ್ಕಳ ಪ್ರಾಣದ ಬಗ್ಗೆ. ಯಮನ ವಕ್ರದೃಷ್ಟಿ ತಮ್ಮ ಗಂಡು ಮಕ್ಕಳ ಮೇಲೆ ಬೀಳಬಾರದೆಂದು ಜನ ತಮ್ಮ ಪುತ್ರರಿಗೆ ವಿಚಿತ್ರ ಹೆಸರುಗಳನ್ನು ಇಡುತ್ತಾರೆ. ಉದಾಹರಣೆಗೆ 'ಕಾಲಾ' (ಕರಕ), ಕಾಲಿಯಾ (ಕರಿಯಾ) ಮತ್ತು ಕುರ್ರ (ಕುಟುಕ)! ರಾಜಸ್ಥಾನದಲ್ಲಿ ಮಕ್ಕಳನ್ನು ಬಲಿ ತೆಗೆದುಕೊಳ್ಳುತ್ತಿದ್ದ ನಾರು ಹುಣ್ಣಿನ ತುಳಿತದ ಬಗೆ ಜನರಲ್ಲಿ ಅದೆಷ್ಟು ಭಯ ಇತ್ತೆಂದರೆ ಅವರು ತಮ್ಮ ಮಕ್ಕಳಿಗೆ 'ನಾರು' ಎಂದೂ ಹೆಸರಿಡುತ್ತಿದ್ದರು. ಇಂತಹ ಹೆಸರುಗಳಿಂದ ಆ ಮಕ್ಕಳಿಗೆ ಅದೆಷ್ಟು ರಕ್ಷಣೆ ಸಿಕ್ಕಿತೋ ಇಲ್ಲವೋ ಆದರೆ ಅಂತಹ ಹೆಸರಿನೊಂದಿಗೆ ಜೀವನ ಪರ್ಯಂತ ಬದುಕುವ ಕಷ್ಟವಂತೂ ಸುಲಭವಾಗಿ ಲಭಿಸಿತು ಎನ್ನಬಹುದು.

ಪಶ್ಚಿಮ ಬಂಗಾಲದಲ್ಲಿ ನಿಜವಾದ ಹೆಸರಿಗಿಂತ ಅಡ್ಡ ಹೆಸರುಗಳೇ ಹೆಚ್ಚಾಗಿ ಉಪಯೋಗಿಸಲ್ಪಡುತ್ತದೆ. ಈ ಕಾರಣಕ್ಕೆ ಇವತ್ತು ಅಲ್ಲಿ 'ಟುಕ್‌ಟುಕ್ ಕುಮಾರ್' ಎಂಬ ಹೆಸರಿಗೆ ಉನ್ನತ ಅಧಿಕಾರಿ, 'ಟುಪುರ್' ಮತ್ತು 'ಟಪುರ್' (ಬಂಗಾಲಿ ಭಾಷೆಯಲ್ಲಿ ಮಳೆ ಹನಿ ಎಂದು ಈ ಪದಗಳ ಅರ್ಥ) ಎಂಬ ರೂಪದರ್ಶಿಗಳೂ ಇದ್ದಾರೆ! ಅಷ್ಟೇ ಅಲ್ಲ, ಜಗತ್ತಿಗೆ ಯಾವ ಕಾರಣಕ್ಕೂ ಗೊತ್ತಾಗಬಾರದಂತಹ ಅಡ್ಡ ಹೆಸರುಗಳೂ ಅಲ್ಲಿ ಬಳಕೆಯಲ್ಲಿವೆ. ಉದಾಹರಣೆಗೆ 'ಚಪ್ಪಟೆ ಮೂಗು', 'ಗೂಬೆ ಮೂತಿ', 'ಸೊಟ್ಟ ಮೂತಿ', 'ಅಪ್ರಸ್ತಿ' ಮತ್ತು 'ಭೂತ'!

ಹಲವೊಮ್ಮೆ ತಂದೆತಾಯಿ ಇಟ್ಟ ಹೆಸರಿಗೂ, ಆ ವ್ಯಕ್ತಿಯ ಪ್ರವೃತ್ತಿಗೂ ಸಂಬಂಧವೇ ಇರುವುದಿಲ್ಲ. ಉದಾಹರಣೆಗೆ 'ವೈಭವ' ಎಂಬ ಹೆಸರಿನ ವ್ಯಕ್ತಿ 'ಮಹಿಮೆ'ಗೆ ಶ್ರಮಿಸದಿದ್ದರೆ ಕಣ್ಣು ಕಾಣದ ಮಗುವಿಗೆ 'ನಯನ ಮನೋಹರ' ಎಂದು ಹೆಸರಿಟ್ಟಷ್ಟೇ ವಿಪರ್ಯಾಸವಲ್ಲವೇ?

● ವಿನಿತಾ ದಾವ್ರಾ ನಂಗಿಯಾ

(ದೆಹಲಿಯ ಟೈಮ್ಸ್ ಆಫ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿರುವ ಗೆಳತಿ ವಿನಿತಾ ದಾವ್ರಾ ನಿಂಗಿಯಾ ಮೊನ್ನೆ ಒಂದು ಹಾಸ್ಯ ಲೇಖನವನ್ನು ಬರೆದಿದ್ದಾಳೆ. ಅದು ತುಂಬಾ ಮಜಾ ಕೊಡುವುದರಿಂದ ಅದರ ಸಂಗ್ರಹಾನುವಾದ ಇಲ್ಲಿದೆ)

# ಫೇಸ್‌ಬುಕ್ ಕ್ರಿಯಾಶೀಲತೆ ಮತ್ತು ಪ್ರಜಾತಂತ್ರದ ವಿಸ್ತರಣೆ



...ಚೆಗೆ ನಡೆದ ಎರಡು ಘಟನೆಗಳಿಗೆ ನಾಗರಿಕ ... ಮತ್ತು ವ್ಯವಸ್ಥೆಯು ತೋರಿದ ಪ್ರತಿಕ್ರಿಯೆಗಳನ್ನು ...ಗಮನಿಸಿರುತ್ತೀರಿ. ಒಂದು, ಮುಂಬೈನ ಫೇಸ್‌ಬುಕ್ಕಿ...ೀಲಾದ ದಾಳಿಗೆ ಬಂದ ಪ್ರತಿಕ್ರಿಯೆ. ಬಾಳಠಾಕ್ರೆ ...ಬ್ಬ ಸಮಾಜಘಾತುಕ ವ್ಯಕ್ತಿ ಸತ್ತಾಗ ಮುಂಬಯಿಯಲ್ಲಿ ...ಮಾಡಲಾದ ಅವ್ಯವಸ್ಥೆಯ ಕುರಿತು ಫೇಸ್‌ಬುಕ್‌ನಲ್ಲಿ ...ಟ್ ಮಾಡಿದ್ದಕ್ಕಾಗಿ ಇಬ್ಬರು ಹೆಣ್ಣುಮಕ್ಕಳನ್ನು ...ಲಾಗಿತ್ತು, ಅವರ ವಿರುದ್ಧ ದೂರು ಕೊಟ್ಟವರು ...ರಯವರು ಮತ್ತು ಬಂಧಿಸಿದ್ದು ಕಾಂಗ್ರೆಸ್-ಎನ್‌ಸಿಪಿ ...ದ ಪೊಲೀಸರು.

...ನರ ವಿರುದ್ಧ ಅಂತರ್ಜಾಲದಲ್ಲೂ ಹೊರಗೂ ...ನೆಯ ಮಹಾಪೂರವೇ ಹರಿದುಬಂದಿತು. ಅದರ ...ಫೇಸ್‌ಬುಕ್‌ನಲ್ಲಿ ಕಾಮೆಂಟ್ ಮಾಡಿದ ಆ ಇಬ್ಬರ ...ಕೇಸು ದಾಖಲಿಸಿದ ಕೆಳಹಂತದ ಅಧಿಕಾರಿಯಿಂದ ..., ಆ ವ್ಯಾಪ್ತಿಯ ಎಸ್‌ಪಿಯವರೆಗೆ ಹಲವು ...ಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಯಿತು. ...ಆಶ್ಚರ್ಯಕರ ಸಂಗತಿಯೆಂದರೆ, ಇಬ್ಬರು ಹುಡುಗಿ... ನ್ಯಾಯಾಂಗ ಬಂಧನಕ್ಕೆ ಕಳಿಸಿದ (ಮತ್ತು ನಂತರ ...ನು ನೀಡಿದ) ನ್ಯಾಯಾಧೀಶನನ್ನೂ ವರ್ಗಾವಣೆ ...ಲಾಯಿತು.

...ವೇ ದಿನಗಳಲ್ಲಿ ಸುಪ್ರೀಂಕೋರ್ಟಿನಲ್ಲಿ ಈ ...ಧ ಕೇಸೊಂದು ದಾಖಲಾಗಿ ಸುಪ್ರೀಂ ...ನಿಂದ ಕೇಂದ್ರ ಸರ್ಕಾರದ ಅಭಿಪ್ರಾಯ ...ಯಿತು. ಕೇಂದ್ರ ಸರ್ಕಾರವೂ ಕೂಡಲೇ ...ಪ್ರವೃತ್ತವಾಗಿ ಕೋರ್ಟಿನಲ್ಲಿ ಹೇಳಿಕೆ ... ಇಂತಹ ಮೊಕದ್ದಮೆ ದಾಖಲಿಸ ...ವರೆ ಡಿಸಿಪಿ (ಎಸ್‌ಪಿಗೆ ಸಮಾನ) ದರ್ಜೆಗೆ ...ಯಿಲ್ಲದ ಅಧಿಕಾರಿಯು ಅನುಮತಿ ...ಬೇಕು ಎಂದು ಅದರಲ್ಲಿ ಹೇಳಲಾಯಿತು.

... ನೆಲದ ಇಬ್ಬರು ಯುವತಿಯರ ಅಭಿವ್ಯಕ್ತಿ ... ಹರಣವಾದುದಕ್ಕೆ ಈ ಪ್ರಮಾಣದ ಪ್ರತಿಕ್ರಿಯೆಯು ...ರದ ಕೇಂದ್ರಸ್ಥಾನಗಳಿಂದ ಬಂದಿತು. ಆದರೆ ಈ ... ಯುವತಿಯರು ತಮ್ಮ ಅಭಿಪ್ರಾಯವನ್ನು ...ಸಿದ್ದು ಫೇಸ್‌ಬುಕ್ಕಿನಲ್ಲಿ, ಫೇಸ್‌ಬುಕ್ ಮತ್ತು ...ಗಳು ಇಂಟರ್ನೆಟ್ ಬಳಸಲು ಬರುವ ಸಾಮಾನ್ಯ ...ಂದ ಹಿಡಿದು ನರೇಂದ್ರ ಮೋದಿ, ಅಮಿತಾಭ್ (ಮತ್ತು ಒಬಾಮಾ ಕೂಡಾ)ರಂತಹವರು ...ತ್ತಿರುವ ಒಂದು ಮಾಧ್ಯಮವಾಗಿದೆ. ಅಂಥಲ್ಲಿ ...ದೊಂದು 'ಕಾಮೆಂಟ್' ಮಾಡಿದವರಿಗೆ ಮಾತ್ರವೇ ... ಸ್ವಾತಂತ್ರ್ಯದ ಖಾತರಿ ಸಾಧ್ಯ. ಉಳಿದಂತೆ ಈ ... ಜನಸಾಮಾನ್ಯರಿಗೆ ಇತರ ಸ್ವಾತಂತ್ರ್ಯಗಳು ಹೋಗಲಿ, ...ಅಭಿವ್ಯಕ್ತಿ ಸ್ವಾತಂತ್ರ್ಯವಾದರೂ ಎಲ್ಲಿದೆ?

...ಬಂಧನಕ್ಕೊಳಗಾದ ಇಬ್ಬರು ಯುವತಿಯರು ತಮಗೆ ...ಜಾಮ್ ಉಂಟಾಯಿತೆಂದಷ್ಟೇ ತಮ್ಮ ಹಳಹಳವನ್ನು ...ಬುಕ್‌ನಲ್ಲಿ ಕಕ್ಕಿಕೊಂಡಿದ್ದು; ಅವರು ಅದೇ ಬಂದ್‌ನಿಂದ ...ಯಿಯ ಕೂಲಿಕಾರ್ಮಿಕರಿಗೆ ಉಂಟಾದ ಕಷ್ಟಕ್ಕೇನೂ ...ಸಿಲ್ಲವೆಂದೂ, ಫೇಸ್‌ಬುಕ್ಕಿಗಳಾದ ಮಾತ್ರಕ್ಕೆ ಈ ...ವರ ಪರವಾಗಿ ಅವರಿವರು ನಿಂತರೆಂದೂ ಸಾಕಷ್ಟು ...ಯಗಳು ಫೇಸ್‌ಬುಕ್ಕಿನಲ್ಲೂ, ಹೊರಗೂ ...ಡಿದವು.

...ಟನೆ ಎರಡು: ಬೆಂಗಳೂರಿನಲ್ಲಿ ವಕೀಲರಿಗೂ, ...ಸರಿಗೂ ಸಂಘರ್ಷ, ಹೊಡೆದಾಟ ಎಲ್ಲವೂ ನಡೆದ ... ಅದು ರಾಜ್ಯದೆಲ್ಲೆಡೆ ಪ್ರತಿಧ್ವನಿಸಿತು. ಮಂಡ್ಯದಂತಹ ...ಗಳಲ್ಲೂ ಅದರ ಬಿಸಿ ಬೇರೆಬೇರೆ ವಲಯಗಳಿಗೆ ... ದಾಳಿಗೊಳಗಾದ ವಕೀಲರ ಪರವಾಗಿ ಪ್ರಗತಿಪರ ...ನೆಗಳು ಪ್ರತಿಭಟಿಸಲಿಲ್ಲವೆಂಬ ಕಾರಣಕ್ಕೆ, ವಿವಿಧ ...ಟಗಳಲ್ಲಿ ಕೇಸು ಹೊತ್ತುಕೊಳ್ಳುವ ಚಳವಳಿಗಾರರ ... ವಕೀಲರು ವಕಾಲತ್ತು ವಹಿಸಬಾರ ದೆಂದು ...ಮವಸ್ಥೇ ಮಾಡಲಾಯಿತು.

...ವು ಅವರ ಪರವಾಗಿ ಕೋರ್ಟಿನಲ್ಲಿ ಕೆಲಸ ...ತ್ತೇವೆ. ಆದರೂ ಈ ಸಂಘಟನೆಗಳವರು ನಮಗೆ ...ರ್ಟ್ ಮಾಡಲಿಲ್ಲ ಏಕೆ? ಹಾಗಾಗಿ ಅವರಿಗೆ ಬುದ್ಧಿ ...ಕು ಎಂಬುದು ವಕೀಲರ ವಾದವಾಗಿತ್ತು, ಅದಕ್ಕೆ ...ಗಿ ವಕೀಲರ ಸಂಘವನ್ನು 'ನೀವು ಕೋರ್ಟಿನಲ್ಲಿ ...ಯ ಪರ ವಾದಿಸುವ ನಿಮ್ಮ ಕರ್ತವ್ಯವನ್ನೇನೋ ನಿಭಾಯಿಸುತ್ತಿದ್ದಿರಿ. ಆದರೆ ನಿಮ್ಮ ವಕೀಲರ ಸಂಘ ಯಾವತ್ತಾದ್ರೂ ರೈತ, ಕಾರ್ಮಿಕರ, ದಲಿತರ, ಮಹಿಳೆಯರ ಹೋರಾಟಕ್ಕೆ ಬೀದಿಗಿಳಿದು ಸಪೋರ್ಟ್ ಮಾಡಿತ್ತಾ? ಇಲ್ಲ, ಹಾಗಾಗಿ ಅವರೂ ಮಾಡುವುದು ಅಗತ್ಯವಿಲ್ಲ' ಎಂದು ವಕೀಲರ ಸಂಘದೊಳಗೇ ಪ್ರತಿಪಾದಿಸಿದವರೂ ಇದ್ದರು.

ಅದೆಲ್ಲಾ ಸರಿ, ನಾವ್ಯಾಕೆ ಈ ವಕೀಲರ ಬೆಂಬಲಕ್ಕೆ ಹೋಗಬೇಕು? ಅವರು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲು ಸಮರ್ಥರಿದ್ದಾರೆ ಅಥವಾ ಅವರಿಗೆ ಏಟು ಬಿದ್ದರೆ ಬೀಳಲಿ, ಈ ನಾಡಿನ ರೈತ ಕಾರ್ಮಿಕರಿಗೆ, ಮಹಿಳೆಯರಿಗೆ, ದಲಿತ-ಹಿಂದುಳಿದವರಿಗೆ ಏಟು ಬಿದ್ದಾಗ ಈ ವಕೀಲರ ಸಂಘವೇನಾದರೂ ಬಂದಿತ್ತಾ? ಎಂದು ಹೊರಗೆ ಪಾಟೀ ಸವಾಲು ಮಾಡಿದವರೂ ಇದ್ದರು.

ಈ ಎರಡೂ ಘಟನೆಗಳನ್ನು ಈಗ ಉಲ್ಲೇಖ ಮಾಡಲು ಕಾರಣಗಳಿವೆ. ಹೆಚ್ಚುಕಡಿಮೆ ಇದೇ ರೀತಿಯ ವಾದಗಳು ಮೋಂಬತ್ತಿ ಹಿಡಿದು ಇಂಡಿಯಾ ಗೇಟ್ ಮುಂದೆ ಅತ್ಯಾಚಾರದ ವಿರುದ್ಧ ಧಿಕ್ಕಾರ ಕೂಗಿದ ಸಾವಿರಾರು (? ನೂರಾರು) ಯುವಜನರ ಬಗ್ಗೆಯೂ ಕೇಳಿಬಂದಿವೆ. ಅಂತಹ 'ಮೋಂಬತ್ತಿ ಕ್ರಾಂತಿಕಾರಿಗಳ' (candle light revolutionaries) ಕಣ್ಣು ತೆರೆಸಲೆಂದು ದೇಶದ ಉದ್ದಗಲಕ್ಕೂ ಜನಸಾಮಾನ್ಯರ ಮೇಲೆ ಪ್ರತಿನಿತ್ಯವೆಂಬಂತೆ ನಡೆಯುತ್ತಿರುವ ನೂರಾರು ಬಗೆಯ ದೌರ್ಜನ್ಯಗಳ ಪಟ್ಟಿಯನ್ನೂ ಹಲವರು ಕೊಟ್ಟಿದ್ದಾರೆ; ಫೇಸ್‌ಬುಕ್ಕಿನಲ್ಲಿ.

ದಂತ ವೈದ್ಯ ಡಾ.ತಲ್ವಾರ್ ದಂಪತಿಗಳ ಮಗಳು ಅರುಷಿ ಕೊಲೆ ಪ್ರಕರಣ, ರೂಪದರ್ಶಿ ಜೆಸ್ಸಿಕಾ ಲಾಲ್ ಕೊಲೆ ಪ್ರಕರಣ, ಬೆಂಗಳೂರಿನ ಕಾಲ್‌ಸೆಂಟರ್ ಪ್ರತಿಭಾ ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳು ನಡೆದಾಗಲೂ ದೇಶದ ಮಾಧ್ಯಮಗಳು ಮತ್ತು ಮಧ್ಯಮವರ್ಗಗಳು ಮುಗಿಬಿದ್ದು ಪ್ರತಿಕ್ರಿಯಿಸಿದ್ದವು. ಖುಲಾಸೆಯೇ ಆಗಿಬಿಟ್ಟಿದ್ದ ಜೆಸ್ಸಿಕಾ ಲಾಲ್ ಕೊಲೆ ಆರೋಪಿಗಳ ವಿರುದ್ಧದ ಮೊಕದ್ದಮೆಯನ್ನು ಪುನರ್ ವಿಚಾರಣೆ ನಡೆಸಿ ನಂತರ ಶಿಕ್ಷೆಯಾಗುವ ಮಟ್ಟಕ್ಕೆ ಈ ಪ್ರತಿಕ್ರಿಯೆ ಇತ್ತು.

ಅಂತರರಾಷ್ಟ್ರೀಯ ಆರ್ಥಿಕತೆಯೊಂದಿಗೆ ತಳುಕು ಹಾಕಿಕೊಂಡಿರುವ ಕಾಲ್‌ಸೆಂಟರ್ ಉದ್ದಿಮೆಯ ಉದ್ಯೋಗಿ ಪ್ರತಿಭಾಳಂತವರಿಗೆ ಆದ ಅನ್ಯಾಯಕ್ಕೆ ಪ್ರಭುತ್ವ ಕೂಡಲೇ ಸ್ಪಂದಿಸಿ, ಮಾಡುವ ಭದ್ರತಾ ಏರ್ಪಾಟುಗಳನ್ನು ಉಳಿದ ಹೆಣ್ಣುಮಕ್ಕಳಿಗೇಕೆ ಮಾಡುವುದಿಲ್ಲ ಎಂಬ ಪ್ರಶ್ನೆಗಳು ಬಂದವು. ಗಾರ್ಮೆಂಟ್ಸ್ ಫ್ಯಾಕ್ಟರಿಗಳೂ ಸಹ ಜಾಗತಿಕ ಮಾರುಕಟ್ಟೆಗೇ ಉತ್ಪಾದನೆ ಮಾಡುತ್ತವಾದರೂ, ಅಲ್ಲಿ ಕೆಲಸ ಮಾಡುವವರು ಬಡ ಮತ್ತು ಕೆಳ ಮಧ್ಯಮವರ್ಗದ ಹೆಣ್ಣು ಮಕ್ಕಳಾದ್ದರಿಂದ ಅದರ ಬಗ್ಗೆ ಯಾರೂ ತಲೆಕೆಡಿಸಿಕೊಂಡಿಲ್ಲ; ಇನ್ನು ಹೊಲಗದ್ದೆಗಳಲ್ಲಿ ಕೂಲಿ ಕೆಲಸ ಮಾಡುವವರ ಸುರಕ್ಷತೆಯ ಕುರಿತಂತೆಯಂತೂ ಕೇಳುವುದೇ ಬೇಡ ಎನ್ನುವುದು ಈ ವಾದಸರಣಿಯಲ್ಲಿ ಕೇಳಿಬಂದವು.

ಈ ವಾದಗಳನ್ನು ಸಮಾಜದ ತಳಸ್ತರದ ವರ್ಗ, ಜಾತಿಗಳ ಪರವಾಗಿ ಕೇಳಿದವರಲ್ಲಿ ಯಾರೂ ಪ್ರತಿಭಾ, ಜೆಸ್ಸಿಕಾ ಲಾಲ್ ಅಥವಾ ದೆಹಲಿಯ ಹೆಣ್ಣುಮಗಳಿಗೆ ಆಗಿದ್ದು ಸರಿ ಎಂದು ಹೇಳಲಿಲ್ಲ; ಅಷ್ಟೇ ಅಲ್ಲ, ಅದರ ತಪ್ಪಿತಸ್ಥರಿಗೆ ಕಾನೂನುಪ್ರಕಾರ ಏನು ಶಿಕ್ಷೆಯಾಗಬೇಕೋ ಅದು ಆಗಲಿ ಎಂದೂ ಬಯಸಿದ್ದವರೇ ಆಗಿದ್ದರು. ಆದರೆ ಮಧ್ಯಮ ವರ್ಗ, ಮಾಧ್ಯಮಗಳು ಮತ್ತು ಪ್ರಭುತ್ವ ತೋರಿದ, ತೋರುತ್ತಿರುವ ಪ್ರತಿಕ್ರಿಯೆಯಲ್ಲಿ ಈ ತಾರತಮ್ಯ ಏಕೆ ಎಂಬುದು ಅವರ ಪ್ರಶ್ನೆಯಾಗಿತ್ತು, ಇದೇ ಪ್ರಶ್ನೆ ಈ ಅಂಕಣಕಾರನದ್ದೂ ಸಹ ಆಗಿದೆ. ಎಲ್ಲಾ ಸಂದರ್ಭದಲ್ಲೂ ವರ್ಗ, ಜಾತಿ ಹಾಗೂ ಲಿಂಗತಾರತಮ್ಯ ವಿರೋಧಿ ನೆಲೆಯಿಂದ ಮತ್ತು ಅಲ್ಪಸಂಖ್ಯಾತರ ದೃಷ್ಟಿಕೋನದಿಂದ ನಾವು ಪ್ರತೀ ಅಂಶವನ್ನೂ ನೋಡದೇ ಇದ್ದರೆ ಪ್ರಜಾತಂತ್ರವು ನಿಜವಾದ ಅರ್ಥದಲ್ಲಿ ಈ ಎಲ್ಲಾ ದಮನಿತ ವರ್ಗ ಹಾಗೂ ಸಮುದಾಯಗಳಿಗೆ ವಿಸ್ತರಣೆಯಾಗುವುದಿಲ್ಲ.

ಆದರೂ ಮೇಲಿನ ಎಲ್ಲಾ ವಾದಸರಣಿಯಲ್ಲಿ ಎರಡು ಸಮಸ್ಯೆಗಳಂತೂ ಎದ್ದು ಕಾಣುತ್ತಿದೆ. ಒಂದು: ವರ್ಗವನ್ನಷ್ಟೇ

facebook

ನೋಡುತ್ತಾ, ಜಾತಿ ಹಾಗೂ ಲಿಂಗ ತಾರತಮ್ಯವನ್ನು ಮರೆಯುವ ಒಣ ಕಮ್ಯುನಿಸ್ಟ್ ಚಾಳಿ ಒಂದಿದೆ. ಜಾತಿ ನೆಲೆಯ ಹೋರಾಟಗಳು ಪ್ರಬಲಗೊಂಡ ಮೇಲೆ ತಮ್ಮ ಜಾತಿಯವರಾಗಿಬಿಟ್ಟರೆ ಸಾಕು ಅವರೆಷ್ಟು ಅಧಿಕಾರರೂಢರೂ ಭ್ರಷ್ಟರೂ ಆಗಿದ್ದರೂ ಅದಕ್ಕೆ ಜಾಣಗುರುಡನ್ನು ಪ್ರದರ್ಶಿಸುವ ಅಪಾಯವೂ ತಲೆದೋರಿತು. ಆದರೆ ಮಹಿಳಾ ಪ್ರಶ್ನೆ ಬಂದಾಗ ಅದೇ ಉದಾರತನವನ್ನು ತೋರಲು 'ದಮನಿತ ಜಾತಿ-ವರ್ಗಗಳ' ಪ್ರಜ್ಞಾವಂತರು ಸಿದ್ಧರಿಲ್ಲ. ಇಲ್ಲಿ ಅತ್ಯಂತ ಸೀಮಿತವಾದ ವರ್ಗವನ್ನು ಹೊರತುಪಡಿಸಿದರೆ ಉಳಿದೆಲ್ಲಾ ವರ್ಗಗಳ ಮಹಿಳೆಯರೂ ತಾರತಮ್ಯಕ್ಕೆ ಗುರಿಯಾಗಿದ್ದಾರೆ ಎನ್ನುವುದನ್ನು ಮರೆತು, ಆ ಮಹಿಳೆಯ ವರ್ಗ ಅಥವಾ ಜಾತಿ ಹಿನ್ನೆಲೆಯನ್ನು ಕೆದಕುವುದು ನಡೆಯುತ್ತದೆ.

ಎರಡನೆಯದ್ದು ಇಡೀ ಸಮಾಜದಲ್ಲಿ ಒಂದರ್ಥದಲ್ಲಿ ವಿವಿಧ ಸಮುದಾಯಗಳು ತಮ್ಮ ಪಾಲನ್ನು (ಒಳಮೀಸಲಾತಿ ಬೇಡಿಕೆಯ ರೀತಿ) ಕೇಳುವುದರ ಮೂಲಕ ಪ್ರಜಾತಂತ್ರದ ವಿಸ್ತರಣೆ ಆಗುತ್ತಿರುವುದು ನಿಜ. ಆದರೆ ಇನ್ನೊಂದು ಅರ್ಥದಲ್ಲಿ ಶೇ.5ರಷ್ಟಿರಬಹುದಾದ ಅತ್ಯಂತ ಮೇಲ್ವರ್ಗವನ್ನು ಹೊರತುಪಡಿಸಿದರೆ ಮಿಕ್ಕೆಲ್ಲರ ಪ್ರಜಾತಂತ್ರವು ಸೀಮಿತಗೊಳ್ಳುತ್ತಿರುವುದೂ ವಾಸ್ತವವಾಗಿದೆ. ಶೇ.5ರಷ್ಟಿರುವ ಮೇಲ್ವರ್ಗಕ್ಕೆ ನಿಕಟವಾಗಿರುವ ಇನ್ನೊಂದು 10 ಶೇಕಡಾ ಜನಕ್ಕೂ ಈ ಕಾಲಘಟ್ಟದಲ್ಲಿ ಪ್ರಜಾತಂತ್ರ ಹಾಗೂ 'ಅಭಿವೃದ್ಧಿ'ಯ ಹಣ್ಣುಗಳು ಲಭ್ಯವಾಗುತ್ತಿರುವುದರಿಂದ ಅವರನ್ನೂ ಹೊರಗಿಡೋಣ. ಆದರೆ ಪ್ರಭುತ್ವವು ಹೆಚ್ಚೆಚ್ಚು ಫ್ಯಾಸಿಸ್ಟ್ ಆದಂತೆ, ಸಮಾಜದಲ್ಲಿ ಬಲಪಂಥೀಯ ರಾಜಕಾರಣ ಹಾಗೂ ಸಾಮಾಜಿಕ ಸಿದ್ಧಾಂತ ಬಲಗೊಂಡಂತೆ ಮಧ್ಯಮವರ್ಗವೂ ಪ್ರಜಾತಂತ್ರದಿಂದ ವಂಚಿತವಾಗುತ್ತಿಲ್ಲವೇ?

ವಕೀಲರ ಉದಾಹರಣೆಯನ್ನೇ ನೋಡುವುದಾದರೆ, ಬೆಂಗಳೂರಿನ ಘಟನೆಯಲ್ಲಿ ಯಾವ ಮುಲಾಜೂ ಇಲ್ಲದೇ ಭೀಕರವಾಗಿ ವಕೀಲರ ಕೈಕಾಲುಗಳನ್ನು ಮುರಿದ ಪೊಲೀಸ್ ವ್ಯವಸ್ಥೆಯ ಕ್ರೌರ್ಯ ಏನನ್ನು ತೋರಿಸುತ್ತದೆ? ವಕೀಲರ ಬಗ್ಗೆ, ಫೇಸ್‌ಬುಕ್ಕಿಗರ ಬಗ್ಗೆ ನಮಗೇನೇ ಸಿಟ್ಟು ಇರಬಹುದಾದರೂ ಕನಿಷ್ಠ ನಾವು ಈ ಪ್ರಶ್ನೆಗಳನ್ನಂತೂ ಹಾಕಿಕೊಳ್ಳಲೇಬೇಕಿದೆ. ವಕೀಲರಿಗೇ ಈ ಪಾಡು ಹೊಡೆದರೆ ಜನಸಾಮಾನ್ಯರ ಪಾಡೇನು? ಕಾರ್ಪೊರೇಟ್ ಮಾಧ್ಯಮಗಳ ಕುರಿತು ಮತ್ತು ಭ್ರಷ್ಟ ಪತ್ರಕರ್ತರ ಕುರಿತು ನಮಗೆಷ್ಟೇ ಸಿಟ್ಟು ಇರಬಹುದಾದರೂ ನವೀನ್ ಸೂರಿಂಜೆಗೆ ಬೆಂಬಲ ಕೊಡುವುದಿಲ್ಲ ಎಂದು ಹೇಳಲಾಗದು. ಮಧ್ಯಮವರ್ಗಕ್ಕೇ ಸೇರುವ ಪತ್ರಕರ್ತರಿಗಿರಬೇಕಾದ (ಇನ್ನೂ ಮೇಲೇರಿರುವ ಒಂದು ಗುಂಪು ಈ ಜಾತಿಯಲ್ಲೂ ಇದೆ, ಆ ಮಾತು ಬೇರೆ) ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರಜಾತಂತ್ರದಲ್ಲಿ ಅತ್ಯಂತ ಅಗತ್ಯವಾದುದು. ಅದೇ ರೀತಿ ಕಾರ್ಪೊರೇಟ್ ಮಾಧ್ಯಮಗಳು ನಿರ್ದಿಷ್ಟ ಬಗೆಯ ವ್ಯಕ್ತಿ/ಅಭಿವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸುವ ಸಂದರ್ಭದಲ್ಲಿ ಫೇಸ್‌ಬುಕ್ ಸ್ಪೇಸ್ ಸಹ ಮುಖ್ಯವಾದುದು. ಫೇಸ್‌ಬುಕ್ಕಿನಲ್ಲೇ ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲವಾದರೆ ಇನ್ನು ಉಳಿದವರ ಪ್ರಜಾತಂತ್ರ ಎಷ್ಟು ಸೀಮಿತವಾಗಿಬಿಡಬಹುದೆಂಬ ಆತಂಕ ಕಾಡುವ ಸಂದರ್ಭದಲ್ಲಿ ನಾವಿದ್ದೇವೆ.

ದೆಹಲಿ ಅತ್ಯಾಚಾರ ಪ್ರಕರಣದಲ್ಲೂ ಈ ಸಂಗತಿ ಎದ್ದು ಕಾಣುತ್ತಿದೆ. ಮಾಲ್‌ಗೆ ಹೋಗಿ ಗೆಳೆಯನ ಜೊತೆ ಸಿನೆಮಾ ನೋಡಿ ಬರುವಷ್ಟು ಸ್ವಾತಂತ್ರ್ಯ ಒಂದು ಹುಡುಗಿಗೆ ದೆಹಲಿಯಂತಹ ಊರಿನಲ್ಲೂ ಇಲ್ಲವಾಗಿದೆ. ಆ ಅಂಶವೇ ಇಂಡಿಯಾ ಗೇಟ್ ಮುಂದೆ ನೆರೆದಿದ್ದ ಹೆಚ್ಚಿನ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಯುವಜನರನ್ನು ಕಾಡಿ ಅವರು ಪ್ರತಿಭಟನೆಗೆ ಬಂದಿದ್ದಾರೆಂದಿಟ್ಟುಕೊಳ್ಳೋಣ. ಅದೇ ವರ್ಗಕ್ಕೆ ಸೇರಿರುವ ಹುಡುಗಿಯ ಜೊತೆ ತಮ್ಮನ್ನು ಸಮೀಕರಿಸಿಕೊಂಡಿದ್ದರಿಂದಲೇ ಅವರಿಗೆ ಈ ಅತ್ಯಾಚಾರ ಅಷ್ಟು ಗಾಢವಾಗಿ ಕಾಡಿದೆ ಎಂದೇ ನಮ್ಮ ವಿಶ್ಲೇಷಣೆ ಇರಲಿ; ಆದರೆ ಆ ವರ್ಗದ ಯುವತಿಯರಿಗೂ ಅಷ್ಟು ಮಾತ್ರದ ಅವಕಾಶ ಕಲ್ಪಿಸಲು ಈ ವ್ಯವಸ್ಥೆಯ ಪುರುಷಾಧಿಕಾರ ಸಿದ್ಧವಿಲ್ಲ. ಮೊದಲ ವಾರವೇ ಬಾಯ್ಬಿಟ್ಟು ಈಗ ಸುಮ್ಮನಾಗಿರುವ ದೆಹಲಿ ಪೊಲೀಸ್ ಕಮಿಷನರ್ ರಘುವಂಶಿ, ಮುಖ್ಯಮಂತ್ರಿ ಶೀಲಾ ದೀಕ್ಷಿತ್, ಆಂಧ್ರದ ಮಂತ್ರಿ ಬೋತ್ಸಾರ ಸ್ಪಷ್ಟೀಕರಣಗಳನ್ನು ಬೇಕಾದರೆ ನಂಬಿ ಸುಮ್ಮನಾಗಿಬಿಡೋಣ. ಆದರೆ ಹೆಣ್ಣು ಮಕ್ಕಳ ಸ್ವಾತಂತ್ರ್ಯದ ವಿರುದ್ಧ ನೀಡಿದ ಹೇಳಿಕೆಯಲ್ಲಿ ಯಾವ ತಪ್ಪೂ ಇಲ್ಲ ಎಂದು ಪದೇಪದೇ ಕೂಗಾಡುತ್ತಿರುವ ಒಂದು ದೊಡ್ಡ ಪಡೆಯೇ ಸಿದ್ಧವಾಗಿದೆ. ಆರೆಸ್ಸೆಸ್‌ನ ಮೋಹನ್ ಭಾಗವತ್, ಅಸಾರಾಂ ಬಾಪು ಎಂಬ ಕಾವಿ ಖೂಳ, ಮಹಾರಾಷ್ಟ್ರದ ಎಂಎಲ್‌ಎ ಅಬು ಅಜ್ಮಿ ಯಾವ ವರ್ಗದ ಮಹಿಳೆಯಾದರೂ ಸರಿ 'ಮನೆಯೊಳಗೆ, ಪುರುಷನ ಅಧಿಕಾರದಡಿ, ಸೇವೆ ಸಲ್ಲಿಸಿಕೊಂಡು ಬಿದ್ದಿರಬೇಕು' ಎಂದು ಹೇಳುತ್ತಿದ್ದಾರೆ.

ಈ ದೇಶ ಇನ್ನೂ ಎಷ್ಟು ಊಳಿಗಮಾನ್ಯ (ಫ್ಯೂಡಲ್) ಮೌಲ್ಯಗಳಲ್ಲಿ ಹೂತು ಹೋಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ರೈತ ಕಾರ್ಮಿಕರು, ದಲಿತರು, ಆದಿವಾಸಿಗಳು, ಮಹಿಳೆಯರಿಗಾಗಿ ಪ್ರಜಾತಂತ್ರದ ಪ್ರಶ್ನೆ ಇನ್ನೂ ಸಾಕಷ್ಟು ದೂರವಿದೆ ಎನ್ನುವ ಮಟ್ಟಕ್ಕೆ ಮಾತ್ರ ಇಲ್ಲಿ ಪ್ರಜಾತಾಂತ್ರಿಕ ಪ್ರಜ್ಞೆಯ ಬೇರುಗಳು ಇಳಿದಿವೆ. ಹಾಗಾಗಿ ಮಧ್ಯಮ ವರ್ಗದ (ಈ ಮಧ್ಯಮ ವರ್ಗವೆನ್ನುವುದೂ ಒಂದು ಏಕರೂಪದ ಸಮೂಹವಾಗಿಲ್ಲ. ಭಾರತದಲ್ಲಿ ವರ್ಗವೆನ್ನುವುದು ಕೆಲವು ಸಾರಿ ಜಾತಿಯೆಂತಲೂ ಬಳಕೆಯಾಗುವ, ಮಾರ್ಕ್ಸ್‌ವಾದಿಗಳನ್ನು ಬಿಟ್ಟರೆ ಉಳಿದವರಿಂದ ವಿವಿಧಾರ್ಥಗಳಲ್ಲಿ ಬಳಸಲ್ಪಡುವ ಪದವಾಗಿದೆ) ಸ್ವಾತಂತ್ರ್ಯದ ವಿಚಾರ ಬಂದಾಗಲೂ ಎಲ್ಲರೂ ಬೇಷರತ್ ಬೆಂಬಲ ಘೋಷಿಸುವುದು ಅತ್ಯಂತ ಅಗತ್ಯವಿದೆ.

ಮಧ್ಯಮ ವರ್ಗಕ್ಕೆ ವಿಸ್ತಾರಗೊಳ್ಳಬೇಕಿರುವ ಪ್ರಜಾತಂತ್ರವನ್ನು ಹೀಗಳೆದು ಅಲ್ಲಿಗೇ ನಿಂತುಬಿಟ್ಟರೆ ಪಂಕ್ತಿಯಲ್ಲಿ ನಂತರ ಇರುವವರಿಗೆ ಅದೆಂತು ತಲುಪೀತು ಎಂಬ ಒಂದು ವಾದವೂ ಇದೆ. ಈ ರೀತಿಯ ಪಂಕ್ತಿ ಭೇದವನ್ನೂ ಒಪ್ಪಲಾಗದು. ಎಲ್ಲರಿಗೂ ಸಿಕ್ಕಿದನಂತರ ಅತ್ಯಂತ ದಮನಿತರಿಗೆ ಪ್ರಜಾತಂತ್ರ ದೊರೆತರೆ ಸಾಕು ಹಾಗಾಗಿ ಮಧ್ಯಮ ವರ್ಗದ ಹಕ್ಕಿನ ವಿಚಾರ ಬಂದಾಗ ಬೇಷರತ್ ಬೆಂಬಲ ನೀಡಬೇಕೆಂಬುದಲ್ಲ. ಯಾವುದೇ ದಮನಿತ ಸಮುದಾಯದ ಹಕ್ಕಿನ ವಿಚಾರ ಬಂದಾಗಲೂ, ಉಳಿದವರು ಅದಕ್ಕೆ ಯಾವ ಪೂರ್ವಷರತ್ತುಗಳಿಲ್ಲದೇ ಬೆಂಬಲಿಸಬೇಕು; ಹಕ್ಕಿನ ತೇರನ್ನು ಅಲ್ಲಿಂದ ಮುಂದಕ್ಕೆ ಎಲ್ಲರಿಗೂ ಲಭ್ಯವಾಗುವಂತೆ ಎಳೆಯಬೇಕು. ಅಲ್ಲಿಗೇ ಬರದಿದ್ದರೂ ಕಷ್ಟ; ಅಲ್ಲೇ ನಿಂತುಬಿಟ್ಟರೂ ಸಮಸ್ಯೆ. ■








## ವಿಧಾನಸೌಧ ಎಷ್ಟು ದೂರ ಎಂಬ ರೂಪಕ

ಚಿಕ್ಕಲಾಲ್‌ಬಾಗ್‌ನಿಂದ ಕಬ್ಬನ್‌ಪಾರ್ಕ್‌ವರೆಗಿದ್ದ ಪ್ರಜಾತಂತ್ರವು ಈಗ ಫ್ರೀಡಂ ಪಾರ್ಕ್‌ನ ಗೋಡೆಗಳಿಂದ ಬನಪ್ಪ ಪಾರ್ಕ್‌ನ ಗುಂಡಿವರೆಗೆ ಬಂದಿರುವ ಕಾಲದಲ್ಲಿ ನಾವಿದ್ದೇವೆ. ಸ್ವಾತಂತ್ರ್ಯ ಚಳವಳಿಯ ಕಾಲದಿಂದಲೂ ಬೆಂಗಳೂರಿನಲ್ಲಿ ತುಳಸೀತೋಟ (ಈಗಿನ ಮೆಜೆಸ್ಟಿಕ್ ಪಕ್ಕದ ಚಿಕ್ಕಲಾಲ್‌ಬಾಗ್) ಪ್ರತಿಭಟನೆಗಳು ನಡೆಯುತ್ತಿದ್ದ ಜಾಗ. ವಿಧಾನಸೌಧ ನಿರ್ಮಾಣವಾದ ಮೇಲೆ ಚಿಕ್ಕಲಾಲ್‌ಬಾಗ್‌ನಿಂದ ಆಡಳಿತದ ಸೌಧಕ್ಕೆ ಮೆರವಣಿಗೆಗಳು ಮಾಮೂಲಾದವು. ನಂತರ ಬಹಳ ವರ್ಷಗಳ ಕಾಲ ಕಬ್ಬನ್‌ಪಾರ್ಕ್‌ನ ಮೂಲೆ ಪ್ರತಿಭಟನೆಗಳ ಸ್ಥಳವಾಗಿತ್ತು. ಅಲ್ಲಿಂದ ಅದು ಕೆ.ಆರ್.ವೃತ್ತಕ್ಕೆ ಸ್ಥಳಾಂತರಗೊಂಡಿತು.

ಇಂಜಿನಿಯರ್‌ಗಳು ಅಹಿಂದ ಮತ್ತು ಅಹಿಂಸಾ ಎಂಬ ಎರಡು ಗುಂಪುಗಳಲ್ಲಿ ಬಡ್ತಿ ಮೀಸಲಾತಿಯ ಪರ ಹಾಗೂ ವಿರುದ್ಧ ಎದುರುಬದುರು ಜಗಳವಾಡಿಕೊಂಡ ಮೇಲೆ ಕೆ.ಆರ್.ವೃತ್ತವೂ ನಿಷಿದ್ಧವಾಯಿತು. ಈಗ ಫ್ರೀಡಂ ಪಾರ್ಕ್ ಎಂದು ಕರೆಯಲ್ಪಡುವ ಹಳೇ ಸೆಂಟ್ರಲ್‌ಜೈಲ್‌ನ ಗೋಡೆಗಳ ಹಿಂದೆ ಅಥವಾ ಬನಪ್ಪಪಾರ್ಕ್‌ನ ಗುಂಡಿಯೊಳಗೆ ಎಷ್ಟು ಬೇಕಾದರೂ ಕಿರುಚಿಕೊಳ್ಳಬಹುದು. ಪ್ರಜಾತಂತ್ರದ ದನಿ ವಿಧಾನಸೌಧದಿಂದ ಎಷ್ಟು ದೂರವಾಗುತ್ತಿದೆ ಎಂಬುದು ದೇಶದಲ್ಲಿ ಆವರಿಸುತ್ತಿರುವ ಫ್ಯಾಸಿಸಂಅನ್ನು ಸಾಂಕೇತಿಕವಾಗಿ ಸೂಚಿಸುತ್ತಿದೆ.

# ಅತ್ಯಾಚಾರದ ಹಿಂದೆ 'ಅಧಿಕಾರ'ವಿದೆ; ಇಡೀ ವ್ಯವಸ್ಥೆಯೇ ಇದೆ

**ವೈದೇಹಿಯವರು ಕಳೆದ ವಾರ ಬರೆದ ಲೇಖನವು ಮನಮುಟ್ಟುವಂತಿದ್ದರೂ, ಅದು ಅತ್ಯಾಚಾರವೆಂಬ ವಿದ್ಯಮಾನ ಕುರಿತಾದ ಬಹಳ ಮುಖ್ಯ ಪ್ರಶ್ನೆಗಳನ್ನು ಬದಿಗೆ ಸರಿಸುತ್ತದೆ. ಅತ್ಯಾಚಾರವನ್ನು ಅದರ ಮೂಲಕ್ಕೆ ಹೋಗಿ ಅರ್ಥ ಮಾಡಿಕೊಳ್ಳದೇ ಇದ್ದರೆ ಇಂದು ದೇಶಾದ್ಯಂತ ನಡೆಯುತ್ತಿರುವ ಪ್ರತಿಭಟನೆಗಳು, ತರಬೇಕೆಂದು ಹೊರಟಿರುವ ಕಾನೂನುಗಳಿಂದ ಯಾವ ರೀತಿಯಲ್ಲೂ ತಡೆಯಲು ಸಾಧ್ಯವಿಲ್ಲವೆಂದೆನಿಸುತ್ತದೆ.**

ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯಗಳು, ಅತ್ಯಾಚಾರ, ಲೈಂಗಿಕ ಕಿರುಕುಳಗಳು ಕೇವಲ ಬಿಡಿಬಿಡಿಯಾದ ಆಕಸ್ಮಿಕ ಘಟನೆಗಳಲ್ಲ; ಅಥವಾ ಕೆಲವೇ ವಿಕ್ಷಿಪ್ತ ಮನೋರೋಗಿಗಳಿಂದ ನಡೆಯುವ ಪ್ರತ್ಯೇಕ ಘಟನೆಗಳೂ ಅಲ್ಲ, ನಮ್ಮ ಸಮಾಜದ ಆರ್ಥಿಕ-ಸಾಮಾಜಿಕ ಬುನಾದಿಯಲ್ಲಿ ಬೇರುಗಳನ್ನು ಹೊಂದಿರುವ, ಸಾಂಸ್ಕೃತಿಕ-ರಾಜಕೀಯ-ಕೌಟುಂಬಿಕವಾದ ಎಲ್ಲಾ ಆಯಾಮಗಳಿಗೂ ವಿಸ್ತರಿಸಿರುವ ವಿದ್ಯಮಾನ. ಈ ಹಿನ್ನೆಲೆಯಲ್ಲೇ ಅತ್ಯಾಚಾರಗಳು-ಲೈಂಗಿಕ ದೌರ್ಜನ್ಯಗಳು ಇಷ್ಟೊಂದು ವ್ಯಾಪಕವಾಗಿ ಏಕಿವೆ ಮತ್ತು ಏಕೆ ಹೆಚ್ಚುತ್ತಿವೆಯೆಂಬ ಪ್ರಶ್ನೆಯನ್ನು ವಿಶ್ಲೇಷಿಸುವ ಅಗತ್ಯವಿದೆ. ಹೆಚ್ಚುತ್ತಿರುವ ಅತ್ಯಾಚಾರದ ಘಟನೆಗಳ ನಿರ್ದಿಷ್ಟತೆಯೇನು ಹಾಗೂ ಸಾಮಾನ್ಯತೆಯೇನು (particularity) ಎಂಬುದನ್ನು ಗುರುತಿಸುವುದು ಬಹಳ ಮುಖ್ಯವಾಗಿದೆ.

ಅತ್ಯಾಚಾರಗಳ ಪ್ರತೀ ಬಿಡಿ ಘಟನೆಯ ವಿವರಗಳನ್ನು ಕೆದಕುತ್ತಾ ಹೋದರೆ ಅದು ಯಾರೋ ವಿಕೃತ ಕಾಮಿಯ ಅಥವಾ ಹಣ ಅಧಿಕಾರದ ಮದ ನೆತ್ತಿಗೇರಿದ ಗುಂಪುಗಳ ಬುಡಕ್ಕೆ ಹೋಗಬಹುದು; ಆದರೆ ಅದನ್ನು ಒಂದು ಸಾರ್ವತ್ರಿಕವಾದ, ದೇಶದೆಲ್ಲೆಡೆ ಹಬ್ಬಿಕೊಂಡಿರುವ ವಿದ್ಯಮಾನವೆಂದು ನೋಡಿದಾಗ ಅದು ಪಿತೃಪ್ರಧಾನವಾದ ಸಾಮಾಜಿಕ-ಕೌಟುಂಬಿಕ ಚೌಕಟ್ಟುಗಳನ್ನು ಮುರಿದು ಮುನ್ನುಗ್ಗುತ್ತಿರುವ ಮಹಿಳಾ ಸಮುದಾಯದ ಮೇಲೆ ಹಳೇ ವ್ಯವಸ್ಥೆಯು ಹತಾಶ ದಾಳಿ ಎಂಬುದು ಸ್ಪಷ್ಟವಾಗುತ್ತದೆ. (ಮಹಿಳಾ ಸಮುದಾಯ ಎಂದಾಗ ಅದು ಏಕರೂಪಿಯಾಗಿಲ್ಲ, ಸಮಾಜದಲ್ಲಿರುವ ಜಾತಿ, ವರ್ಗ, ಧರ್ಮ, ಪ್ರದೇಶ ಮೊದಲಾದ ಎಲ್ಲಾ ಗುರುತುಗಳೂ ಅವರನ್ನು ಪ್ರತ್ಯೇಕಗೊಳಿಸಿವೆ ಎಂಬುದು ನಿಜ. ಅದೇ ಸಮಯದಲ್ಲಿ ಮಹಿಳೆ ಎಂಬುದು ಜೈವಿಕ-ಸಾಮಾಜಿಕ-ಸಾಂಸ್ಕೃತಿಕ ಕಾರಣಗಳಿಂದಾಗಿ ಒಂದಾಗಿಯೂ ಇರುವಂತಹ ಸಂಕೀರ್ಣವಾದ ಅಸ್ಮಿತೆ ಎಂಬುದನ್ನೂ ಗುರುತಿಸಬೇಕು). ಇಂದಿನ ಪ್ರಧಾನ ಧಾರೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಮೊದಲಿಗಿಂತ ಹೆಚ್ಚಾಗಿ ಸ್ವಂತ ಆಯ್ಕೆಯಾಗಿಯೋ, ಅನಿವಾರ್ಯವಾಗಿಯೋ ಹೊರಗೆ ದುಡಿಯಲೇಬೇಕಾಗಿದೆ. ಹೆಚ್ಚೂಕಡಿಮೆ ಒಂದು ಶತಮಾನದ ಔಪಚಾರಿಕ ಶಿಕ್ಷಣ ಆಕೆಯಲ್ಲಿ ಆಕೆಯದ್ದೇ ಆದ ರೀತಿಯಲ್ಲಿ 'ಪ್ರಜ್ಞೆ' ಮೂಡಿಸಿದೆ. ಚುನಾವಣಾ ರಾಜಕಾರಣದಲ್ಲಿ ಮಹಿಳೆಯರ ಎದ್ದುಕಾಣುವಂತಹ ಉಪಸ್ಥಿತಿ ಹಲವು ಬಗೆಯ ಆಕಾಂಕ್ಷೆಗಳನ್ನು ಹುಟ್ಟುಹಾಕಿದೆ. ಮುಖ್ಯವಾಗಿ ಕಟ್ಟುಪಾಡುಗಳಿಂದ ತಪ್ಪಿಸಿಕೊಂಡ ಸ್ವತಂತ್ರ ವ್ಯಕ್ತಿಯಾಗಿ ಬದುಕುವುದು ಬಹುಸಂಖ್ಯಾತ ಮಹಿಳೆಯರಿಗೆ ಸಾಧ್ಯವಾಗದೇ ಹೋದರೂ, ಅಂತಹ ಸ್ವತಂತ್ರ ದಿಟ್ಟ ಮಹಿಳೆಯ ಕನಸನ್ನು ಕಾಣುವುದು ಖಂಡಿತ ಸಾಧ್ಯವಾಗಿದೆ. ಅಂದರೆ ಎಲ್ಲಾ ಬಗೆಯ ದಮನ, ದಬ್ಬಾಳಿಕೆ, ಸ್ವತಂತ್ರ ವ್ಯಕ್ತಿತ್ವದ ನಿರಾಕರಣೆಯ ಮೂಲವಾದ ಕುಟುಂಬ ವ್ಯವಸ್ಥೆಯ ಬಿಗಿಮುಷ್ಟಿಯಿಂದ ಮಹಿಳೆಯರು ಸ್ವಲ್ಪಮಟ್ಟಿಗಾದರೂ ತಪ್ಪಿಸಿಕೊಳ್ಳುತ್ತಿರುವುದು ಖಚಿತವಾಗಿದೆ. ಇದುವರೆಗೆ ಮಾನ್ಯವಾಗಿದ್ದ ಹಲವಾರು ಅಸಮಾನ ರೀತಿರಿವಾಜುಗಳನ್ನು ಮಹಿಳೆಯರು ಸ್ಪಷ್ಟವಾಗಿಯೇ ಧಿಕ್ಕರಿಸಿದ್ದಾರೆ. ಕೌಟುಂಬಿಕ ಮತ್ತು ಸಾಮಾಜಿಕ ನೆಲೆಯಲ್ಲಿ ಆಮೂಲಾಗ್ರವಾಗಲ್ಲದಿದ್ದರೂ ಕೆಲವು ಗಮನಾರ್ಹವಾದ ಬದಲಾವಣೆಗಳಿಗೆ ಚಾಲನೆ ನೀಡಿದ್ದಾರೆ. ತಮ್ಮ ಮೇಲಿನ ದೌರ್ಜನ್ಯಗಳನ್ನು ವಿರೋಧಿಸುವ, ಕುಟುಂಬದಲ್ಲಿ ಸಮಾನ ಸ್ಥಾನಮಾನದ ಹತ್ತಿರದಲ್ಲಿ ಇಲ್ಲದಿದ್ದರೂ ಕನಿಷ್ಠ ತನ್ನಿಷ್ಟದಂತೆ ಬದುಕಬೇಕೆಂಬ ಒತ್ತಾಯವನ್ನು ಮುಂದಿಡುವ, ಮನೆಕೆಲಸದ ನೊಗವನ್ನು ಹೊತ್ತುಕೊಂಡೂ ಹೊರಗೆ ದುಡಿದು ತನ್ನ ಕಾಲ ಮೇಲೆ ನಿಲ್ಲಬೇಕೆಂಬ ಬಯಕೆಗಳನ್ನು ಹೇಳಿಕೊಳ್ಳುವಮಟ್ಟಿಗೆ ಮಹಿಳೆಯ ಧ್ವನಿ ಕೇಳಿಸುತ್ತಿದೆ.


ಎಲ್ಲಕ್ಕಿಂತ ಮುಖ್ಯವಾಗಿ ಈ ಸಾಮಾಜಿಕ ವ್ಯವಸ್ಥೆಯನ್ನು ಪುನರುತ್ಪಾದಿಸುವ ಮದುವೆಯೆಂಬ ಸಂಸ್ಥೆಯ ಚೌಕಟ್ಟು ಹಿಂದಿನಂತೆಯೇ ಉಳಿದುಕೊಂಡಿಲ್ಲ. ಅದು ಹೊಸ ರೂಪಗಳನ್ನು ಪಡೆದುಕೊಳ್ಳುತ್ತಿರುವುದರಲ್ಲಿ ಮಹಿಳೆಯ ಪಾತ್ರವೇ ನಿರ್ಣಾಯಕವಾದುದೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಮದುವೆಯ ವಿಚಾರದಲ್ಲಿ ಹೆಣ್ಣಿನ ಸ್ವತಂತ್ರ ನಿರ್ಧಾರಗಳು - ಅವೆಲ್ಲವೂ ಪ್ರಬುದ್ಧವಾದುವೂ, ಸುಖಾಂತ್ಯವಾಗುವಂತಹವೂ ಅಲ್ಲದಿರಬಹುದು, ಆದರೂ ಆ ನಿರ್ಧಾರಗಳನ್ನು ತೆಗೆದುಕೊಳ್ಳುವ ಧೈರ್ಯ ಆಕೆಯಲ್ಲಿ ಮೂಡಿರುವುದು ಸತ್ಯ- ಪುರುಷಾಧಿಪತ್ಯವನ್ನೇ ಆಧರಿಸಿರುವ, ಅದನ್ನೇ ಎತ್ತಿಹಿಡಿಯುವ ಕುಟುಂಬ ವ್ಯವಸ್ಥೆಯ, ಸಮಾಜ ವ್ಯವಸ್ಥೆಯ ಬುಡಕ್ಕೇ ಕೊಡಲಿ ಪೆಟ್ಟು ಕೊಟ್ಟಿರುವುದಂತೂ ನಿಚ್ಚಳವಾಗಿದೆ. ಮಹಿಳೆಯರ ಈ ಅಸರ್ಷನ್ (ತನ್ನತನದ ಸಮರ್ಥನೆ), ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವ ದಿಟ್ಟತನ ಮತ್ತು ಅದರ ಪರಿಣಾಮವಾಗಿ ಸಾಮಾಜಿಕ ಸಂರಚನೆಯಲ್ಲಿ- ಆಸ್ತಿ ಸಂಬಂಧಗಳಲ್ಲಿ ಬರುತ್ತಿರುವ ಬದಲಾವಣೆಗಳು, ಹಳೆಯ ಫ್ಯೂಡಲ್ ಸಾಮಾಜಿಕ ವ್ಯವಸ್ಥೆಗೆ ಒತ್ತಾಯದ ಶಸ್ತ್ರಚಿಕಿತ್ಸೆ ಮಾಡುತ್ತಿವೆ.

ಇದ್ಯಾವುದೂ ಏಕಾಏಕಿ ನಡೆದದ್ದಲ್ಲ; ಮಹಿಳೆಯರು ತಮ್ಮತನವನ್ನು ಗಟ್ಟಿಯಾಗಿ ಪ್ರತಿಪಾದಿಸುವುದಕ್ಕೂ ಸುದೀರ್ಘಕಾಲದ ಸಂಘರ್ಷದ ಹಿನ್ನೆಲೆಯಿದೆ. ಅಂತಹ ಸಂಘರ್ಷ ಕೆಲವೊಮ್ಮೆ ಹೊರಪ್ರಪಂಚಕ್ಕೆ ಕಾಣುವಂತೆ ನಡೆದಿರಬಹುದು; ಹಲವು ಸಲ ಕುಟುಂಬದೊಳಗೇ ಅಂತರ್ಗಾಮಿಯಾಗಿ ತಲೆಮಾರುಗಳ ಕಾಲ ನಡೆದಿರಬಹುದು. ಅಂತೂ ಇಂದು ಬದುಕಿನ ಹೊಸತೊಂದು ಮಜಲಿಗೆ ಮಹಿಳೆಯರು ಖಂಡಿತವಾಗಿಯೂ ತೆರೆದುಕೊಂಡಿದ್ದಾರೆ.

ವಿಪರ್ಯಾಸವೆಂದರೆ, ಈ ಬದಲಾವಣೆಯ ಗತಿಗೆ ತಕ್ಕಂತೆ ಆರ್ಥಿಕ ರಚನೆಯಲ್ಲಾಗಲೀ, ಕುಟುಂಬ-ಮದುವೆಯಂತಹ ಸಂಸ್ಥೆಗಳಲ್ಲಾಗಲೀ ಬುಡಮಟ್ಟದಿಂದ ಬದಲಾವಣೆ ಬಂದಿಲ್ಲ; ಅಂತಹ ಬದಲಾವಣೆಗಳನ್ನು ಪ್ರಚೋದಿಸಬೇಕಾದ ಪ್ರಬಲ ಚಳವಳಿಗಳು, ಸಮಾಜ ಪರಿವರ್ತನೆಯ ಆಂದೋಲನಗಳು ಕೆಳಗಿನಿಂದ ಹುಟ್ಟಬರುವ ಸ್ಥಿತಿ ಇರಲಿಲ್ಲ. ನಡೆದ ಪ್ರಯತ್ನಗಳು ಬಿಡಿಬಿಡಿ ಮಹಿಳೆಯರಿಂದ ಒಂದೊಂದು ಕುಟುಂಬದೊಳಗೆ, ಒಂದೊಂದು ಸಂಬಂಧದೊಳಗೆ ನಡೆದಿವೆ. ಇನ್ನು ಪ್ರಭುತ್ವ ಮೇಲಿನಿಂದ ಇದಕ್ಕಾಗಿ ಏನೇನೆಲ್ಲಾ ಮಾಡಬೇಕಿತ್ತೋ ಅದರಲ್ಲಿ ಶೇ.1ರಷ್ಟನ್ನೂ ಜಾರಿ ಮಾಡಿಲ್ಲ, ಸರ್ಕಾರ ಮತ್ತು ಪ್ರಭುತ್ವದ ಇತರೆ ಅಂಗಗಳು ತೋರಿಕೆಗಷ್ಟೇ ಮಹಿಳಾಪರವಾದ ಆದರೆ ಆಳದಲ್ಲಿ ಮಹಿಳಾ ವಿರೋಧಿಯಾದ-ಹೆಚ್ಚೆಂದರೆ ಮಹಿಳೆಯರಿಗೆ ಏನೂ ಪ್ರಯೋಜನವಿಲ್ಲದ- ಕೆಲಸಗಳನ್ನಷ್ಟೇ ಈ ಆರು ದಶಕಗಳಲ್ಲಿ ಮಾಡಿವೆ. ಸಮಾಜದಲ್ಲಿ ವಿಸ್ತೃತವಾಗಿ ಹರಡಬೇಕಿದ್ದ ಆಳವಾದ ಪ್ರಜಾತಾಂತ್ರಿಕ ಮನಸ್ಥಿತಿ ಭಾರತದ ಸಂದರ್ಭದಲ್ಲಿ ನಗಣ್ಯವೆನಿಸುಷ್ಟು ಕಡಿಮೆ ಮತ್ತು ಅದು ಪ್ರಭುತ್ವದ ನೇರ ಮಧ್ಯಪ್ರವೇಶವಿಲ್ಲದೆ ಹೆಚ್ಚುವುದು ಸಾಧ್ಯವೂ ಇಲ್ಲ, ಹೀಗಾಗಿ ಹಳೆಯ ಅದೇ ಫ್ಯೂಡಲ್ ಮನಸ್ಥಿತಿಯ ಜನರಿಂದ ಮತ್ತು ಪ್ರತಿಗಾಮಿ ಮೌಲ್ಯಗಳಿಂದ ತುಂಬಿರುವ ಸಮಾಜದಲ್ಲಿ ಮಹಿಳೆಯರು ಪುರೋಗಾಮಿ ಚಿಂತನೆಗಳು ಮತ್ತು ಆಚರಣೆಗಳಿಗಾಗಿ ಸಂಘರ್ಷಕ್ಕಿಳಿದರು. ಇದೊಂದು ಪ್ರಬಲವಾದ ವೈರುಧ್ಯವನ್ನು ಸೃಷ್ಟಿಸಿದ್ದು, ಮಹಿಳೆಯರನ್ನು ಗುರಿಮಾಡಿ ನಡೆಯುತ್ತಿರುವ ಅತ್ಯಾಚಾರವನ್ನೂ ಒಳಗೊಂಡ ಹಲವು ಬಗೆಯ ದೌರ್ಜನ್ಯಗಳಿಗೆ ಮೂಲಕಾರಣವಾಗಿದೆ.

ಹೆಚ್ಚುತ್ತಿರುವ ಅತ್ಯಾಚಾರ, ಕೌಟುಂಬಿಕ ಹಿಂಸೆ, ಆಸಿಡ್ ದಾಳಿ; ಮರ್ಯಾದಾಹೀನ ಹತ್ಯೆ, ದಲಿತ ಮಹಿಳೆಯರ ಮೇಲಿನ ದೌರ್ಜನ್ಯ ಎಲ್ಲವುಗಳನ್ನೂ ಈ ಸಾಮಾಜಿಕ ಸಂಘರ್ಷದ ಭಾಗವಾಗಿಯೇ ಗುರುತಿಸಬೇಕು. ಒತ್ತಾಯಪೂರ್ವಕವಾಗಿಯಾದರೂ ಹೆಣ್ಣನ್ನು ಹಳೆಯ ಮೌಲ್ಯವ್ಯವಸ್ಥೆಗೆ ಅಧೀನಗೊಳಿಸುವ, ಹಿಂಸಾತ್ಮಕವಾಗಿಯಾದರೂ ಪುರುಷಪ್ರಧಾನ ಕಟ್ಟುಪಾಡುಗಳಿಗೆ ಆಕೆಯನ್ನು ಒಗ್ಗಿಸುವ, ಅಷ್ಟಾಗಿಯೂ ಅದನ್ನು ಮೀರುವ ಮಹಿಳೆಯರನ್ನು 'ಶಿಕ್ಷಿಸುವ' ಪ್ರಯತ್ನಗಳಾಗಿ ಈ ಎಲ್ಲಾ ಘಟನೆಗಳನ್ನೂ ಅರ್ಥೈಸಿಕೊಳ್ಳದಿದ್ದರೆ ಸರಿಯಾದ ಪರಿಹಾರಗಳನ್ನು ಹುಡುಕುವುದರಲ್ಲಿ ವಿಫಲರಾಗುತ್ತೇವೆ. ಮಹಿಳೆಯ ಲೈಂಗಿಕತೆ ಮತ್ತು ಚಲನಶೀಲತೆಯನ್ನು ನಿಯಂತ್ರಿಸದೆ ಪ್ರತಿಗಾಮಿ ಕುಟುಂಬ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲವೆಂಬ ಕಾರಣದಿಂದಲೇ ಮಹಿಳೆಯ ಮೇಲೆ ಮಾತ್ರವೇ ಎಲ್ಲಾ ನೈತಿಕ ನಿರ್ಬಂಧಗಳನ್ನೂ ಹೇರಲಾಗಿದೆ. ಪ್ರತೀ ಬಾರಿ ಅತ್ಯಾಚಾರದ ಬಗ್ಗೆ ಪ್ರಶ್ನೆ ಎದ್ದಾಗಲೂ ಮಹಿಳೆಯರ ಉಡುಪು, ನಡತೆ, ಓಡಾಡುವ ಸಮಯದ ಚರ್ಚೆ ಬರುವುದು ಆಕಸ್ಮಿಕವಲ್ಲ! ಮಹಿಳೆಯರು 'ಆರು ಗಂಟೆಯೊಳಗೆ ಮನೆ ಸೇರಬೇಕು' ಎಂಬ ಅಲಿಖಿತ ನಿಯಮವನ್ನು ಉಲ್ಲಂಘಿಸುವುದು ಅವರ ಆತ್ಮವಿಶ್ವಾಸದ ಸಂಕೇತ; ಅವರ ಉಡುಪು ದಿಟ್ಟತನ ಮತ್ತು ಸ್ವಾತಂತ್ರ್ಯವನ್ನನುಭವಿಸಬೇಕೆಂಬ ಹಂಬಲದ ಸಂಕೇತ! ಇವೆಲ್ಲ ಪಿತೃಪ್ರಧಾನ ಒಪ್ಪಿತ ಮೌಲ್ಯಗಳ ಪ್ರಕಾರ ಶಿಕ್ಷಾರ್ಹ ಅಪರಾಧಗಳು!! ಈ ಬೆಳವಣಿಗೆಗಳು ಕೇವಲ ಮಹಿಳಾ ಸಮುದಾಯಕ್ಕೆ ಸಂಬಂಧಿಸಿದಂತೆ ಮಾತ್ರ ನಡೆದಿರುವುದಲ್ಲ; ಯಾವುದೇ ದಮನಿತ ಸಮುದಾಯ ತನ್ನ ಹಕ್ಕುಗಳನ್ನು ಘೋಷಿಸಿ ಎತ್ತಿಹಿಡಿಯಲಾರಂಭಿಸಿದಂತೆ ಮೊದಲ ಹಂತದಲ್ಲಿ ಅವರ ಮೇಲಿನ ದೌರ್ಜನ್ಯಗಳು ಹೆಚ್ಚುಹೆಚ್ಚೇ ಆಗಿವೆ ಎಂಬುದನ್ನು ಮರೆಯಬಾರದು.

ಆದರೆ ಅತ್ಯಾಚಾರ ಘಟನೆಗಳ ನಿರ್ದಿಷ್ಟತೆಯೂ ಒಂದಿದೆ. ಅದು ಜಾಗತೀಕರಣದ ಪರಿಣಾಮವಾದ ಲೋಲುಪತೆಯನ್ನು ವಿಜೃಂಭಿಸುವ ಉಪಭೋಗಿ ಸರಕು ಸಂಸ್ಕೃತಿ! ಅದು ಜಗತ್ತಿನ ಎಲ್ಲವನ್ನೂ-ಮಹಿಳೆಯರನ್ನೂ ಕೂಡಾ-



ಸೌಕರ್ಯವಿರುವ ಮನುಷ್ಯರ ಭೋಗಕ್ಕಾಗಿ ಇರುವ ವಸ್ತುಗಳೆಂದು ಭಾವಿಸುತ್ತದೆ ಮತ್ತು ಬಿಂಬಿಸುತ್ತದೆ. ಈ ಸುಖಲೋಲುಪತೆಯ ತವರಿನ ವಿಕೃತ ಸಂಸ್ಕೃತಿಯಲ್ಲಿ ಮಹಿಳೆ ಬಂಡವಾಳಶಾಹಿಗಳು ಉತ್ಪಾದಿಸುವ ಸರಕಿನ ಗ್ರಾಹಕಳಾಗಿದ್ದಾಳೆ, ಜಾಹೀರಾತುಗಳ ಮೂಲಕ ಸರಕನ್ನು ಮಾರುವ ವಾಹಕಳಾಗಿದ್ದಾಳೆ ಮಾತ್ರವಲ್ಲ ಸ್ವತಃ ತಾನೇ ಒಂದು ಸರಕಾಗಿದ್ದಾಳೆ! ಮನುಷ್ಯ ಸಂಬಂಧಗಳನ್ನೂ, ಆರೋಗ್ಯಕರ ಪ್ರಜಾತಾಂತ್ರಿಕ ಮೌಲ್ಯಗಳನ್ನೂ ಅವಹೇಳನ ಮಾಡುತ್ತಾ, ಕೇವಲ ಸ್ವಾರ್ಥಪೂರಿತವಾದ ಮತ್ತು ವ್ಯಕ್ತಿಕೇಂದ್ರಿತವಾದ ಉಪಭೋಗದ ಮೌಲ್ಯಗಳನ್ನು ಆದರ್ಶವೆಂದು ನಂಬಿಸುವ ಈ ವ್ಯವಸ್ಥೆ ಮಹಿಳೆಯ ಮೇಲಿನ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಗಳು ಮತ್ತಷ್ಟು ಹೆಚ್ಚಾಗಲು ನೇರವಾದ ಕಾರಣವಾಗಿರುವುದು ನೂರಕ್ಕೆ ನೂರರಷ್ಟು ಖಂಡಿತ. ಪ್ರತಿಯೊಂದು ಜಾಹೀರಾತು, ಸಿನೆಮಾ, ಟಿ.ವಿ ಕಾರ್ಯಕ್ರಮವೂ ಇವೇ ಮೌಲ್ಯಗಳನ್ನು ಸಾವಿರ ಸಾವಿರ ಸಲ ಜನರ ಮನಸ್ಸುಗಳಲ್ಲಿ ಬೇರೂರಿಸುತ್ತವೆ. ಅಷ್ಟು ಮಾತ್ರವೇ ಅಲ್ಲ, ಇಡೀ ಬಂಡವಾಳಶಾಹಿ ವ್ಯವಸ್ಥೆಯೇ ಲಾಭಕ್ಕಾಗಿ-ಸುಖಕ್ಕಾಗಿ ಏನು ಬೇಕಾದರೂ ಮಾಡಬಹುದೆಂಬ ಮೌಲ್ಯವನ್ನು ಹರಡುವಂಥದ್ದು. ಹಲವಾರು ರೀತಿಗಳಲ್ಲಿ ಜನರ ಬದುಕನ್ನು ಛಿದ್ರಗೊಳಿಸುತ್ತಾ ಅವರ ಮೇಲೆ ಅಸಾಧ್ಯವಾದ ಅಸ್ತಿತ್ವದ ಒತ್ತಡವನ್ನು ಹೇರುವಂಥದು. ಇವೆಲ್ಲವೂ ಒಂದು ಅನಾರೋಗ್ಯಕರ ಸಾಮಾಜಿಕ-ಸಾಂಸ್ಕೃತಿಕ ವಾತಾವರಣವನ್ನು ಉಂಟುಮಾಡಿದೆ. ಮೊದಲೇ ಹೆಣ್ಣಿನ ಅಸ್ತಿತ್ವ-ವ್ಯಕ್ತಿತ್ವಗಳೆಲ್ಲವನ್ನೂ ಆಕೆಯ ದೇಹ ಮತ್ತು ಸಂತಾನೋತ್ಪತ್ತಿಯ ಸಾಮರ್ಥ್ಯಕ್ಕೆ ಸೀಮಿತಗೊಳಿಸಿರುವ ಸಾಮಾಜಿಕ ವ್ಯವಸ್ಥೆಯ ಮೇಲೆ ಇಂತಹ ವಿಕೃತ ಸಂಸ್ಕೃತಿ ಹರಡಿದರೆ ಆಗಬಹುದಾದ ಅನಾಹುತಗಳೇನೆಂಬುದನ್ನು ಈ ಘಟನೆಗಳು ಎತ್ತಿತೋರಿಸುತ್ತಿವೆ. ಇದನ್ನು ನಿಯಂತ್ರಿಸಬಹುದಾದ ಅಧಿಕಾರವುಳ್ಳ ಸರ್ಕಾರಕ್ಕೂ ಬಂಡವಾಳಶಾಹಿ ವ್ಯವಸ್ಥೆಯ ಹಿತಾಸಕ್ತಿ ಕಾಪಾಡುವುದು ಮುಖ್ಯವಾಗಿದೆ; ಮಹಿಳೆಯರ ಸುರಕ್ಷತೆಯಲ್ಲ. ಹೀಗಾಗಿ ಕಣ್ಣುಬಿಡದ ಕೂಸಿನಿಂದ ಹಣ್ಣುಹಣ್ಣು ಮುದುಕಿಯರವರೆಗೆ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ನಿರಂತರವಾಗಿ ನಡೆಯುತ್ತಿವೆ!

ಪರಿಸ್ಥಿತಿ ಹೀಗಿರುವಾಗ ತುರ್ತಾಗಿ ಇವುಗಳನ್ನು ನಿಯಂತ್ರಿಸುವ ಕ್ರಮಗಳು ಹಾಗೂ ದೂರಗಾಮಿ ಯೋಜನೆಗಳೂ ಬೇಕಿವೆ. ಮಹಿಳಾ ಸಂಘಟನೆಗಳು, ಮಹಿಳಾಪರ ಕಾಳಜಿ ಉಳ್ಳವರು ಮತ್ತು ಸಮಾಜದ ಒಳಿತನ್ನು ಬಯಸುವ ಎಲ್ಲರ ಮುಂದೆ ಇದೊಂದು ಸವಾಲಾಗಿ ನಿಂತಿದೆ. ಇಡೀ ಸಮಾಜದಲ್ಲಿ ಬುಡಮಟ್ಟದಿಂದ ಪ್ರಜಾತಾಂತ್ರೀಕರಣದ ಪ್ರಕ್ರಿಯೆ ನಡೆಯದೆ, ಆರ್ಥಿಕ-ಸಾಮಾಜಿಕ ಆಯಾಮಗಳ ಲಿಂಗತಾರತಮ್ಯವನ್ನು ಕೊನೆಗೊಳಿಸುವ ಚಿಂತಿಸದೆ ಪ್ರತಿಗಾಮಿ ಫ್ಯೂಡಲ್ ವ್ಯವಸ್ಥೆ-ವಿಕೃತ ಬಂಡವಾಳಶಾಹಿ ವ್ಯವಸ್ಥೆ ಮತ್ತು ಮಹಿಳೆಯರ ಮುನ್ನಡೆ ನಡುವೆ ಏರ್ಪಟ್ಟಿರುವ ವೈರುಧ್ಯವನ್ನು ಹೋಗಲಾಡಿಸುವುದು ಸಾಧ್ಯವಿಲ್ಲ. ಸ್ಥಾಪಿತ ಮೌಲ್ಯಗಳನ್ನು, ಹಿತಾಸಕ್ತಿಗಳನ್ನು ಕಾಪಾಡಬಯಸುವ ಶಕ್ತಿಗಳಿಗೂ (ವ್ಯಕ್ತಿಗಳಾಗಿ ಅವರು ಗಂಡಸರೂ ಇರಬಹುದು ಹೆಂಗಸರೂ ಇರಬಹುದು) ಅವುಗಳನ್ನು ಕಿತ್ತೊಗೆದು ಮುನ್ನುಗ್ಗಬಯಸುವ ಸಮುದಾಯಗಳಿಗೂ ಸಂಘರ್ಷ ತೀವ್ರವಾಗಿಯೇ ಮುಂದುವರೆಯುತ್ತದೆ. ದೇಶದಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರದಲ್ಲಿ ಮೊದಲ ಸ್ಥಾನದಲ್ಲಿರುವ ರಾಜ್ಯವಾದ ಹರ್ಯಾಣಾದಲ್ಲಿ ಈಚಿನ ವರ್ಷಗಳಲ್ಲಿ ನಡೆದಿರುವ ಅತ್ಯಾಚಾರಗಳಲ್ಲಿ ಶೇ.90ರಷ್ಟು ದಲಿತ ಮಹಿಳೆಯರು ಮತ್ತು ಯುವತಿಯರ ಮೇಲೆ ಬಲಾಢ್ಯ ಜಾತಿ ಸಮುದಾಯದವರಿಂದ ನಡೆದಿವೆ. ಕರ್ನಾಟಕದ ಉದಾಹರಣೆಯನ್ನೇ ತೆಗೆದುಕೊಳ್ಳುವುದಾದರೆ, ಬಲಪಂಥೀಯ ಸಿದ್ಧಾಂತವನ್ನು ಸಮರ್ಥಿಸುವ ಬಿಜೆಪಿ ಅಧಿಕಾರಕ್ಕೆ ಬಂದಮೇಲೆ, ಒಟ್ಟಾರೆಯಾಗಿ ಮಹಿಳೆಯರ ಮೇಲಿನ - ಅದರಲ್ಲೂ ದಲಿತ ಮಹಿಳೆಯರ ಮೇಲಿನ - ದೌರ್ಜನ್ಯ ಪ್ರಕರಣಗಳು ತೀವ್ರವಾಗಿ ಹೆಚ್ಚಿವೆ. ಬಿಜೆಪಿ ಮತ್ತು ಸಂಘಪರಿವಾರದ ಶಕ್ತಿಗಳು ಪ್ರಬಲವಾಗಿರುವ ಕರಾವಳಿಯಲ್ಲಿ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಹಲ್ಲೆ ಮತ್ತು ನೈತಿಕ ಪೊಲೀಸ್‌ಗಿರಿಯಂತಹ ಪ್ರಕರಣಗಳು ಆಘಾತಕಾರಿಯಾಗಿ ಹೆಚ್ಚಿವೆ. ಇಲ್ಲೆಲ್ಲಾ ನಡೆಯುತ್ತಿರುವ ಮತ್ತು ಗಂಡಹೆಂಡತಿ ನಡುವಿನ ಮನೆಯೊಳಗೇ ನಡೆಯುವ ಎಲ್ಲಾ ಅತ್ಯಾಚಾರಗಳಲ್ಲೂ ವ್ಯವಸ್ಥೆ (ವರ್ಗ, ಜಾತಿ, ಧರ್ಮಗಳ ಮೇಲರಿಮೆಯುಳ್ಳ ಈ ದೇಶದ ವ್ಯವಸ್ಥೆಯ ಅಧಿಕಾರವನ್ನು ಸ್ಥಾಪಿಸುವ ಬಲವಾದ ಒತ್ತಾಸೆ ಇದ್ದೇ ಇದೆ. ಪ್ರತೀ ಅತ್ಯಾಚಾರದ ಹಿಂದೆಯೂ ಈ 'ಅಧಿಕಾರ'ದ ಮನಸ್ಥಿತಿ ಇದೆ. ತಮ್ಮ ಅಧಿಕಾರವನ್ನು ಪ್ರಶ್ನಿಸುವವರನ್ನು ಈ ಮೂಲಕ ಹತ್ತಿಕ್ಕಿ, ತನಗೆ ಅಧೀನಳಾಗಿದ್ದೀ ಎಂಬುದನ್ನು, ತನ್ನ ಭೋಗಕ್ಕೆ ನೀನು ಇರುವ ಸರಕು ಎಂಬ ಸಂದೇಶವನ್ನೂ ಅದು ರವಾನಿಸುತ್ತದೆ.

ಆದ್ದರಿಂದಲೇ ನಮ್ಮ ಮುಂದಿರುವ ಈ ಸವಾಲನ್ನು ನಾವು ಎದುರಿಸಲೇಬೇಕಿದೆ. ಎಲ್ಲಾ ಹಂತದಲ್ಲೂ ಲೈಂಗಿಕ ದೌರ್ಜನ್ಯ ತಡೆ ಸಮಿತಿಗಳು, ತ್ವರಿತ ನ್ಯಾಯಾಲಯಗಳು, ಅಧಿಕಾರಿಗಳಲ್ಲಿ ಈ ಬಗೆಗಿನ ಪೂರ್ವಾಗ್ರಹವನ್ನು ಕಡಿಮೆ ಮಾಡುವುದಕ್ಕೆ ತರಬೇತಿ ಕಾರ್ಯಕ್ರಮಗಳು, ಯುವತಿಯರು-ಬಾಲಕಿಯರು-ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆಯ

## ಹೆಸರು ಬದಲಾಗಬಹುದು; ಪರಿಸ್ಥಿತಿ ಒಂದೇ

ಪ್ರಪಂಚದ ಯಾವುದೇ ಮೂಲೆಗೆ ಹೋದರೂ ಜನಸಂಖ್ಯೆಯಲ್ಲಿ ಶೇ.50ರಷ್ಟಿರುವ (ಕೆಲವೊಮ್ಮೆ ಅದಕ್ಕಿಂತಲೂ ಹೆಚ್ಚಿರುವ) ಸಮುದಾಯವಿದು. ಕೆಟ್ಟ ಪರಿಸ್ಥಿತಿಗಳಲ್ಲೂ ಒಟ್ಟು ಜನಸಂಖ್ಯೆಯ ಶೇ.48ರಷ್ಟಿರುವ ದೊಡ್ಡ ಸಮುದಾಯವೊಂದರ ಸದಸ್ಯರು, ಒಂಟೊಂಟಿಯಾಗಿ ಪ್ರತೀ ನಿಮಿಷದ ಲೆಕ್ಕದಲ್ಲಿ ದಾಳಿಗೊಳಗಾಗುವ ವಿಚಿತ್ರ ವಿದ್ಯಮಾನವಿದು. ಅದೇ ಸಮುದಾಯದ ಕೆಲವರು ವಿಶ್ವದ ಉನ್ನತ ಹುದ್ದೆಗಳಲ್ಲಿದ್ದರೂ, ಕೆಲವರು ಗೌರವಕ್ಕೆ ಪಾತ್ರವಾದ ಸಾಧನೆಗಳ ಕ್ಷಿತಿಜವೇರಿದ್ದರೂ, ದೇಶವನ್ನೂ ರಾಜ್ಯವನ್ನೂ ಮುನ್ನಡೆಸುವಂತಹ ಘನತೆಯ ಜವಾಬ್ದಾರಿಗಳನ್ನು ಇನ್ನೂ ಹಲವರು ಹೊತ್ತಿದ್ದರೂ..... ಅದ್ಯಾವುದೂ- ಬೀದಿ ಬೀದಿಗಳಲ್ಲಿ, ಮನೆಮನೆಯ ಕತ್ತಲ ಮೂಲೆಗಳಲ್ಲಿ, ಪ್ರತೀದಿನ ಸಂಚರಿಸುವ ಬಸ್‌ಗಳಲ್ಲಿ, ರೈಲುಗಳ ಶೌಚಾಲಯಗಳಲ್ಲಿ, ಪ್ರಾಥಮಿಕ ಶಾಲೆಗಳ ಕೊಠಡಿಗಳಲ್ಲಿ, ಪರೀಕ್ಷಾ ಕೇಂದ್ರಗಳಲ್ಲಿ, ಮಾರುಕಟ್ಟೆಗಳಲ್ಲಿ, ದೇವಸ್ಥಾನಗಳಲ್ಲಿ, ಆಸ್ಪತ್ರೆಗಳಲ್ಲಿ- ಹೀಗೆ ಎಲ್ಲೆಂದರಲ್ಲಿ ಇದೇ ಸಮುದಾಯದ ಸದಸ್ಯರು ಭೀಕರವಾಗಿ ದಾಳಿಗೊಳಗಾಗುವುದನ್ನು ತಡೆಯಲು ನೆರವಾಗುತ್ತಿಲ್ಲ, ಇಷ್ಟು ಪ್ರಬಲವಾದ ಸಮುದಾಯವೊಂದು ಈ ರೀತಿಯಲ್ಲಿ ಅಸಹಾಯಕವಾಗಿರುವ ಮತ್ತೊಂದು ಉದಾಹರಣೆ ವಿಶ್ವದಲ್ಲೆಲ್ಲಾದರೂ ಇರಲು ಸಾಧ್ಯವೇ! ನಿರ್ಭಯ, ಅನಾಮಿಕ, ದಾಮಿನಿ, ಸೋನಿ ಸೂರಿ, ಶರ್ಮಿಳಾ ಇರೋಂ, ಪೆಂಚಲಮ್ಮ, ಸ್ವೆಫಿ, ಜೆಸ್ಸಿಕಾ ಲಾಲ್, ಅನಸೂಯ. . . ವ್ಯಕ್ತಿಗಳ ಹೆಸರು ಬದಲಾಗಬಹುದು; ಆದರೆ ಪರಿಸ್ಥಿತಿ ಒಂದೇ; ಅತ್ಯಾಚಾರಗಳಿಗೆ ಬಲಿಯಾಗುತ್ತಿರುವುದು, ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗುತ್ತಿರುವುದು ಅಥವಾ ಇನ್ಯಾವುದಾದರೂ ರೀತಿಯ ಲಿಂಗಭೇದದ ನೆಲೆಯ ಹಿಂಸೆಗೆ ಗುರಿಯಾಗುವುದು!

ತಿಗಳು, ಹೆಚ್ಚು ಹೆಚ್ಚು ಆರೋಪಿಗಳಿಗೆ ಶಿಕ್ಷೆಯಾಗ ವುದು- ಇನ್ನೂ ಹಲವು ಬಗೆಯ ಕ್ರಮಗಳಿಗಾಗಿ ಸತತವಾಗಿ ಹೋರಾಡೋಣ. ಆದರೆ ಅಷ್ಟಕ್ಕೇ ನಾಗಬಹುದೇ? ಲೇಖನದ ಆರಂಭದಲ್ಲಿ ಯುವಂತೆ ಜನಸಂಖ್ಯೆಯಲ್ಲಿ, ಅಧಿಕಾರ ಸ್ಥಾನಗಳಲ್ಲಿ ರಲ್ಲೂ ಮುಂದಿರುವ ಮಹಿಳೆಯರು, ಇಂದಿಗೂ ರೂ ಒಂದು ಸಮುದಾಯವೆಂಬ ನಂಟಿನ ಎಳೆಗೆ ನ್ನು ಹೋಣೆಸಿಕೊಳ್ಳುವುದು ಸಾಧ್ಯವಾಗಿಲ್ಲ; ತಮ್ಮಲ್ಲಿರುವ ಗಳೊಂದಿಗೇ ತಮ್ಮ ಸಮಾನಾಂಶಗಳೇನು ಎಂದು ಒಗ್ಗೂಡುವುದು ಸಾಂದರ್ಭಿಕವಾಗಿಯಷ್ಟೇ ವಾಗಿದೆ. ಹೀಗಿರುವಾಗ ಪ್ರತಿಗಾಮಿ ಆರ್ಥಿಕ- ಜಿಕ ವ್ಯವಸ್ಥೆ ಉಳಿಸಿಕೊಂಡಿರುವ ಅಸಮಾನತೆಯನ್ನು ದೆ, ಕುಟುಂಬದಲ್ಲಾಗಲೀ ಸಮಾಜದಲ್ಲಾಗಲೀ ಯ ಘನತೆ ಹೆಚ್ಚುವುದು ಹೇಗೆ ಸಾಧ್ಯ? ಭಾರತದಲ್ಲಿ ಳೆಯರ ಈ ಅಸಮಾನ ದಯನೀಯ ಸ್ಥಿತಿಯ ಬಗ್ಗೆ ರವಾಗಿ ಚಿಂತಿಸಿದ ಫುಲೆ ದಂಪತಿಗಳು, ಪೆರಿಯಾರ್, ಡ್ಕರ್, ಲೋಹಿಯಾ ಮೊದಲಾದ ಚಿಂತಕರು ಹೆಚ್ಚು ಒತ್ತುಕೊಟ್ಟಿದ್ದು ಎಲ್ಲಾ ಕ್ಷೇತ್ರಗಳಲ್ಲೂ ಯರಿಗೆ ಸಮಾನತೆ ದೊರಕಿಸುವುದಕ್ಕೆ. ಆದಕ್ಕಾಗಿಯೇ ಡ್ಕರ್‌ರವರು ಜಾರಿಮಾಡಲೆತ್ನಿಸಿದ ಹಿಂದೂ ಕೋಡ್ ಆಸ್ತಿಯಲ್ಲಿ ಸಮಾನತೆ ದೊರಕಿಸಲು ಉದ್ದೇಶಿಸಿತ್ತು. ಕ ಮಹಿಳಾ ಚಳವಳಿ ಮತ್ತು ಸ್ತ್ರೀವಾದಿ ಚಿಂತಕಿಯರು ವಿಚಾರವನ್ನು ಅದರ ಹಲವು ಆಯಾಮಗಳಲ್ಲಿ ದಿಟ್ಟಿದ್ದಾರೆ. ಇಂದೂ ಕೂಡಾ ಅವೆಲ್ಲವನ್ನೂ ನಾವು ಕಾಲೀನ ಸಂದರ್ಭದ ಅಗತ್ಯಗಳಿಗೆ ತಕ್ಕಂತೆ ಲೋಚಿಸುವ, ಪುನಃ ಕಟ್ಟಿಕೊಳ್ಳುವ ಹಾಗೂ ಳಗೆ ಚಳವಳಿಯ ಮತ್ತೊಂದು ಅಲೆಗಾಗಿ ಧಾತುಗಳನ್ನು ಹುಡುಕಿಕೊಳ್ಳುವ ಅಗತ್ಯವಿದೆ. ಅಂತಹ ತ್ನಗಳು ಇಂದು ಎಷ್ಟೇ ಚಿಕ್ಕಮಟ್ಟದಲ್ಲಿ ನಡೆದರೂ ತ್ತಿರುವ ಅತ್ಯಾಚಾರ ಮತ್ತು ಮಹಿಳಾ ದೌರ್ಜನ್ಯಗಳ ಹಾಗೂ ದೀರ್ಘಕಾಲದಲ್ಲಿ ಮಹಿಳಾ ಸಮಾನತೆಗೆ ತ್ಯವಾದ ಬುನಾದಿಯನ್ನು ರೂಪಿಸುತ್ತವೆಂಬುದರಲ್ಲಿ ಗಳ ಮಹತ್ವವಿದೆ. ಅಂತಹ ಪ್ರಯತ್ನಗಳಲ್ಲಿ ಪೂರ್ವಕವಾಗಿ ತೊಡಗುವುದಕ್ಕೆ ಎಲ್ಲಾ ಸಂವೇದನಾ ಮೂ ಮೊದಲಿಗಿಂತ ಹೆಚ್ಚು ಮುಂದಾಗಬೇಕಿದೆ.

● ಮಲ್ಲಿಗೆ, ಮಹಿಳಾ ಮುನ್ನಡೆ

# ಧಾರ್ಮಿಕ ಗ್ರಂಥಗಳನ್ನು ಬರೆದವರೆಲ್ಲರೂ ಪುರುಷರೇ

ಪುರುಷರು ಎಸಗುವ ಎಲ್ಲ ದೌರ್ಜನ್ಯಗಳನ್ನೂ ಮಹಿಳೆಯರು ಮೂಕವಾಗಿ ಸಹಿಸಿಕೊಳ್ಳಲೇಬೇಕು. ಅದರ ವಿರುದ್ಧ ಧ್ವನಿ ಎತ್ತಿದರೆ, ಅದನ್ನು ಪ್ರಶ್ನಿಸಿದರೆ, 'ಅದು ನಮ್ಮ ಸಂಸ್ಕೃತಿಯಲ್ಲ; ಮಹಿಳೆಯರು ಉತ್ತಮ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಬೇಕು' ಎಂಬ 'ಬುದ್ಧಿವಾದ' ಕೇಳಬೇಕಾಗುತ್ತದೆ.

"ಮಹಿಳೆಯರು ಬಾಲ್ಯದಲ್ಲಿ ತಂದೆಯ ರಕ್ಷಣೆಯಲ್ಲಿ, ಯೌವನದಲ್ಲಿ ಗಂಡನ ರಕ್ಷಣೆಯಲ್ಲಿ, ಕೊನೆಗಾಲದಲ್ಲಿ ಮಗನ ರಕ್ಷಣೆಯಲ್ಲಿರಬೇಕು. ಅವರೆಂದೂ ಸ್ವತಂತ್ರರಾಗಿ ಓಡಾಡಿಕೊಂಡಿರಲು ನಾವು ಬಿಡುವುದಿಲ್ಲ, ಅವರು ನಮ್ಮ ಸಂಸ್ಕೃತಿ ರಕ್ಷಕರಾಗಿರಬೇಕು. ಹುಡುಗರು ಹೇಗಿದ್ದರೂ ಪರವಾಗಿಲ್ಲ; ಆದರೆ ಹುಡುಗಿಯರಿಗೆ ಸ್ವಾತಂತ್ರ್ಯವಿರಬಾರದು" ಎಂಬುದು 'ನೈತಿಕ ಪೊಲೀಸರ', ಸಂಘ ಪರಿವಾರದವರ ಅಧಿಕಾರವಾಣಿಯ ಬೋಧನೆ. ಹೆಣ್ಣುಮಕ್ಕಳ ಹೆತ್ತವರು ತಮ್ಮ ಮಕ್ಕಳ ಮೇಲಿನ ಅಧಿಕಾರವನ್ನು ಇವರ ಕೈಗೆ ನೀಡಿದ್ದಾರೆಯೇ? 'ಹೆಣ್ಣು ಮಕ್ಕಳು ಅಲ್ಲಿಗೆ ಯಾಕೆ ಹೋಗಬೇಕು? ಅದು ನಮ್ಮ ಸಂಸ್ಕೃತಿಯಲ್ಲ' ಎಂಬ ಮಾತುಗಳನ್ನು ಮೂಲಭೂತವಾದಿಗಳು ಮಹಿಳೆಯರಿಂದಲೂ ಹೇಳಿಸುತ್ತಾರೆ. ಸಂಸ್ಕೃತಿ ರಕ್ಷಣೆಯ ಹೊರೆಯನ್ನು ಮಹಿಳೆಯರ ತಲೆಯ ಮೇಲೆ ಹೊರಿಸುವಲ್ಲಿ ಹಿಂದೂ ಮುಸ್ಲಿಮರೆಂಬ ಭೇದವೂ ಇಲ್ಲ. ಈ ವಿಷಯದಲ್ಲಿ ಎಲ್ಲರೂ ಸಮಾನರು! 'ನಾವು ಹೆತ್ತು ಸಾಕಿದ ಮಕ್ಕಳ ಮೇಲೆ ದೌರ್ಜನ್ಯ ನಡೆಸಲು ಈ ಗೂಂಡಾಗಳಿಗೆ ಅಧಿಕಾರ ಕೊಟ್ಟವರಾರು?' ಎಂಬ ಪ್ರಶ್ನೆ ಈ ಮಹಿಳೆಯರಿಂದ ಬರುವುದೇ ಇಲ್ಲ.

ಪುರುಷರ ಮನೋಭಾವದ ಕುರಿತು ಒಂದು ಉದಾಹರಣೆ ನೀಡುವೆ. -

ವಿವಾಹಿತ ಮಹಿಳೆಯೋರ್ವಳ ಗಂಡ ದೂರದ ಊರಲ್ಲೆಲ್ಲೋ ಇದ್ದನು. ಆಕೆ ಒಂದು ಮಗುವಿನ



ತಾಯಿಯೂ ಆಗಿದ್ದಳು. ಅವಳ ಮೇಲೆ ಪುರುಷನೊಬ್ಬನು ಅತ್ಯಾಚಾರ ಮಾಡಿ ಆಕೆ ಗರ್ಭಿಣಿಯಾಗಿ ಮಗುವನ್ನು ಹೆತ್ತು ಯಾರಿಗೂ ತಿಳಿಯದಂತೆ ಪೊದೆಯಲ್ಲಿ ಎಸೆಯುತ್ತಾಳೆ. ಮಗುವನ್ನು ನೋಡಿದವರು ಎತ್ತಿಕೊಂಡು ಹೋಗಿ ಆಸ್ಪತ್ರೆಗೆ ಸೇರಿಸುತ್ತಾರೆ. ಸ್ವಲ್ಪ ದಿನಗಳ ಬಳಿಕ ಆಕೆಯ ಗಂಡ ಬರುತ್ತಾನೆ. ಆಕೆ ಗಂಡನೊಡನೆ ಚೆನ್ನಾಗಿಯೇ ಇರುತ್ತಾಳೆ. ಮಗು ಅವಳದೆಂದು ತಿಳಿದವರು ಮಗುವನ್ನು ಅವಳ ಬಳಿಗೆ ಕೊಂಡೊಯ್ಯುತ್ತಾರೆ. ಅವಳು ಆ ಮಗುವನ್ನು ಕಣ್ಣೆತ್ತಿಯೂ ನೋಡುವುದಿಲ್ಲ, ಅದನ್ನು ಪತ್ರಿಕೆಯೊಂದು ಈ ರೀತಿ ವರದಿ ಮಾಡುತ್ತದೆ. "ಹೆತ್ತ ತಾಯಿ ಆ ಮಗುವನ್ನು ಕಣ್ಣೆತ್ತಿಯೂ ನೋಡಲಿಲ್ಲ, ಅವಳೆಂತಹ ತಾಯಿ!"

ಪುರುಷನೋರ್ವನು ಓರ್ವ ಮಹಿಳೆಯನ್ನು ಬಲಾತ್ಕರಿಸಿ ಅವಳ ಹೊಟ್ಟೆಯಲ್ಲಿ ಮಗು ಹುಟ್ಟಿಸುತ್ತಾನೆ. ಇಲ್ಲಿ ಈ ವರದಿಗಾರರಿಗೆ ಆ ಪುರುಷನ ತಪ್ಪೇನೂ ಕಾಣುವುದಿಲ್ಲ. ಆತ ಎಸಗಿದ ದೌರ್ಜನ್ಯಕ್ಕೆ ಆಕೆ ಒಂಭತ್ತು ತಿಂಗಳು ಬೇಡದ ಬಸಿರನ್ನು ಹೊತ್ತುಕೊಂಡು ಹೆರಿಗೆ ನೋವನುಭವಿಸಿ, ಯಾರಿಗೂ ತಿಳಿಯದಂತೆ ಮಗುವನ್ನು ಹೆತ್ತು ಎಸೆದು ತನ್ನ ಮಾನ ಕಾಪಾಡಿಕೊಳ್ಳಬೇಕಾಗುತ್ತದೆ. ತನ್ನ ಗಂಡ ಬಂದಾಗ ಆತನಿಗೆ ಈ ಘಟನೆ ತಿಳಿಯದಂತೆ ಬದುಕಬೇಕಾಗುತ್ತದೆ. ಅನ್ಯ ಗಂಡನೋರ್ವನು ಎಸಗಿದ ದೌರ್ಜನ್ಯಕ್ಕೆ ಆಕೆ ಬದುಕಿರುವವರೆಗೂ ನೋವನುಭವಿಸ ಬೇಕಾಗುತ್ತದೆ. ಆದರೆ ಆ ಗಂಡಸು ಮಾತ್ರ ಆ ಮಗುವಿನ ಕುರಿತು ತಲೆ ಕೆಡಿಸಿಕೊಳ್ಳದೆ, ಚಿಂತಿಸದೆ ಹಾಯಾಗಿ ಸಂತೋಷದಿಂದ ಬದುಕುತ್ತಾನೆ. ಪುರುಷ ಪ್ರಧಾನ ಸಮಾಜ, "ಛೆ, ತನ್ನ ಸ್ವಂತ ಮಗುವನ್ನು ಕಣ್ಣೆತ್ತಿ ನೋಡದ ಆಕೆ ಎಂತಹ ತಾಯಿ!" ಎಂದು ಪತ್ರಿಕೆಗೆ ವರದಿ ಮಾಡುತ್ತದೆ!

ಮೂರು ತಿಂಗಳ ಗರ್ಭಿಣಿಗೆ ಆರೋಗ್ಯ ಕೆಟ್ಟು ರಕ್ತಸ್ರಾವವಾಗುತ್ತದೆ. ಗರ್ಭಪಾತ ಮಾಡಿದರೆ ತಾಯಿ ಉಳಿಯುತ್ತಾಳೆ. ಆದರೆ ಹೊಟ್ಟೆಯಲ್ಲಿರುವ ಪಿಂಡದ ಎದೆಬಡಿತವಿರುವುದರಿಂದ ಗರ್ಭಪಾತ ಮಾಡುವುದು ಧರ್ಮ ವಿರುದ್ಧವಾಗುತ್ತದೆ. ತಾಯಿಯ ಜೀವ ಹೋಗುತ್ತಿದ್ದರೂ ಗರ್ಭಪಾತ ಮಾಡಿ ಆಕೆಯ ಜೀವವುಳಿಸುವಂತಿಲ್ಲ.

ಗರ್ಭದ ನೋವು, ರಕ್ತಸ್ರಾವ, ಗರ್ಭಪಾತ, ಹೆರಿಗೆ ನೋವು ಇವು ಯಾವುದೂ ಪುರುಷರ ಅನುಭವಕ್ಕೆ ಬರುವ ಸಾಧ್ಯತೆ ಇಲ್ಲ. ಹಾಗೇನಾದರೂ ಇದ್ದಿದ್ದರೆ ಗರ್ಭಪಾತ ಧರ್ಮವಿರೋಧವಾಗುತ್ತಿರಲಿಲ್ಲ! ಆಗ ಆ ಗಂಡಸಿನ ಜೀವವುಳಿಸುವುದು ಮುಖ್ಯವಾಗುತ್ತಿತ್ತು! ಧಾರ್ಮಿಕ ಗ್ರಂಥ ಬರೆದವರೆಲ್ಲರೂ ಗಂಡಸರು ತಾನೇ?

● ಡಾ.ಸಾರಾ ಅಬೂಬಕ್ಕರ್



# ಕ್ರಾಂತಿಕಾರಿ ಹಾಗೂ ಹಾಸ್ಯಪ್ರಜ್ಞೆ

ಲಾಯರೆ ಇನ್‌ಕ್ವಿಲಾಬ್ (ಕ್ರಾಂತಿ ಕವಿ) ಮಖ್ದೂಂ ಯುದ್ಧೀನ್ ಬಾಲ್ಯದಲ್ಲೇ ಬದುಕು ತನಗೆ ಕಲಿಸಿದ್ದ ಲ ಪಾಠವನ್ನು ಎಂದೂ ಮರೆಯಲಿಲ್ಲ. ಅದೇನೆಂದರೆ ಷ್ಟ ಏನನ್ನೇ ಆಗಲಿ ಹಂಚಿಕೊಳ್ಳಬೇಕೇ ವಿನಾ ಹಾಕಬಾರದು ಎನ್ನುವುದು. ಸಂತಸವಾದಾಗ ಮನುಷ್ಯ ಸ್ಟೇ ನಕ್ಕು ನಲಿಯಲಾರನು. ಇತರರೂ ಅವನ ದದಲ್ಲಿ ಪಾಲ್ಗೊಂಡಾಗ ಎಲ್ಲೆಲ್ಲೂ ಮಲ್ಲಿಗೆ ಚೆಲ್ಲುವರಿದ ಭವವಾಗುವುದು. ಅದೇರೀತಿ ನೋವನ್ನೂ ಸಹ ಕೊಳ್ಳಬಹುದು. ಪ್ರಾಂಜಲ ಮನಸ್ಸಿನಿಂದ ನಗೆಯಾಗಿ ಮ್ಮುವ ನೋವು ಸಿಹಿಲೇಪಿತ ಮಾತ್ರೆಯಾಗಿರುತ್ತದೆ. ತಾಯಿ ಸತ್ತರೆ ಸೋದರ ಮಾವನಿರಬೇಕಂತೆ. ಮಖ್ದೂಂ ಆರು ವರ್ಷದ ಮಗುವಾಗಿದ್ದಾಗ ತಮ್ಮ ತಂದೆಯನ್ನು ಕೊಂಡರು. ತಾಯಿ ಮರು ಮದುವೆಯಾಗಿ ತನ್ನ ನ ಮನೆಗೆ ಹೋದಳು. ವಿಧಿ ತಂದೆಯನ್ನೂ ಬದುಕು ಯನ್ನೂ ಕಸಿದುಕೊಂಡ ಮೇಲೆ ಮಖ್ದೂಂ ತಮ್ಮ ದರ ಮಾವನ ಮನೆ ಸೇರಿದರು. ಸೋದರ ಮಾವನೇ ಯೂ ಆಗಿ ತಾಯಿಯೂ ಆಗಿ ಮಖ್ದೂಂ ಅವರನ್ನು ದರು. ಮುಂದೆ ಅದೇ ಮಖ್ದೂಂ ಹೈದರಾಬಾದಿನ ಮೂ' (ಮಾಮಾ) ಆಗಿ ಸಾಹಿತ್ಯಕ್ಕಿಂತ ಬದುಕು ದು ಎಂದು ಭಾವಿಸಿದರು.

ವನ ಬರೆದ ಮೇಲೆ ಕವಿ ಅದನ್ನು ಆದಷ್ಟು ಬೇಗ ರಿಗೆ ಸಿಕ್ಕವರಿಗೆ ಕೇಳಿಸಲು ಚಡಪಡಿಸುವುದುಂಟು. ಮಖ್ದೂಂ ಸಹ ಒಮ್ಮೆ ಗಜಲ್ ಬರೆದು ಮುಗಿಸಿದ್ದರು. ಯಿಂದ ಹೊರಬಿದ್ದವರೇ ತಮ್ಮ ಒಬ್ಬ ಸ್ನೇಹಿತನ ಗೆ ಧಾವಿಸಿದರು. ಕದ ತಟ್ಟಿದರು. ಗೆಳೆಯನಿಗೆ ಬರಲು ಕೇಳಿಕೊಂಡರು. ಗೆಳೆಯನ ಹೆಂಡತಿಗೆ ಅದು ಚಿತ ದನಿಯಾಗಿತ್ತು, ಒಳಗಿನಿಂದಲೇ ಅವಳು ತನ್ನ ಆಫೀಸಿಗೆ ಹೋಗಿರುವುದಾಗಿ ತಿಳಿಸಿದಳು.

ಮಖ್ದೂಂ ಮತ್ತೊಬ್ಬ ಗೆಳೆಯನ ಮನೆಯ ಕದ ರು. ಆ ಗೆಳೆಯ ಅದೇ ಆಗ ತರಕಾರಿ ತರಲು ಟ್‌ಗೆ ಹೋಗಿದ್ದು ಗೊತ್ತಾಯಿತು. ಇದು ಆಫೀಸ್ ತು. ಸರಿಯಾದ ಸಮಯಕ್ಕೆ ಆಫೀಸಿಗೆ ಹೋಗುತ್ತಿದ್ದ ಗೆಳೆಯನನ್ನು ಕಾಣಲು ಮಖ್ದೂಂ ಹೊರಟರು. ತನ್ನ ಸಾಹೇಬರ ಜೊತೆ ಯಾವುದೋ ಹಳ್ಳಿಗೆ ಗಿದ್ದ, ಕವಿಗೆ ತಲೆ ಚಿಟ್ಟು ಹಿಡಿದಂತಾಯಿತು. ಇಡೀ ಸುತ್ತಾಡಿದರೂ ಯಾವೊಬ್ಬ ಗೆಳೆಯನೂ ಅವರ ಗಲಿಲ್ಲ, "ಮಕ್ಕಳಾ, ನೀವು ಈಗ ಎಲ್ಲೇ ಹಾಳಾಗಿ ಗಿದ್ರೂ, ಸಂಜೀಕ ಚೈನಾ ಹೋಟೆಲ್‌ದಾಗ ಸಿಕ್ಕ ಲ್ಲ" ಎಂದವರೇ ಆ ಹೋಟೆಲ್‌ನತ್ತ ಹೆಜ್ಜೆ ಹಾಕಿದರು. ಹೋಟೆಲ್ ಭಣಗುಡುತ್ತಿತ್ತು, ಅದೇ ಆಗ ಹೋಟೆಲ್ ರೆದಿತ್ತು, ಮೊದಲ ಗಿರಾಕಿಯನ್ನು ಬರಮಾಡಿಕೊಂಡ ರ್ ಕವಿ ಎದುರು ನಿಂತು "ಮಖ್ದೂಂ ಭಾಯಿ, ಏನು ಕೊಡಲಿ?" ಎಂದು ಕೇಳಿದ.

"ಎರಡು ಪೆಗ್ ವಿಸ್ಕಿ" ಎಂದರು ಮಖ್ದೂಂ.

ವೇಟರ್ ಕವಿಯನ್ನೇ ನೋಡತೊಡಗಿದ.

"ಕೇಳಿಸಲಿಲ್ಲೇನೋ? ಎರಡು ಪೆಗ್ ವಿಸ್ಕಿ" ಎಂದು ಬೆರಳುಗಳ ಮೂಲಕ ಅವರು ತಮ್ಮ ಆರ್ಡರ್ ದೃಢಪಡಿಸಿದರು. ಕೇಳಿದ್ದನ್ನು ಕೇಳಿದಷ್ಟನ್ನು ಕೊಡುವುದು ತನ್ನ ಕರ್ತವ್ಯ ಎಂದ ವೇಟರ್ ವಿಸ್ಕಿ ತರಲು ಹೊರಟ. ಎರಡು ಪೆಗ್ ವಿಸ್ಕಿ ತಂದು ಟೇಬಲ್ ಮೇಲೆ ಇರಿಸಿದ ವೇಟರ್ ಕೈಕಟ್ಟಿಕೊಂಡು ನಿಂತೇ ಇದ್ದ. ಕವಿ ಅವನತ್ತ ನೋಡದೆಯೆ "ಕೂತುಕೋ" ಎಂದರು. ಎದುರಿಗಿನ ಕುರ್ಚಿಯಲ್ಲಿ ಕವಿಯ ಕಣ್ಣು ನೆಟ್ಟಿತ್ತು, ಕುರ್ಚಿ ಖಾಲಿಯೇ ಇದ್ದುದನ್ನು ಕಂಡು ಸಿಟ್ಟಿಗೆದ್ದ ಮಖ್ದೂಂ "ಕೂತುಕೋ ಎಂದದ್ದು ಕೇಳಲಿಲ್ಲವೇನೋ" ಎಂದು ಗದರಿಸಿದರು.

ವೇಟರ್ ಸಂಕೋಚದಿಂದಲೇ ಕುರ್ಚಿಯಲ್ಲಿ ಆಸೀನನಾದ. ಮಖ್ದೂಂ ಒಂದು ಗ್ಲಾಸನ್ನು ಅವನ ಮುಂದೆ ಸರಿಸಿದರು. "ಹೂಂ, ಕುಡಿ" ಎಂದರು. ಇಲ್ಲಿಯವರೆಗೆ ಅವನು ಗಿರಾಕಿಗಳಿಗೆ ಕುಡಿಸಿದವನೇ ಹೊರತು ಯಾವ ಗಿರಾಕಿಯೂ ಅವನಿಗೆ ಕುಡಿ ಎಂದಿರಲಿಲ್ಲ. ಏನು ಮಾಡಬೇಕೋ ತೋಚದಾಯಿತು ಪಾಪ ಆ ವೇಟರನಿಗೆ. ಮಖ್ದೂಂ ಅವರ ಒತ್ತಾಯಕ್ಕೆ ಮಣಿದು ಅವನು ಒಂದು ಗ್ಲಾಸ್ ವಿಸ್ಕಿ ಗಟ ಗಟ ಕುಡಿದು ಬಿಟ್ಟ. ತಕ್ಷಣ ಕವಿ ತನ್ನ ಮುಂದಿದ್ದ ಗ್ಲಾಸನ್ನೂ ಅವನೆದುರು ಸರಿಸಿದರು. "ಶಹಭಾಶ್! ಇದನ್ನೂ ಕುಡಿ ಈಗ" ಎಂದರು. ಅದನ್ನೂ ವೇಟರ್ ಗುಟುಕರಿಸಿದ.

"ಶಹಭಾಶ್! ಹೋಗು. ಇನ್ನೂ ಎರಡು ಪೆಗ್ ವಿಸ್ಕಿ ತಗೊಂಡು ಬಾ" ಎಂದರು. ಎರಡು ಪೆಗ್ ವಿಸ್ಕಿಯೊಂದಿಗೆ ವೇಟರ್ ಹಾಜರಾಗುತ್ತಲೇ ಮತ್ತೆ ಮಖ್ದೂಂ ಅವನಿಗೆ ಕುಳಿತುಕೊಳ್ಳುವಂತೆ ಸನ್ನೆ ಮಾಡಿದರು. ಅವನು ಎದುರು ಮಾತನಾಡದೆ ಕುಳಿತುಕೊಂಡ. ಮಖ್ದೂಂ ಒಂದು ಗ್ಲಾಸ್ ಅವನ ಮುಂದೆ ಸರಿಸಿ "ಕುಡಿ" ಎಂದರು. ಅದು ಖಾಲಿಯಾಗುತ್ತಲೇ ತಮ್ಮೆದುರಿನ ಗ್ಲಾಸನ್ನು ಅವನೆದುರು ಸರಿಸಿದೊಡನೆ ವೇಟರ್ ಅದನ್ನೂ ಖಾಲಿ ಮಾಡಿದ. ಕವಿ ಮತ್ತೆ ಎರಡು ಪೆಗ್ ವಿಸ್ಕಿ ಆರ್ಡರ್ ಮಾಡಿದರು. ಎರಡು ಪೆಗ್ ವಿಸ್ಕಿ ಟೇಬಲ್ ಮೇಲೆ ಇರಿಸಿದ ವೇಟರ್ ಎರಡೂ ಗ್ಲಾಸ್ ತಾನೇ ಖಾಲಿ ಮಾಡಿಬಿಟ್ಟ.

ಮಖ್ದೂಂ ಮತ್ತೊಮ್ಮೆ "ಇನ್ನೂ ಎರಡು ಪೆಗ್ ವಿಸ್ಕಿ" ಎಂದೊಡನೆ ವೇಟರ್ ಮೇಲೇಳಲು ಹರಸಾಹಸಪಟ್ಟ. ಕವಿಗೆ ಖುಷಿಯೋ ಖುಷಿ. "ಇರಲಿ ಕೂತುಕೋ. ನೋಡು ಈಗ ನಾನು ಇಂದೇ ಒಂದು ಹೊಸ ಗಜಲ್ ಬರೆದೀನಿ. ಕೇಳಪ್ಪ" ಎಂದ ಮಖ್ದೂಂ ತಮ್ಮ ಜೇಬಿನೊಳಗಿಂದ ಒಂದು ಕಾಗದದ ತುಣುಕನ್ನು ಹೊರ ತೆಗೆದರು.

ಆಗ ಆ ವೇಟರ್ "ಮಖ್ದೂಂ ಭಾಯಿ, ನಿಮಗ ನಿಶೆ ಭಾಳ ಆಗೈತಿ. ನಡೀರಿ ನಿಮಗ ಮನೀಗಿ ಕರಕೊಂಡು ಹೋಗ್ತೀನಿ" ಎಂದುಬಿಟ್ಟ.

"ಅಯ್ಯೋ! ಅನಾಥ ಕವಿಯ ಅನಾಥ ಗಜಲ್!" ಎಂದು ಕವಿ ಹಣೆ ಚಚ್ಚಿಕೊಂಡರಂತೆ.

* * * *

ತೆಲಂಗಾಣ ರೈತ ಹೋರಾಟದ ಕಾಲಕ್ಕೆ ಮಖ್ದೂಂ ಭೂಗತರಾಗುವುದು ಅನಿವಾರ್ಯವಾಯಿತು. ಅವರು ಆಗ ತಮ್ಮ ಪ್ರೀತಿಯ ನಗರವನ್ನು ತೊರೆಯಲೇ ಬೇಕಿತ್ತು. ಇಲ್ಲದಿದ್ದರೆ ನಿಜಾಮ ಅವರನ್ನು ಕೊಲ್ಲಿಸಿಬಿಡುತ್ತಿದ್ದ. ಆಗ ಅವರ ಸಂಗಾತಿಯೊಬ್ಬ ತನ್ನ ಹಳ್ಳಿಯಲ್ಲಿ ತಲೆ ಮರೆಸಿಕೊಳ್ಳುವುದೇ ಲೇಸು ಎಂದು ಸಲಹೆ ನೀಡಿದ. ಜೊತೆಗೆ ಅವರಿಗೆ ಒಂದು ಎಚ್ಚರಿಕೆಯ ಮಾತನ್ನೂ ಹೇಳಿದ. ಅದೇನೆಂದರೆ ಅವನ ತಂದೆ ಸಂಪ್ರದಾಯವಾದಿ ಬ್ರಾಹ್ಮಣನಾಗಿದ್ದು ತಾನು ಮುಸಲ್ಮಾನ ಎನ್ನುವುದು ಅವರಿಗೆ ಗೊತ್ತಾಗಬಾರದು ಎನ್ನುವುದು. ಸರಿ ಎಂದ ಮಖ್ದೂಂ ತನ್ನ ಸಂಗಾತಿಯ ಹಳ್ಳಿಗೆ ಪ್ರಯಾಣ ಬೆಳೆಸಿದರು.

ಮಖ್ದೂಂ ಬಲು ವಾಚಾಳಿಯಾಗಿದ್ದರು. ಅವರ ಮಾತಿಗೆ ಅವರ ಸಂಗಾತಿಯ ತಂದೆ ಮರುಳಾಗಿಬಿಟ್ಟರು. ಅವರು ಯುವಕನನ್ನು ತಮ್ಮ ಸ್ವಂತ ಮಗನಂತೆಯೇ ಕಾಣತೊಡಗಿದರು. ಒಂದೆರಡು ದಿನ ಕಳೆಯುವಷ್ಟರಲ್ಲಿ ಮನೆಯ ಯಜಮಾನರು ತಮ್ಮ ನೋವನ್ನೆಲ್ಲ ಈ ಯುವ ಕವಿಯೆದುರು ತೋಡಿಕೊಳ್ಳತೊಡಗಿದರು. "ನೋಡು ಮಗು, ನೀನು ತುಂಬ ಜಾಣ ಅದೀ. ನನ್ನ ನಾಲಾಯಕ್ ಮಗನ್ಹಾಂಗ ಕಮ್ಯುನಿಸ್ಟ್ ಮಾತ್ರ ಆಗಬ್ಯಾಡ" ಎಂದರು. ಮಖ್ದೂಂ ಅವರಿಗೆ ಸತ್ವಪರೀಕ್ಷೆಯ ಕಾಲ ಅದಾಗಿತ್ತು. ಸುಮ್ಮನಿರುವಂತೆಯೂ ಇಲ್ಲ, ನಿಜ ಹೇಳುವಂತೆಯೂ ಇಲ್ಲ. ಧರ್ಮರಾಯನೇನೋ 'ಅಶ್ವತ್ಥಾಮೋ ಹತೋಹತ' ಎಂದು ಯಶಸ್ವಿಯಾಗಿ ಧರ್ಮಪರೀಕ್ಷೆಯನ್ನೆದುರಿಸಿದ್ದ.

ಆ ಸಂದರ್ಭದಲ್ಲಿ 'ಶಾಂತಂ ಪಾಪಂ' ಎನ್ನುವ ಎರಡು ಶಬ್ದಗಳು ಮಖ್ದೂಂ ಅವರನ್ನು ಮನೆಯ ಯಜಮಾನನ ಕಣ್ಮಣಿಯಾಗಿಸಬಹುದಿತ್ತು. ಆದರೆ ಜಾಣ ಎನಿಸಿಕೊಂಡಿದ್ದ ಮಖ್ದೂಂ ಬಾಯಿಯಿಂದ ಆಗ ಹೊರಬಿದ್ದ ಶಬ್ದಗಳು ಯಾವುವು ಗೊತ್ತೆ? 'ಲಾಹೌಲಾವಿಲಾ ಕುವ್ವತ್!' ಪದಪುಂಜದ ಅರ್ಥ ಒಂದೇ ಆದರೂ ಪರಿಣಾಮ ತದ್ವಿರುದ್ಧ! ಯಾವ ಹುತ್ತದಲ್ಲಿ ಯಾವ ಹಾವು ಇರುವುದೋ ತಿಳಿಯದು ಎಂದ ಸಂಪ್ರದಾಯವಾದಿ ಬ್ರಾಹ್ಮಣ ಹಾವು ಸಮೇತ ಹುತ್ತವನ್ನೂ ಬಡಿಯಲು ಮುನ್ನುಗ್ಗಿದಾಗ ಮಖ್ದೂಂ ಅಲ್ಲಿಂದ ಕಂಬಿ ಕಿತ್ತಿದರಂತೆ!

* * * *

ಕವಿ ಮಖ್ದೂಂ ಬರೆಯುವುದರ ಜೊತೆಗೆ ಲವಲವಿಕೆಯಿಂದ ಬದುಕಬೇಕು ಎಂದು ನಂಬಿದ್ದವರು. ಒಮ್ಮೆ ಅವರಿಗೆ ವಿಪರೀತ ಹಸಿವಾಗಿತ್ತು, ಎದುರಿಗೆ ಒಂದು ಹೋಟೆಲ್ ಕಂಡಿತು. ತಕ್ಷಣ ಒಳನುಗ್ಗಿದರು. ಮಾಣಿಯನ್ನು ಕರೆದರು.

"ಪೂರಿ ಐತೇನಪ್ಪ?" ಎಂದು ಕೇಳಿದರು.

"ಇಲ್ಲ, ಸರ್" ಎಂದ ಮಾಣಿ.

"ಉಪ್ಪಿಟ್ಟು ಐತೇನು?"

"ಇಲ್ಲ, ಸರ್."

"ಮಂಡಕ್ಕಿ ಐತೇನೋ?"

"ಇಲ್ಲ, ಸರ್."


"ಮತ್ತ ತಿನ್ನಾಕ ಏನ ಐತಪ್ಪ?"

"ಏನೂ ಇಲ್ರಿ."

"ಇದೇನು ಹೋಟೆಲ್ಲೋ ಅಥವಾ ಮಖ್ದೂಂ ಮೊಹಿಯುದ್ದೀನನ ಮನೆಯೋ?" ಎಂದವರೇ ಹೊಟ್ಟೆ ಮೇಲೆ ಕೈಯಾಡಿಸುತ್ತ ಅಲ್ಲಿಂದ ಹೊರಬಿದ್ದು ಕಾಲೆಳೆದುಕೊಳ್ಳುತ್ತ ಮುಂದೆ ಸಾಗಿದರಂತೆ ಆ ಕ್ರಾಂತಿ ಕವಿ ಮಖ್ದೂಂ!

■ ಹಸನ್ ನಯೀಂ ಸುರಕೋಡ

# ಚೆಡ್ಡಿಗಳ ಅತ್ಯಾಚಾರ ಎಂಥದ್ದು ಗೊತ್ತಾ!




ನಮಸ್ಕಾರ ಕಣ್ರಿ. ಈ ವಾರ ಬರೆಯೋದಿಲ್ಲ ಅಂತ ಇದ್ದೆ. ಆದರೆ, ಚೆಡ್ಡಿಗಳ ದೊಣ್ಣೆನಾಯಕ ಮೋಹನ್ ಭಾಗವತ್ ಆಡಿರೋ ಮಾತುಗಳಿಂದ ಸುಬಹ್ ರೇಗೋಗಿದೆ ಕಣ್ರಿ. ತಾನು ಹಾಕ್ಕೋಳೋದು ಫರಂಗಿಗಳ ಖಾಕಿ ಚೆಡ್ಡಿ ಅಲ್ಲಾಡ್ಸೋದು ಇಟಾಲಿಯ ಫ್ಯಾಸಿಸ್ಟ್ ಗೂಂಡಾಗಳಿಂದ ಬೇಡ್ಕೊಂಡು ತಂದ ದೊಣ್ಣೆ! ನಮ್ಮ ಹೆಂಗಸ್ರಿಗೆ ಭೋದಿಸೋದು– ಆ ಬಟ್ಟೆ ಹಾಕ್ಬೇಡಿ, ಈ ಬೀದೀಲಿ ಹೋಗ್ಬೇಡಿ, ಮನೇಲಿ ಅಡುಗೆ ಮಾಡ್ಕೊಂಡು, ಗಂಡ ಕೇಳ್ದಾಗ ಕಿಸ್ಕೊಂಡು ಇರ್ಬೇಕು– ಅನ್ನೋ ಬೇವರ್ಸಿ 'ಸಂಸ್ಕೃತಿ'! ಸರೀಗ್ ಎರಡು ಕ್ವಾರ್ಟರ್ ಹಾಕಿ, ನಾಗಪುರದ ಈ ವಯ್ಯನ ಮನೆಮುಂದೆ ಹೋಗಿ ಅಮಿತಾಭ್ ಬಚ್ಚನ್ ಥರ ಉಗಿಯಾಣ ಅನ್ನೋಷ್ಟು ಹೊಟ್ಟೇಲ್ಲಿ ಸಿಟ್ಟುಬಂದಿದೆ ಸಾರ್! ಯಾಕೆ ಅಂತ ಕೇಳಿ ಸಾ! ಈ ದೊಣ್ಣೆನಾಯ್ಕ ಯಾವುದೋ ಮುಖವಿಲ್ಲದ ಹೆಂಗಸರಿಗೆ ಅವಮಾನ ಮಾಡಿರೋದಲ್ಲ ಸಾರ್... ಕರುಳಲ್ಲಿ ಕೆಂಡ ಹಾಕ್ಕಂಡಂಗಾಗದೆ. ಬದುಕಿನ ಘನತೆ ಅಂದ್ರೆ ಏನು ಅಂತ ನಂಗೆ ಕಲಿಸಿದ ನನ್ನ ಬಾಲ್ಯದ ಸಖಿಗೆ ಅವಮಾನ ಆಗಿದೆ ಬುದ್ಧಿ. ಅವಳ ಬಗ್ಗೆ ನನ್ನ ಮನಸ್ಸಲ್ಲಿ ಎಷ್ಟು ಬೆಚ್ಚಗಿನ, ನಾಜೂಕಿನ ಪ್ರೀತಿ ಇದೆ ಅಂದ್ರೆ, ನಾನು ಅವಳ ಬಗ್ಗೆ ಬರೆದ ಗದ್ಯಕಾವ್ಯ ಒಂದನ್ನು ಯಾರಿಗೂ ತೋರಿಸಿರ್ಲಿಲ್ಲ, ತುಂಬಾ ವರ್ಷಗಳ ನಂತರ ನನ್ನ ಈ ನಾಜೂಕಿನ ಪ್ರೀತಿ ಅರ್ಥಮಾಡ್ಕೊಳ್ಳೋರು ಅನಿಸಿದ ಒಬ್ಬ ಗೆಳೆಯರಿಗೆ ಮಾತ್ರ ಕಂಪ್ಯುಟರಲ್ಲಿ ಟೈಪ್ ಮಾಡಿ, ಮೇಲಲ್ಲಿ ಕಳಿಸಿ, ಬರೆದ ಕಾಗದನೂ, ಕಂಪ್ಯುಟರ್ ಫೈಲನ್ನು ಹರಿದಾಕಿ ನಿರಾಳವಾಗಿದ್ದೆ. ಈ ಮೋಹನನ ಅಸಹ್ಯ ಪೀಪಿ ಕೇಳಿದ ಮೇಲೆ, ಆ ನನ್ನ ಸಖಿಯನ್ನ ಬೀದಿಗೆಳೆದು ತಂದು ನಿಲ್ಲಿಸಿ ಅತ್ಯಾಚಾರ ಮಾಡಿದಾರೆ ಅನಿಸ್ತಾ ಇದೆ ಕಣ್ರಿ. ಜಿಗರ್ ಏಕ್ ಧಂ ಜಲ್ ಗಯಾ. ಅದ್ಕೆ, ಮೇಲ್ ಬಾಕ್ಸ್ ಹುಡುಕಿ ತೆಗೆದು, ಆ ನವಿರು ನಿವೇದನೆಯನ್ನು, ಈಗ ನಿಮ್ಮ ಮುಂದೆ ಜಾಹೀರು ಮಾಡ್ತಾ ಇದ್ದೀನಿ. ಓದಿ. ನನ್ನ ಕರುಳಿನ ಸಂಕಟ ಸಚಾ ಹೌದಾ ಅಲ್ವ ಅಂತ ನೀವೆ ಹೇಳಿ. ಇಗೋಳಿ:

## ಇವಳ್ಯಾವ ಮಾವನ ಮಗಳು

ಅವಳು ಗಂಡನ್ನ ಕರಕೊಂಡು ಬಂದು ದೊಡ್ಡಾಸ್ಪತ್ರೆಗೆ ಸೇರಿಸಿ ಐದು ದಿವಸ ಆಗಿದೆ. ನಾಳೇನೋ ನಾಡಿದ್ದೋ ಮನೆಗೆ ಹೋಗ್ಬೋದು ಅಂತ ಡಾಕ್ಟ್ರು ಹೇಳಿದಾರಂತೆ. ಇವತ್ತು ಸಂಜೆ ಅವಳು ಮನೆಗೆ ಬರಬಹುದು. ಇಷ್ಟು ಊರಿಂದ ನೆಂಟರು ಕೊಟ್ಟ ವಾರ್ತೆಯನ್ನು ಅಮ್ಮ ನನಗೊಪ್ಪಿಸಿದಳು.

ದೊಡ್ಡಾಸ್ಪತ್ರೆ ಇರುವ ಊರಲ್ಲೇ, ಆಸ್ಪತ್ರೆಯ ಸಮೀಪವೇ ನಮ್ಮ ಮನೆ ಇದೆ. ಇದು ಅವಳಿಗೆ ಗೊತ್ತಿಲ್ಲದ್ದೇನೂ ಅಲ್ಲ, ಹಾಗಂತ ಬರುವ ಮುಂಚೆ ಅವಳು ನಮಗೆ ತಿಳಿಸದೇ ಇದ್ದದ್ದಾಗಲಿ ಬಂದ ಐದು ದಿನಗಳಲ್ಲಿ ಮನೆಗೆ ಬಾರದೇ ಇದ್ದದ್ದಾಗಲಿ ನನಗೆ ವಿಶೇಷವೆನಿಸಲಿಲ್ಲ. ಊರಿಗೆ ಹೊರಡುವ ಮುನ್ನ ಒಮ್ಮೆ ಅವಳು ಮನೆಗೆ ಬಂದುಹೋಗುತ್ತಾಳೆ ಎನ್ನುವುದರಲ್ಲಿ ಅನುಮಾನವೂ ಇರಲಿಲ್ಲ, ಅವಳು ಇರೋದೇ ಹಾಗೆ.

ಕೆಲಸ ಮುಗಿಸಿ ಸಂಜೆ ನಾನು ಮನೆಗೆ ಹಿಂತಿರುಗಿದಾಗ, ನನ್ನ ಹತ್ತು ವರ್ಷದ ಮಗಳ ಜೊತೆ ಅವಳ ಎರಡು ಮಕ್ಕಳು–ಒಂದು ಗಂಡು ಆರು ವರ್ಷದವನು, ಒಂದು ಹೆಣ್ಣು ಎಂಟು ವರ್ಷದವಳು– ಹೊರಗೆ ಹೊರಟಿದ್ದವು. ಹತ್ತಿರ ಎಳೆದುಕೊಂಡು 'ಎಲ್ಲಿಗೆ ಸವಾರಿ' ಎಂದು ತಲೆ ಸವರಿದೆ. 'ಅಕ್ಕ ಎಲ್ಲೋ ಕರ್ಕೊಂಡೋಗ್ತಾಳಂತೆ' ಎಂದು ಹುರುಪು ತುಂಬಿಕೊಂಡು ಹೇಳಿದವು. ಮಗಳು 'ಸೈಡ್, ಸೈಡ್' ಎಂದು ನನ್ನನ್ನು ದೂಡಿ ಎರಡೂ ಹುಡುಗರನ್ನು ಕೈಹಿಡಿದು ಕರೆದುಕೊಂಡು ಹೋದಳು. ನಾನು ಗೇಟು ಹಾಕಿ ಮುಂಬಾಗಿಲಿಗೆ ಬರುವಾಗ ಅವಳು ಬಾಗಿಲ ಬಳಿ ಬಂದು 'ಪುಟ್ಟಿ ಬೇಗ ವಾಪಸು ಬನ್ನಿ' ಎಂದು ಮಕ್ಕಳಿಗೆ ಕೂಗಿ ಹೇಳಿದಳು. ರಸ್ತೆಯಲ್ಲಿ ನಡೆದಿದ್ದ ಅವು 'ಆಯ್ತಾಯ್ತು' ಎನ್ನುವ ಹಾಗೆ ಕೈಮಾಡಿದವು. ಬಾಗಿಲು ಬಿಟ್ಟು ಮುಂದಿನ ಕಟ್ಟೆ ಮೇಲೆ ಕೂತು ನನ್ನ ಮುಖ ನೋಡಿದಳು. ಕಣ್ಣಗಲಿಸಿ, ಹುಬ್ಬು ಎತ್ತರಿಸಿ ಇಳಿಸಿದಳು. 'ಹೂಂ, ನಡೀತಿದೆ' ಎಂದು ಕೈಯಗಲಿಸಿ ಇಳಿಸಿದೆ. ಬಾಗಿಲಿಗೆ ಬಂದ ನನ್ನ ಹೆಂಡತಿ 'ನಾಲ್ಕು ಗಂಟೆಗೆ ಬಂದ್ರು. ನಿಮ್ಮನ್ನ ನೋಡಿ ಹೊರಟುಬಿಡ್ತೇವೆ ಅಂತಿದ್ದಾರೆ. ಇವತ್ತಿರಿ ಅಂದ್ರೆ ಕೇಳ್ತಿಲ್ಲ' ಅಂದಳು. ನಾನು ಮುಗುಳ್ನಕ್ಕು ಒಳಗೆ ಹೋದೆ. ಬಟ್ಟೆ ಬದಲಿಸಿ, ಕಾಫಿ ಲೋಟ ಹಿಡಿದುಕೊಂಡು ಬಂದು ವರಾಂಡದ ಕುರ್ಚಿಯಲ್ಲಿ ಕೂತು ನೋಡಿದೆ. ಅವಳು ಕಟ್ಟೆಯ ಮೇಲೆ ಹಿಂದೆ ಮಡಚಿದ ಕಾಲುಗಳ ಸುತ್ತ ಕೈಕಟ್ಟಿ, ಮೊಳಕಾಲ ಮೇಲೆ ಗದ್ದ ಊರಿ, ರಸ್ತೆಯ ಕಡೆ ದೃಷ್ಟಿ ನೆಟ್ಟು ಕೂತಿದ್ದಳು. ಇಳಿಯುತ್ತಿದ್ದ ಸಂಜೆಯ ಬೆಳಕು ಅವಳ ಮೈಯ್ಯ ಸುತ್ತ ಹರಡಿತ್ತು, ಅದೇ ಭಂಗಿ, ಅದೇ ರೂಪ. ಎಲುಬುಗಳು ಕಾಣುವಂತಹ ತೆಳು ದೇಹ. ರಟ್ಟೆಯಿಂದ ಕುತ್ತಿಗೆಯ ಕಡೆ ಇಳಿದ ಎದ್ದುಕಾಣುವ ಎಲುಬುಗಳು. ಮುಖದಲ್ಲಿ ಎತ್ತರದಲ್ಲಿರುವ ಚರ್ಮಕೊತ್ತಿದ ಗಲ್ಲದೆಲುಬುಗಳು. ತುಂಬು ರೆಪ್ಪೆಯ ಅಗಲವಾದ ಕಾಡಿಗೆ ಹಚ್ಚಿದ ಕಣ್ಣುಗಳು. ದೇಹದಲ್ಲಿ ಮಾಂಸ ಅಂತ ಸ್ಫುಟವಾಗಿ ಕಾಣುವುದು ಮೊಲೆ ಮತ್ತು ಅಂಡುಗಳಲ್ಲಿ ಮಾತ್ರ. ತಿಳಿಗಪ್ಪು ಬಣ್ಣದ ಇವಳು ಅಂದಿಗೂ, ಇಂದಿಗೂ ನನ್ನ ಕಣ್ಣಿಗೆ ಚೆಲುವೆ. ಹೆಂಡತಿ ಬಂದು ನನ್ನ ಪಕ್ಕದ ಕುರ್ಚಿಯಲ್ಲಿ ಕೂತಳು. 'ಚಹ ಮಾಡಿದ್ದೆ. ಕುಡಿಲಿಲ್ಲ, ಕಾಫಿ ಕೊಡ್ಲ ಅಂದ್ರೆ ಬೇಡ ಅಂತಾರೆ. ಮಕ್ಕಳಿಗೆ ಹಾಲು ಕೂಡ ಬೇಡ ಅಂದ್ರು..' ಎಂದು ವರದಿ ಕೊಟ್ಟಳು. ಅವಳು ಕೂತಲಿಂದ ತಿರುಗಿ, ಕಾಲು ಇಳಿಬಿಟ್ಟು, ತೊಡೆಯ ಮೇಲೆ ಮೊಳಕೈಯೂರಿ, ಎರಡೂ ಅಂಗೈಯಲ್ಲಿ ಮುಖ ಊರಿ ನನ್ನ ಕಡೆ ನೋಡಿದಳು. ಮುಖದಲ್ಲಿ ತೇಲಿದ ಒಂದು ಕಿರುನಗೆ. 'ಅಭ್ಯಾಸವಿಲ್ಲ' ಎಂಬ ದೃಢವಾದ ಧ್ವನಿ ನನ್ನ ಹೆಂಡತಿಗೆ ಹಿಡಿಸಲಿಲ್ಲ, ಏನೋ ನೆನಪಾದಂತೆ ಸಣ್ಣಗಿನ ನಗುವೊಂದು ನನ್ನ ಮುಖದಲ್ಲಿ ಮೂಡಿ ಕರಗಿತು.

ನಮ್ಮೂರು ಚಿಕ್ಕದು. ಜಾತಿಗೊಂದು ಕೇರಿ. ಅಕ್ಕಪಕ್ಕ ಎಲ್ಲರೂ ಒಂದಲ್ಲ ಒಂದು ಬಗೆಯ ಬಳಗ. ಇವಳಪ್ಪ ಯಾವುದೋ ಸಂಬಂಧದಲ್ಲಿ ನನಗೆ ಮಾವ. ಕಡಿಮೆ ಆದಾಯ, ಹತ್ತಾರು ಹೊಟ್ಟೆಗಳಿರುವ ದೊಡ್ಡ ಕೂಡು ಕುಟುಂಬ ಅವಳದ್ದು. ಕೇರಿಗೊಬ್ಬ ಮಗನಿರುವ ಸ್ಥಿತಿವಂತ



ಪುಟ್ಟ ಸಂಸಾರ ನಮ್ಮದು. ಅವಳು ನನ್ನ ಸಮ ವಯಸ್ಕಳು, ಸಹಪಾಠಿ, ಹೆಣ್ಣು ಮಕ್ಕಳಿಲ್ಲದ ಮನೆಯಲ್ಲಿ ಆರತಿ–ಅರಿಶಿಣ ಅಂತ ಅಮ್ಮ ಸದಾ ಜೊತೆಗಿಟ್ಟುಕೊಳ್ಳುವ 'ಮುದ್ದಿನ ಸೊಸೆ'. ಇಷ್ಟು ಹೊಕ್ಕಾಟವಿದ್ದೂ, ಅವಳ ಮನೆಯಲ್ಲಿ ಅರೆಹೊಟ್ಟೆ ಎಂದು ಕನಿಕರಿಸಿ ಅಮ್ಮ ತಿಂಡಿ ಕೊಡಲು ಹೋದಾಗಲೆಲ್ಲಾ ಇವಳದ್ದು ಅದೇ ದೃಢವಾದ 'ಬೇಡ, ಅಭ್ಯಾಸವಿಲ್ಲ' ಎಂಬ ಉತ್ತರ. ಒಮ್ಮೆ ಅಮ್ಮ 'ನಿನ್ನಂಥವರು ಸೊಕ್ಕು ಮಾಡ್ತಾರ್ದು ತಿನ್ನೇ' ಅಂತಾ ಗದರಿದ್ದಕ್ಕೆ ಇವಳು ಎದುರಾಡಲಿಲ್ಲ, ತಿಂಡಿಯನ್ನೂ ತಿನ್ನಲಿಲ್ಲ, ಹಲವಾರು ದಿನ ನಮ್ಮ ಮನೆ ಕಡೆ ತಲೆ ಹಾಕಲಿಲ್ಲ, ಅವಳನ್ನು ರಮಿಸಿ ಮತ್ತೆ ಮನೆಗೆ ಬರುವಂತೆ ಮಾಡಲು ಅಮ್ಮ ತುಂಬಾ ಕಷ್ಟಪಟ್ಟಳು. ನಮ್ಮ ಮನೆಯ ಪಡಸಾಲೆಯಲ್ಲಿ ಆಳೆತ್ತರದ ಕನ್ನಡಿ ಇತ್ತು, ಮನೆಗೆ ಬಂದವರೆಲ್ಲ, ಗಂಡು–ಹೆಣ್ಣು, ಮಕ್ಕಳು–ಮುದುಕರು ಎಂಬ ಭೇದವಿಲ್ಲದೆ, ಅದರ ಮುಂದೆ ನಿಂತು ತಮ್ಮ ರೂಪಾಕಾರಗಳನ್ನು ಒಮ್ಮೆ ಅಳೆದುಕೊಳ್ಳುವುದು ಮಾಮೂಲಿ. ಈ ಸಹಜ ಚಾಳಿಗೆ ಇವಳೊಬ್ಬಳೇ ಅಪವಾದ. ನಾನು ಹಾಗೆ ಕನ್ನಡಿಯಲ್ಲಿ ನೋಡಿಕೊಳ್ಳುವಾಗ, ಅದರಲ್ಲಿ ಯಾವುದೋ ಕೋನದಲ್ಲಿ ಎರಡು ಅಂಗೈಯಲ್ಲಿ ಮುಖವಿಟ್ಟು ಕೂತ ಅವಳ ಬಿಂಬ ಕಂಡರೆ, ತೀರ ನಾಚಿಕೆ ಎನಿಸಿ, ನನ್ನ ಈ ಸೋಗು ಕಂಡಳಾ ಅನ್ನೋ ಮುಜುಗರದಲ್ಲಿ ಅವಳೆಡೆ ನೋಡಿದರೆ, ಅದೇ– ಕಣ್ಣು ಅಗಲಿಸಿ, ಹುಬ್ಬೆತ್ತರಿಸಿ ಇಳಿಸುವ– ಅಂಗೈಯಲ್ಲಿನ ಮುಖ. ಹುಡುಗಿಯರ ಗುಂಪಿನಲ್ಲಿ ಹುಡುಗಿಯರ ಜೊತೆ ಹುಡುಗಿಯರ ಆಟ ಆಡಿಕೊಂಡಿರುತ್ತಿದ್ದ ಅವಳು, ಹುಡುಗರ ಗುಂಪಿನಲ್ಲಿ ಆಡಿಕೊಂಡಿರುತ್ತಿದ್ದ ನಾನು, ಗುಂಪು ತೊರೆದು ಗಂಟೆಗಟ್ಟಲೆ ಒಟ್ಟಿಗೆ ಇರುತ್ತಿದ್ದೆವು. ಈ ಮಕ್ಕಳ ಸಾಂಗತ್ಯದಲ್ಲಿ ಮಕ್ಕಳ ಆಟವಿರುತ್ತಿರಲಿಲ್ಲ. ಒಂದೋ ಇಬ್ಬರು ಸೇರಿ ಒಂದು ವಾರಪತ್ರಿಕೆ ಓದುವುದು, ಚೌಕಮನೆ ಆಟ ಆಡುವುದು ಇಲ್ಲವೇ ಸುಮ್ಮನೆ ಒಟ್ಟಿಗೆ ಕೂತಿರುವುದು. ಅವಳ ಮುಖ ನೋಡಿ ಅವಳಿಗೆ ಹಸಿವಾಗಿದೆ ಎಂದು ಗೊತ್ತಾಗುತ್ತಿದ್ದದ್ದು ನನಗೊಂದೇ ಎಂದೆನಿಸುತ್ತದೆ. 'ಹಸಿವಾಗಿದೆ ಏನೇ' ಎಂದು ಕೇಳುವುದು ಪ್ರಶ್ನೆಯಲ್ಲ, ಹಸಿವು ನೀಗಿಸುವ ಪ್ರಯತ್ನಕ್ಕೆ ಮುನ್ನುಡಿ. ಅವಳು ಯಾವ ಸಂಕೋಚವೂ ಇಲ್ಲದೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತ ಹೌದೆಂದು ತಲೆ ಅಲ್ಲಾಡಿಸುತ್ತಿದ್ದಳು. ವಿಚಿತ್ರ; ಅಮ್ಮ ತಿಂಡಿ ಕೊಡುತ್ತೇನೆ ಎಂದರೆ ನಿರಾಕರಿಸುವ ಹುಡುಗಿ, ನಾನು ಕದ್ದು ತಂದು ಏಕಾಂತದಲ್ಲಿ ಕೊಟ್ಟರೆ ಕಣ್ಣರಳಿಸಿ ತಿನ್ನುವಳು. ಅವಳ ಹಸಿವೆ ನೀಗಿಸಲು ನಾನು ಒಮ್ಮೊಮ್ಮೆ ಪರರ ತೋಟಗಳಿಂದ ದಾಳಿಂಬೆ, ಪೇರಳೆ ಕದಿಯುತ್ತಿದ್ದೆ, ಅವಳು ಯಾರಾದರು ಬಂದಾರ ಎಂದು ಕಾವಲು ಕಾಯುವಳು. ಹಣ್ಣಿಗೆ ಬೇಕಾದ ಉಪ್ಪು ಖಾರ ಕದ್ದು ತಂದು ಕೊಟ್ಟರೆ ಅರಳುವ ಅವಳ ಕಣ್ಣು ನನಗೆ ನನ್ನ ಸಾಹಸದ ಬಗ್ಗೆ ಹೆಮ್ಮೆ ಮೂಡಿಸುತ್ತಿತ್ತು, ಅವಳ ಮನೆಯಲ್ಲಿ ಯಾವಾಗಲಾದರು ಒಮ್ಮೆ ರಾಶಿ ಮಂಡಕ್ಕಿ ತಂದು, ದೇವರ ದೀಪದ ಎಣ್ಣೆ ಹಾಕಿ ಉಪ್ಪು ಖಾರ ಹಚ್ಚಿದ ಮಂಡಕ್ಕಿಯನ್ನು ಮನೆಯ ಎಲ್ಲ ಮಕ್ಕಳಿಗೂ ಎರಡೆರಡು ಬೊಗಸೆ ಕೊಡುತ್ತಿದ್ದರು. ನಾನಿದ್ದರೆ ನನಗೂ ಎರಡು ಬೊಗಸೆ. ನಾನು ಆ ಎರಡು ಬೊಗಸೆಯನ್ನು ಗಬ ಗಬ ಅಂತ ಎರಡು ನಿಮಿಷದಲ್ಲಿ ಜಗಿದು ಹಾಕುತ್ತಿದ್ದೆ. ಅವಳು ತಿನ್ನುವ ಸೊಗಸೇ ಬೇರೆ. ಲಂಗದ ಉಡಿಯಲ್ಲಿ ಹಾಕಿ ಕೂತು, ಮಂಡಕ್ಕಿಯ ಒಂದೊಂದೇ ಕಾಳನ್ನು ಹೆಕ್ಕಿ, ಮೊದಲು ಕಾಳಿಗಂಟಿದ್ದ ಉಪ್ಪುಖಾರ ಚೀಪುವಳು; ನಂತರ ಆ ಕಾಳನ್ನು ಅದು ಕರಗುವ ತನಕ ಜಗಿಯುವಳು. ಎರಡು ಬೊಗಸೆಯನ್ನು ಹೀಗೆ ಎರಡು ಗಂಟೆ ತಿನ್ನುವ ಪರಿಯನ್ನು ಕಂಡು ನನ್ನ ಬಾಯಲ್ಲಿ ನೀರೂರುತ್ತಿತ್ತು, ಆಗ ಅವಳು ಒಂದು ಕಾಳೆತ್ತಿ ನನಗೆ ಕೊಡುವಳು; ನಾನು ಅವಳ ಹಾಗೆ ತಿನ್ನುವಾಗ ಆ ದರಿದ್ರ ಮಂಡಕ್ಕಿಯ ರುಚಿಯೇ ಬೇರೆ.

ಮಕ್ಕಳು ಗಲಗಲ ಮಾಡುತ್ತ ಮನೆಗೆ ಬಂದವು. ಒಂದೊಂದರ ಕೈಯಲ್ಲೂ ಬೀದಿ ಕೊನೆಯ ದೇವಸ್ಥಾನದಲ್ಲಿ ಕೊಡುವ ಹೆಸರು ಕಾಳು ಕೋಸಂಬರಿಯ ಎರಡೆರಡು ದೊನ್ನೆ, ಚಿಕ್ಕವನು ಅಮ್ಮನ ಬಳಿ ಹೋಗಿ 'ಅಕ್ಕ ಎರಡು ಸಾರಿ ಸಾಲಲ್ಲಿ ನಿಂತು ಎರಡು ದೊನ್ನೆ ಕೊಡಿಸಿದಳು' ಎಂದು ಖುಷಿಯಿಂದ ಹೇಳಿದ. 'ಹುಂ!' ಎಂದು ಕಣ್ಣರಳಿಸಿದ ಅವಳು ನನ್ನ ಮಗಳನ್ನು ಎಳೆದುಕೊಂಡು ಹತ್ತಿರ ಕೂಡಿಸಿಕೊಂಡು ತಲೆ ನೇವರಿಸಿದಳು. ನನ್ನ ಮಗಳ ಕಣ್ಣಲ್ಲಿ ಮಿಂಚು, ಮುಖದಲ್ಲಿ ಕಿಲಕಿಲ ನಗೆ. 'ಆಯ್ತು ಒತ್ತಟ್ಟಿಗೆ ಕೂತು ಸೂರು ಮಾಡದೆ ತಿನ್ನಿ' ಎಂದು ಅವಳು ಮೆಲುದನಿಯಲ್ಲಿ ಹೇಳಿದ್ದೇ ಅವು ಒಂದು ಕಡೆ ಕೂತು, ವಿನಾಕಾರಣ ನಗುತ್ತ ತಿನ್ನತೊಡಗಿದವು– ಒಂದೊಂದೇ ಕಾಳು ಕೋಸಂಬರಿ. ಆಗ ನನಗೆ ಮಕ್ಕಳು ಬಂದರೆ ಇರಲಿ ಎಂದು ತಂದಿದ್ದ ಕ್ರೀಮ್ ಬಿಸ್ಕೆಟ್ ನೆನಪಾಗಿ, ಎದ್ದು ಬಿಸ್ಕೆಟ್ ಪ್ಯಾಕ್ ತಂದು ಅವಳ ಮಕ್ಕಳಿಗೆ ಕೊಡಲು ಹೋದೆ. ಕಣ್ಣಂಚಲ್ಲೇ ಕಂಡಿತವಳಿಗೆ. 'ಅದೆಲ್ಲ ಅವಕ್ಕೆ ಕೊಡಬೇಡ' ಎಂಬ ಅದೇ ದೃಢವಾದ ಶಾಂತ ಧ್ವನಿ. 'ಮತ್ತೇನೂ ಅಲ್ಲ, ಒಳ್ಳೆ ಬಿಸ್ಕೆಟ್ಟು' ಎಂದೆ. 'ಅವಕ್ಕೆ ರುಚಿ ಹತ್ತಿದರೆ ನನಗೆ ಪೂರೈಸೋಕೆ ಆಗೋದಿಲ್ಲ ಬೇಡ' ಎಂದು ಕಟುವಾಗಿ ಹೇಳಿದಳು. ಸೋತು ಪಾಕೆಟುಗಳನ್ನು ಟೀಪಾಯಿ ಮೇಲೆ ಎಸೆದು ಕೂತೆ. ಕೋಣೆಗೆ ಹೋಗಿದ್ದ ಹೆಂಡತಿ. ಕೋಣೆ ಬಾಗಿಲಲ್ಲಿ ಇಣುಕಿ 'ಏನು?' ಎಂದು ಕಣ್ಸನ್ನೆಯಲ್ಲಿ ಕೇಳಿದಳು. ನಾನು ಏನು ಇಲ್ಲ ಎಂದು ಸನ್ನೆಯಲ್ಲಿ ಗೋಣಾಡಿಸಿದೆ. ಹಾಗೇ ಅಂಗೈಯಲ್ಲಿ ಮುಖವಿಟ್ಟು ಕೂತ ಅವಳ ನೋಡಿದೆ. ಏರುತ್ತಿದ್ದ ಸಂಜೆ ಕತ್ತಲಲ್ಲಿ ನಸುಗಪ್ಪಿನವಳ ಮುಖ. 'ಏನಾಗಿತ್ತು ಅವನಿಗೆ ಆಸ್ಪತ್ರೆ ಸೇರಿಸಲು?'. ಅಂಗೈಯಲ್ಲಿ ಮುಖ. ನನ್ನತ್ತ ಓರೆಗಣ್ಣು. 'ಕುಡಿದು ಕುಡಿದು ಕರಳು ಸುಟ್ಟಿದೆ'. ಒಂದಿನಿತು ಮರುಕವಿಲ್ಲದ ನೇರ ಧ್ವನಿ. ನಿಧಾನವಾಗಿ ಎದ್ದಳು. 'ಅಪ್ಪು, ಅಮ್ಮಿ ಏಳಿ' ಎಂದಳು. ಕೋಸಂಬರಿ ಉಳಿದಿದ್ದ ದೊನ್ನೆಗಳನ್ನು ಸೆರಗಿನ ತುದಿಯಲ್ಲಿ ಕಟ್ಟಿದಳು. ಮಕ್ಕಳ ಕೈ–ಬಾಯಿಗಳನ್ನು ಸೆರಗಿನಲ್ಲಿ ಒರೆಸಿದಳು. ದೊನ್ನೆ ಹಿಡಿದು ಕೂತಿದ್ದ ನನ್ನ ಮಗಳ ಗಲ್ಲ ಸವರಿದಳು. 'ಅಕ್ಕ ಕುಂಕುಮ ಕೊಡಿ' ಎಂದು ನನ್ನ ಹೆಂಡತಿಯನ್ನು ಕರೆದಳು. ಮಕ್ಕಳ ಕೈಹಿಡಿದು ಮುಂಬಾಗಿಲು ದಾಟಿದವಳ ಹಿಂಬಾಲಿಸಿ ಕೇಳಿದೆ 'ಬಹಳ ಖರ್ಚಾಗಿದೆಯೇನೆ'. ನಿಂತು ಅರೆತಿರುಗಿ 'ನಾಳೆ ವಾಪಸು ಹೋಗ್ತಿದ್ದೇವೆ' ಅಂದಳು. ಹೇಳಿದ್ದು ನನಗೊ, ನನ್ನ ಪಕ್ಕ ನಿಂತ ಹೆಂಡತಿಗೋ ಅರಿಯದಾದೆ. ಗೇಟಿನತನಕ ಅವಳನ್ನು ಹಿಂಬಾಲಿಸಿದ ಮಗಳನ್ನು ಸೊಂಟಕ್ಕೆ ಅಮುಕಿಕೊಂಡು 'ಅಮ್ಮನ ಜೊತೆ ಜಾತ್ರೆಗೆ ಊರಿಗೆ ಬಾ' ಎಂದು ನಗುತ್ತ ತಲೆ ನೇವರಿಸಿದಳು. ಅಂಥ ನಗುವನ್ನು ಅವಳ ಮುಖದಲ್ಲಿ ನಾನು ಕಂಡಿರಲಿಲ್ಲ, 'ನೀವು ಹೇಳಿದ್ದರೆ ನಿಲ್ಲುತ್ತಿದ್ದರೋ ಏನೋ' ಎಂಬ ಹೆಂಡತಿಯ ಮಾತಿಗೆ ರೇಗಿದಂತೆ ದುರುಗುಟ್ಟಿದೆ. 'ನಿಮ್ಮಿಬ್ಬರದ್ದು ಎಂಥ ಸಂಬಂಧವೋ' ಎಂಬಂತೆ ಭುಜ ಹಾರಿಸಿ ಹೆಂಡತಿ ಒಳ ನಡೆದಳು. ಮಗಳು ಗೇಟಿನಲ್ಲೇ ನಿಂತು ಅವರತ್ತ ಕೈಬೀಸುತ್ತಿದ್ದಳು.

ಅಮ್ಮನಿಗೆ ಅವಳನ್ನು ಸೊಸೆ ಮಾಡಿಕೊಳ್ಳಬೇಕೆಂಬ ಆಸೆ ಇತ್ತಂತೆ. ಯಾವುದೋ ಮಾತಿಗೆ ಬಂದಾಗ ಅಮ್ಮ, ಅವಳಿಗೂ ನನಗೂ ಈಡುಜೋಡಾಗುತ್ತಿತ್ತು ಅಂದಳಂತೆ. ಅದಕ್ಕವಳು 'ಅಯ್ಯೋ ಬಿಡತ್ತೆ, ಮದುವೆಯಾಗಿದ್ದರೆ ಅವನು ನನ್ನ ಗಂಡನ ಹಾಗಿರುತ್ತಿದ್ದ ನಾನು ಅವನ ಹೆಂಡತಿಯ ಹಾಗಿರುತ್ತಿದ್ದೆ' ಅಂದಳಂತೆ.

* * * *

ಇವಳು ತೀಸ್ತಾ ದೀದಿ ಹೇಳಿದ ಹಾಗೆ ಹೋರಾಡಿ ಉಳಿವಾಕಿ, ಉಳಿದು ಬೆಳೆಸೋವಾಕಿ ಅಲ್ವಾ ಹೇಳಿ. ನಮ್ಮಂಥ ಗಂಡಸರ ಯಾವ ನೆರವೂ ಇಲ್ಲದೆ ತನ್ನ ಮಕ್ಕಳನ್ನು ಸಾಕಿ ಬೆಳೆಸಿದವಳು, ಕುಡುಕ ಗಂಡನನ್ನೂ ರಕ್ಷಿಸುವವಳು. ಈ ನನ್ನ ಬಾಲ್ಯದ ಸಖಿ ನಿಜಕ್ಕೂ ಘನವಾದ ಹೆಂಗಸು ಅನಿಸಿದ್ರೆ, ಅವಳಿಗೆ ಒಂದು ಸಲಾಮ್ ಹೇಳಿ. ಅವಳ ಘನತೆಯ ಮೇಲೆ ಅತ್ಯಾಚಾರ ಮಾಡುತ್ತಲೇ ಇರೋ ಮೋಹನ್ ಭಾಗವತ್ ಮತ್ತು ಚೆಡ್ಡಿ ಪಡೆಗೆ ದೊಡ್ಡ ಧಿಕ್ಕಾರ ಹೇಳಿ.

● ಕೆ. ಫಣಿರಾಜ್


## ಅರೆರೇ... ಯಾಕಿಂಗೆ ಯಾಕಿಂಗೆ

ಅರೆರೇ ಯಾಕಿಂಗೆ ಯಾಕಿಂಗೆ
ಈ ಭೂಮಿನೇ ಉಲ್ಟಾ ಬಿದ್ದಂಗೆ
ಛತ್ರಿ ಹಿಡಕಂಡು ಜೋಗದ ಗುಂಡಿಗೆ ಜಂಪ್ ಮಾಡ್ದಂಗೆ ॥ಅರೆರೇ॥

ಡ್ರೀಮಲಿ ಕಂಡೋಳು ಕಣ್ಮುಂದೆ ಬಂದಂತೆ
ತುಂತುರು ರೈನಲ್ಲಿ ಮೈಪೂರ ನೆಂದಂಗೆ
ಡೇ ಅಂಡ್ ನೈಟು ಕಾಡುತಲಿದ್ದ
ವಿದ್ಯಾ ಬಾಲನೇ ಐ ಲವ್ ಯು ಅಂದಂಗೆ ॥ಅರೆರೇ॥

ಸುತ್ತಾಮುತ್ತಾ ಸರೌಂಡಿಂಗ್ ಡಾರ್ಕ ನೈಟಂಗೆ
ಹಿಡಿಯಷ್ಟಿದ್ದರು ಹೃದಯಾನೆ ಮೂನು ಲೈಟಂಗೆ
ಗಾಳಿ ಕೂಡ ಸೆಂಟನ್ನ ಹಾಕಿಕೊಂಡಂಗೆ
ಕಣ್ಣು ಕಣ್ಣು ತಾಕಿದರೆ ಕರೆಂಟು ಹೊಡ್ದಂಗೆ ॥ಅರೆರೇ॥

ನೆಗೆಟೀವ್‌ನಂಗಿದ್ದೆ ಮನಸಿನ ಮರೆಯಲ್ಲಿ
ಪೋಸ್ಟರ್ ವಾಲಲ್ಲಿ ಪೋಸ್ಟರ್ ಆದಂಗೆ
ಆ ಘಳಿಗೇನ ಟ್ರಾಫಿಕ್ ರೋಡಲಿ ಜಾಮ್ ಆದಂಗೆ
ಬೆಳ್ಳಿ ಬೆಟ್ಟದ ಸ್ನೋ ಕರಗಿ ಸ್ಲೈಡಿಂಗ್ ಆದಂಗೆ ॥ಅರೆರೇ॥



● ಡಾ. ಕೆ.ವೈ. ನಾರಾಯಣಸ್ವಾಮಿ

*(ಹೊಸ ವರ್ಷದ ಖುಷಿಯ ಗಳಿಗೆಯಲ್ಲಿ ನಮಗೆ ಸಿಕ್ಕ ಹಾಡಿದು. ಖ್ಯಾತ ಬರಹಗಾರ ನಾರಾಯಣಸ್ವಾಮಿಯವರ ಈ ಕವನ ಡಾ. ವಸು, ಡಾ. ಲಕ್ಷ್ಮೀಪತಿ, ರಸ್ನ ಕಲಾವಿದ ಎಂ.ಸಿ.ನಾಗರಾಜ ತಂಡದವರ ಹೊಸ ಸಿನಿಮಾ 'ಶಸ್ತ್ರ'ದಲ್ಲಿ ಹಾಡಾಗಿ ಬಳಕೆಯಾಗುತ್ತಿದೆ.)*

# ...ಂಗಾದ್ರೆ ಕಾಂಗ್ರೆಸಿನವು ಯಕ್ಕುಟ್ಟು ಹೋಯ್ತವೆ!

## ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಯಾವ ಕ್ಷೇತ್ರದ ವಿಷಯ ತೆಗೆದುಕೊಂಡರೂ ...ಲ್ಲಬ್ಬ ಬಿಜೆಪಿ ಲೀಡರು ಮತ್ತು ಜೆ.ಡಿ.ಎಸ್. ನಾಯಕ ...ಬಿಸಿಕೊಳ್ಳುತ್ತಿದ್ದು ಕಾಂಗ್ರೆಸ್ಸಿನವರು ಎಲ್ಲಿ ಹೋದರೆಂಬ ...ಯ ಸೀರನ ತಲೆಯಲ್ಲಿ ಸುಳಿಯಿತು. ಆದ್ದರಿಂದ,

"ಆ ಕಾಂಗ್ರೆಸ್ಸಿನವು ಯತ್ತಗೋದುವುಲ ಉಗ್ರಿ?" ಎಂದ.

"ಸದ್ದಿಕವು ಹೊಸಪೇಟೆಯಿಂದ ಕೂಡಲಸಂಗಮಗಂಟ ...ತಾ ಅವೆ."

"ಅದ್ಯಾಕಲ್ಲಿ ನ್ಯಡದವ್ರೂ?"

"ಈ ಬಿಜೆಪಿ ಸರಕಾರ ಮಾಡಬಾರದ್ನಲ್ಲ ಮಾಡಿ ...ನ್ನೂ ಅಧಿಕಾರದಲ್ಲಿ ಮುಂದುವರೆದೈತೆ. ಅದ ಬೀಳತದೆ ...ತ ಕಾದರೆ ಇನ್ನೂ ಬಿದ್ದಿಲ್ಲವಂತೆ. ಅದ್ಕೆ ಕೃಷ್ಣೆಯೆಡೆಗೆ ...ಗ್ರೆಸ್ ನಡಿಗೆ ಅಂತ ಕಾರ್ಯಕ್ರಮ ಹಾಯ್ಕಂಡು ನ್ಯಡೀತಾ ..."

"ಅಲ್ಲ, ನ್ಯಡಿಲಪ್ಪ ಯಾರು ಬ್ಯಾಡ ಅಂದೋರು. ...ರ್ನಾಟಕ ದೇಸ ಇಸಾಲವಾಗ್ಯದೆ. ಗರಗರನೆ ತಿರಗಿ ...ಬರನೆ ಬರ್ಲಿ. ಅದಲ್ಲ ನಾನೇಳದು. ಸ್ಥಳೀಯವಾಗಿ ... ಲೀಡರ್ ಇಲ್ಲ ಅಂದ್ರೆ ಯಲ್ಲ ದಳ, ಬಿಜೆಪಿ ...ಕೋಯ್ತರಲವೆ."

"ಅದೇನೊ ನಿಜ. ನೋಡಾಗ್ನೆ ಎಡೂರಪ್ಪನ ...ಬೋರು ಸಿಕವೇರಿ ಗಡುವುಗಳಿಗ್ಯಲ್ಲ ಗಾಳ ಹಾಕ್ತ ...ರೆ. ಯಲ್ಲಾ ಖಾಲಿಯಾದ ಮ್ಯಾಲೆ ಕಾಂಗ್ರೆಸ್ಸಿಗೆ ...ವು ಸಿಕ್ಕವು. ಕಡಿಗಾಲಕೆ ಇವು ತರೊ ಬಲಿಗೆ ... ಹುಡಿಮೀನು ಸಿಗತವಷ್ಟೆಯಾ. ದೊಡ್ಡ ಮೀನ್ಯಲ್ಲ ... ಕೆಜೆಪಿ, ಬಿಜೆಪಿ ಬಲಿಗೆ ಬೀಳ್ತವೆ."

"ರಾಮುಲು ಪಾರ್ಟಿ ಒಂದುದಲ್ಲಾ?" ಎಂದ್ಲು ಜುಮ್ಮಿ.

"ಅವುನ ಪಾರ್ಟಿ ಇಲ್ಲಿಲ್ದಿದ್ದತೆ? ಅವ್ಯಾವ್ರೊ ಮಕಿ ಹೋಗಿ ...ೀಸಗಂಡು ಬಂದು ಕುಡುದು ತಿಂದು ಮಜ ...ಡಿದವಂತೆ. ಅಂತವೆ ಅವುನ ಪಾರ್ಟಿಲಿರವು. ಅವು ...ದ್ರೆ ಇಲ್ಯಾರು ಓಟಾಕ್ಯರೂ?"

"ಅಂಗೆ ಕಾಂಗ್ರೆಸ್ ಮುದುಕು ಕೇಳಿದ್ರೂ ಓಟ್ಯಾರಾಕ್ತವೆ?"

"ಅದೇನೊ ನಿಜ. ಕಾಂಗ್ರೆಸ್ಸಿನಲ್ಲಿ ಮುದುಕು ಸಂಖ್ಯೆ ...ಸ್ತಿಯಾಗ್ಯದೆ. ಲೀಡುಗಳು ಜಾಸ್ತಿಯಾಗಿ ವರ್ಕರು ...ಮಯಿರೊ ಪಾರ್ಟಿ ಅದು. ಆ ಯಸ್ಸೆಂ ಕೃಷ್ಣನಿಗೆ ...ಬತ್ತು ಮ್ಯಾಲಾಗ್ಯದೆ. ಅಲ್ಲಿಂದ ಕ್ಯಳಿಕೆ ಬಂದ್ರೆ ಯಲ್ಲಾ ...ಪ್ಪತ್ತರ ವಳಗೆ ಅವುರೆ. ಅದೊಂತರ ನಿಷ್ಕ್ರಿಯ ...ಮಕರಿಂದ ಕೂಡಿರೊ ಪಾರ್ಟಿ."

"ದಳದಲ್ಲಿ ವಯಿಸಾಗಿರೋನು ದ್ಯಾವೇಗೌಡ ವಬ್ಬನೆ ...ವೆ" ಎಂದ ಕಾಳಮಾವ.

"ಊ ಕಣ ಮಾವ. ನಾನು ಅವುನ ಸಭಿಗೋಗಿದ್ದೆ. ... ಹಣ್ಣಾಗಿ ಬುಟ್ಟವುನೆ."

"ಹಳೆ ಎತ್ತಲವೆ, ಏನು ಸದರವಾಗಿ ಹುಕ್ಕೆ ವಡದಿದ್ದತೆ. ...ಕಾರಣನೆ ಉಂಡು ತಿಂದು ಬದುಕಿ, ಅದರಲ್ಲೇ ...ಪ್ಪಾದನೇ ವರತೂ, ವತ್ತರೆ ಎದ್ದು ಒಂದು ವಾಕನೂ ...ಡಲಿಲ್ಲ" ಎಂದ ಉಗ್ರಿ.

"ನಾನು ಅವುನ ಸಭಿಗೋಗಿದ್ದೆ ಕಣಮಾವ. ಕಾರಿಂದ ...ದೇಟಗೆ ಇಬ್ಬರ ಭುಜದ ಮೇಲೆ ಕೈಹಾಕ್ತನೆ. ಗಂಟಿಗೊಂದು ಮಾತಾಡ್ತನೆ. ಅದು ಏನು ಮಾತು ಅಂತೀ. ನನ್ನ ರುದಯದಲ್ಲಿ ಒಂದು ನೋವು ಸೇರ್ಕಂಡದೆ. ಅದ ನೀವೇ ನಿವಾರಣೆ ಮಾಡಬೇಕು ಅಂದ. ನಾವು ಏನೋ ಹೇಳತನೆ ಅಂತ ಕಾದೊ. ಕುಮಾರಸ್ವಾಮಿಯ ಮುಖ್ಯಮಂತ್ರಿ ಮಾಡಿ ಅಂದ. ಇದೇಳಕೆ ಆಟೊಂತರ ಮುಲುಕು ಬೇಕೆ ಅನ್ನಕಂಡೊ. ಅದು ಬುಟ್ಟು ಇನ್ನೇನೂ ಹೇಳದಿಲ್ಲ ಕಣ ಮಾವ. ಮದ್ದಿನಂಗೆ ಜನಗಳೂ ಸೇರದಿಲ್ಲ, ಅವುನ ಕಾಲಾಯ್ತು ಅನ್ಸುಸ್ತದೆ" ಅಂದಳು ಜುಮ್ಮಿ.

"ಆದ್ರು ಈ ವಯಸಿನಲ್ಲಿ ತಿರುಗ್ತನಲ್ಲ ಹೇಳಿ. ಅಂತ ವಬ್ಬನೇ ವಬ್ಬ ಕಾಂಗ್ರೆಸಿನಲ್ಲಿಲ್ಲ. ಇನ್ನೇನು ಪವರಿಗೆ ಬಂದವವ್ರೂ. ಅವು ತಾವೇ ಪವರಿಗೆ ಬರೋ ಅಂತವಲ್ಲ, ಜನಗಳೇ ತರಬೇಕು. ಅಂತ ಮೂಸಂಡಿ ನನ್ನ ಮಗನವು."

"ರಾಜಕಾರಣ ಈಗೊಳ್ಳೆ ಚನಾಗ್ಯದೆ ಕಂಡ್ರ" ಎಂದು ಸೀರ ನಗಾಡಿದ.




"ಅದೇನಪ್ಪ ನಿನಿಗೆ ಚನ್ನಾಗಿ ಕಂಡಿದ್ದು?"

"ಯಾರೊ ಅಂಗಂತಿದ್ರು ಕಂಡ್ರ. ಲಿಂಗಾಯಿತ್ರಿಗ್ಯಲ್ಲ ಕೆ.ಜೆ.ಪಿ.ಯಂತೆ. ಬ್ರಾಂಬ್ರಿಗೆ ಬಿ.ಜೆ.ಪಿ.ಯಂತೆ. ಒಕ್ಕಲಿಗರಿಗೆ ದಳವಂತೆ. ಇನ್ನ ಕುರುಬ್ರು, ಹರಿಜನ್ರು ಅಂಥೋರಿಗ್ಯಲ್ಲ ಕಾಂಗ್ರೆಸ್ಸಂತೆ. ಇದೊಂತರ ಚನಾಗ್ಯದೆ ಕಂಡ್ರ."

"ಅದೊಂದು ಬುಟ್ಯಲ್ಲೊ ನೀನು. ನಾಯಕರಿಗೆ ರಾಮುಲು ಪಾರ್ಟಿ ಗೊತ್ತೆ?"

"ಓಹೊ ಅವ್ರುಂದೊಂದದಲವೆ."

"ಊ ಮತ್ತೆ. ಆ ಪಾರ್ಟಿ ಲೀಡ್ರು ಜ್ಯೆಲಿಂದ ಬಂದಮ್ಯಾಲೆ ಅದು ರೆಡ್ಡಿ ಮತ್ತು ನಾಯಕರ ಪಾರ್ಟಿ ಆಯ್ತದೆ. ಅದಕ್ಕಿಂತ ಬಿ.ಜೆ.ಪಿ. ಬ್ರಾಂಬ್ರು ಪಾರ್ಟಿ ಅಂತೆ. ಅನಂತಕುಮಾರ್ ಶೆಟ್ರು, ಲೀಡರ್‌ಸಿಪ್ಪಲ್ಲೇ ಯಲಕ್ಷನ್ನ ಅಂದವುನೆ."

"ಅಂಗರೆ ಬಿ.ಜೆ.ಪಿ. ಬ್ರಾಂಬ್ರು ಪಾರ್ಟಿನೆ?"

"ಇದೇನಕ್ಕ ಹಿಂಕೇಳ್ತಿ? ಕಮಲ ಹುಟ್ಟಿದ್ದೆಲ್ಲಿ? ಬ್ರಹ್ಮನ ಒಕ್ಕಳದಿಂದ. ಅಂತ ಹೂವ ಪಾರ್ಟಿ ಸಿಂಬಲ್ ಮಾಡಿಕಂಡಿರೊ ಬ್ರಾಂಬ್ರುದಲ್ದೆ ಆದೇನು ನಿನ್ನ ಪಾರ್ಟಿನೆ" ಎಂದುಕೊಂಡು ವಾಟಿಸ್ಸೆ ಬಂದ.

"ಬಿ.ಜೆ.ಪಿ. ಕಮಲಕೆ ಗೊಬ್ಬರ ನೀರು ಹಾಕೋರು ಶೂದ್ರರು ಕಣೊ."

"ಅದು ನನಿಗೂ ಗೊತ್ತು ಕಣೊ ಉಗ್ರಿ. ಈ ಎಡೂರಪ್ಪ ಎಷ್ಟೇ ನಾನು ಲಿಂಗಾಯಿತ ಅಂತ ಬಚ್ಚೆ ಹ್ವಡುದ್ರು, ಇವುನು ಗಾಣಿಗ ಲಿಂಗಾಯಿತನಂತೆ. ಅದ್ಕೆ ಶೆಟ್ರು ಸರಕಾರ ಕೆಡವಕ್ಯಾಯ್ತಾಯಿಲ್ಲವಂತೆ."

"ಅದ್ಯಾಕಾಯ್ತಾಯಿಲ್ಲಾ?"

"ಶೆಟ್ರು ಸಪೋರ್ಟಿಗೆ ಲಿಂಗಾಯತರ ಮಠ್ಯಲ್ಲ ನಿಂತವಂತೆ. ಯಾಕಂದ್ರೆ ಶೆಟ್ರು ಟಾಪ್ ಲೆವೆಲ್ ಲಿಂಗಾಯಿತನಂತೆ. ಅದ್ಕೆ ಉತ್ತರ ಕರ್ನಾಟಕದಲ್ಲಿರೊ ಸಾವುಕಾರು ಲಿಂಗಾಯಿತರ ಮಠಗಳ್ಯಲ್ಲ ಶೆಟ್ರು ಸಪೋರ್ಟಿಗೆ ಬಂದವಂತೆ."

"ಅಂಗರೆ ಲಿಂಗಾಯಿತರವು ಸಾವುರಾರು ಮಠಿದ್ವತೆ?" ಎಂದ ಕಾಳಮಾವ.

"ಇನ್ನೂ ಜಾಸ್ತೀನೆ ಅವೆ ದೊಡ್ಡಪ್ಪ, ಅವು ಸುಮ್ಮನೆ ಕುಂತಿಲ್ಲ, ಜನಾಂಗದ ಲೀಡ್ರಿಗೆ ಒಟಾಕುಸ್ತವೆ. ಅಧಿಕಾರಕ್ಕೆ ಬಂದಮ್ಯಾಲೆ ಕ್ಯಲಸ ಮಾಡುಸ್ತವೆ. ಅಂತ ಸಗತಿ ಇನ್ನಾರಿಗೂ ಇಲ್ಲ."

"ಮಠಗಳ ಮುಖಾಂತರ ಸರಕಾರ ತಿನ್ನದ ಅವುರಿಂದ ಕಲಿಬೇಕು."

"ಅಂತ ಮಠಗಳಿಗೆ ಮನೆತಕ್ಕೆ ಹೋಗಿ ದುಡ್ನು ಕೊಟ್ನಲ್ಲೊ ಉಗ್ರಿ ಎಡೂರಪ್ಪ, ಆದ್ರು ಈ ಟೈಮಲ್ಲಿ ಸುಮಾರು ಮಠ ಎಡೂರಪ್ಪನ ಕೈಬಿಟ್ಟು ಶೆಟ್ರಿಗೆ ಸಪೋರ್ಟು ಮಾಡ್ತಾಯಿದ್ದವಂತೆ."

"ಅಂದ್ರೆ ಪವರ್ ಎಲ್ಯದೆ ಅಲ್ಲಿರತರೆ ಅಂದಂಗಾಯ್ತು."

"ಸಹಜ ಅಲ್ಲವೇನೂ. ಬ್ಯಲ್ಲಕೆ ಅಲವೆ ಗ್ವದ್ದ ಮುತ್ತಿಗಳದು. ಅಂಗೆ ಮಠಗಳು ಪವರ್ ನೋಡ್ತವೆ. ಅಷ್ಟು ದೂರ ಯಾಕೋಯ್ತಿಯಪ್ಪ ನಮ್ಮ ಚುಂಚನಗಿರಿ ಸ್ವಾಮಿಗಳು ಆಡಳಿತ ಪಕ್ಷದೋರನ್ನ ಕರದು ಸನುಮಾನ ಮಾಡಿ ಕ್ಯಲಸ ಹೇಳ್ತರೇ ವರತು ವಿರೋಧ ಪಕ್ಷದೋರ ಮೂಸ್ಕೂ ನೋಡದಿಲ್ಲವಪ್ಪ."

"ಅವುರ್ಯಾವತ್ತೂ ಅಂಗೆ ಅಲವೇನೊ. ಆ ಪೇಣಿ ದುಡ್ಡುಕೊಟ್ಟ ಅಂತ ಧರುಮ ರತ್ನಾಕರ ಅನ್ನೊ ಬಿರುದುಕೊಟ್ರು. ಅವುನ ದುಡ್ಡೆಲ್ಲಿದ್ದು ಅಂದ್ರೆ ಬೆಂಗಳೂರಿನ ಸುತ್ತಮುತ್ತ ರೈತರದು. ಅದೇಸಗಳಕ್ಕೆ ಅಂತ ಬಿರುದುಕೊಟ್ರು."

"ಅದೆಲ್ಲಿಗೆ ಬತ್ತ ರೈತರ ಗಲಾಟ?" ಎಂದ ಕಾಳಮಾವ.

"ಅವಂಗೇ ಅದೆ ದೊಡಪ್ಪ, ನಾನು ನೋಡಿದಂತೆ ಯಾವುದೇ ಸಮಸ್ಯೆ ಬಗೆ ಹರಿತಯಿಲ್ಲ. ಜನಗಳೇ ಸಮಸ್ಯೆಗೆ ಹೊಂದಿಕಂಡೋಯ್ತಾ ಅವುರೆ. ಅಂಗಾಗಿ ಜನಗಳ್ಯಾರೂ ಜೀವಂತ ಇರಂಗೇ ಕಾಣ್ತಾಯಿಲ್ಲ ನನಿಗೆ."

"ನೀನೇಳೋ ಮಾತು ನಿಜ ಕಣೊ ವಾಟಿಸ್ಸೆ. ಡೆಲ್ಲಿಲಿ ಆ ಹೆಣ್ಣುಮಗಳ ರೇಪು ಮಾಡಿ, ರಸ್ತೆ ಮ್ಯಾಲೆ ಯಸ್ದು ಹೋದರಂತಲ್ಲಾ, ಆಗ ಸುಮಾರು ಜನ ನೋಡಿ ಅಂಗೆ ಹೋದರಂತೆ. ಅವ್ಳ ಮೈನೂ ಮುಚ್ಚಲಿಲ್ಲವಂತೆ. ಯಂತ ದೇಸದಲ್ಲಿ ಬದುಕ್ತಾಯಿದ್ದಿವ್ರೊ ನಾವು."

"ಮಿಸ್ಟರ್ ಉಗ್ರಿ, ನಾವು ಡೆಲ್ಲಿಲಿ ವಾಸ ಮಾಡ್ತಾಯಿದ್ರೆ ನಾವು ಅಂಗೇ ಇರತಿದ್ದೊ ಕಣೊ. ಅದ್ಯಲ್ಲ ಜಾಗದ ಮಹಿಮೆ ಮ್ಯಾಲೋಯ್ತದೆ. ಆದ್ರೆ ಈ ಚೆಡ್ಡಿಗಳು ಹೆಂಗಸುರು ಮನೆಬುಟ್ಟು ಹೋಗಬಾರ್ದು, ಗಂಡ, ಮಕ್ಕಳು, ಮನೆ... ಇದೇ ತರ ಇದ್ರೆ ಇಂತ ರೇಪು ನ್ಯಡಿಯದಿಲ್ಲ ಅಂದವುರಲ್ಲಾ, ಇವುರಿಗೇನನ್ನ ಬೇಕು."

"ಅವುನ್ಯಾವನು ತೋರ್ಲ ಅವುನ ಮೀಸಿಗೆ ನನ್ನ ಮಾಸುಕಟ್ಟ" ಎಂದಳು ಜುಮ್ಮಿ.

"ನಿನ್ನ ಮಾಸು ಕಟ್ಟೊವಷ್ಟೇ ಮೀಸೆ ಅವೆ ಕಣಕ್ಕ ಅವುನಿಗೆ. ಅವುರು ಯಾವ ತರದ ಸಿದ್ಧಾಂತದಲ್ಲಿ ಬ್ಯಳದು ಬಂದವುರೆ ಅಂದ್ರೆ ಹೆಣ್ಣು ಹುಟ್ಟಿದಾಗ ತಂದೆ ತಾಯಿ ಅಣ್ಣತಮ್ಮದೀರ ಅಂಕೆಲಿರಬೇಕು, ಮದುವೆಯಾದ ಮೇಲೆ ಅತ್ತೆ ಮಾವ ಗಂಡನಂಕೆಲಿರಬೇಕು, ನಂತರ ಸೊಸೆ ಮಕ್ಕಳ ಅಂಕೆಲಿರಬೇಕು, ಅವುಳಿಗೆ ಯಾವುದೇ ಆಸ್ತಿಯಿರಬಾರ್ದು, ಸಾಯಗಂಟ ಅವುರಿವರ ಅಂಕೆಲೇ ಇರಬೇಕು ಅಂತ ಹೇಳಿಕಂಡು ಬಂದೋರು. ಅಂತವುರ ಬಾಯಿಂದ ಇನ್ನಂಥ ಮಾತು ಬಂದವ್ರೊ?"

"ಅಂತ ಸೂಳೆ ಮಕ್ಕಳ್ಯಾಕೆ ಇಂದ್ರಾಗಾಂಧಿ ಕ್ಯಳಗೆ ಹದುನೆಂಟು ವರ್ಸ ಇದ್ರು?"

"ಪರವಾಗಿಲ್ಲ ನೀನುವೆ ತಿಳಕಂಡಿದ್ದಿ. ಇಂದ್ರಾಗಾಂಧಿ ಏನು ಮಾಡಿದ್ಲು ಅಂದ್ರೆ ಅವುಳಿರಗಂಟ ತಲೆ ಎತ್ತಲಿಲ್ಲ ಅವುರು. ಈಗ ತಲೆ ಎತ್ತಿಗಂಡು ಹೆಣ್ಣು ಮೈತುಂಬ ಬಟ್ಟೆ ಹಾಯ್ಕಂಡು ಮನೇಲಿರಬೇಕು ಅಂತರೆ."

"ಅಂಥೋರು ಜಾತ್ರಿಗೆ ಗಬ್ಬದ ಹಸುವಹಕಂಡು ಬಂದಂಗೆ ಸುಸ್ಮಸ್ವರಾಜ್ ಜೊತೆ ಯಾಕೆ ಬತ್ತರೊ? ಅವುಳುನ್ನ ಮನೆಲಿರಸಕ್ಯಾಗದೆ?"

"ನೋಡೋ ಉಗ್ರಿ, ಚೆಡ್ಡಿಗಳತ್ರಯಿರೊ ಸಿದ್ಧಾಂತ ಬೇರೆಯವರಿಗೆ ಹೇಳಕಷ್ಟೆ. ಅವುರು ಪಾಲೊ ಮಾಡಕ್ಯಲ್ಲ. ಅವುರ ಮನುಧರ್ಮ ಏನು ಹೇಳ್ತದೆ ಗೊತ್ತೆ? ನಾನು ಹೇಳದನ್ನ ಕೇಳು, ಅದರಂಗೆ ಮಾಡು, ತಿರಗ ನನಿಗೆ ಪ್ರಶ್ನೆ ಮಾಡುಬ್ಯಾಡ. ಈ ತರದ ಸಿದ್ಧಾಂತನೆ ನಮ್ಮ ಕೆಳಜಾತಿಗಳ ನಾಕೈದು ಸಾವುರ ವರ್ಸ ಉಸುರೆತ್ತದಂಗೆ ಮಾಡಿತ್ತು, ಈಗ್ಲೂ ಅದ್ನೆ ಹೇಳ್ತರೆ. ಏನು ಮಾಡಿ."

"ಈಗೇಳಕ್ಕೆ ಬಂದ್ರೆ ಮೆಟ್ಟು, ಮೆಟ್ಟಿನಲ್ಲೆ ಉತ್ತರ ಕೊಡದು." ■

## ...ವ್ಯಕ್ತಿತ್ವದ ಮಾಂತ್ರಿಕತೆ ಮತ್ತು ರಾಕ್ಷಸತ್ವ ▶▶




ನನಗೆ ಇಷ್ಟವಾಗದವರ ಹೆಸರನ್ನು ಬೇಗ ಮರೆತಿರುತ್ತೇನೆ; ಒಬ್ಬನ ಬಗ್ಗೆ ಸಿಟ್ಟು ಮೂಡುವ ಮುನ್ನ ಅವನ ...ಣ, ಅವನ ಹಿನ್ನೆಲೆ, ಅವನು ಬೆಳೆದುಬಂದ ರೀತಿ ಇದೆಲ್ಲದರ ಬಗ್ಗೆ ಚಿಂತಿಸಿ ಅವನ ಬಗೆಗಿನ ಪೂರ್ವಗ್ರಹಣವನ್ನು ...ೋಗಲಾಡಿಸಿಕೊಳ್ಳಬೇಕೆಂದು ಎಷ್ಟೇ ಪ್ರಯತ್ನಿಸಿದರೂ ಆಗುವುದಿಲ್ಲ, ಅವನ ಕೆಟ್ಟ ಗುಣಕ್ಕೆ ಕಾರಣವೇ ಹೊಳೆಯುವುದಿಲ್ಲ, ...ದಕ್ಕೆಲ್ಲ ಅವನ ಆಗತ್ಯಗಳಿಂದ ಹಿಡಿದು ನನ್ನ ಬಗೆಗಿನ ಅವನ ಮತ್ಸರದವರೆಗೆ ನಾನಾ ಕಾರಣಗಳಿರುವುದರಿಂದ ನನ್ನ ...ಾದ್ಧಿಕ ಪ್ರಯತ್ನದಿಂದ ನನ್ನ ಸಿಟ್ಟು ಕಡಿಮೆಯಾಗುವುದಿಲ್ಲ. ಆದರೆ ಹೆಸರನ್ನು ಮರೆಯುವುದು ಯಾಕೆ? ಇದು ...ಚಿತ್ರ. ಪರಿಸರದಲ್ಲಿರುವ ನೂರಾರು ಸದ್ದುಗದ್ದಲಗಳಲ್ಲಿ ಕೆಲವನ್ನು, ತನ್ನ ಶಕ್ತಿಗೆ ಒಳಪಡುವುದನ್ನು ಮಾತ್ರ ಕಿವಿ ...ಮಗೆ ತಲುಪಿಸುವಂತೆ ಇದೂ ಇರಬಹುದು. ಬೇರೆ ಜೀವಿಗಳಿಗೆ ಕೇಳಿಸುವ ಎಲ್ಲ ಸದ್ದುಗಳೂ ನಮಗೆ ಕೇಳಿಸುತ್ತವೆ ...ಂಬ ಭ್ರಮೆ ನಮಗಿದ್ದರೂ ಅದು ನಿಜವಲ್ಲ, ನಮ್ಮ ನಾಯಿ ಚೆನ್ನಿಗೆ ಕೇಳಿಸುವ ಸದ್ದು ನನಗೆ ಕೇಳಿಸುವುದಿಲ್ಲ; ...ಾಗೆಯೇ ನಾನು ಇಷ್ಟಪಡದಿರುವ ಗದ್ದಲ ನನ್ನ ಮಿದುಳಿನ ಮೇಲೆ ದಾಳಿ ಮಾಡುವುದಿಲ್ಲ. ...ದರಷ್ಟೇ ಕುತೂಹಲಕರವಾದದ್ದು ಬೆಳಕು. ನೋಡಲು ತನ್ನ ಕಣ್ಣುಗಳನ್ನು ...ೂಕ್ಷ್ಮಗೊಳಿಸಿಕೊಂಡವನಿಗೆ ಕಾಣಿಸುವ ಬೆಳಕು, ನೆರಳು, ಬೆಳಕಿನ ವಿವಿಧ ಸ್ತರಗಳು, ...ದರಗಳು ಬೇರೆಯವರಿಗೆ ಕಾಣಿಸುವುದಿಲ್ಲ, ರಾತ್ರಿ ನಮ್ಮ ರೂಮಿನ ಬೆಳಕು ಹಗಲಿನ ...ೆಳಕಿನಂತೆಯೇ ಕಂಡರೂ ಅವೆರಡೂ ಒಂದೇ ತೀವ್ರತೆಯ ಬೆಳಕಲ್ಲ; ಕ್ಯಾಮರಾದ ಲೆನ್ಸ್ ...ಾತ್ರ ಇದನ್ನು ಗ್ರಹಿಸುತ್ತದೆ. ಸೆಖೆ ಕೂಡ ಅಷ್ಟೆ. ಮನಸ್ಸು ಸೆಖೆಯನ್ನು ಸೋಸುವ ಶಕ್ತಿ ...ಡೆದಿದೆ; ಆದರೆ ದೇಹಕ್ಕೆ ಈ ಸೌಲಭ್ಯ ಇಲ್ಲವಾದ್ದರಿಂದ ಅನೇಕ ಸಲ ಬಿಸಿಲು, ಸೆಖೆ ...ಮ್ಮ ಮೇಲೆ ಆಘಾತವನ್ನುಂಟುಮಾಡುತ್ತದೆ.



ಇದೆಲ್ಲ ನಾನು ನನ್ನ ಅನುಭವದಿಂದ ಕಂಡುಕೊಂಡದ್ದು; ಅಷ್ಟು ನಿಜವಲ್ಲದೆಯೂ ...ಸಬಹುದು. ಆದರೆ ಮನುಷ್ಯನ ವ್ಯಕ್ತಿತ್ವದ impact ಮಾತ್ರ ತೀವ್ರವಾದದ್ದು- ನಾವು ಬದುಕಿರುವುದೇ ನಮ್ಮಲ್ಲಿ ...ಮತ್ತು ಇತರ ಜೀವಿಗಳಲ್ಲಿ; ಮಿಕ್ಕದ್ದು ಕೂಡ ಸ್ವಲ್ಪಮಟ್ಟಿಗೆ ಮುಖ್ಯವೆನ್ನಿಸಿದರೂ ಕೂಡ. ನನ್ನ ಬಗ್ಗೆ ನನಗೇನೆನ್ನಿಸುತ್ತದೆ ...ಮತ್ತು ಇತರರಿಗೆ ಏನೆನ್ನಿಸುತ್ತದೆ ಎನ್ನುವುದರ ಮೇಲೆ ನಮ್ಮ ಸಾಧನೆ, ಸಾರ್ಥಕ್ಯ, ಖ್ಯಾತಿ, ಅಪಖ್ಯಾತಿ ನಿಂತಿವೆ. ...ಾಗೆಯೇ ನಮ್ಮ ಸುಖದುಃಖಗಳು ಕೂಡ. ನೀವು ಬಹುವಾಗಿ ಇಷ್ಟಪಡುವ ವ್ಯಕ್ತಿ ನಿಮ್ಮ ಪಾಲಿಗೆ ಒಂದು ಹಬ್ಬ; ...ವನ್ನು ನೋಡುವುದೇ ನಿಮ್ಮ ಸಂತೋಷ. ಅರ್ನೆಸ್ಟ್ ಹೆಮಿಂಗ್ವೆ ಎಂಬ ಸಾಹಿತಿ ಪ್ಯಾರಿಸ್ ನಗರವನ್ನು moveable ...east ಎಂದು ಕರೆದ; ಪ್ಯಾರಿಸ್‌ನ ಜನ, ಜೂಜು, ಕಲೆ, ಚರ್ಚೆ ಅವನ ಪಾಲಿಗೆ feast ಆಗಿತ್ತು, ಫ್ರಾನ್ಸಿನ ಡಿಗಾಲ್ ಮತ್ತು ಅಮೆರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್ ಸಮಕಾಲೀನ ನಾಯಕರು; ಎರಡನೆ ಜಾಗತಿಕ ಯುದ್ಧದಲ್ಲಿ ಮುಂದಾಳುಗಳಾಗಿದ್ದು ಗೆದ್ದವರು. ಅವರಿಬ್ಬರೂ ಪರಿಚಿತರಾಗಿದ್ದರೂ ಆತ್ಮೀಯ ಗೆಳೆಯರಾಗಿರಲಿಲ್ಲ, ಡಿಗಾಲ್‌ನ ಗಾಂಭೀರ್ಯ ಮತ್ತು ನೈತಿಕತೆಯನ್ನು ಕಂಡರೆ ರೂಸ್‌ವೆಲ್ಟ್‌ಗೆ ಆಗುತ್ತಿರಲಿಲ್ಲ; ರೂಸ್‌ವೆಲ್ಟ್‌ನ ಹುಡುಗಾಟ ಡಿಗಾಲ್‌ಗೆ ಹಿಡಿಸುತ್ತಿರಲಿಲ್ಲ, ಆದರೆ ರೂಸ್‌ವೆಲ್ಟ್‌ನ ವರ್ಣರಂಜಿತ ವ್ಯಕ್ತಿತ್ವದ ಎದುರು ಡಿಗಾಲ್ ಕರಗಿಹೋಗುತ್ತಿದ್ದ ಅವನ ಸಮ್ಮೋಹಿನಿಗೆ ತಲ್ಲಣಗೊಂಡು, 'ಈ ರೂಸ್‌ವೆಲ್ಟ್‌ನೊಬ್ಬ ಮಾಟಗಾರ, the great seducer' ಎಂದು ಹೇಳುತ್ತಿದ್ದ.


ಮೂರು ಸಲ ಅಮೆರಿಕಾದ ಅಧ್ಯಕ್ಷನಾಗಿದ್ದ ರೂಸ್‌ವೆಲ್ಟ್ ಪೋಲಿಯೋ ರೋಗದಲ್ಲಿ ಕಾಲು ಕಳೆದುಕೊಂಡವನು. ಶ್ರೀಮಂತ ಕುಟುಂಬದಿಂದ ಬಂದಿದ್ದರೂ ಬಡವರ ಗೆಳೆಯನಾಗಿದ್ದವನು. ಹಾಗೆಯೇ ಆತ ಕುತಂತ್ರಿ, ಪಿತೂರಿಗಾರ, ತರಲೆ; ಅದರ ಜೊತೆಗೆ ಮಹಾ ಧೈರ್ಯಶಾಲಿ, ಮಾತುಗಾರ, ಛಲದವನು... ಶತ್ರುಗಳಿದ್ದಷ್ಟೇ ಜನ ಮಿತ್ರರನ್ನು ಪಡೆದಿದ್ದ ರೂಸ್‌ವೆಲ್ಟ್ ಅವನ ಗೆಳೆಯರ ಪಾಲಿಗೆ **moveable feast!**

ಸದ್ದು, ಬೆಳಕು, ಸೆಖೆಗಳ ಮಾಯಾಲೋಕದಲ್ಲಿರುವ ಮನುಷ್ಯನ ವ್ಯಕ್ತಿತ್ವದ ಯಕ್ಷಿಣಿ ಕೂಡ ನಮ್ಮನ್ನು ಚಕಿತಗೊಳಿಸುತ್ತದೆ.

... ಈ ಟಿಪ್ಪಣಿಯನ್ನು ಪಾಲ್ ಪಾಟ್ ಎಂಬ ರಾಕ್ಷಸನ ಬಗ್ಗೆ ಒಂದು ಮಾತು ಹೇಳಿ ಮುಗಿಸಬೇಕೆಂದಿದ್ದೇನೆ.

ಈತ ಮಹಾ ಕ್ರೂರಿ, ದುಷ್ಟ. ಆದರೆ ಆತ ತಾನು ಮಹಾ ಮಾನವೀಯ ವ್ಯಕ್ತಿ ಎಂದು ತಿಳಿದುಕೊಂಡಿದ್ದ. ಯಾಕೆಂದರೆ ತಾನು ತನ್ನ ಕಮ್ಯುನಿಸ್ಟ್ ಸಿದ್ಧಾಂತದ ಕೂಸು ಮಾತ್ರ ಎಂದು ತಿಳಿದಿದ್ದ; ಕಮ್ಯುನಿಸ್ಟ್ ಸುಖೀರಾಜ್ಯಕ್ಕಾಗಿ ತಾನು ಮಾಡಿದ್ದೆಲ್ಲ ಕರ್ತವ್ಯಬದ್ಧ ಕ್ರಿಯೆ ಮಾತ್ರ ಎಂದು ತಿಳಿದಿದ್ದ. ಇದೇ ರೀತಿಯಲ್ಲಿ ಎಲ್ಲ ಅಂಥ ಧರ್ಮಗುರುಗಳೂ, ಫ್ಯಾಸಿಸ್ಟ್ ಚೋರರೂ ಇರುತ್ತಾರೆ. ತಾವೆಲ್ಲ ತಮ್ಮ ಸಿದ್ಧಾಂತ ಮತ್ತು ದೇಶಕ್ಕಾಗಿ ದುಡಿಯುವ ಮುಗ್ಧರು ಎಂದು ತಿಳಿದಿರುತ್ತಾರೆ. ಆದ್ದರಿಂದಲೇ ಮನುಷ್ಯನ ಮನಸ್ಸು ಸಹಜ ಗ್ರಹಿಕೆಯ ಮಟ್ಟದಲ್ಲಿದ್ದಾಗ ಮಾತ್ರ ಆರೋಗ್ಯವಾಗಿರುತ್ತದೆ; ರೂಸ್‌ವೆಲ್ಟ್, ಡಿಗಾಲ್‌ರ ಸಂಪತ್ತು ಪಡೆದಿರುತ್ತದೆ. ಸಿದ್ಧಾಂತ, ಭಕ್ತಿ, ಗುಲಾಮಗಿರಿಯಲ್ಲಿ ರೋಗಗ್ರಸ್ತವಾಗುತ್ತಾ ಹೋಗುತ್ತದೆ.

• ಮೇ 6, 1998



# ಅಣಕ

• ಎಚ್.ಎಲ್.ಕೇಶವಮೂರ್ತಿ

## ಕಾನೂನು ಕತ್ತೆ ಇದ್ದ ಹಾಗೆ

ಮುಂದಿನ ತಿಂಗಳಿನಿಂದ ಕುಡಿಯುವ ನೀರಿಗೇ ಬರ ಬರುತ್ತದೆ ಅನ್ನುತ್ತಿದ್ದಾರೆ ತಜ್ಞರು. ಕರ್ನಾಟಕದಿಂದ ನೀರು ಬಿಡಿಸಿ ಎಂದು ತಮಿಳುನಾಡು ಸರ್ಕಾರ ಸುಪ್ರೀಂಕೋರ್ಟಿನ ಮೆಟ್ಟಿಲು ಏರುತ್ತಲೇ ಇದೆ. ಇಂತಹ ನಡವಳಿಕೆಯಿಂದ ಎರಡೂ ರಾಜ್ಯಗಳಿಗೆ ತೊಂದರೆ ತಪ್ಪಿದ್ದಲ್ಲ, ನೀವು ನೀವೇ ಚರ್ಚಿಸಿ ಒಂದು ತೀರ್ಮಾನಕ್ಕೆ ಬರುವುದು ಒಳಿತು ಎನ್ನುತ್ತಾರೆ ತಿಳಿದವರು. ಇದಕ್ಕೆ ಪ್ರಮುಖ ಕಾರಣ ಎಂದರೆ ನ್ಯಾಯಾಲಯಗಳಲ್ಲಿ ತೀರ್ಪು ಬರುವುದು ಕಾನೂನಿನ ಆಧಾರದ ಮೇಲೆ, ನ್ಯಾಯದ ಆಧಾರದ ಮೇಲಲ್ಲ ಎನ್ನುವುದಾಗಿದೆ. ಇತ್ತೀಚೆಗೆ ಇದಕ್ಕೆ ಸಂಬಂಧಿಸಿದ ಎರಡು ನಿದರ್ಶನಗಳನ್ನು ಅನುಭವಿಯೊಬ್ಬರು ನೀಡಿದರು.


ನಿದರ್ಶನ 1:

ಒಂದು ಗ್ರಾಮ. ಅಲ್ಲೊಬ್ಬ ರೈತ. ಅವನಿಗೆ ಇಬ್ಬರು ಮಕ್ಕಳು. ಒಬ್ಬ ಓದಿದ. ಸರ್ಕಾರಿ ನೌಕರಿಗೆ ಸೇರಿದ. ಇನ್ನೊಬ್ಬ ಬೇಸಾಯವನ್ನೇ ಬೆನ್ನಿಗೆ ಕಟ್ಟಿಕೊಂಡ. ಆಸ್ತಿಪಾಲು ಆಗುವ ಸಂದರ್ಭ ಬಂದಿತು. ಕೋರ್ಟಿನ ಮೆಟ್ಟಿಲೇರಿದರು. ಪಿತ್ರಾರ್ಜಿತ ಆಸ್ತಿ. ಮಕ್ಕಳಿಗೆ ಸಮಪಾಲು ಎನ್ನುತ್ತದೆ ಕಾನೂನು. ಅದರಂತೆಯೇ ತೀರ್ಪೂ ಬಂದಿತು. ಇದೇ ಸಮಸ್ಯೆ ಪಂಚಾಯತಿ ಎದುರು ಬಂದಿದ್ದರೆ ಹೇಗಿರುತ್ತಿತ್ತು? ಇಬ್ಬರ ಆರ್ಥಿಕ ಪರಿಸ್ಥಿತಿಯ ಅರಿವೂ ಪಂಚಾಯತಿದಾರರಿಗೆ ಇರುತ್ತಿತ್ತು, ಇಬ್ಬರನ್ನು ಕುಳ್ಳಿರಿಸಿಕೊಂಡು 'ಮಗ ನೀನು ನೌಕರೀಲಿ ಇದ್ದೀಯ. ಅಷ್ಟೋ ಇಷ್ಟೋ ದುಡ್ಡು ಕಾಸು ಓಡಾಡ್ತದೆ. ಇವನಿಗ್ಯಾವುದೂ ಅಂತಾದ್ದು ಇಲ್ಲ, ನಿನ್ನ ಒಂದಿಗುಟ್ಟಿದ್ದೋನು. ವಸಿ ಜಾಸ್ತಿ ಅವನಿಗೆ ಬುಡು' ಅನ್ನುತ್ತಿದ್ದರು. ಹಾಗೆಯೇ ಹಂಚುತ್ತಿದ್ದರು ಕೂಡ. ಇಲ್ಲಿ ಕಾನೂನು ಅಲ್ಲ, ನ್ಯಾಯ ಮಾತನಾಡುತ್ತಿತ್ತು.

ನಿದರ್ಶನ 2:

ಒಂದು ರಾಜ್ಯ. ಅಲ್ಲಿ ಒಂದು ಕಾನೂನು ಇತ್ತು, ಯಾರು ತಪ್ಪು ಮಾಡಿದರೂ ಅದನ್ನು ಸರಿಪಡಿಸಿಕೊಡಬೇಕು ಅಂದರೆ ಅದು ಮೊದಲಿದ್ದ ಸ್ಥಿತಿಗೇ ತಂದುಕೊಡಬೇಕು ಎನ್ನುವುದು ಅಲ್ಲಿನ ಶಿಕ್ಷೆಯ ಕ್ರಮ. ಆ ರಾಜ್ಯದಲ್ಲಿ ಒಂದು ಊರಿತ್ತು, ಅಲ್ಲಿ ಅಗಸ ಮತ್ತು ಕುಂಬಾರನ ಮನೆಗಳು ಪಕ್ಕಪಕ್ಕ ಇದ್ದವು. ಒಂದು ದಿವಸ ಅಗಸನ ಕತ್ತೆ ಕುಂಬಾರನ ಮನೆಗೆ ನುಗ್ಗಿತು. ಅಲ್ಲಿದ್ದ ಮಡಕೆಗಳನ್ನು ತುಳಿದು ಹಾಳುಮಾಡಿತು. ಕುಂಬಾರನ ಮನೆಯವರಿಗೆ ಇದನ್ನು ಕಂಡು ಕೋಪ ನೆತ್ತಿಗೇರಿತು. ದಡಿ ತೆಗೆದುಕೊಂಡರು. ಕತ್ತೆಯ ಕಾಲಿಗೆ ಬಲವಾಗಿ ಬಾರಿಸಿದರು. ಆ ಏಟಿನ ರಭಸಕ್ಕೆ ಕತ್ತೆಯ ಒಂದು ಕಾಲು ಮುರಿದುಹೋಯಿತು. ಕತ್ತೆ ನೋವಿನಿಂದ ಅರಚಲಾರಂಭಿಸಿತು. ಕತ್ತೆಯ ಆರ್ತನಾದ ಕೇಳಿ ಅಗಸನ ಮನೆಯವರು ಓಡಿಬಂದರು. ವಿಷಯ ತಿಳಿದು ಜಗಳಕ್ಕೆ ನಿಂತರು. ಗಂಡಸರು, ಹೆಂಗಸರು, ಮಕ್ಕಳು ಎಲ್ಲರ ಕೂಗಾಟ, ನೂಕಾಟ ಜೋರಾಯಿತು. ಕುಂಬಾರನ ಸೊಸೆ ಈ ತಳ್ಳಾಟ, ನೂಕಾಟದಲ್ಲಿ ಕೆಳಕ್ಕೆ ಬಿದ್ದಳು. ದುರಾದೃಷ್ಟಕ್ಕೆ ಅವಳು ಗರ್ಭಿಣಿಯಾಗಿದ್ದಳು. ಬೀಳುವಾಗ ಯಾವುದೋ ಗಟ್ಟಿಪದಾರ್ಥಕ್ಕೆ ಆಕೆಯ ಹೊಟ್ಟೆ ಬಡಿಯಿತು. ಗರ್ಭಪಾತ ಆಯಿತು.

ಆ ರಾಜ್ಯದ ಕಾನೂನು ಏನು ಹೇಳುತ್ತೆ? ತಪ್ಪನ್ನು ಸರಿಪಡಿಸಿಕೊಡಬೇಕು ಅರ್ಥಾತ್ ಮೊದಲಿನ ಸ್ಥಿತಿಗೇ




ತಂದುಕೊಡಬೇಕು. ಅಗಸನ ಕತ್ತೆಯ ಕಾಲು ಮುರಿದಿತ್ತು, ಸರಿಪಡಿಸಿ ಕೊಡಬಹುದಾಗಿತ್ತು, ಆದರೆ ಕುಂಬಾರನ ಸೊಸೆಗೆ ಗರ್ಭಪಾತವಾಗಿತ್ತು, ರಾಜ್ಯದ ಕಾನೂನಿನಂತೆ ಅಗಸನ ಮನೆಯವರು ಕುಂಬಾರನ ಸೊಸೆಯನ್ನು.......!

### ದ್ವಂದ್ವ ಸ್ವಾಮೀಜಿ!

ಪೇಜಾವರ ಶ್ರೀಗಳ ಗ್ರಹಗತಿಗಳೇ ಯಾಕೋ ಸರಿ ಇದ್ದಂತಿಲ್ಲ, ಅವರು ಹಗ್ಗ ಎಂದು ತಿಳಿದು ಹಿಡಿದುಕೊಂಡರೆ ಅದು ಹಾವಾಗುವ ಪರಿಸ್ಥಿತಿ ಉಂಟಾಗಿದೆ. ಮಡೆಸ್ನಾನ ಬೇಡ ಅಂತ ಕೆಲವರು ಪ್ರತಿಭಟಿಸಿದರಲ್ಲ, ಆಗ ಹಾಗೇ ಆಗಲಿ ಅಂದ್ರು ಸ್ವಾಮೀಜಿ. ಮಡೆಸ್ನಾನ ನಂಬಿ ಬದುಕುತ್ತಿರುವ ಭಕ್ತರ ಮನಸ್ಸಿಗೆ ನೋವಾಗು ವುದಲ್ಲ ಎಂದು ಚಿಂತಿಸಿದರು. ಖಾಜಿ ನ್ಯಾಯ ಮಾಡಿದರು. ಮಡೆಸ್ನಾನ ಬೇಡ, ಎಡೆಸ್ನಾನ ಇರಲಿ ಅಂದರು. ಈ ಸೂತ್ರ ನಿಡುಮಾಮಿಡಿ ಸ್ವಾಮಿಗಳಿಗೆ ಮೆಚ್ಚುಗೆ ಆಯಿತಂತೆ. ದೂರವಾಣಿ ಮುಖಾಂತರ ಅದನ್ನ ಪೇಜಾವರ ಶ್ರೀಗಳಿಗೆ ಅರಿಕೇನೂ ಮಾಡಿದರಂತೆ. ಆದರೇನು ಮಾಡ್ತೀರಿ. ಆಮೇಲೆ ಎಡೆಸ್ನಾನವನ್ನು ಅದರ ಪ್ರವರ್ತಕರನ್ನ ಅವರು ಹಿಗ್ಗಾಮುಗ್ಗಾ ಹೀಯಾಳಿಸಿ ಮಾತನಾಡಿದರಂತೆ. ಅವರೂ ಕಾವಿಧಾರಿಗಳು. ಇವರೂ ಕಾವಿಧಾರಿಗಳು. ಅಂದಮೇಲೆ ಸರ್ವಸಂಗ ಪರಿತ್ಯಾಗಿಗಳು; ನಿರ್ ವ್ಯಾಮೋಹಿಗಳು. ಯಾವ ಕಾವಿ ನಂಬೋದು? ಗುಟ್ಟಿನಲ್ಲಿ ಹೀಗಂದರು ಎಂದ ಕಾವಿಯನ್ನೋ ಅಥವಾ ಬಹಿರಂಗವಾಗೇ ವಿರೋಧಿಸಿದ ಸ್ವಾಮಿಯನ್ನೋ ಎನ್ನುವುದೇ ಸಮಸ್ಯೆಯಾಗಿ ಕುಳಿತಿದೆ. ಪೇಜಾವರ ಶ್ರೀಗಳ ಮಾತನ್ನು ನಂಬುವವರಿಗಿಂತ ಅನುಮಾನಿಸುವವರೇ ಹೆಚ್ಚಿದ್ದಾರ ಅಂತ! ಎಂಥ ಅನ್ಯಾಯ ಅಲ್ಲವಾ.....!

ಇದೇನೋ ಆಯಿತು. ಇನ್ನು ಪಂಕ್ತಿಭೇದ. ಪೇಜಾವರ ಶ್ರೀಗಳಿಗೂ ಇದು ಇಷ್ಟ ಇಲ್ಲವಂತೆ. ಸಹಪಂಕ್ತಿ ಭೋಜನಕ್ಕೇ ಅವರ ಆದ್ಯತೆ ಅಂತೆ. ಆದರೇನು ಮಾಡುತ್ತೀರಿ. ಕೆಲವು ಸಂಪ್ರದಾಯ ಬ್ರಾಹ್ಮಣರು ಇರುತ್ತಾರೆ. ಅವರು ಇತರರೊಡನೆ ಕುಳಿತು ಭೋಜನ ಸ್ವೀಕರಿಸಲು ನಿರಾಕರಿಸುತ್ತಾರಂತೆ. ಪೇಜಾವರ ಶ್ರೀಗಳಿಗೆ ಉಭಯ ಸಂಕಟ. ಸಹಪಂಕ್ತಿ ಭೋಜನ ಸಾಮಾಜಿಕ ನ್ಯಾಯ ಅನ್ನುತ್ತೆ ಮನಸ್ಸು. ಹಾಗೆ ಮಾಡಿದರೆ ಪಾಪದ ಬ್ರಾಹ್ಮಣರು ಉಪವಾಸ ಬೀಳುತ್ತಾರೆ. ಅದಕ್ಕೇ ಸಹಪಂಕ್ತಿ ಭೋಜನ ಹಾಗೂ ಸಂಪ್ರದಾಯಿಕ ಭೋಜನ ಎರಡಕ್ಕೂ ಅವಕಾಶ ಕಲ್ಪಿಸಿದ್ದಾರಂತೆ! ಕೃಷ್ಣ ಮಠದಲ್ಲಿ ಸಹಪಂಕ್ತಿ ಭೋಜನ ಮಾತ್ರ ಇರುತ್ತದೆ ಎಂದು ಪ್ರಚಾರ ಮಾಡಿದರೆ ಇದನ್ನು ಒಪ್ಪದವರು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬಹುದಲ್ಲವೆ ಅಂದರೆ ಮಾಡಿಕೊಳ್ಳಬಹುದೇನೋ. ಆದರೆ ಶ್ರೀಗಳಿಗೆ ಬ್ರಾಹ್ಮಣರ ಮನ ನೋಯಿಸಲು ಮನಸ್ಸು ಬಾರದು. ಅದಕ್ಕೇ ಅದೂ ಇರಲಿ ಇದೂ ಇರಲಿ ಎಂದಿದ್ದಾರೆ. ಇದು ದ್ವಂದ್ವ ನೀತಿ. ಇದನ್ನ ಬಿಡಿ ಅನ್ನುತ್ತಾರಲ್ಲಾ.... ಅಲ್ರೀ ಕೃಷ್ಣಮಠದಲ್ಲಿ ಮಾತ್ರ ಅಲ್ಲ ಹೀಗೆ ಇರುವುದು. ಈ ಪದ್ಧತಿ ಇನ್ನೂ ಹಲವು ಕಡೆ ಇದೆ ಅಂದರೂ ಕೇಳದೆ ಪ್ರತಿಭಟನೆಗೆ ಆ ಮಠವನ್ನೇ ಯಾಕೆ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಬಿಡಿಸಲಾಗದ ಒಗಟಾಗಿ ಶ್ರೀಯವರನ್ನ ಕಾಡುತ್ತಿದೆಯಂತೆ. ಇದನ್ನ ಪ್ರತಿಭಟನಾಕಾರರಿಗೆ ತಿಳಿಸಿದರೆ ಅವರು 'ಅವರು ಮಾಡುತ್ತಿದ್ದಾರೆ ಅಂತ ಇವರು ಮಾಡುತ್ತಿದ್ದಾರೆ ಅಂದ ಹಾಗಾಯಿತು. ಅವರೇನೋ ಅರಿತೋ ಅರಿಯದೆಯೋ ಅಮೇಧ್ಯ ತಿನ್ನುತ್ತಾರೆ ಅಂದರೆ ಇವರೂ ತಿನ್ನಬೇಕಾ ಅಂತಾವಲ್ರೀ. ಸ್ವಾಮಿಗಳಿಗೆ ಏನು ಗ್ರಹಚಾರ ಅಂತೀರಿ.

### ರೇಪು ರೇಪು ರೇಪು!


ಟಿವಿ ಹಾಕಲಿ ಅದೇ ವಿಷಯ. ಒಂದಲ್ಲ ಹತ್ತು ಚಾನೆಲ್ ಬದಲಾಯಿಸಿದರೂ ಅದೇ ಹೂರಣ. ತಲೆಚಿಟ್ಟು ಹಿಡಿದು ಟಿವಿ ಆಫ್ ಮಾಡಿ ಪೇಪರ್ ಕೈಗೆತ್ತಿಕೊಂಡರೂ ಅದೇ ಸುದ್ದಿ, ಎಲ್ಲಿ ನೋಡಿದರೂ ರೇಪು ರೇಪು ರೇಪು! ಇದೇನಪ್ಪ ಈ ದೇಶದಲ್ಲಿ ಇದನ್ನು ಬಿಟ್ಟು ಬೇರೆ ಏನೂ ನಡೆಯುತ್ತಲೇ ಇಲ್ಲವೇನೋ ಅನ್ನುವ ಭ್ರಮೆ ಬರಿಸುವಂತೆ ಅದು ಹರಿದಾಡುತ್ತಿತ್ತು. ಸದ್ಯ, ಇದೆಲ್ಲ ಸುಪ್ಪಟ್ಟೆ ಸುಳ್ಳು ಅಂತೆ ಕಣ್ರೀ. ನಾವಿರೋದು ಭಾರತದಲ್ಲಿ ಅಲ್ಲವಾ. ಅಲ್ಲಿ ರೇಪೇ ಆಗಲ್ಲವಂತೆ ಕಣ್ರೀ. ಅವೆಲ್ಲ ನಡೆಯೋದು ಇಂಡಿಯಾದಲ್ಲಂತೆ! ಹಾಗಂತ ಆರೆಸ್ಸೆಸ್‌ನ ಮೋಹನ್ ಭಾಗವತ್ ಅವರು ಹೇಳಿದ್ದಾರೆ. ಗ್ರಾಮೀಣ ಭಾರತದಲ್ಲಿ ಅತ್ಯಾಚಾರ ನಡೆಯೋದೆ ಇಲ್ಲವಂತೆ. ಎಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿ ನುಗ್ಗಿದೆಯೋ ಅಲ್ಲಿ ಇವೆಲ್ಲ ನಡೀತಾವಂತೆ. ಅಂದರೇನಾಯಿತು ಭಾರತದಲ್ಲಿ ಯಾವತ್ತೂ ರೇಪು ನಡೆದದ್ದೇ




## ಆಸಾರಾಮ್‌ನ ಅದ್ಭುತ ಪರಿಹಾರ!

ಚಾರಣಪ್ರಿಯರಾದ ನನ್ನ ಗೆಳೆಯರೊಬ್ಬರು ಒಮ್ಮೆ ಮಂಗಳೂರಿನಿಂದ ಹಿಮಾಲಯಕ್ಕೆ ಬೈಕಿನಲ್ಲಿ ಪ್ರಯಾಣ ಹೊರಟರು. ನಾನಾ ರಾಜ್ಯಗಳ ಮೂಲಕ ಹಾದು ಕೊನೆಗೂ ಹಿಮಾಲಯದ ತಪ್ಪಲನ್ನು ಸೇರಿದರು. ಮೊದಲೇ ಮೂಲವ್ಯಾಧಿಯ ತೊಂದರೆಯಿದ್ದು, ಬೈಕಿನಲ್ಲಿ ದೀರ್ಘ ಪ್ರಯಾಣ ಮಾಡಿದ ಪರಿಣಾಮವಾಗಿಯೋ ಏನೋ ಅವರ ತೊಂದರೆ ಬಿಗಡಾಯಿಸಿತು. ಎಷ್ಟರಮಟ್ಟಿಗೆ ಎಂದರೆ ಮುಂದೆ ಪ್ರಯಾಣ ದುಸ್ಸಾಧ್ಯವಾಗಿ ಹೋಯಿತು. ಇವರ ಕಡುಕಷ್ಟ ಕಂಡ ಅಲ್ಲಿನ ಸ್ಥಳೀಯನೊಬ್ಬ ಸನಿಹದಲ್ಲಿರುವ ಸಾಧುವೊಬ್ಬರನ್ನು ತೋರಿಸಿ "ನಿಮ್ಮ ಸಮಸ್ಯೆಗೆ ಅವರು ಖಂಡಿತಾ ಪರಿಹಾರ ಒದಗಿಸುತ್ತಾರೆ, ಅಲ್ಲಿಗೆ ಹೋಗಿ" ಎಂದು ಸಲಹೆ ನೀಡಿದ.

ಯಾರೇ ನೀಡಲಿ, ಯಾವ ಪರಿಹಾರವೇ ಇರಲಿ,




ಒಟ್ಟಿನಲ್ಲಿ ನೋವಿನಿಂದ ಪಾರಾದರೆ ಸಾಕು ಎಂಬ ಸ್ಥಿತಿಯಲ್ಲಿದ್ದ ಅವರು ಆ ಸಾಧುವಿನ ಬಳಿ ಹೋಗಿ ತಮ್ಮ ಸಂಕಟವನ್ನು ವಿವರವಾಗಿ ಹೇಳಿಕೊಂಡರು. ಎಲ್ಲವನ್ನೂ ತಾಳ್ಮೆಯಿಂದ ಕೇಳಿಸಿಕೊಂಡ ಸಾಧು ಮಹಾರಾಜ್ ಕ್ಷಣಕಾಲ ಯೋಚಿಸಿ ಪರಿಹಾರ ಹೇಳಿಯೇ ಬಿಟ್ಟರು. ಎಂತಹ ಅದ್ಭುತ ಪರಿಹಾರ ಗೊತ್ತೇ? "ನಾರಾಯಣ ನಾಮಸ್ಮರಣೆ ಮಾಡು, ಎಲ್ಲವೂ ಸರಿಹೋಗುತ್ತದೆ" ಎಂದರು. 'ಮೂಲದ' ನೋವು ಅಸಹನೀಯವಾಗಿದ್ದ ಹೊತ್ತು ಸಾಧು ಮಹಾರಾಜನ ಪರಿಹಾರ ಕೇಳಿ ದಂಗುಬಡಿದು ಹೋದ ನನ್ನ ಗೆಳೆಯರಿಗೆ ನಗುವುದೋ ಅಳುವುದೋ ಒಂದೂ ತಿಳಿಯದಾಯಿತು. ಅದು ಹೇಗೋ ದೆಹಲಿಗೆ ಮರಳಿ ಬೈಕನ್ನು ರೈಲಿಗೆ ಹಾಕಿ ಊರು ಸೇರಿದ ಅವರು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿ ಸಮಸ್ಯೆ ಪರಿಹರಿಸಿಕೊಂಡರು.

ದೆಹಲಿಯ ಯುವತಿ ಅತ್ಯಾಚಾರದಿಂದ ಪಾರಾಗಲು ಸರಸ್ವತಿ ಮಂತ್ರ ಜಪಿಸಬೇಕಿತ್ತು ಎಂಬ ಸ್ವಯಂಘೋಷಿತ ಅಧ್ಯಾತ್ಮ ಗುರು ಆಸಾರಾಮ್ ಬಾಪುವಿನ ಸಲಹೆಯನ್ನು ಕೇಳಿದಾಗ ನನ್ನ ಗೆಳೆಯರ 'ಲೌಕಿಕ' ನೋವಿಗೆ ಸಾಧು ಮಹಾರಾಜ್ ನೀಡಿದ 'ಆಧ್ಯಾತ್ಮಿಕ' ಪರಿಹಾರ ನೆನಪಾಯಿತು.

ಮೋಹನ ಭಾಗವತ, ಆಸಾರಾಮ್ ಬಾಪು.. ಆಹಾ ಮನುಯುಗಕ್ಕೆ ಸೇರಿದ, ವಾಸ್ತವದ ಅರಿವೇ ಇಲ್ಲದ ಎಂತೆಂತಹ ಮನಸುಗಳು ಈಗಲೂ ನಮ್ಮಲ್ಲಿವೆ! ಇವರೆಲ್ಲ ನಮ್ಮ ಮುಖಂಡರು, ಆಧ್ಯಾತ್ಮಿಕ ಗುರುಗಳು! ಆಸಾರಾಮನ ಸಲಹೆಗೆ ಚಿತ್ರನಟ ರಣಬೀರ್ ಕಪೂರ್ ನೀಡಿದ **He must have his head checked** ಎಂಬ ಪ್ರತಿಕ್ರಿಯೆಗಿಂತ ಪ್ರಾಯಶಃ ಉತ್ತಮ ಪ್ರತಿಕ್ರಿಯೆ ಇರುವುದು ಸಾಧ್ಯವೇ?

- ಶ್ರೀನಿವಾಸ ಕಾರ್ಕಳ, ಮಂಗಳೂರು

88ರಲ್ಲಿ ಹುಟ್ಟಿದ ನನಗೆ ಲಂಕೇಶ ಸರ್ ಅವರು ಪುಸ್ತಕ ಮತ್ತು ಚಲನಚಿತ್ರಗಳ ಮೂಲಕವಷ್ಟೆ ಗೊತ್ತು, ಅವರನ್ನು ತಿಳಿಯುವ ಪ್ರಯತ್ನ ಸತತವಾಗಿ ಮುಂದುವರೆದಿದೆ. ಅವರ ಬಗ್ಗೆ ನನ್ನಂಥ ಅನೇಕ ಓದುಗರಿಗಿರುವ ಗೌರವ ಇಮ್ಮಡಿಗೊಳಿಸಿದವರು ಗೌರಿ ಮೇಡಮ್. ಈ ಸಲ (ಜನವರಿ 16, 2013) ಪತ್ರಿಕೆಯ ಪ್ರತಿಯೊಂದು ಪುಟ ಕೂಡ ನಮ್ಮ ಓದುಗರ ಹೃದಯವೆಂಬ ಮ್ಯೂಸಿಯಂನಲ್ಲಿ ಇರಿಸುವಷ್ಟು ಬೆಲೆಬಾಳುವಂತಹದ್ದು.

ಕಂಡಹಾಗೆ (ಸಂಗೀತಮಯ ಬದುಕಿನಲ್ಲಿ ಅಪಸ್ವರ) ಓದಿದನಂತರ **expect the unexpected** ಎಂದೆನಿಸಿತು. ಖ್ಯಾತ ಸಂಗೀತಗಾರ ರವಿಶಂಕರ್ ತಮ್ಮ ಪತ್ನಿ ಅನ್ನಪೂರ್ಣರಿಗೆ ಮಾಡಿದ ಅನ್ಯಾಯ ನೋಡಿ 'ಗಂಡಸರಿಗೆ ಖ್ಯಾತಿ ಸಿಗುವತನಕ ಪತ್ನಿ ಬೇಕು, ಆದರೆ ಖ್ಯಾತಿ ಸಿಕ್ಕನಂತರ ಮತ್ತೊಬ್ಬಳು ಬೇಕು' ಅನ್ನಿಸಿತು. ಎಲ್ಲರಿಗೂ ಗೊತ್ತಿರುವ **'Behind the success of every man is a woman'** ಎಂಬ ಹೇಳಿಕೆಯನ್ನು ಗೌರಿ ಅವರು **'Behind the success of every man there is a woman, but soon after success she is replaced by another woman'** ಎಂದು ಸೂಕ್ಷ್ಮವಾಗಿ ಬದಲಾಯಿಸಿದ್ದಾರೆ.



ಗೌರಿ ಮೇಡಮ್ ಬಗ್ಗೆ ಹೊಗಳಿ ಬರೆಯಲು ಬಾರದ ಕಾರಣ ಇಷ್ಟು ಮಾತ್ರ ಹೇಳಬಲ್ಲೆ: 'ತಂದೆಗೆ ತಕ್ಕ ಮಗಳು.'

- ಅಭಿನಂದನ ಬಳ್ಳಾರಿ, ಎಸ್‌ಎಂಎಸ್ ಮೂಲಕ

ಪ್ರೀತಿಯ ಗೌರಿ ಅಕ್ಕ, ಬೇರೆ ಬೇರೆ ಕಾರಣಗಳಿಗೆ ಕಳೆದ ಎರಡು ತಿಂಗಳುಗಳಿಂದ ಪತ್ರಿಕೆಯನ್ನು ಕೊಳ್ಳುವುದಕ್ಕಾಗಲಿ, ಓದುವುದಕ್ಕಾಗಲಿ ಆಗಿರಲಿಲ್ಲ, ನಿನ್ನೆ ಹೊಸ ಸಂಚಿಕೆಯನ್ನು ತಂದು ಓದಲಾರಂಭಿಸಿದೆ. ಆಗ ನನಗನ್ನಿಸಿದ್ದೇನೆಂದರೆ: ಮೊದಲನೆಯದಾಗಿ ಈ ಪತ್ರಿಕೆ ನನಗೆ ಎಂಥ ಚೈತನ್ಯ ಸ್ಫೂರ್ತಿ ಕೊಡುತ್ತದೆ, ಎರಡನೆಯದಾಗಿ ನಾನು ಈ ಪತ್ರಿಕೆಯನ್ನು ಎಷ್ಟೊಂದು ಮಿಸ್ ಮಾಡಿಕೊಂಡಿದ್ದೆ, ಮೂರನೆಯದಾಗಿ ಇನ್ನು ಮುಂದೆ ಯಾವುದೇ ಕಾರಣಕ್ಕೂ ಮಿಸ್ ಮಾಡದೆ ಪತ್ರಿಕೆಯನ್ನು ಕೊಂಡು ಓದಬೇಕೆಂಬುದು.

ಪತ್ರಿಕೆ ನಮ್ಮನ್ನು ಹೀಗೆ ಸದಾ ಬೆಳೆಸುತ್ತಲೇ ಇರಲಿ.

- ಸುಷ್ಮಾ ಮಲ್ಲಿಕಾರ್ಜುನ, ಬೆಂಗಳೂರು

ಈ ವಾರ (ಜನವರಿ 16, 2013ರ) ಗೌರಿ ಅವರು ತಮ್ಮ ಕಂಡಹಾಗೆ ಅಂಕಣದಲ್ಲಿ ಪಂಡಿತ್ ರವಿಶಂಕರ್ ಅವರ ಬಗ್ಗೆ ಬರೆದಿರುವುದನ್ನು ಓದಿ ಅವರೊಬ್ಬ ಲಂಪಟ ಅನ್ನಿಸಿತು. ಅನ್ನಪೂರ್ಣ ಅವರ ಬಗ್ಗೆ ಗೌರವ ಇಮ್ಮಡಿಯಾಯಿತು.

ಪಾರ್ವತೀಶ ಅವರ 'ಬಿಡಿ ಚಿತ್ರಗಳು' ಅದ್ಭುತವಾಗಿ ಮೂಡಿಬರುತ್ತಿದೆ.

'ಥೂತ್ತೇರಿ' ಬರೆಯುವ 'ಯಾಹೂ' ಯಾರೆಂದು ತಲೆ ಕೆಡಿಸಿಕೊಂಡಿದ್ದ ನನಗೆ ಚಂದ್ರೇಗೌಡರ ಲೇಖನದಿಂದ ಉತ್ತರ ಸಿಕ್ಕಿತು. ಮಾತ್ರವಲ್ಲ ಯಾಹೂ ಬಗ್ಗೆ ಏನೇನೋ ಕಲ್ಪಿಸಿಕೊಂಡಿದ್ದ ನನಗೆ ನಗು ತಡೆಯಲಾಗಲಿಲ್ಲ.

- ಅಂಜದ್ ಪಾಶಾ, ಮೈಸೂರು

ಅನ್ನಪೂರ್ಣ (ರೋಶನಾರಾ) ಅವರ ಬಗ್ಗೆ ನೆನಪು ಮಾಡಿಕೊಟ್ಟದ್ದಕ್ಕೆ ಧನ್ಯವಾದಗಳು.

-ಸಿದ್ದನಗೌಡ ಪಾಟೀಲ, ಎಸ್‌ಎಮ್‌ಎಸ್ ಮೂಲಕ

ಚೀಮೂ ಭಾಷಾ ವಿಜ್ಞಾನಿಯಾಗಿ ನನಗೆ ಎಷ್ಟು ಇಷ್ಟವೋ, ಸಂಶೋಧಕರಾಗಿ ಅಷ್ಟೇ ಅಸಹ್ಯ ತರಿಸುವ

ಯಾವಾಗ ಸಾಬರು, ಕಿರಿಸ್ತಾನರು ಬಂದರು ನೋಡಿ. ಜೊತೇಲೇ ರೇಪೂ ಬಂತು. ಅಲ್ಲಾ ಗ್ರಾಮೀಣ ಶದಲ್ಲೂ ದಿನನಿತ್ಯ ರೇಪು ನಡೀತಾನೆ ಇದೆಯಲ್ಲ ರೆ ಅದು ನಿಮ್ಮ ಭ್ರಮೆ ಕಣ್ರೀ ಭ್ರಮೆ!

ಎಲ್ಲಿಹುದೋ ಅತ್ಯಾಚಾರ
ಅಲ್ಲಿಹುದು ಇಂಡಿಯಾ
ಎಲ್ಲಿಲ್ಲವೊ ಅತ್ಯಾಚಾರ
ಅಲ್ಲಿಹುದು ಭಾರತ!

ಅತ್ಯಾಚಾರ ತಡೆಯುವುದಕ್ಕೂ ಭಾಗವತರು ಸೂಲ್ಯ ಸಲಹೆ ನೀಡಿದ್ದಾರೆ.

ಅದೆಂದರೆ ಅತ್ಯಾಚಾರಿಗಳಿಗೆ ಅವಕಾಶ ನೀಡಬೇಡಿ ಬುದೇ ಆಗಿದೆ. ಇದನ್ನು ಹೀಗೆ ಸಾಧಿಸುವುದು ರೆ ಮಹಿಳೆ ಗೃಹಿಣಿಯಾಗಿ ಮನೆಯ ಒಳಗೆ ತನ್ನ ಮ್ರಾಜ್ಯ ಸ್ಥಾಪಿಸಿಕೊಳ್ಳಬೇಕು; ಹೊರಪ್ರಪಂಚಕ್ಕೆ ಆಕೆ ಕೊಳ್ಳಬಾರದು ಎಂಬುದೇ ಆಗಿದೆ. ಇಂತಹ ಲಕ್ಷ್ಮಣ ಯನ್ನು ಮಧ್ಯಪ್ರದೇಶದ ಸಚಿವರಾದ ಕೈಲಾಸ್ ಯು ವರ್ಮಾ ಅವರೂ ಎಳೆದಿದ್ದಾರೆ. ಅದು ಮಾನ್ಯ ರರು ತಮ್ಮ ಅನುಭವದಿಂದ ಹೇಳಿರುವ ಮಾತಂತೆ. ಗೆ ಒಬ್ಬ ವ್ಯಾಪಾರಿ ಸ್ನೇಹಿತ ಇದ್ದಾನಂತೆ. ದುಪ್ಪಟಾ ಮವುದು ಅವನ ವೃತ್ತಿಯಂತೆ. ಈ ಹಿಂದೆ ಅವನಿಗೆ ರ ಚೆನ್ನಾಗಿ ಆಗುತ್ತಿತ್ತಂತೆ. ಯಾಕೆಂದರೆ ಮಹಿಳೆಯರು ಹೆಚ್ಚು ದುಪ್ಪಟಾ ಬಳಸುತ್ತಿದ್ದರಂತೆ. ಆದರೆ ಈಗ ಗಿ ವ್ಯಾಪಾರವೇ ಆಗುತ್ತಿಲ್ಲವಂತೆ. ಯಾಕೆಂದರೆ ಳೆಯರು ಎದೆ ಮುಚ್ಚುವ ದುಪ್ಪಟಾ ಬಳಸುವುದನ್ನೇ ದ್ದಾರಂತೆ! ತೆರೆದೆದೆ ಅತ್ಯಾಚಾರಿಗಳಿಗೆ ನೀಡಿದ ನ ಎಂಬುದೇ ಅವರ ಚಿಂತನೆಯಾಗಿದೆಯಂತೆ! ಳೆಯರು ಮುಂದೆ ಬರಬೇಕು ನಿಜ. ಆದರೆ ವುದೂ ಒಂದು ಮಿತಿಯ ಒಳಗೆ ಇರಬೇಕು. ಮಾಯಣದಲ್ಲಿ ಏನಾಯಿತು ನೋಡಿ. ಸೀತೆ ಣರೇಖೆಯನ್ನು ದಾಟಿದಳು. ದುರುಳ ರಾವಣ ನನ್ನು ಹೊತ್ತೊಯ್ದು. ಈಗಲೂ ಅಂತಹ ಹಲವಾರು ಣರು ಕಾಯ್ದು ಕುಳಿತಿರುತ್ತಾರೆ. ಲಕ್ಷ್ಮಣರೇಖೆ ಮೀರಿ ರದೆ ಬಂದರೆ ಅಪಹರಣಕ್ಕೆ ಗುರಿಯಾಗಬೇಕಾಗುತ್ತೆ. ರೇನಾಯಿತು ಮಾನ್ಯ ಸಚಿವರ ಪ್ರಕಾರ ಅತ್ಯಾಚಾರಕ್ಕೆ ಳೆಯೇ ಕಾರಣ ಅಂದ ಹಾಗಾಯಿತು! ಇದೆಲ್ಲ ಸಚಿವರೆ ಈ ಲಕ್ಷ್ಮಣರೇಖೆ ಎಲ್ಲಿ ಎಳೆಯಬೇಕು ಬುದನ್ನು ಸ್ಪಷ್ಟಪಡಿಸಿದ್ದರೆ ಉಪಕಾರ ಆಗುತ್ತಿತ್ತು! ತಹಾಗೆ ದೆಹಲಿಯಲ್ಲಿ ನಡೆದ ಅತ್ಯಾಚಾರ ಪ್ರಕರಣದ ದ್ಧ ಸಿಡಿದೆದ್ದವರ ಜೊತೆಯಲ್ಲಿ ಇವರ ಪಕ್ಷದವರೂ ರಂತೆ! ■

# ‘ಸ್ವೀಟಿ’ ರಾಧಿಕಾ ಅಪ್‌ಸೆಟ್



ಎರಡು ಜಡೆಗಳು ಇದ್ದಲ್ಲಿ ಜಗಳ ಇದ್ದೇ ಇರುತ್ತದೆ ಎಂದು ಯಾರೋ ಹಿರಿಯರು ಹೇಳಿದ ಮಾತು ಈಗ ಕನ್ನಡ ಚಿತ್ರರಂಗದಲ್ಲಿ ಸಾಬೀತಾಗಿದೆ. ನಿರ್ದೇಶಕಿ ವಿಜಯಲಕ್ಷ್ಮಿ ಸಿಂಗ್ ಮತ್ತು ನಾಯಕಿ ರಾಧಿಕಾ ಕುಮಾರಸ್ವಾಮಿ ನಡುವೆ ಭಿನ್ನಾಭಿಪ್ರಾಯವುಂಟಾಗಿ ‘ಸ್ವೀಟಿ’ ಚಿತ್ರ ಒಂದೆರಡು ದಿನಗಳ ಕಾಲ ಸ್ಥಗಿತಗೊಂಡಿತ್ತು.

‘ಸ್ವೀಟಿ’ ಸಿನಿಮಾದ ನಿರ್ಮಾಪಕಿಯೂ ಆದ ರಾಧಿಕಾ ಅವರು ಮೈಸೂರಿನ ವಿಮಾನ ನಿಲ್ದಾಣದಲ್ಲಿ ಚಿತ್ರೀಕರಣಕ್ಕಾಗಿ ವಿಶೇಷವಾಗಿ ಅನುಮತಿಯನ್ನು ಪಡೆದಿದ್ದರಂತೆ. ಅಷ್ಟೇ ಅಲ್ಲ, ಗಂಟೆಗೆ ರೂ. 40,000 ದಷ್ಟು ದುಬಾರಿ ಬಾಡಿಗೆಯನ್ನು ನೀಡಲೂ ಒಪ್ಪಿದ್ದರಂತೆ. ಆದರೆ ಚಿತ್ರೀಕರಣ ನಡೆಯಬೇಕಿದ್ದ ದಿನ ನಿರ್ದೇಶಕಿ ವಿಜಯಲಕ್ಷ್ಮಿ ಸರಿಯಾದ ಸಮಯಕ್ಕೆ ಬರಲೇ ಇಲ್ಲವಂತೆ. ರಾಧಿಕಾ ಮಾಡಿದ ಫೋನ್ ಕರೆಗಳನ್ನೂ ಆಕೆ ಸ್ವೀಕರಿಸಲಿಲ್ಲವಂತೆ. ಇದೆಲ್ಲದರಿಂದ ರಾಧಿಕಾಗೆ ಭಾರಿ ಅಪ್‌ಸೆಟ್ ಆಯಿತಂತೆ. ಯಾವತ್ತೂ ತಾಳ್ಮೆಯನ್ನು ಕಳೆದುಕೊಳ್ಳದೇ ಎಂತಹ ಕಷ್ಟದ ಸನ್ನಿವೇಶದಲ್ಲೂ ಎಲ್ಲರೊಂದಿಗೆ ನಗುನಗುತ್ತ ಮಾತನಾಡುತ್ತ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ನಿಸ್ಸೀಮರಾದ ರಾಧಿಕಾ ಅಂದು ಮೊದಲ ಬಾರಿಗೆ ಸಿಟ್ಟು ಮಾಡಿಕೊಂಡು ನಿರ್ದೇಶಕಿ ಸೆಟ್ಟಿಗೆ ಬರುವ ಮುನ್ನವೇ ಪ್ಯಾಕಪ್ ಹೇಳಿ ತಮ್ಮ ಹೋಟೆಲ್‌ಗೆ ತೆರಳಿದರಂತೆ.




ಚಿತ್ರೋದ್ಯಮದ ಹಿನ್ನೆಲೆಯಲ್ಲಿ ಬಂದಿರುವ ಮತ್ತು ಒಬ್ಬ ನಿರ್ಮಾಪಕನ ಎಲ್ಲಾ ಕಷ್ಟಗಳನ್ನು ಅರಿತಿರುವ ವಿಜಯಲಕ್ಷ್ಮಿ ಏಕೆ ಈ ರೀತಿ ವರ್ತಿಸಿದರು ಎಂಬುದೇ ಯಾರಿಗೂ ಅರ್ಥವಾಗುತ್ತಿಲ್ಲ. ಈತನಕ ತನ್ನ ಗಂಡ ಜೈಜಗದೀಶ್ ಅವರ ಬ್ಯಾನರ್‌ನಲ್ಲೇ ಚಿತ್ರ ಮಾಡುತ್ತಾ ಬಂದಿರುವ ವಿಜಯಲಕ್ಷ್ಮಿ ಅವರಿಗೆ ಹೊರಗಿನ ಸಂಸ್ಥೆಯಿಂದ ನಿರ್ದೇಶಕದ ಆಹ್ವಾನ ಬಂದಿರುವುದು ಇದೇ ಮೊದಲ ಬಾರಿ. ಇಂತಹ ಅವಕಾಶ ಸಿಕ್ಕಿದ್ದರೂ ವಿಜಯಲಕ್ಷ್ಮಿ ಯಾಕೆ ಇಷ್ಟೊಂದು ಕಿರಿಕ್ ಮಾಡಿಕೊಂಡು ತಮ್ಮ ಭವಿಷ್ಯಕ್ಕೆ ತಾವೇ ಮಸಿ ಬಳಿದುಕೊಂಡರೋ ಭಗವಂತನೇ ಬಲ್ಲ.

ತನ್ನ ‘ಸ್ವೀಟಿ’ ಚಿತ್ರದ ನಾಯಕಿಯ ಮನವೊಲಿಸಲು ವಿಜಯಲಕ್ಷ್ಮಿ ಎಲ್ಲಿಲ್ಲದ ಪ್ರಯತ್ನ ಮಾಡಿದರಂತೆ. ಅದರಲ್ಲಿ ಕೊನೆಗೂ ಯಶಸ್ವಿಯಾದರಂತೆ. ಪರಿಣಾಮವಾಗಿ ಒಂದೆರಡು ದಿನ ನಿಂತುಹೋಗಿದ್ದ ‘ಸ್ವೀಟಿ’ ಚಿತ್ರದ ಶೂಟಿಂಗ್ ಈಗ ಮತ್ತೆ ಪ್ರಾರಂಭವಾಗಿದೆ. ಆದರೀಗ ವಿಜಯಲಕ್ಷ್ಮಿ ಮತ್ತು ರಾಧಿಕಾಳ ನಡುವಿನ ಸಂಬಂಧ ಹಿಂದಿನಷ್ಟು ಮಧುರವಾಗಿಲ್ಲ ಎಂಬುದು ಆ ಚಿತ್ರದ ತಂಡದಲ್ಲಿರುವವರ ಮಾತು.

‘ಸ್ವೀಟಿ’ ಮುಗಿಯುವ ಮುನ್ನ ರಾಧಿಕಾ ಸಂಪೂರ್ಣವಾಗಿ ‘ಕಹಿ’ ಆಗದಿರಲಿ.

# ಶರಣ್‌ಗೆ ಪ್ರಮೋಷನ್! ಕೋಮಲ್‌ಗೆ?




ಕೋಮಲ್ ನಟಿಸಿರುವ ‘ನಂದೀಶ’ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿದ ನಂತರ ಇನ್ನು ಮುಂದೆ ಹಾಸ್ಯನಟರಿಗೆ ನಾಯಕನಟ ರಾಗಿ ಭವಿಷ್ಯ ಇಲ್ಲ ಎಂದು ಗಾಂಧಿನಗರ ದವರು ಲೆಕ್ಕಾಚಾರ ಹಾಕುತ್ತಿದ್ದಾಗಲೇ ಮತ್ತೊಬ್ಬ ಹಾಸ್ಯನಟ ಶರಣ್ ತನ್ನ ಎರಡನೇ ಚಿತ್ರವನ್ನು ಘೋಷಿಸಿದ್ದಾರೆ.

ಶರಣ್ ನಾಯಕನಾಗಿ ನಟಿಸಿದ ‘ರ್‍ಯಾಂಬೊ’ ಚಿತ್ರ ಎಲ್ಲರ ನಿರೀಕ್ಷೆಯನ್ನು ಮೀರಿ ಜಯಭೇರಿ ಬಾರಿಸಿತ್ತು. ಈ ಜಯದ ಹ್ಯಾಂಗ್‌ಓವರ್‌ನಲ್ಲೇ ಶರಣ್ ತಮ್ಮ ಹೊಸ ಚಿತ್ರಕ್ಕೆ ಇನ್ನೂ ಯಾವುದೇ ಹೆಸರಿಟ್ಟಿಲ್ಲ. ಯಾವುದೋ ಒಂದು ಸಂಕೇತವನ್ನು ಚಿತ್ರದ ಹೆಸರಿನ ಬದಲಿಗೆ ಕೊಡುವ ಉದ್ದೇಶ ಅವರದು. “ಇದು ಒಂದು ರೀತಿಯಲ್ಲಿ ಉಪೇಂದ್ರನ ತರಹದ ಗಿಮಿಕ್ಕಾ?” ಎಂದು ಕೇಳಿದರೆ “ಇಲ್ಲ, ಇದು ಚಿತ್ರದ ಕಥೆಗೆ ಹೊಂದಿಕೊಳ್ಳುತ್ತದೆ” ಎಂದು ಹೇಳುತ್ತಾರೆ.




ಈ ಚಿತ್ರವನ್ನು ಶರಣ್ ಅವರ ಆಪ್ತಮಿತ್ರ ತರುಣ್ ಸುಧೀರ್ ಅವರ ಸಹೋದರ ನಂದಕಿಶೋರ್ ನಿರ್ದೇಶಿಸುತ್ತಿದ್ದಾರೆ. ಶರಣ್ ನಾಯಕನಾಗಿ ನಟಿಸಿದ್ದ ‘ರ್‍ಯಾಂಬೊ’ ಚಿತ್ರಕ್ಕೆ ತರುಣ್ ತನ್ನ ಸರ್ವಸ್ವವನ್ನೂ ಧಾರೆ ಎರೆದಿದ್ದರು. ಅಂದಹಾಗೆ, ನಂದಕಿಶೋರ್ ಖಳನಟ ಸುಧೀರ್ ಅವರ ಹಿರಿಯ ಪುತ್ರ. ನಂದಕಿಶೋರ್ ಈ ಹಿಂದೆ ಒಂದು ಚಿತ್ರವನ್ನು ನಿರ್ದೇಶಿಸಿದ್ದರೂ ಅದು ಇನ್ನೂ ಬಿಡುಗಡೆಯ ಭಾಗ್ಯವನ್ನೇ ಕಂಡಿಲ್ಲ. ಹಾಗೆಯೇ, ನಿರ್ಮಾಪಕ ಶಂಕ್ರೇಗೌಡರು ಈತನಿಗೆ ನಿರ್ದೇಶನದ ಜವಾಬ್ದಾರಿ ನೀಡುತ್ತೇನೆಂದು ಹಲವಾರು ವರ್ಷಗಳಿಂದ ತನ್ನ ಜೊತೆ ಇಟ್ಟುಕೊಂಡಿದ್ದರೇ ವಿನಃ ಅವಕಾಶವನ್ನಂತೂ ನೀಡಿರಲಿಲ್ಲ. ಯಾವಾಗಲೂ ನಿರ್ದೇಶನದ ಕನಸು ಕಾಣುತ್ತಿದ್ದ ನಂದಕಿಶೋರ್ ಈಗ ಮತ್ತೊಮ್ಮೆ ಕ್ಯಾಮರಾ ಹಿಂದೆ ನಿಂತು ‘ಆ್ಯಕ್ಷನ್’ ಅಂತ ಹೇಳುತ್ತಿದ್ದಾರೆ.



ಕೋಮಲ್ ಪಾಲಿಗೆ ‘ನಂದೀಶ’ ದ್ವಿತೀಯ ವಿಘ್ನವಾಗಿ ಕಾಡಿದರೆ, ಶರಣ್ ಯಾವುದೇ ಅಂಜಿಕೆಯಿಲ್ಲದೆ ಧೈರ್ಯವಾಗಿ ಎರಡನೇ ಚಿತ್ರವನ್ನು ಘೋಷಿಸಿರುವುದನ್ನು ನೋಡಿ ಉದ್ಯಮದವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

● ಶೆಣೈ

ಬಾಯಿ ಬಿಟ್ಟರೆ ತಮ್ಮ ಬಣ್ಣ ಬಯಲು ಮಾಡಿಕೊಳ್ಳುವ ಚೇಮೂಗೆ, ಲಕಾಯಿ ಬೇವಿನಕಾಯಿಯಂತೆ ( ಅಯ್ಯೋ, ಇವೆರಡಕ್ಕೂ ಅವಮಾನ ತಿದೆನೇನೋ!) ನಮ್ಮ ಮೈಸೂರಿನ ಕಪ್ಪು ಚುಕ್ಕೆ ಎಸ್.ಎಲ್. ಭೈರಪ್ಪ ರೆ. ಮನಸ್ಸಿಗೆ ವಿಷ ಸುರಿಸುವ ಇವರಿಬ್ಬರ ಬಗ್ಗೆ ಮಾನವೀಯರು ಕೆಯಿಂದ ಇರಬೇಕು. ಉತ್ತಮ ಸಮಾಜದ ನಿರ್ಮಾಣಕ್ಕೆ ಮೂರು ಪ್ರಯೋಜನವಿಲ್ಲದ ಚೇಮೂ ಮತ್ತು ಭೈರಪ್ಪ ಯಾವಾಗಲೂ ಸೂತಕದಂತೆ ಜಕ್ಕೆ ಅಂಟಿಕೊಂಡಿದ್ದಾರೆ, ಥೂತ್ತೇರಿ!

ಅಂದಹಾಗೆ, ನಿಮ್ಮ ಪತ್ರಿಕೆ ಮೂರ್‍ನಾಲ್ಕು ಪಟ್ಟು ಹೆಚ್ಚು ಖರ್ಚಾಗುವಂತೆ ಸಣ್ಣ ಸಲಹೆ ಕೊಡಲೇ? ನಮ್ಮ ಮೈಸೂರಿನ ಮೈದಾಸ, ಅಲ್ಲಲ್ಲ, ದಾಸನ ಬಗ್ಗೆ ಬರೆಯಿರಿ ಸಾಕು. ಅವರ ಚೇಲಾಗಳು ಮುಗಿಬಿದ್ದು ರಯ ಪ್ರತಿಗಳನ್ನು ಕೊಂಡುಕೊಳ್ಳುತ್ತಾರೆ. “ಮುಂದಿನ ವಾರ ರಾಮದಾಸ ಣ ಬರುತ್ತೆ’ ಅಂತ ಹಿಂದಿನ ವಾರವೇ ಪ್ರಕಟಿಸಿಬಿಡಿ.

ಳೆದ ವಾರ ಪತ್ರಿಕೆಯು ಮೈಸೂರಿನಲ್ಲಿ ಸಿಗದೆ ಮಂಡ್ಯದಿಂದ ತರಿಸಿಕೊಂಡು ನೆ.

-ರಂಗಸ್ವಾಮಿ, ಮೈಸೂರು

ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಬಡ ಮತ್ತು ಶ್ರಮಿಕ ದಲಿತ ಳೆಯರು ತೀವ್ರತರವಾದ ಶೋಷಣೆಗಳಿಗೆ ಗುರಿಯಾಗಿದ್ದಾರೆ. ಅವರು ಜಾತಿಯವರಿಂದ ಅತ್ಯಾಚಾರಕ್ಕೂ ಬಲಿಯಾಗುತ್ತಾರೆ. ಆರೆಸ್ಸೆಸ್ ಮುಖಂಡ ಹನ ಭಾಗವತನಿಗೆ ಇದು ಚೆನ್ನಾಗಿ ಗೊತ್ತು. ಆದರೂ ಆತ ಬೇಕಂತಲೇ ನ್ನು ಮರೆಮಾಚಿ ಭಾರತದ ನಗರ ಪ್ರದೇಶಗಳಲ್ಲಿ ಮಾತ್ರ ಅತ್ಯಾಚಾರ ಣಗಳು ನಡೆಯುತ್ತವೆ ಎಂದಿದ್ದಾನೆ.

ಅಷ್ಟೇ ಅಲ್ಲ, 2002ರ ಗುಜರಾತ್ ಕೋಮುಗಲಭೆಗಳಲ್ಲಿ, ಒಡಿಶಾ ದ ಕಂದಮಾಲ್‌ನಲ್ಲಿ, 1993ರ ಮುಂಬೈ ಗಲಭೆಗಳಲ್ಲಿ ಭಾಗವತ್‌ನ ಸ್ಸಿನವರು ನಡೆಸಿದ ಅನೇಕಾನೇಕ ಅತ್ಯಾಚಾರಗಳನ್ನು ಯಾರೂ ಮರೆತಿಲ್ಲ.

- ರವಿಕುಮಾರ್, ಹಾಸನ

ಂಡಹಾಗೆಯಲ್ಲಿ ಬರೆದ ಸಂಗೀತಮಯ ಬದುಕಿನಲ್ಲಿ ಅಪಸ್ವರ. ಮಧ್ಯರಾತ್ರಿ ರ ಪಾಠ ಹೇಳುವ ರೋಶನಾರ ಖಾನ್ ಯಾ ಅನ್ನಪೂರ್ಣರ ಕಥೆ ಕೇಳಿ. ೂ ಒಂದು ಬದುಕು ಇದೆಯೋ? ಹೀಗೂ ಒಂದು ತ್ಯಾಗ ಉಂಟೇ? ತರಹದ ಹಠವಾದಿಗಳೂ ಇದ್ದಾರೆಯೇ? ಹೀಗೆ ಬಹಳಷ್ಟು ಪ್ರಶ್ನೆಗಳು ದವು. ಹಾಗೆಯೇ ಶಿಷ್ಯ ರೂಶಿ ಕುಮಾರ್ ಪಾಂಡ್ಯ ಜತೆಗಿನ ದಾಂಪತ್ಯ ನದ ಬಗ್ಗೆ ತಿಳಿಯುವ ಕುತೂಹಲ ಉಳಿಸಿ ನಿರಾಶೆಗೊಳಿಸಿದ್ದೀರ. ಹಾಗೆಯೇ ತನ್ನ ಶರ್ಮಾ, ಲೆಕ್ಕಾಚಾರದ, ಬಳಗುವಿಕೆ ಮನೋಸ್ಥಿತಿಯ ಖ್ಯಾತ ಕಲಾವಿದನಿಗೆ ರ ಹೇಳುತ್ತಿದೆ.


- ಅಲ್ಲಾರಂಡ ವಿಠಲ ನಂಜಪ್ಪ, ಮಡಿಕೇರಿ

# ಮಂಜುನಾಥನ ಮೇಲೆ ಸಿಐಡಿ ಆಣೆ ಮಾಡಲಿ



ದಿಲ್ಲಿಯಲ್ಲಿ ಗ್ಯಾಂಗ್ ರೇಪ್‌ಗೆ ಬಲಿಯಾಗಿ ತೀರಿಕೊಂಡ ನತದೃಷ್ಟ ಹುಡುಗಿಗೆ ಕರ್ನಾಟಕದಲ್ಲೂ ಎಲ್ಲೆಡೆ ಸಂತಾಪ ವ್ಯಕ್ತಪಡಿಸಿದ್ದು ಸರಿಯಾಗಿದೆ ನಿಜ. ಆದರೆ ಇದೇ ಅವಧಿಯಲ್ಲಿ ಕರ್ನಾಟಕದ ಮಧುಗಿರಿಯಲ್ಲಿ ಹಾಗೂ ಹಾಸನದಲ್ಲೂ ಗ್ಯಾಂಗ್‌ರೇಪ್ ಮತ್ತು ಕೊಲೆಯಾದ ನತದೃಷ್ಟರಿಗಾಗಿ ಯಾರೂ ಒಂದು ಸಣ್ಣ ಕ್ಯಾಂಡಲ್ ಸಹ ಹಚ್ಚದಿರುವುದು ವಿದ್ಯಾವಂತ ನಗರವಾಸಿಗಳಲ್ಲಿ ಹಾಗೂ ರಾಷ್ಟ್ರೀಯ ಮಾಧ್ಯಮಗಳಲ್ಲಿಯ ಢಾಂಬಿಕತನ ಎತ್ತಿ ತೋರಿಸುತ್ತದೆ. ಧರ್ಮಸ್ಥಳದಲ್ಲಿ ಗ್ಯಾಂಗ್‌ರೇಪ್‌ಗೆ ಬಲಿಯಾಗಿ ಸತ್ತ ಸೌಜನ್ಯಳನ್ನು ಇಷ್ಟು ಬೇಗ ಎಲ್ಲರೂ ಮರೆತಿದ್ದಾರೆ. ಸಿಐಡಿ ತನಿಖೆಯ ನಾಟಕ ನಡೆಯುತ್ತಿದೆ. ಅವರಲ್ಲಿ ಪ್ರಾಮಾಣಿಕತೆ ಇರುವುದೇ ಆಗಿದ್ದರೆ ಈ ಸಿಐಡಿ ಅಧಿಕಾರಿಗಳು ತಾವು ನಿಷ್ಪಕ್ಷ ತನಿಖೆ ನಡೆಸುವುದಾಗಿ ಮೊದಲು ಅದೇ ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ಮಾಡಲಿ.

ಪ್ರಳಯದ ಬಗ್ಗೆ ಭವಿಷ್ಯ ನುಡಿದ ಜ್ಯೋತಿಷಿಗಳು ದಿಲ್ಲಿಯಲ್ಲಿಯ ಗ್ಯಾಂಗ್‌ರೇಪ್ ಹಾಗೂ ರಾಷ್ಟ್ರವ್ಯಾಪಿ ಮಡುಗಟ್ಟಲಿರುವ ಆಕ್ರೋಶದ ಬಗ್ಗೆ ಯಾಕೆ ಮುಂದಾಗಿ ಭವಿಷ್ಯ ನುಡಿಯಲಿಲ್ಲ? ಪುರಾಣಕಾಲದಿಂದಲೂ ಜ್ಯೋತಿಷಿಗಳು ಅವಾಂತರವನ್ನೇ ಹಬ್ಬಿಸಿದ್ದು, ದೇವರಾದ ಶ್ರೀರಾಮನನ್ನೇ ಹಾದಿ ತಪ್ಪಿಸಿ ಅವನಿಂದ ಘೋರ ಅಮಾನವೀಯ ಕೃತ್ಯ ಮಾಡಿಸಿದರು. ರಾಮರಾಜ್ಯದಲ್ಲಿ ಬರಗಾಲ ಬಿದ್ದಿದ್ದಕ್ಕೆ ಶೂದ್ರನೊಬ್ಬನು ಮೋಕ್ಷಕ್ಕಾಗಿ ಮಾಡುತ್ತಿರುವ ತಪಸ್ಸೇ ಕಾರಣವೆಂದು ಜ್ಯೋತಿಷಿಗಳ ದುರ್ಬೋಧನೆಯಿಂದಾಗಿ ರಾಮನು ಒಬ್ಬ ನಿರಾಯುಧ ಮುಗ್ಧ ಶೂದ್ರ ತಪಸ್ವಿ ಶಂಭೂಕನನ್ನು ಕೊಂದು ಕರ್ಮ ಸಿದ್ಧಾಂತದ ಪ್ರಕಾರ ಸ್ವಲ್ಪ ಕಾಲ ಜ್ಯೋತಿಷಿಯೊಟ್ಟಿಗೆ ತಾನೂ ನರಕಕ್ಕೆ ಹೋಗಿರಬೇಕಾದ ಪ್ರಾರಬ್ಧ ರಾಮನಿಗೊದಗಿತ್ತು. ಜ್ಯೋತಿಷಿಗಳು ಗೌತಮಬುದ್ಧನ ತಂದೆಯನ್ನೂ ಹಾದಿ ತಪ್ಪಿಸಲು ಪ್ರಯತ್ನಿಸಿದರು, ಆದರೆ ಯಶಸ್ವಿಯಾಗಲಿಲ್ಲ. ಭಾರತೀಯ ಪುರಾಣೇತಿಹಾಸದಲ್ಲಿ ಜ್ಯೋತಿಷಿಗಳು ನಡೆಸಿದ ಇಂತಹ ನೂರಾರು ಅವಾಂತರಗಳ ದೃಷ್ಟಾಂತಗಳಿವೆ. ಈಗಿನ ಟಿವಿ ಜ್ಯೋತಿಷಿಗಳಿಗೆ ಸ್ವತಃ ಪ್ರಳಯದ ಬಗ್ಗೆ ನಂಬಿಕೆಯಿರಲಿಲ್ಲ, ಹಾಗಾಗಿ ಅವರು ಪ್ರಳಯದ ಬುರುಡೆ ಬಿಟ್ಟು ಗಳಿಸಿದ ದೊಡ್ಡ ಮೊತ್ತಗಳನ್ನೆಲ್ಲ 10 ವರ್ಷದ ಬಾಂಡ್, ಫಿಕ್ಸ್ ಡಿಪಾಸಿಟ್ ಭವಿಷ್ಯ-ನಿಧಿ ಮುಂತಾದವುಗಳಲ್ಲಿ ದೀರ್ಘ ಕಾಲಾವಧಿಗೆ ಹೂಡಿ ನಿರಾಳರಾಗಿದ್ದರು.




ಜೀವನೋಪಾಯಕ್ಕಾಗಿ ಜ್ಯೋತಿಷಿಗಳು ತಮ್ಮ ಕುಲವೃತ್ತಿ ಬಿಡಲಾರರು ನಿಜ. ಆದರೆ ಈಗ ವಿದ್ಯಾವಂತರಲ್ಲೇ ಮೂಢನಂಬಿಕೆಗಳು ಹೆಚ್ಚುತ್ತಿರುವುದರಿಂದ ಕಡೇಪಕ್ಷ ಈ ಮೌಢ್ಯವನ್ನೇ ಟೂಲ್ ಆಗಿ ಬಳಸಿ ಜನರಲ್ಲಿ ಸದ್ಬುದ್ಧಿ ಸುವಿಚಾರಗಳು ಮೂಡುವಂತೆ ಮಾಡಿ ಜ್ಯೋತಿಷಿಗಳು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಸ್ವಲ್ಪವಾದರೂ ನಿರ್ವಹಿಸಲಿ. ದೇವರನ್ನು ಪೆದ್ದ-ಮೂರ್ಖ-ತಿಂಡಿಪೋತ-ಕಾಮುಕ ಎಂದೆಲ್ಲಾ ಭಾವಿಸುವ ‘ಭಕ್ತಿ’ ಸಿದ್ಧಾಂತಕ್ಕೆ ಬದಲಾಗಿ ಹಿಂದೂ ಧರ್ಮದ ಮೂಲ ಸಿದ್ಧಾಂತದ ಹಾಗೂ ತಾರ್ಕಿಕವಾಗಿ-ತಾತ್ವಿಕವಾಗಿ ಉನ್ನತವಾಗಿರುವ ‘ಕರ್ಮ’ ಸಿದ್ಧಾಂತಕ್ಕೆ ಹೆಚ್ಚು ಮಹತ್ವ ಕೊಟ್ಟು ಜ್ಯೋತಿಷಿಗಳು ತಮ್ಮ ಪೆದ್ದ ಗ್ರಾಹಕರಲ್ಲಿ ಮುಂದಿನ ಜನ್ಮದಲ್ಲಿಯ ಶಿಕ್ಷೆಯ ಭಯ ಹುಟ್ಟಿಸಿ ಸದ್ವಿಚಾರಗಳು ಜನರಲ್ಲಿ ಮೂಡುವಂತೆ ಮಾಡಬಹುದು.

ಮಹಿಳೆಯ ಮೇಲೆ ಅತ್ಯಾಚಾರ ಮಾಡಿದವ ಮುಂದಿನ ಜನ್ಮದಲ್ಲಿ ನಪುಂಸಕನಾಗಿಯೊ ಕ್ರಿಮಿಕೀಟವಾಗಿಯೊ ಹುಟ್ಟುತ್ತಾನೆ ಎಂದೊ, ಭ್ರಷ್ಟಾಚಾರಿ ಎಂಜಲು ತಿನ್ನುವ ಬೀದಿನಾಯಿಯಾಗಿ ಹುಟ್ಟುತ್ತಾನೆ ಎಂದೊ, ಗ್ಯಾಂಗ್‌ರೇಪ್ ಮಾಡಿದವರು ಚಕ್ಕಾ-ಗಂಡು ವೇಶ್ಯೆಯಾಗಿ ಹುಟ್ಟುತ್ತಾರೆ ಎಂದೊ, ದೇವರ ಹೆಸರಲ್ಲಿ ಜನರಿಗೆ ಮೋಸ ಮಾಡುವ ಅರ್ಚಕರೆಲ್ಲಾ ಭಿಕ್ಷುಕರಾಗಿ ಹುಟ್ಟುತ್ತಾರೆ ಎಂದೊ ದುಬಾರಿ ಪೂಜೆ ಪುನಸ್ಕಾರಗಳಿಂದ ಕೆಟ್ಟ ಕರ್ಮ ತೊಳೆಯಲು ಸಾಧ್ಯವೇ ಇಲ್ಲ ಎಂದೊ, ಜನರ ಮನಸ್ಸಿಗೆ ನಾಟುವಂತೆ ಜನ್ಮಜನ್ಮಾಂತರದ ಭಯ ಹುಟ್ಟಿಸಿ ಜನರನ್ನು ತಿದ್ದಿ ಜ್ಯೋತಿಷಿಗಳು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಸ್ವಲ್ಪ ಮಟ್ಟಿಗಾದರೂ ನಿಭಾಯಿಸಲಿ.

ಮಹಿಳೆಯರ ಮೇಲೆ ಅತ್ಯಾಚಾರ ಹೆಚ್ಚಲು ಭಾರತೀಯ ಸಿನಿಮಾಗಳು ಬಹಳಷ್ಟು ಕಾರಣ. ಒಬ್ಬ ಪೋಲಿ (ಹೀರೋ) ನಾಯಕಿಯಿಂದ ತಿರಸ್ಕೃತನಾಗಿ ಅವಳಿಗೆ ಕಿರುಕುಳ ಕೊಟ್ಟು ಬಲಾತ್ಕಾರದ- ಕಿಸ್ ಕೊಟ್ಟ ನಂತರ ಅವಳಾಗಿಯೇ ಹೀರೋಗೆ ಒಲಿಯುವ ಪುರುಷ ಪ್ರಧಾನ ಕಥೆಯುಳ್ಳ ಸಿನಿಮಾಗಳೇ ಪಡ್ಡೆಗಳಲ್ಲಿ ಮಹಿಳೆಯರನ್ನು ಹಗುರವಾಗಿ ಕಂಡು ಲೈಂಗಿಕ ಕಿರುಕುಳ ಕೊಡುವಂತೆ ಸಬ್-ಕಾನ್‌ಶಿಯಸ್ ಲೆವಲ್‌ನಲ್ಲಿ ಪ್ರೇರೇಪಿಸುತ್ತವೆ. ಸಿಗರೇಟ್ ಸೇದುವ ದೃಶ್ಯಗಳನ್ನು ಕಾನೂನುರೀತ್ಯಾ ನಿಷೇಧಿಸಿದಂತೆ, ನಾಯಕಿಗೆ ನಾಯಕ ಮತ್ತೂ ಗೆಳೆಯರು ಮಾನಸಿಕ ಕಿರುಕುಳ ಕೊಡುವ ದೃಶ್ಯಗಳನ್ನೂ ನಿಷೇಧಿಸಿದರೆ ಒಳಿತು.

ಗೌರಿ ಲಂಕೇಶ್ ಬಳಗದವರಿಗೆ ಹೊಸ ವರ್ಷದ ಶುಭಾಶಯಗಳು

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

# ಹಂಸ್ ಹೊಸ ದಾಖಲೆ ಮಾಡುತ್ತಾರಾ?



ಕಳೆದ ವಾರವಷ್ಟೇ ನಿರ್ಮಾಪಕರ ಸಂಘವು ಉದ್ಯಮದ ಎಲ್ಲಾ ಕಲಾವಿದರನ್ನು ಸೇರಿಸಿ ಒಂದು ಚಿತ್ರ ಮಾಡುವ ಯೋಜನೆ ಹಾಕಿಕೊಂಡಿರುವುದರ ಬಗ್ಗೆ ನೀವು ಓದಿರಬಹುದು. ಈಗ ಅಂತಹದ್ದೇ ಒಂದು ಯೋಜನೆಗೆ ಸಂಗೀತ ನಿರ್ದೇಶಕ ಹಂಸಲೇಖ ಅವರು ಚಾಲನೆ ನೀಡಿದ್ದಾರೆ.

ಚಿತ್ರರಂಗದ ಎಲ್ಲಾ ಕಲಾವಿದರನ್ನು ಒಟ್ಟು ಸೇರಿಸಿ 'ನಾಡಗೀತೆ' ಎಂಬ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸುವುದಾಗಿ ಸ್ವತಃ ಹಂಸಲೇಖ ಘೋಷಿಸಿದ್ದಾರೆ. "ಇಂತಹ ಒಂದು ದೊಡ್ಡ ಕನಸನ್ನು ನನಸು ಮಾಡಲು ಚಿತ್ರರಂಗದ ಎಲ್ಲಾ ಕಲಾವಿದರ ಸಹಕಾರ ಬೇಕು" ಎಂದು ಅವರು ಕಲಾವಿದರ ಸಂಘದ ಅಧ್ಯಕ್ಷರಾದ ಅಂಬರೀಷ್ ಅವರನ್ನು ಕೇಳಿಕೊಂಡಿದ್ದಾರೆ.

ಹಂಸಲೇಖ ಹೇಳಿಕೇಳಿ ಮಹಾನ್ ದೊಡ್ಡ ಕನಸುಗಾರ. ಅದರಲ್ಲೂ ಕನ್ನಡ ಚಿತ್ರರಂಗದ ಮತ್ತೊಬ್ಬ ಕನಸುಗಾರ ರವಿಚಂದ್ರನ್ ಜೊತೆ ಹಂಸಲೇಖ ಸೇರಿಕೊಂಡ ನಂತರ ಅವರ ಕನಸುಗಳಿಗೆ ಎಣೆಯೇ ಇಲ್ಲದಂತಾಗಿತ್ತು. ಅವುಗಳಲ್ಲಿ ಹಲವು ನನಸಾಗಿದ್ದರೆ ಕೆಲವು ನನಸಾಗದೇ ಉಳಿದವು. ಉದಾಹರಣೆಗೆ ಅವರ ಮಗ ಅಲಂಕಾರ್ ನಾಯಕನಾಗಿ ನಟಿಸಿದ ಮಹತ್ವಾಕಾಂಕ್ಷೆಯ 'ಸುಗ್ಗಿ' ಚಿತ್ರ ಈತನಕ ಬಿಡುಗಡೆಯಾಗಿಲ್ಲ. ಇದಾದನಂತರ 'ಲತಾ' ಎಂಬ ಚಿತ್ರವನ್ನು ಮಾಡುವ ಬಗ್ಗೆ ಹಂಸ್ ಕನಸು ಕಂಡಿದ್ದರು. ಅದು ಈ ದೇಶದ ಮಹಾನ್ ಹಿನ್ನೆಲೆ ಗಾಯಕಿ ಲತಾ ಮಂಗೇಶ್ಕರ್ ಅವರ ಜೀವನಚರಿತ್ರೆಯನ್ನು ಹೋಲುವಂತಿಲ್ಲದಿದ್ದರೂ ಅವರೇ ಅದಕ್ಕೆ ಸ್ಫೂರ್ತಿ. ಆದರೆ ಅದೂ ನನಸಾಗಲಿಲ್ಲ. ಅದಾದನಂತರ ಶಿವರಾಜ್‌ಕುಮಾರ್ ಮತ್ತು ರಮ್ಯಾ ಜೋಡಿಯ 'ಬಾಗಿನ' ಚಿತ್ರವನ್ನು ಹಂಸಲೇಖ ಘೋಷಿಸಿದ್ದರಾದರೂ ಅದಿನ್ನೂ ಆರಂಭವೇ ಆಗಿಲ್ಲ. ಈ ಮಧ್ಯೆ ಸಿನಿಮಾದ ಸಹವಾಸವೇ ಬೇಡವೆಂದು ಹಂಸಲೇಖ ದೇಸಿ ಸಂಗೀತ ಮತ್ತು ದೇಸಿ ವಿದ್ಯಾಭ್ಯಾಸದ ಕಡೆಗೆ ಹೊರಟರು. ಈಗ ಅವರ ನೇತೃತ್ವದಲ್ಲಿ ಒಂದು ದೊಡ್ಡ ದೇಶಿ ಸಂಗೀತ ಶಾಲೆ ತಲೆಯೆತ್ತಿ ನಿಂತಿದೆ.

ಒಂದು ಕಡೆ ಚಿತ್ರರಂಗದ ಎಲ್ಲ ಕಲಾವಿದರನ್ನು ಒಂದೇ ಸಿನಿಮಾದಲ್ಲಿ ಸೇರಿಸಲು ನಿರ್ಮಾಪಕರ ಸಂಘ ಹೊರಟಿದ್ದರೆ, ಇನ್ನೊಂದು ಕಡೆ ಅಂತಹದ್ದೇ ಸಿನಿಮಾ ಮಾಡಲು ಹಂಸಲೇಖ ಕೂಡ ಸಜ್ಜಾಗಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಈಗ ಏನಿಲ್ಲವೆಂದರೂ ಕನಿಷ್ಠ ಹತ್ತಿಪ್ಪತ್ತು ಸಣ್ಣ ಸಣ್ಣ ಗುಂಪುಗಳಿವೆ. ಈ ಗುಂಪುಗಳನ್ನು ಒಂದೇ ಚಿತ್ರದಲ್ಲಿ ಸೇರಿಸುವುದೆಂದರೆ ಅದೊಂದು ದೊಡ್ಡ ಸಾಹಸವೇ ಸರಿ.

ಅಂತಹ ಸಾಹಸವನ್ನು ನಿರ್ಮಾಪಕರ ಸಂಘ ಮಾಡಿ ಗೆಲ್ಲುತ್ತದೋ ಅಥವಾ ಹಂಸಲೇಖರೇ ದಾಖಲೆ ನಿರ್ಮಿಸುತ್ತಾರೋ ಕಾದು ನೋಡಬೇಕು.

# ಭಟ್ಟರ ಮತ್ತೊಂದು ಅವತಾರ



ಯೋಗರಾಜ್ ಭಟ್ ನಿರ್ದೇಶಕರಾಗಿ, ಸಂಭಾಷಣಕಾರರಾಗಿ ಮತ್ತು ಗೀತರಚನಕಾರರಾಗಿ ಕನ್ನಡ ಪ್ರೇಕ್ಷಕರ ಮನಸ್ಸನ್ನು ಗೆದ್ದಿರುವವರು. ಇದೀಗ ಅವರು ಹೊ[...] ಅವತಾರದಲ್ಲಿ ಪ್ರೇಕ್ಷಕರ ಮುಂದೆ ಬರಲಿದ್ದಾರೆ. ಅದೇನೆಂದ[...] ಇದೇ ಮೊದಲ ಬಾರಿಗೆ ಯೋಗರಾಜ್ ಭಟ್ ಮುಖ[...] ಬಣ್ಣ ಹಚ್ಚಿ ನಟನಾಗಿದ್ದಾರೆ.

ಗಡ್ಡ ವಿಜಿ ಎಂಬ ನೆಚ್ಚಿನ ಶಿಷ್ಯನ ಚೊಚ್ಚಲ ನಿರ್ದೇಶನದ ಚಿತ್ರ 'ಲಾಲ್‌ಭಾಗ್'ನಲ್ಲಿ ಯೋಗರಾಜ್ ಭಟ್ ಜೈಲ[...] ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರಕ್ಕೆ ಈ ಹಿಂದೆ 'ಯೂ ಟರ್ನ್' ಎಂದು ಹೆಸರಿಡಲಾಗಿತ್ತು. ಆದರೆ [...] ಹೆಸರನ್ನು ಬೇರೆ ಯಾರೋ ರಿಜಿಸ್ಟರ್ ಮಾಡಿರುವುದರಿಂದ ಈಗ 'ಲಾಲ್‌ಭಾಗ್' ಎಂಬ ಹೊಸ ಹೆಸರನ್ನು ಗಡ್ಡ ವಿ[...] ಇಟ್ಟಿದ್ದಾರೆ.

ಕನ್ನಡ ಚಿತ್ರರಂಗಕ್ಕೆ ಇತ್ತೀಚಿನ ವರ್ಷಗಳಲ್ಲಿ ಹಲವಾರು ನಟನಟಿಯರನ್ನು ಪರಿಚಯಿಸಿರುವ ಯೋಗರಾಜ್ ಭಟ್ಟ[...] ತನ್ನ ಶಿಷ್ಯನ ಚಿತ್ರದಲ್ಲಿ ನಟನಾಗಿ ಚಿತ್ರರಂಗಕ್ಕೆ ಕಾಲಿಡುತ್ತಿರುವುದು ವಿಚಿತ್ರವಾದರೂ ಸತ್ಯ. ಯಾಕೆಂದರೆ ಈ ಹಿಂ[...] ಯೋಗರಾಜ್ ಭಟ್ಟರಿಗೆ ಹಲವಾರು ನಟನಾ ಅವಕಾಶಗಳು ಬಂದಿದ್ದರೂ ಅವರು "ನಾನು ನನ್ನ ಮುಖಕ್ಕೆ ಬ[...] ಹಚ್ಚುವುದಿಲ್ಲ" ಎಂದು ಹೇಳಿ ಜಾರಿಕೊಳ್ಳುತ್ತಿದ್ದರು.

ತನ್ನ ನಿರೂಪಣಾ ಶೈಲಿ, ಸಂಭಾಷಣೆ ಹಾಗೂ ಪಡ್ಡೆ ಹುಡುಗರನ್ನು ರಂಜಿಸುವ ಗೀತೆಗಳನ್ನು ಬರೆದು ಅಪಾರ ಅಭಿಮಾನಿ ವೃಂದವನ್ನು ಹೊಂದಿರುವ ಯೋಗರಾಜ್ ಭಟ್ಟರು ನಟನಾಗಿ ಅದೇ ರೀತಿಯಲ್ಲಿ ಪ್ರೇಕ್ಷಕರ ಮನಸ್ಸು ಗೆಲ್ಲುತ್ತಾರೋ ನೋಡಬೇಕು.




# ಅಂಬಿಯ ಸಮಯ ಪ್ರಜ್ಞೆ?

ಕಲಾವಿದರ ಸಂಘದ ಅಧ್ಯಕ್ಷ ಅಂಬರೀಷ್ ಕನ್ನಡ ಚಿತ್ರರಂಗದ ಮಟ್ಟಿಗೆ ಪ್ರಶ್ನಾತೀತ ಮತ್ತು ಟೀಕಾತೀತ ನಾಯಕ ಎಂದು ಎಲ್ಲರೂ ಒಪ್ಪುತ್ತಾರೆ. ಅಂಬಿ ಎಂದರೆ ಎಲ್ಲರಿಗೂ ಅದೆಷ್ಟು ಪ್ರೀತಿ, ಅಂಬಿಯ ಟೀಕೆಗಳನ್ನು ಮತ್ತು ಬೈಗುಳಗಳನ್ನು ಉದ್ಯಮದವರು ತುಂಬಾ ಹಗುರವಾಗಿ ಸ್ವೀಕರಿಸುತ್ತಾರೆ. ಅಷ್ಟೇ ಅಲ್ಲ, ಯಾವುದೇ ಸಮಾರಂಭಕ್ಕೆ ಅಂಬರೀಷ್ ಬರಲು ತಡವಾದರೂ ಅವರಿಗೆ ಎಲ್ಲರೂ ಕಾದು ಕೂರುತ್ತಾರೆ.



ಆದರೆ ಮೊನ್ನೆ ಕಲಾವಿದರ ವೃತ್ತಿಗೆ ಸಂಬಂಧಪಟ್ಟ ತೆರಿಗೆ ವಿಷಯವನ್ನು ಚರ್ಚಿಸಲು ಕರೆದ ಸಭೆಯಲ್ಲಿ ಈ ಪ್ರಶ್ನಾತೀತ, ಟೀಕಾತೀತ ಅಜಾತಶತ್ರುಗೆ ಮುಖಭಂಗವಾಯಿತು. ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ಈ ತೆರಿಗೆಯ ಬಗ್ಗೆ ಚರ್ಚಿಸಲು ದೇಶಾದ್ಯಂತ ಅಂದು ಎಲ್ಲ ಭಾಷೆಯ ಕಲಾವಿದರೂ ಅವರವರ ರಾಜ್ಯಗಳಲ್ಲಿ ಸಭೆ ಕರೆದಿದ್ದರು. ಹಾಗೆಯೇ ಬೆಂಗಳೂರಿನಲ್ಲಿರುವ ಫಿಲಂ ಛೇಂಬರ್‌ನಲ್ಲಿ ಅಂಬರೀಷ್ ನೇತೃತ್ವದ ಕಲಾವಿದರ ಸಂಘವೂ ಹನ್ನೊಂದು ಗಂಟೆಗೆ ಸಭೆಯನ್ನು ಕರೆದಿತ್ತು.

ಸಮಯಕ್ಕೆ ಸರಿಯಾಗಿ ಆ ಸಭೆಗೆ ಸುದೀಪ್, ದರ್ಶನ್, ಪುನೀತ್ ರಾಜ್‌ಕುಮಾರ್ ಅಲ್ಲದೆ ಚಿತ್ರರಂಗದ ಬಹುತೇಕ ಎಲ್ಲ ಹಿರಿಯ ಮತ್ತು ಕಿರಿಯ ನಟನಟಿಯರು ಹಾಜರಾದರು. ಛೇಂಬರ್‌ನ ಮುಖ್ಯ ದ್ವಾರದ ಬಳಿ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ವಿಜಯ್‌ಕುಮಾರ್ ಎಲ್ಲರನ್ನು ಸ್ವಾಗತಿಸಿದರು. ಕಲಾವಿದರ ಸಂಘದ ಪರವಾಗಿ ದೊಡ್ಡಣ್ಣ ಮತ್ತು ರಾಕ್‌ಲೈನ್ ವೆಂಕಟೇಶ್ ಎಲ್ಲರನ್ನು ಬರಮಾಡಿಕೊಂಡರು.

ಆದರೆ ಕಲಾವಿದರ ಸಂಘದ ಅಧ್ಯಕ್ಷರಾದ ಅಂಬರೀಷ್ ಅವರೇ ನಾಪತ್ತೆಯಾಗಿದ್ದರು. ಎಲ್ಲಾ ಸಮಾರಂಭಗಳಿಗೆ ಸಾಧಾರಣವಾಗಿ ಅರ್ಧ-ಮುಕ್ಕಾಲು ಗಂಟೆ ತಡವಾಗಿ ಬರುವ ಅಂಬರೀಷ್ ಈಗ ಬರಬಹುದು, ಆಗ ಬರಬಹುದೆಂದು ಉದ್ಯಮದವರು, ಮಾಧ್ಯಮದವರು ಕಾಯುತ್ತಾ ಕೂತರು. ಹೀಗೆ ಸುಮಾರು ಎರಡು ಗಂಟೆಗಳ ಕಾಲ ಕಾದು ರೋಸತ್ತ ಮಾಧ್ಯಮದವರು ಆ ಸಭೆಯನ್ನೇ ಬಹಿಷ್ಕರಿಸಿ ಹೊರನಡೆದರು. ಇದಾದ ಸ್ವಲ್ಪ ಹೊತ್ತಿನ ನಂತರ ಸುದೀಪ್, ದರ್ಶನ್, ಪುನೀತ್ ಮೊದಲಾದವರು ಒಬ್ಬೊಬ್ಬರಾಗಿಯೇ ಜಾಗ ಖಾಲಿ ಮಾಡಿದರು.

ಅಲ್ಲಿಯತನಕ ಸುಮ್ಮನೆ ಕುಳಿತಿದ್ದ ರಾಕ್‌ಲೈನ್ ವೆಂಕಟೇಶ್ ಪರಿಸ್ಥಿತಿ ಬಿಗಡಾಯಿಸುತ್ತಿರುವುದನ್ನು ನೋಡಿ ಸಭೆ ಕರೆದ ಉದ್ದೇಶವನ್ನು ಹೇಳಲು ಆರಂಭಿಸಿದರು. ಆದರೆ ಅಷ್ಟು ಹೊತ್ತಿಗೆ ಕಾಲ ಮಿಂಚಿಹೋಗಿತ್ತು. ಕೆಲವು ಗಂಟೆಗಳ ನಂತರ ಅಂಬರೀಷ್ ಕೊನೆಗೂ ಸಭೆಗೆ ಬಂದರು. ಆದರೆ ಅಲ್ಲಿ ಉಳಿದಿದ್ದವರ ಮುಖದಲ್ಲಿ ಒಂದಿಷ್ಟೂ ಉತ್ಸಾಹವಿರಲಿಲ್ಲ.

ಹಿರಿಯ ನಟ ಮತ್ತು ರಾಜಕಾರಣಿಯಾದ ಅಂಬರೀಷ್ ಚಿತ್ರರಂಗದ ಎಲ್ಲರ ಪ್ರೀತಿಪಾತ್ರಕ್ಕೆ ಒಳಗಾದವರು. ಅಂದ ಮಾತ್ರಕ್ಕೆ ಎಲ್ಲರೂ ತಮ್ಮತಮ್ಮ ಶೂಟಿಂಗ್ ಮತ್ತು ಇತ್ಯಾದಿ ಕೆಲಸಗಳನ್ನು ಬಿಟ್ಟು ತಮಗಾಗಿ ಕಾಯುತ್ತಾ ಇರಬೇಕೆಂದು ಅಂಬಿ ನಿರೀಕ್ಷಿಸುವುದು ತಪ್ಪು.

ಮೊನ್ನೆ ನಡೆದ ಸಭೆಯಲ್ಲಿ ಜನರಿಗೆ ತನ್ನ ಬಗ್ಗೆ ಅಸಹನೆ ಇದ್ದದ್ದು ಅಂಬರೀಷ್ ಅವರ ಅರಿವಿಗೆ ಬಂತು. ಅದನ್ನು ಅರ್ಥಮಾಡಿಕೊಂಡು ಮುಂದಿನ ದಿನಗಳಲ್ಲಿ ಅಂಬರೀಷ್ ಸರಿಯಾದ ಸಮಯಕ್ಕೆ ಬರುತ್ತಾರೆಂಬ ಗ್ಯಾರಂಟಿ ಇಲ್ಲ. ಯಾಕೆಂದರೆ ಅಂಬಿ ಎಲ್ಲಿಗೇ ಹೋಗಲಿ, ಅಲ್ಲಿಗೆ ತಡವಾಗಿ ಹೋಗುವುದು ಅವರ ಹುಟ್ಟುಗುಣ.

● ಶೆಣೈ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com